# ಸಂವಾದ

ಮಾಚ್ ೨೦೧೨ ರೂ. ೨೦



ನೆನಪು:
**ಡಾ|| ಎಲ್. ಬಸವರಾಜು**

## ಕನ್ನಡ ಶಾಲೆಗಳನ್ನು ಮುಚ್ಚಿಸುತ್ತಿರುವವರು ಯಾರು?

# PRISTINE BREAKFAST

## HEALTHY ORGANIC BREAKFAST CEREAL RANGE

| Wheat | Mixed Millet | Corn | Ragi |
|---|---|---|---|
| Net wt : 300g | Net wt : 300g | Net wt : 300g | Net wt : 300g |
| Rs.150.00 | Rs.150.00 | Rs.150.00 | Rs.150.00 |

Pristine Organics Pvt. Ltd. #44/2A, Kodigehalli Gate, Sahakarnagar Post, NH-7, Bengaluru - 560092.
info@pristineorganics.com | www.pristineorganics.com

# ಒಳಪುಟಗಳಲ್ಲಿ


- ☐ ಪತ್ರಗಳು ೦೪
- ☐ ಅಂತರಂಗ ೦೫
- ☐ ವಿಶೇಷಾಂಕ ಪತ್ರಗಳು ೦೬

- ☐ ಸಂಪಾದಕರೊಂದಿಗೆ ಸಂವಾದ:
  - ○ ನಾ. ದಿವಾಕರ್ ೦೮
  - ○ ಸನತ್‌ಕುಮಾರ್ ಬೆಳಗಲಿ ೦೯
- ☐ ಇಸ್ಲಾಂ ಪ್ರಜಾಪ್ರಭುತ್ವ ಹಾಗೂ ಹಿಂಸೆ ಮೂಲ: ಅಸ್ಗರ್ ಅಲಿ ಇಂಜಿನಿಯರ್
  - ○ ಅನು: ಹಸನ್ ನಯೀಂ ಸುರಕೋಡ ೧೦
- ☐ ಕನ್ನಡ ಶಾಲೆಗಳನ್ನು ಮುಚ್ಚಿಸುತ್ತಿರುವವರು ಯಾರು?
  - ○ ಡಿ.ಎಸ್. ನಾಗಭೂಷಣ ೧೪







- ☐ ಕನ್ನಡ ಮತ್ತು ಕನ್ನಡಿಗರ ಮುಂದಿನ ಸವಾಲುಗಳು
  - ○ ಮಲ್ಲಿಕಾರ್ಜುನ ಗುಮ್ಮಗೋಳ ೧೮
- ☐ ಮಾಧ್ಯಮಗಳು ಮತ್ತು ಹಿಂಸೆ...
  - ○ ನರಸಿಂಹ ಗುಂಜಹಳ್ಳಿ ೨೦
- ☐ ಜೈ ಭೀಮ್ ಕಾಮ್ರೇಡ್: ಇಂಡಿಯನ್ನರ ತಪ್ಪೊಪ್ಪಿಗೆ
  - ○ ಹುಲಿಕುಂಟೆ ಮೂರ್ತಿ ೨೨
- ☐ ನೆನಪುಗಳ ಚಿಗುರಿಸುವ ಸಾಕ್ಷ್ಯಚಿತ್ರ
  - ○ ಶಾಂತರಾಜು. ಎಸ್ ಮಳವಳ್ಳಿ ೨೪
- ☐ ಸಾಹಿತ್ಯ ಪರಂಪರೆಯ ಪರಮಹಂಸ ಡಾ. ಎಲ್. ಬಸವರಾಜು
  - ○ ವಿ. ಚಂದ್ರಶೇಖರ ನಂಗಲಿ ೨೬
- ☐ ನನ್ನ ಅಂಗಿಗೇಕೆ ಜೇಬಿಲ್ಲ
  - ○ ಅಣೆಕಟ್ಟೆ ವಿಶ್ವನಾಥ ೩೦






- ☐ ಬತ್ತದ ಬಯಲು –೩
  - ○ ಡಾ॥ ಬಿ. ಎಂ. ಪುಟ್ಟಯ್ಯ ೩೪
- ☐ ನೋಯುವ ಹಲ್ಲಿಗೆ ಹೊರಳುವ ನಾಲಿಗೆ–೪
  - ○ ಡಾ॥ ಎಚ್.ಎಸ್. ಅನುಪಮಾ ೩೮
- ☐ ದಲಿತ್ ಡೈರಿ
  - ○ ಚಂದ್ರಭಾನ್ ಪ್ರಸಾದ್/ ಎಸ್. ಮರಿಸ್ವಾಮಿ ೪೨
- ☐ ಮುಲ್ಲಾ ನಸ್ರುದ್ದೀನ್ ಕಥೆಗಳು
- ☐ ಹೊಸ ಪುಸ್ತಕ ೪೭
  - ○ ಸಂಗ್ರಹ–ಅನು: ಡಾ॥ ಜೆ ಬಾಲಕೃಷ್ಣ ೪೮
- ☐ ಕವನ: ಈ ಜನ ೧೭



DICCI
Developing Business Leadership



ಸಂವಾದ
ಮಾಸ ಪತ್ರಿಕೆ

ಸಂಪುಟ ೧೦ ಸಂಚಿಕೆ ೫
ಮಾರ್ಚ್ ೨೦೧೨
ಸಂಪಾದಕ:
ಇಂದೂಧರ ಹೊನ್ನಾಪುರ
ಉಪ ಸಂಪಾದಕ:
ಭೈರಸಂದ್ರ ಗಂಗರಾಜು



ಸಂಪಾದಕೀಯ ಬಳಗ:
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಡಾ॥ ಬಿ.ಯು. ಸುಮಾ



ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು–೫೬೦ ೦೯೧



PRINTED AND PUBLISHED BY
**S.R. GOVINDU**
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091



**✆ Editorial: 9448048306**
**✆ Circulation: 9945264687**
**080 - 23480278**

**e-mail :**
**Editorial: samvaada@hotmail.com**
**honnapura@yahoo.co.in**

**Circulation :**
**samvaadacirculation@gmail.com**



**EDITOR :**
**INDUDHARA HONNAPURA**



ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

# ಸಂಕೇತಗಳನ್ನು ಕಳೆದುಕೊಳ್ಳುವ ಸಡಗರದಲ್ಲಿ ಶಿಕ್ಷಣ!

ಮಾನ್ಯರೇ,

ಶಿಕ್ಷಣವು ಹೆಚ್ಚು ಹೆಚ್ಚಾಗಿ ಸಾಂಸ್ಥೀಕರಣಗೊಂಡಂತೆಲ್ಲಾ ತಂತ್ರಜ್ಞಾನದ ಪ್ರಭಾವದಿಂದ 'human agency' ಯ ಪಾತ್ರವು ಕಿರಿದಾಗುತ್ತಿರುವುದು ಕಾಣುತ್ತಿದೆ. ಸಮಾಜದ ಸಂವೇದನೆಗಳ ರಚನೆಗಳು ಸಂಕೀರ್ಣವಾದ ತುಮುಲಗಳಿಗೆ ತೆರೆದುಕೊಳ್ಳುತ್ತಲೇ, ತಾಂತ್ರಿಕತೆಗಳಿಗೂ ತೆರೆದುಕೊಳ್ಳುತ್ತಾ ಸಂಕೇತಗಳನ್ನು ರೂಪಿಸುತ್ತಿರುತ್ತವೆ. ಈ ಸಂವೇದನೆಗಳು ಪ್ರಬಲವಾದ ಮೌಲ್ಯಗಳನ್ನು ಬಗೆಹರಿಸಲಾಗದ ಸಮಸ್ಯೆಗಳನ್ನು ಸಾಮಾಜಿಕ ಗುಂಪಿನ ಅಭಿಪ್ರಾಯಗಳನ್ನು ವಿಧವಿಧ ಚಿತ್ತಾರಗಳ ರೀತಿಯಲ್ಲಿ, ಒಮ್ಮೊಮ್ಮೆ ಅಂಗೀಕರಿಸುತ್ತಾ, ಮತ್ತೊಮ್ಮೆ ತಿರಸ್ಕರಿಸುತ್ತಾ ನಿಗೂಢ ಫಾರ್ಮುಲಾಗಳ ರೂಪದಲ್ಲಿ ಪ್ರಸ್ತುತಪಡಿಸುತ್ತಿರುತ್ತವೆ.

ಶಿಕ್ಷಣವು ಮುಖ್ಯವಾಗಿ ಈ ಸಂವೇದನೆಗಳ ರಚನೆಗಳನ್ನು ಗ್ರಹಿಸುವ, ಅರಿಯುವ ಹಾಗು ಅವುಗಳನ್ನು ವಿಶ್ಲೇಷಿಸುವ ಪರಿಕರಗಳನ್ನು ವಿದ್ಯಾರ್ಥಿಗೆ ನೀಡುವ ಹೆಚ್ಚಿನ ಜವಾಬ್ದಾರಿಯನ್ನು ಹೊತ್ತಿರುತ್ತದೆ. ಭಾಷೆ ಇಂತಹ ವಿಶ್ಲೇಷಣೆಗೆ ಒದಗಿಬರುವ ಒಂದು ಸಂಕೇತ. ಸಮಾಜದ ಗುಂಪುಗಳು ಬಾಳುವ ರೀತಿಯನ್ನು, ಬದುಕಿನ ಭಾವವನ್ನು (ಬದುಕಿನ ನಟನೆಯನ್ನಲ್ಲ) ಅಭಿವ್ಯಕ್ತಿಸುವುದು ಭಾಷೆಯ ಪ್ರಮುಖ ಕಾರ್ಯ. ಶಿಕ್ಷಣದಲ್ಲಿ ತಾಂತ್ರಿಕತೆಯ ಬಳಕೆ ಹೆಚ್ಚು ಹೆಚ್ಚಾದಂತೆಲ್ಲಾ ತುಂಬಾ ಸೂಕ್ಷ್ಮವಾದ ಈ ವೈವಿಧ್ಯಮಯ ಚಿತ್ತಾರಗಳು ಏಕವಾಗುತ್ತಾ Branded ಕಲ್ಪನೆಗಳಾಗಿ ಯಾವುದೋ ಒಂದು ಪರಿಹಾರವನ್ನು ಸೂಚಿಸಿ ಸಮಾಪ್ತವಾಗುತ್ತವೆ.




## ಪತ್ರಾಗಾರ

ಆದರೆ ಸಂಸ್ಕೃತಿಯೆಂಬುದು ಸುಲಭವಾಗಿ ಅರಿಯಬಹುದಾದ ಸರಳತೆಗಳಿಂದ ಕೂಡಿರುವುದಿಲ್ಲ. ಅದೊಂದು ಸಂಕೀರ್ಣ ವ್ಯವಸ್ಥೆ. ಈಗ ಚಾಲ್ತಿಯಿರುವ ಶಿಕ್ಷಣವ್ಯವಸ್ಥೆಯು ಸಂಸ್ಕೃತಿಯ ಸಂಕೀರ್ಣತೆಗಳನ್ನು ತಿಳಿಯಲು ಉಪಯೋಗಿಸುತ್ತಿರುವ ತಾಂತ್ರಿಕತೆಯ ಪರಿಕರಗಳು, ನಾವು ಕೈಮುಟ್ಟಿ ಪಾಲ್ಗೊಳ್ಳುವ ಪ್ರಕ್ರಿಯೆಯನ್ನು ನಿಧಾನವಾಗಿ ಅನಾವಶ್ಯಕವೆಂಬಂತೆ ರೂಪಿಸುತ್ತವೆ. ತಂತ್ರಜ್ಞಾನವನ್ನು ಗಾಂಧೀಜಿ ಅಷ್ಟೊಂದು ತೀವ್ರವಾಗಿ ವಿರೋಧಿಸುತ್ತಿದ್ದುದರ ಹಿಂದೆ ಅದರ ಈ ಕೇಡನ್ನು ಗುರುತಿಸಿದ್ದರು.

ಕೇವಲ ಮಾಹಿತಿ ಸಂಗ್ರಹಣೆಯು ಶಿಕ್ಷಣದ ಗುರಿಯಾದರೆ ವಿದ್ಯಾರ್ಥಿಯು ಗ್ರಾಹಕನಾಗುವ ಕ್ರಿಯೆಯಲ್ಲಿ ತೊಡಗಿದ್ದಾನೆಂದೇ ಭಾವಿಸಬೇಕಾಗುತ್ತದೆ. ಅವನು/ಳು ಮೊದಲೇ ಸಂಗ್ರಹಗೊಂಡ ಮಾಹಿತಿಗೆ ಹಣ ನೀಡಿ ವಿಷಯ ಖರೀದಿಸಿದ ಹಕ್ಕುದಾರನಷ್ಟೇ. ವಿದ್ಯಾರ್ಜನೆಯಲ್ಲಿ ದೊರಕಬಹುದಾದ ಅನುಭವ ಶೂನ್ಯವಾಗಿರುತ್ತದೆ. ತಂತ್ರಜ್ಞಾನವನ್ನು ಅತಿಯಾಗಿ ನೆಚ್ಚಿದ ಶಿಕ್ಷಣ ವ್ಯವಸ್ಥೆಯು ಬಂಡವಾಳ ಮಾರುಕಟ್ಟೆ ಬೇಕಾದ ಅನುಭೋಗಿಯ ಉತ್ಪಾದನೆಯಲ್ಲಿ ಪರಿಣಿತಿಯನ್ನು ಪಡೆಯಬಹುದಲ್ಲದೇ, ಅನುಭಾವಿಗಳೊಂದಿಗಿನ ಅನುಸಂಧಾನವನ್ನು ಒದಗಿಸುವ ವೇದಿಕೆಗಳಾಗಿ ಅಲ್ಲ.

ಬದುಕಿನ ಸಂವೇದನೆಗಳನ್ನು ಇಡಿಯಾಗಿ ಗ್ರಹಿಸಲು, ಸಮರ್ಥವಾಗಿ ಬಾಳಿನ ತರ್ಕವನ್ನು ಅರಿಯಲು ಸಂದರ್ಭಕ್ಕೆ/ಸನ್ನಿವೇಶಕ್ಕೆ ತಕ್ಕ ಮಾರ್ಗಗಳನ್ನು ಉಪಾಯಗಳನ್ನು ರೂಢಿಸಿಕೊಳ್ಳಲು, ಜ್ಞಾನವಿಭಜನೆಯ ಮಿತಿಗಳನ್ನು ಮೀರಬೇಕಾಗುತ್ತದೆ.

ನಮ್ಮ ಸುತ್ತಾಮುತ್ತ ಒಡ ಮೂಡುವ ಈ ಎಲ್ಲಾ ಸಂಕೇತಗಳು ಸಂಸ್ಕೃತಿ ಅಧ್ಯಯನದಲ್ಲಿನ ಒಗಟುಗಳು. ಕನ್ನಡ ಭಾಷೆಗೆ ಅದನ್ನು ಬಿಡಿಸುವ ತಾಕತ್ತು ಇದೆ. ಕೈಹಿಡಿಯುವ ವಿದ್ಯಾರ್ಥಿಗಳದೇ ಕೊರತೆ?

**ಕೆ.ಬಿ. ಸರಸ್ವತಿ,** ತುಮಕೂರು

# ಮೊಬೈಲ್ ಇದ್ದರೆ ಮಧ್ಯಮ ವರ್ಗವೇ?

ಪ್ರಿಯ ಸಂಪಾದಕರೇ,

ನವೆಂಬರ್ ಸಂಚಿಕೆಯಲ್ಲಿ ಪ್ರಕಟವಾದ ಲೇಖನ 'ದಲಿತರು ಮತ್ತು ಕಮ್ಯುನಿಷ್ಟರು ಕಲಿಯದ ಪಾಠ' ಬಹಳಷ್ಟು ಸೂಕ್ಷ್ಮ ಮತ್ತು ಸಂಕೀರ್ಣ ವಿಷಯಗಳನ್ನು ಅರ್ಥಮಾಡಿಕೊಳ್ಳದೆ ಬರೆದಿದ್ದು ಸ್ಪಷ್ಟವಾಗುತ್ತದೆ. ದಲಿತ ಮತ್ತು ಕಮ್ಯುನಿಷ್ಟ ಚಳವಳಿಗಳ ಆಶಯ, ಉದ್ದೇಶ ಮತ್ತು ಮೂಲ ತತ್ವಗಳನ್ನು ತಿಳಿದುಕೊಳ್ಳದೆ ಇವರಿಗೆ ಪಾಠ ಕಲಿಸುವ ಲೇಖಕರ ಪ್ರಯತ್ನ ಅವರ ಅಜ್ಞಾನವನ್ನು ತೋರಿಸುತ್ತದೆ. ಮಧ್ಯಮ ವರ್ಗಕ್ಕೆ ತಮ್ಮ ಮನಸ್ಸಿಗೆ ಬಂದವರನ್ನೆಲ್ಲ ಸೇರಿಸಿರುವುದು ಹಾಸ್ಯಾಸ್ಪದ. ಬೃಹತ್ ನಗರಗಳ ಜೋಪಡಿಯಲ್ಲಿ ಕೂಡ ಕೇಬಲ್ ಟಿ.ವಿ ಮತ್ತು ಮೊಬೈಲ್ ಇರುತ್ತದೆ ಎಂದಾಕ್ಷಣ ಅವರು ಮಧ್ಯಮ ವರ್ಗವಾಗುವುದಿಲ್ಲ. ಅಣ್ಣಾ ಹಜಾರೆ ಹೋರಾಟದಲ್ಲಿ ಪ್ರಮುಖವಾಗಿದ್ದ 'ಯುವ ಸೇನೆ 'Youth for Equality' ಎಂಬ ಸಂಘಟನೆಗೆ ಸೇರಿದ್ದು, ಮಂಡಲ್ ಆಯೋಗದಿಂದ ಇಲ್ಲಿಯವರೆಗೆ ದಲಿತ ಮತ್ತು ಮೀಸಲಾತಿ ವಿರುದ್ಧ ಹಿಂಸಾತ್ಮಕವಾಗಿ ಹೋರಾಡುತ್ತಿದೆ. ಇದು ಅಣ್ಣಾ ಹಜಾರೆ ಹೋರಾಟ ದಲಿತ ಮತ್ತು ಮೀಸಲಾತಿ ವಿರೋಧಿ ಎನ್ನುವುದಕ್ಕೆ ಒಂದು ಸಣ್ಣ ನಿದರ್ಶನ ಮಾತ್ರ. ಆರ್ ಎಸ್ ಎಸ್ ಬೆಂಬಲಿತ ಅಣ್ಣಾ ಮತ್ತು ಪಟಾಲಂ ಹೊರಗೊಳ್ಳುವಿಕೆಯ ಪ್ರತೀಕ. ಮಹಾರಾಷ್ಟ್ರದ 'ದಲಿತ ಗೆಳೆಯರು' ಎಂದು ಬರೆಯುವ ಮೂಲಕ ಲೇಖಕರು ತಾವೇನು ಮತ್ತು ತಮ್ಮಂತವರ ನಿಲುವೇನು ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ನವ ಆರ್ಥಿಕ ನೀತಿಯ ಸಂಪೂರ್ಣ ಲಾಭ ಪಡೆಯುವ ನವ ಮಧ್ಯಮವರ್ಗ ನವ ಆರ್ಥಿಕ ನೀತಿಯಿಂದ ಇಂದು ಹೆಚ್ಚಿರುವ ಭ್ರಷ್ಟಾಚಾರಕ್ಕೆ ಕಾರಣವಾಗಿರುವ ಕಾರ್ಪೋರೇಟ್‌ಗಳ ಮತ್ತು ಅವರು 'ಸಾಕುವ' ಎನ್.ಜಿ.ಓ ವಿರುದ್ಧದ ಅಣ್ಣಾ ಮತ್ತು ಅವರನ್ನು ಸಮರ್ಥಿಸುವ ಲೇಖಕರ ವರ್ಗದ ಮತಲಬಿ ಮೌನ ನಮಗೆ ತಿಳಿಯದೆ ಇರದು. ಇಲ್ಲಿ ಹೆಚ್ಚಿಗೆ ಬರೆಯುವ ಅವಶ್ಯಕತೆ ಇಲ್ಲ. ಏಕೆಂದರೆ ಅಣ್ಣಾ 'ಹೋರಾಟ'ದ ಕುರಿತು ಬಹಳಷ್ಟು ಪ್ರಬುದ್ಧ ಲೇಖನಗಳು 'ಸಂವಾದ'ದಲ್ಲಿ ಪ್ರಕಟವಾಗಿದ್ದು ಅವುಗಳನ್ನು ಮೊದಲು ಲೇಖಕರು ಓದುವುದು ಉತ್ತಮ.

**ಡಾ|| ಜಿ. ಎಸ್. ದಸ್ತಾಪುರ, ಪುಣೆ**

## ಬೇಕಾಗಿದ್ದಾರೆ

**'ಸಂವಾದ' ಕಚೇರಿಯಲ್ಲಿ ಕೆಲಸ ಮಾಡಲು ಕನ್ನಡ ಓದು-ಬರಹ ಚೆನ್ನಾಗಿ ಬಲ್ಲ, ಕಂಪ್ಯೂಟರ್ ಕಲಿತಿರುವ (ಡಿಟಿಪಿ ಗೊತ್ತಿದ್ದರೆ ಒಳ್ಳೆಯದು) ಮಹಿಳಾ ಕಚೇರಿ ಸಹಾಯಕರು ಬೇಕಾಗಿದ್ದಾರೆ. ಸಂಬಳ 7 ರಿಂದ 8 ಸಾವಿರ. ಬೆಂಗಳೂರಿನಲ್ಲಿ ವಾಸಿಸುವವರಿಗೆ ಆದ್ಯತೆ. ಕೂಡಲೇ ಸಂಪರ್ಕಿಸಿ: ಸಂಪಾದಕರು, 'ಸಂವಾದ' ಮಾಸಿಕ #402, 1ನೇ ಮುಖ್ಯ ರಸ್ತೆ, 1ನೇ ಸ್ಟೇಜ್, 2ನೇ ಬ್ಲಾಕ್, ಹೆಚ್.ಬಿ.ಆರ್ ಬಡಾವಣೆ, ಬೆಂಗಳೂರು-560043**

**ಮೊಬೈಲ್: 94480 48306**

## ಚಂದಾ ವಿವರ

ಬಿಡಿ ಪ್ರತಿ ರೂ. 20

| ಚಂದಾ ಅವಧಿ: | 1 ವರ್ಷಕ್ಕೆ | 3 ವರ್ಷಕ್ಕೆ | 5 ವರ್ಷಕ್ಕೆ |
|---|---|---|---|
| ವ್ಯಕ್ತಿಗಳು : | ರೂ. 200 | ರೂ. 550 | ರೂ. 900 |
| ಸಂಸ್ಥೆಗಳು : | ರೂ. 240 | ರೂ. 720 | ರೂ. 1200 |
| ಹಿತೈಷಿಗಳು : | ರೂ. 500 | ರೂ. 1500 | ರೂ. 2500 |

ಆಜೀವ ಚಂದಾ ರೂ.5,000/-
ಪೋಷಕ ಚಂದಾ ರೂ.10,000/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು. ಚೆಕ್ಕು-ಡಿಡಿಗಳು 'ಸಂವಾದ' ಹೆಸರಿನಲ್ಲಿರಲಿ

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಈ ಕೆಳಗಿನ ಖಾತೆಗೆ ಕಳುಹಿಸಬಹುದು:

A/C NAME: SAMVAADA MAGAZINE
BANK NAME: STATE BANK OF INDIA,
BRANCH: BHARATHNAGAR, BANGALURU
**A/C No: 30140484351, IFS Code: SBIN0005198**

ಸಂಪಾದಕೀಯ

# ವಿಕೃತ ಇತಿಹಾಸ, ಸಂಸ್ಕೃತಿ...

1. ಐದು ಸಾವಿರ ವರ್ಷಗಳ ಹಿಂದೆ ಸಿಂಧೂ ಮತ್ತು ಸರಸ್ವತಿ ನದಿ ಬಯಲಿನಲ್ಲಿ ನೆಲೆಸಿದ್ದವರನ್ನು ಆರ್ಯರು ಎನ್ನುವರು. ಆರ್ಯರು ಈ ದೇಶದ ಮೂಲ ನಿವಾಸಿಗಳು.
2. ಬುದ್ಧನು ತನ್ನ ಮೊದಲ ಉಪದೇಶವನ್ನು ಐವರು ಬ್ರಾಹ್ಮಣರಿಗೆ ನೀಡಿದನು.
3. ಬಹುತೇಕ ಭಾರತೀಯ ಮೌಲ್ಯಗಳು ಹಾಗೂ ಜೀವನಪದ್ಧತಿ ವೇದ ಕಾಲದಲ್ಲಿ ರೂಪುಗೊಂಡವು.
4. ಆಗ್ನೇಯ ಏಷ್ಯಾದ ಹಲವು ದೇಶಗಳಲ್ಲಿ ಒಂಭತ್ತು ಶತಮಾನಗಳ ಕಾಲ ಸಂಸ್ಕೃತ ಆಡಳಿತ ಭಾಷೆಯಾಗಿತ್ತು ಮತ್ತು ಅಲ್ಲಿನ ಹಾಡು ನೃತ್ಯಗಳಲ್ಲಿ ರಾಮಾಯಣ ಮಹಾಭಾರತದ ಕಥೆಗಳು ಇಂದಿಗೂ ಜೀವಂತವಾಗಿವೆ.

ಮೇಲಿನ ಹೇಳಿಕೆಗಳನ್ನು ನೋಡಿ ಇದೇನಿದು ಅಂತೆಕಂತೆಗಳ ಪುರಾಣ ಎಂದು ಮೂಗು ಮುರಿಯಬೇಡಿ. ಈ ಎಲ್ಲಾ ಹೇಳಿಕೆಗಳು ದಾಖಲಾಗಿರುವುದು ಸರ್ಕಾರದ ಹೊಸ ಪಠ್ಯಪುಸ್ತಕದಲ್ಲಿ. ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದನಂತರ ಮಾಡಿದ ಘನಂದಾರಿ ಕೆಲಸಗಳಲ್ಲಿ ಮೇಲಿನ ವಿಕೃತಿಗಳೂ ಸೇರಿವೆ. ಸರ್ಕಾರ ಮತ್ತು ಆಳುವವರ ನೈತಿಕತೆಯನ್ನು ಸಂಪೂರ್ಣ ನಾಶ ಮಾಡಿ ಬರೀಬೆತ್ತಲಾಗಿರುವ ಬಿಜೆಪಿ ತನ್ನೆಲ್ಲ ವೈರುಧ್ಯ-ಕಿತ್ತಾಟಗಳ ನಡುವೆ ಕೂಡ ತನ್ನ ಕೋಮುವಾದಿ ಅಜೆಂಡಾವನ್ನು ಪಠ್ಯ ಪುಸ್ತಕದಲ್ಲಿ ಸೇರಿಸಿ ಮಕ್ಕಳ ಮನಸ್ಸಿಗೆ ಕಿಚ್ಚಿಡುವ ಕೆಲಸಕ್ಕೆ ಈ ಮೂಲಕ ಕೈ ಹಾಕಿದೆ.

ಪಠ್ಯ ಪುಸ್ತಕಗಳಲ್ಲಿನ ಗುಣಮಟ್ಟವನ್ನು ಹೆಚ್ಚಿಸುವ ದೃಷ್ಟಿಯಿಂದ 2005ರಲ್ಲಿ ಎನ್.ಸಿ.ಇ.ಆರ್.ಟಿ ನಿರ್ದೇಶನದನ್ವಯ ರಚನೆಯಾಗಬೇಕಾಗಿದ್ದ ಪಠ್ಯಪುಸ್ತಕಗಳಿಂದಾಗಿ ವಿದ್ಯಾರ್ಥಿಗಳು, ಸಮಾಜ ಹಾಗೂ ಇತಿಹಾಸದ ಸ್ಪಷ್ಟ ಹಾಗೂ ನೈಜ ಜ್ಞಾನವನ್ನು ಬೆಳಸಿಕೊಳ್ಳಬೇಕಾಗಿತ್ತು. ಹಿಂದಿನ ಪಠ್ಯಗಳಲ್ಲಿದ್ದ ಅವೈಜ್ಞಾನಿಕ, ಅವೈಚಾರಿಕ ಹಾಗೂ ಸಾಮಾಜಿಕ ಬದ್ಧತೆಯಿಲ್ಲದ ಪಠ್ಯಕ್ರಮ ಬದಲಾಗಬೇಕಾಗಿತ್ತು. ಅದಕ್ಕಾಗಿ ಸ್ಪಷ್ಟ ನಿರ್ದೇಶನ ಸೂತ್ರಗಳನ್ನು ಎನ್.ಸಿ.ಇ.ಆರ್.ಟಿ ಸೂಚಿಸಿತ್ತು. ಆದರೆ ಕರ್ನಾಟಕ ಸರ್ಕಾರ ಹೊರತರುತ್ತಿರುವ ಈ ಪಠ್ಯಗಳನ್ನು ನೋಡಿದರೆ ಎಂಥ ವಿಕೃತ, ವಿಷಮಯ ಸಮಾಜ ವಿಜ್ಞಾನವನ್ನು ನಮ್ಮ ಮಕ್ಕಳು ಕಲಿಯಬೇಕಾಗುತ್ತದೆ ಎನ್ನುವುದು ಗೊತ್ತಾಗುತ್ತದೆ.

ಕರ್ನಾಟಕದ ದುರಂತವೋ ಏನೋ ಎನ್.ಸಿ.ಇ.ಆರ್.ಟಿ ನಿರ್ದೇಶನದ ಅನ್ವಯ ವಿವಿಧ ರಾಜ್ಯಗಳಲ್ಲಿ ಪಠ್ಯಪುಸ್ತಕ ಪುನರ್ ರಚನೆಯಾಗಿ ಸಮಿತಿಗಳನ್ನು ರಚಿಸುವಷ್ಟರಲ್ಲಿ ಇಲ್ಲಿ ಜೆಡಿಎಸ್, ಬಿಜೆಪಿ ಕಲಬೆರೆಕೆ ಸರ್ಕಾರ ಬಂದಾಗಿತ್ತು. ಆಗ ರಚನೆಯಾದ ಸಮಿತಿಯಲ್ಲಿ ನೆಪಮಾತ್ರಕ್ಕಾದರೂ ಕೆಲವು ಪ್ರಗತಿಪರ ವಿಚಾರಧಾರೆಯ ಶಿಕ್ಷಣ ತಜ್ಞರು ಇದ್ದರು. ನಂತರ ಪೂರ್ಣಪ್ರಮಾಣದ ಬಿಜೆಪಿ ಸರ್ಕಾರ ಬಂದ ಮೇಲೆ ಈ ಸಮಿತಿಗಳ ಬಣ್ಣವೂ ಬದಲಾಗಿ ಹೋಯಿತು. ಪ್ರಗತಿಪರ ವಿಚಾರಧಾರೆಯ ಬಹುತೇಕ ಸದಸ್ಯರನ್ನು ಸಮಿತಿಯಿಂದ ಕಿತ್ತೆಸೆಯಲಾಯಿತು ಉಳಿದುಕೊಂಡ ಕೆಲವು 'ತಜ್ಞ'ರು ಕೇವಲ ಲೆಕ್ಕಕ್ಕುಂಟು ಆಟಕ್ಕಿಲ್ಲ ಎನ್ನವಂತಾದರು. ನಮಗೆ ಬೇಕಾದಂತೆ ಇತಿಹಾಸವನ್ನು ತಿರುಚಿ ವ್ಯಾಖ್ಯಾನಿಸುವ ಸಂಘ ಪರಿವಾರದ ಕಾರ್ಯಸೂಚಿ ವ್ಯವಸ್ಥಿತವಾಗಿ ಪಠ್ಯಪುಸ್ತಕಗಳಲ್ಲಿ ಸೇರಿಹೋಯಿತು.

ವಿಚಿತ್ರವೆಂದರೆ ಈ ಪಠ್ಯಪುಸ್ತಕಗಳು ಅಂತಿಮಗೊಂಡು ಅವು ಬಹಿರಂಗವಾಗುವವರೆಗೂ ಸಮಿತಿಗಳಲ್ಲಿದ್ದ ಇತರೆ ಸದಸ್ಯರಾರೂ ಮಾತನಾಡಲೇ ಇಲ್ಲ. ಆರಂಭದ ಹಂತದಲ್ಲೇ ಕೇಸರೀಕರಣದ ಪ್ರಯತ್ನವನ್ನು ಇವರೆಲ್ಲ ವಿರೋಧಿಸಿ ಸಮಿತಿಗಳಿಂದ ಹೊರಬಂದಿದ್ದರೆ ಸಾರ್ವಜನಿಕ ಪ್ರತಿಭಟನೆಯಾದರೂ ರೂಪುಗೊಂಡು, ಸರ್ಕಾರದ ಈ ಪ್ರಯತ್ನಕ್ಕೆ ಹಿನ್ನಡೆ ಉಂಟಾಗುವ ಸಾಧ್ಯತೆ ಇತ್ತು. ಆದರೆ ಇಲ್ಲೇ ಇದ್ದು ಏನಾದರೂ ಮಾಡಬಹುದೆಂದು ಉಳಿದುಕೊಂಡ ಈ ತಜ್ಞರು ಈಗಂತೂ ಮುಖ ತೋರಿಸಲಾರದೆ ಮನೆ ಸೇರಿಕೊಂಡಿದ್ದಾರೆ.

ಈ ಪುನರ್ ರಚಿತ ಪಠ್ಯಪುಸ್ತಕಗಳು ಒಂದು ರೀತಿಯಲ್ಲಿ ಮುಸ್ಲಿಂ ಹಾಗೂ ಕ್ರೈಸ್ತ ವಿರೋಧಿ ಭಾವನೆಗಳನ್ನು ನೇರವಾಗಿಯೇ ಹೊರಗೆಡಹುತ್ತಿದ್ದರೆ ಆಳದಲ್ಲಿ ವೈದಿಕೇತರ ಜನವರ್ಗಗಳನ್ನು ಅಸಹನೆ ಹಾಗೂ ಕೀಳಾಗಿ ಕಾಣಿಸುವ ವ್ಯವಸ್ಥಿತ ಪ್ರಯತ್ನವನ್ನು ಮಾಡಿವೆ. ಇದೆಲ್ಲಕ್ಕಿಂತ ಹೆಚ್ಚಾಗಿ ಭಾರತೀಯ ಸಂಸ್ಕೃತಿ ಎಂದರೆ ವೈದಿಕ ಸಂಸ್ಕೃತಿ ಎಂಬ ಭಾವನೆ ಎಳೆ ಮಕ್ಕಳ ಮನಸ್ಸಿನಲ್ಲಿ ಶಾಶ್ವತವಾಗಿ ನೆಲೆಸುವಂತ ಪ್ರಯತ್ನಗಳು ವ್ಯಾಪಕವಾಗಿ ನಡೆದಿವೆ. ಇವರ ಭಂಡತನ ಎಷ್ಟಿದೆ ಎಂದರೆ ವೈದಿಕ ಧರ್ಮದ ವಿರುದ್ಧ ಬಂಡೆದ್ದ ಜೈನ ಮತ್ತು ಬೌದ್ಧ ಮತಗಳನ್ನು ಹಿಂದೂ ಧರ್ಮದ ಶಾಖೆಗಳು ಎಂಬಂತೆ ಬಿಂಬಿತವಾಗಿದೆ. ಹಿಂದೂಗಳಲ್ಲದ ಅರಸರು ಮಾಡಿದ ಯಾವ ಜನಹಿತ ಕೆಲಸಗಳನ್ನೂ ಪ್ರಸ್ತಾಪಿಸದೆ, ಕೇವಲ ಹಿಂದೂ ರಾಜರನ್ನು ಮಾತ್ರ ವೈಭವೀಕರಿಸಲಾಗಿದೆ.

ಸಮಾಜ ವಿಜ್ಞಾನ ಹಾಗೂ ಇತಿಹಾಸದ ಪಾಠಗಳ ಉದ್ದಕ್ಕೂ ತಾರತಮ್ಯವನ್ನೇ ಪ್ರಧಾನವಾಗಿಸಿಕೊಂಡಿರುವ ಈ ಪಠ್ಯಪುಸ್ತಕ ಪುನರ್ ರಚನಾ ಸಮಿತಿ ಕರ್ನಾಟಕ ಇತಿಹಾಸವನ್ನು ಸಂಪೂರ್ಣವಾಗಿ ತಿರುಚಿದೆ. ತಮ್ಮ ಆಡಳಿತಾವಧಿಯಲ್ಲಿ ಹಲವಾರು ಸುಧಾರಣೆಗಳನ್ನು ತಂದ ಹೈದರ್-ಟಿಪ್ಪುವಾಗಲಿ, ಸೂಫಿ-ನಾಥ ಪಂಥದ ಅವಧೂತರನ್ನಾಗಲಿ, ಮಂಟೆ ಸ್ವಾಮಿಯಂಥ ಸಾಂಸ್ಕತಿಕ ನಾಯಕರನ್ನಾಗಲಿ ಎಲ್ಲೂ ಹೆಸರಿಸದಂತೆ ಬುದ್ಧಿವಂತಿಕೆಯಿಂದ ಇತಿಹಾಸವನ್ನು ತಿರುಚಲಾಗಿದೆ. ವಿಶೇಷವಾಗಿ ಮುಸ್ಲಿಂ ರಾಜರ ವಿರುದ್ಧ ಹೋರಾಡಿದವರನ್ನೆಲ್ಲ ವೀರರೆಂದೂ ಜನಹಿತ ಕೆಲಸ ಮಾಡಿದ ಮುಸ್ಲಿಂ ರಾಜರನ್ನು ದುಷ್ಟರೆಂದೂ ಚಿತ್ರಿಸುವಲ್ಲಿ ಬಹಳ ಮುತುವರ್ಜಿ ವಹಿಸಲಾಗಿದೆ.

ಸರ್ಕಾರ ತಾನೊಂದು ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಕೆಲಸ ಮಾಡಬೇಕೆಂಬ ಕನಿಷ್ಟ ಪ್ರಜ್ಞೆಯೂ ಇಲ್ಲದಂತೆ ಅತ್ಯಂತ ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದೆ ಎನ್ನುವುದಕ್ಕೆ ಇದಕ್ಕಿಂತ ಬೇರೆ ಉದಾಹರಣೆ ಬೇಕಿಲ್ಲ. ಎಳೆ ಮಕ್ಕಳ ಮನಸ್ಸಿಗೆ ವಿಷವಿಕ್ಕುವ ಇಂಥ ಪ್ರಯತ್ನಕ್ಕೆ ನಾಡಿನ ಜನತೆ ಯಾವ ಕಾರಣಕ್ಕೂ ಅವಕಾಶ ನೀಡಬಾರದು. ಪುನರ್ ರಚಿತ ಪಠ್ಯಪುಸ್ತಕಗಳ ರೂಪದಲ್ಲಿ ಮುಗ್ಧ ಮಕ್ಕಳ ಮನಸ್ಸನ್ನು ಮುಟ್ಟುವ ಮುನ್ನವೇ ಇಂಥ ವಿಕೃತ ಇತಿಹಾಸ ಮತ್ತು ವಿಕೃತ ಸಂಸ್ಕೃತಿಯನ್ನು ತಡೆಗಟ್ಟಬೇಕಾಗಿದೆ. ಸರ್ಕಾರ ಕೂಡಲೇ ಇಂಥ ಪಠ್ಯಪುಸ್ತಕಗಳ ಮುದ್ರಣ ಮತ್ತು ವಿತರಣೆಯನ್ನು ಕೂಡಲೇ ತಡೆಹಿಡಿದು ವಿಕೃತಗಳಿಲ್ಲದ ಪಠ್ಯ ಪುಸ್ತಕ ಪುನರ್‌ರಚನಾ ಸಮಿತಿಯನ್ನು ರಚಿಸಬೇಕು. ಸರ್ಕಾರ ಇಂಥ ಕ್ರಮಕ್ಕೆ ಮುಂದಾಗದಿದ್ದರೆ ಎಲ್ಲ ಪ್ರಗತಿಪರ ಶಕ್ತಿಗಳು ಹೋರಾಟದ ಮೂಲಕ ಸರ್ಕಾರವನ್ನು ಮಣಿಸಬೇಕು.

○ ಇಂದೂಧರ ಹೊನ್ನಾಪುರ

# ತ್ರಿ'ಕರಣ'ಗಳ ಅಬ್ಬರದ ನಡುವೆ 'ಸಂವಾದ'ಕ್ಕೆ ೧೦

**ಸಂ**ವಾದಕ್ಕೆ ಈಗ ಹತ್ತರ ಸಂಭ್ರಮ. ನರಬಂಡಾಯ, ಬಂಡಾಯ, ಶೋಷಿತ, ಪಂಚಮ, ಸುದ್ದಿ ಸಂಗಾತಿ ಮೊದಲಾದ ಪತ್ರಿಕೆಗಳು ಶೋಷಿತ ಸಮುದಾಯಗಳ ನಡುವಿನಂದಲೇ ಹುಟ್ಟಿ ಆ ಸಮುದಾಯಗಳ ಒಡಲ ಸಂಕಟಗಳಿಗೆ ಕೆಲಕಾಲ ಮದ್ದು ನೀಡಲು ಯತ್ನಿಸಿ ಮರೆಯಾದವು. ಈ ಹಿಂದೆ ತಾವು ದುಡಿದ ಅನೇಕ ಪತ್ರಿಕೆಗಳ ಅನುಭವ 'ಸಂವಾದ' ವನ್ನು ಎಲ್ಲಿಯೂ ಮೊನಾಟನಸ್ ಅನ್ನಿಸದೆ ರೂಪಿಸುವ ಕಸುಬುದಾರಿಕೆ ಇಂಥದೊಂದು ವಿಶೇಷಾಂಕವನ್ನು ಹೊರತರುವಂತೆ ಸಂಪಾದಕರಾದ ಇಂದೂಧರ ಹೊನ್ನಾಪುರ ಅವರನ್ನು ಪ್ರೇರೇಪಿಸಿರಲೂಬಹುದು. ಈ ಹಿಂದೆ ಪ್ರಕಟಗೊಂಡಿರುವ 'ಸಂವಾದ'ದ ಒಂದೆರಡು ವಿಶೇಷಾಂಕಗಳಿಗಿಂತಲೂ ಹತ್ತರ ಈ ವಿಶೇಷಾಂಕ ಹಲವು ಕಾರಣಗಳಿಗಾಗಿ ಸಂಗ್ರಹಯೋಗ್ಯವಾಗಿದೆ.




'ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣಗಳೆಂಬ 'ತ್ರಿಕರಣ'ಗಳ ಅಮಾನವೀಯ ಧಾಳಿ ಜಗತ್ತಿನ ಎಲ್ಲ ದೇಶಗಳನ್ನೂ ಕಿತ್ತು ತಿನ್ನುತ್ತಿದೆ. ಅದರ ಹುಟ್ಟಿಗೆ ಕಾರಣವಾದ ಅಮೆರಿಕಾವನ್ನು ಸಹ. ಇಂಥ ಸಂದರ್ಭದಲ್ಲಿ ಈ 'ತ್ರಿಕರಣ'ಗಳನ್ನು ಮೆಟ್ಟಿನಿಂತು ಹೊಸ ಭರವಸೆಗಳನ್ನು ಮೂಡಿಸುತ್ತಿರುವ ಲ್ಯಾಟಿನ್ ಅಮೆರಿಕಾ ದೇಶಗಳು ಈಗ ಇಡೀ ಜಗತ್ತಿನ ಗಮನ ಸೆಳೆಯುತ್ತಿವೆ. ಅಭಿವೃದ್ಧಿಗೆ ಹೊಸ ವ್ಯಾಖ್ಯಾನ ಬರೆಯುತ್ತಿರುವ ಈ ದೇಶಗಳು ನಮಗೆಲ್ಲ ಆದರ್ಶವಾಗಬೇಕಾಗಿವೆ' ಎಂಬ ಸಂಪಾದಕರ ಮಾತುಗಳನ್ನೇ ಇಲ್ಲಿ ಪ್ರಕಟಗೊಂಡಿರುವ 9 ಕತೆಗಳು, 15 ಲೇಖನಗಳು ಮತ್ತು 20 ಪದ್ಯಗಳು ಧ್ವನಿಸುತ್ತವೆ.

ಕರ್ನಾಟಕದ ರಾಜಕೀಯ ತಲುಪಿರುವ ಈ ಪ್ರಕ್ಷುಬ್ಧ ಹೊತ್ತಲ್ಲಿ 'ಸಂವಾದ' ಪ್ರಜಾಪ್ರಭುತ್ವದ ಹೋರಾಟಕ್ಕೆ ಜನರನ್ನು ಅಣಿಗೊಳಿಸಲು ಸಜ್ಜಾಗುತ್ತಿರುವಂತೆ ಹೊರಬಂದಿದೆ. 1987ರಲ್ಲಿ ಘಟಿಸಿದ ಬೆಂಡಿಗೇರಿ ಪ್ರಕರಣದಲ್ಲಿ ಕ್ಷುಲ್ಲಕ ಕಾರಣವೊಂದನ್ನು ನೆಪವಾಗಿಟ್ಟುಕೊಂಡು ಸವರ್ಣೀಯರು ಐದು ಮಂದಿ ದಲಿತರಿಗೆ ಬಲವಂತವಾಗಿ ಮಲ ತಿನ್ನಿಸಿದ್ದರು. ಡಿಎಸ್ಸೆಸ್ ಜತೆಗೂಡಿ 'ಪಂಚಮ' ನಡೆಸಿದ ಪ್ರತಿಭಟನೆಯಿಂದಾಗಿ ಅವತ್ತಿನ ರಾಜ್ಯಸರ್ಕಾರ ನ್ಯಾಯಾಲಯದಲ್ಲಿ ಆರೋಪಿ ಸ್ಥಾನದಲ್ಲಿ ನಿಲ್ಲುವಂತಾಯಿತು. 'ಪಂಚಮ' ಹುಟ್ಟುಹಾಕಿದ ಇಂತಹ ಅನೇಕ ಸಂಘರ್ಷದ ಕಥನಗಳನ್ನು ಡಾ.ಬಿ.ಎಂ.ಪುಟ್ಟಯ್ಯನವರ 'ಪಂಚಮ ನಾಡೊಳಗೆ' ಎಂಬ ಅಂಕಣ ಬರಹವು ವಿವರಿಸುತ್ತದೆ.

ರಹಮತ್ ತರೀಕೆರೆಯವರ 'ಲೋಟ ತಟ್ಟೆಯ ಮೂರು ಪ್ರಸಂಗಗಳು' ಲೇಖನವಂತೂ ಇನ್ನೂ ಮಡಿಮೈಲಿಗೆಯಲ್ಲಿಯೇ ಸಿಕ್ಕಿ ನರಳುತ್ತಿರುವ ಈ ಸಮಾಜದ ಮೂರು ದಾರುಣ ಚಿತ್ರಗಳನ್ನು ಆರ್ದ್ರವಾಗಿ ಹಸಿಹಸಿಯಾಗಿ ಕಟ್ಟಿಕೊಡುತ್ತದೆ. 'ಮನುಷ್ಯ ದೇಹದ ಸ್ಪರ್ಶದಿಂದ ಮೈಲಿಗೆ ಬರುತ್ತದೆ ಎಂದು ನಂಬಿರುವ ಸಾಂಪ್ರದಾಯಕ ಸಮಾಜವು, ಉಣ್ಣುವ ಕುಡಿಯುವ ವಿಷಯದಲ್ಲಿ, ಆಹಾರ ಬಡಿಸುವ ಲೋಟ ತಟ್ಟೆಗಳಿಗೆ ತಾಗುವ ಎಂಜಲಿನಿಂದಲೂ ಮೈಲಿಗೆ ಬರುತ್ತದೆ ಎಂದು ಭಾವಿಸಿದೆ. ಈ ಎಂಜಲಿನ ಆತಂಕವು, ದಲಿತರು ಮತ್ತು ಸವರ್ಣೀಯರ ನಡುವೆ ಮಾತ್ರವಲ್ಲ, ಶೂದ್ರಜಾತಿಗಳ ನಡುವೆ ಕೂಡ ಇದೆ' ಎನ್ನುವುದನ್ನು ತಾವು ಕಂಡ ಮೂರು ಘಟನೆಗಳ ಮೂಲಕ ತರೀಕೆರೆಯವರು ಮಡಿಮೈಲಿಗೆಯ ಜಡ ಜಗತ್ತಿನಲ್ಲಿ ಕೊಳೆಯುತ್ತಿರುವ ಮನುಷ್ಯ ಮುಖಗಳನ್ನು ಪರಿಚಯಿಸುತ್ತಾರೆ.

ಕೇಶವ ಮಳಗಿ, ಕೆ.ನೀಲಾ, ವಿನಯಾ, ಬಾನು ಮುಷ್ತಾಕ್, ದು.ಸರಸ್ವತಿ, ಮಂಜುನಾಥ ಲತಾ, ಎಸ್.ಬಿ.ಜೋಗುರರ ಕತೆಗಳು ಬಹುಕಾಲ ನೆನಪಿನಲ್ಲುಳಿಯುತ್ತವೆ. ದೇವನೂರರು ಎಪ್ಪತ್ತರ ದಶಕದಲ್ಲಿ ಬರೆದ 'ಮಾನವೀಯತೆ ಅಂತಾರಲ್ಲ ಅದರ ಬಗ್ಗೆ' ಎಂಬ ಅಪರೂಪದ ಲೇಖನವನ್ನು ಮತ್ತೆ ತಿದ್ದಿತೀಡಿ ಚೆಂದಗೊಳಿಸಿದ್ದಾರೆ. ವಿ.ಎಸ್.ಶ್ರೀಧರ ಅವರ 'ಲ್ಯಾಟಿನ್ ಅಮೆರಿಕಾದ ಪಾಠಗಳು' ನಟರಾಜು ಬೂದಾಳು ಅವರ 'ಈ ದಶಕದ ಕೆಲವು ವೈಚಾರಿಕ ಬೆಳವಣಿಗೆಗಳು' ಹಾಗೂ ನಟರಾಜ್ ಹುಳಿಯಾರರ 'ಸ್ವಾತಂತ್ರ್ಯೋತ್ತರ ಕರ್ನಾಟಕ ಮತ್ತು ಜಾತ್ಯತೀತತೆ: ಒಂದು ನೋಟ' ಲೇಖನಗಳು ದಣಿವು ಕಾಣದ ಜನತೆಯ ಹೋರಾಟದ ಅನೇಕ ಆಯಾಮಗಳನ್ನು ತೆರೆದಿಡುತ್ತವೆ. ಬಾಪು ಹೆದ್ದೂರಶೆಟ್ಟಿ, ಹಸನ್ ನಯೀಂ ಸುರಕೋಡ, ಜಿ.ರಾಜಶೇಖರ್, ಹುಲಿಕುಂಟೆ ಮೂರ್ತಿ, ಬಾಲಗುರುಮೂರ್ತಿ, ರಂಗನಾಥ ಕಂಟನಕುಂಟೆ ಮೊದಲಾದವರ ಮೌಲಿಕ ಬರಹಗಳನ್ನು 'ಸಂವಾದ' ವಿಶೇಷಾಂಕ ಒಳಗೊಂಡಿದೆ.

ಕಲಾವಿದ ಮುರಳೀಧರ ರಾಠೋಡ್ ರೂಪಿಸಿರುವ ಈ ವಿಶೇಷಾಂಕದ ಮುಖಪುಟ ಮತ್ತು ಒಳಪುಟಗಳ ವಿನ್ಯಾಸವಂತೂ ಪದೇಪದೇ ಸಂವಾದದ ಚಂದವನ್ನು ತೂಗಿನೋಡುವಂತೆ ಮಾಡುತ್ತದೆ. ಅವರ ಪಳಗಿದ ವಿನ್ಯಾಸದ ಶ್ರದ್ಧೆಯನ್ನು ಕಾಣಲು ಈ ವಿಶೇಷಾಂಕವನ್ನೊಮ್ಮೆ ನೋಡಬಹುದು.

**ಚಂದ್ರಶೇಖರ್ ಐಜೂರ್, 'ಗೌರಿ ಲಂಕೇಶ್'**
**ಫೆಬ್ರವರಿ, 22–2012**

## ಸೊಗಸಾಗಿದೆ

2012ರ 'ಸಂವಾದ' ವಿಶೇಷಾಂಕ ನನ್ನ ನಿರೀಕ್ಷೆ ಮೀರಿ ಸೊಗಸಾಗಿ ಮೂಡಿಬಂದಿದೆ. ಹುಳಿಯಾರ್, ಅಸ್ಗರ್ ಅಲಿ ಲೇಖನಗಳು ಅದ್ಭುತವಾಗಿವೆ. ಬಾಲು ಪಲವಣಕರ್‌ರನ್ನು ಕನ್ನಡಕ್ಕೆ ಕೊಟ್ಟ ಅನುಪಮಾರಿಗೆ ವಂದನೆಗಳು. ನೀವು ರಾಜಿಯಾಗದ ಕೆಲ ವಿಚಾರ ಕುರಿತು ಸಿಕ್ಕಾಗ ಮಾತಾಡೋಣ. ಸಂಚಿಕೆ ರೂಪಿಸಿದ ಶ್ರಮಕ್ಕೆ ವಂದನೆಗಳು.

ಎ. ಚಂದ್ರಶೇಖರಯ್ಯ, ಭದ್ರಾವತಿ.

## ಸಂಪಾದಕರಿಗೊಂದು ಅಭಿನಂದನಾ ಪತ್ರ

ಮಾನ್ಯರೆ,

'**ಸಂ**ವಾದ' ಪತ್ರಿಕೆಯ ಹೆಗ್ಗಳಿಕೆಗೆ ಮತ್ತೊಂದು ಅಗ್ಗಳಿಕೆ 2012ರ ವಿಶೇಷಾಂಕ. ಪತ್ರಿಕೆ ಕೈಸೇರಿದಾಗ ಅವರ್ಣನೀಯ ಆನಂದ. ಒಂದಕ್ಕಿಂತ ಒಂದು ಚಂದದ ಕವನಗಳು, ವೈಚಾರಿಕ ಲೇಖನಗಳು ಎಂದಿಗಿಂತ ಇಂದು ಹೆಚ್ಚು ಖುಷಿಯನ್ನು ನೀಡಿವೆ. ಪ್ರಬುದ್ಧ ಯೋಚನೆ, ತೂಕ ತಪ್ಪದ ಎಚ್ಚರಿಕೆ, ನೈಜ ಕಳಕಳಿ ಹಾಗೂ ಹೃದಯಾಂತರಾಳದ ಸಂವೇದನೆ ಎಲ್ಲವು ಅನನ್ಯವಾಗಿವೆ.

ನಿಮ್ಮ ಶ್ರಮ, ಸೇವೆ ಮತ್ತು ತ್ಯಾಗಕ್ಕೆ ನಾನು ವೈಯಕ್ತಿಕವಾಗಿ ಹಾಗೂ 'ಸಂವಾದ' ಓದುಗರ ಪರವಾಗಿ ಹೃದಯ ತುಂಬಿದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಮಲ್ಲಿಕಾರ್ಜುನ ಗುಮ್ಮಗೋಳ, ಧಾರವಾಡ**

# ಸಮೃದ್ಧವಾಗಿ ಮೂಡಿ ಬಂದಿದೆ

ಪ್ರಿಯ ಇಂದೂಧರ್,

'ಸಂವಾದ'ದ ವಿಶೇಷಾಂಕ(ಜನವರಿ-ಫೆಬ್ರುವರಿ, 2012) ನೋಡಿದೆ. ತುಂಬ ಸುಂದರ ಹಾಗೂ ಸಮೃದ್ಧವಾಗಿ ಮೂಡಿ ಬಂದಿದೆ. ಖ್ಯಾತ ಮತ್ತು ಶ್ರೀಮಂತ ಪ್ರಕಾಶನ ಸಂಸ್ಥೆಗಳು ತರುವ ವಿಶೇಷಾಂಕಗಳ ಮಟ್ಟದಲ್ಲೇ 'ಸಂವಾದ'ದಂತಹ ಪುಟ್ಟ ಪತ್ರಿಕೆ ಈ ಸಂಪುಟವನ್ನು ಹೊರತಂದಿರುವುದು ನನಗೆ ಸಂತೋಷ ಮತ್ತು ಹೆಮ್ಮೆಯೆರಡನ್ನೂ ಉಂಟುಮಾಡಿದೆ.

ಎಸ್. ಶಿವಲಿಂಗಂ ಅನುವಾದಿಸಿರುವ ಫ್ರೆಂಚ್ ಕತೆ 'ಒಂದು ಗುಡಿಸಿಲಿನಿಂದ' ಈ ವಿಶೇಷಾಂಕವನ್ನು ನಿಜವಾದ ಅರ್ಥದಲ್ಲಿ ವಿಶೇಷಾಂಕವನ್ನಾಗಿ ಮಾಡಿದೆ ಎಂದೇ ಹೇಳಬೇಕು. ದು.ಸರಸ್ವತಿಯವರ ಕಥೆಯನ್ನು ಅವರ ಬಾಯಿಂದಲೇ ಹಿಂದೆ ಕೇಳಿದ್ದೆನಾದರೂ, ಅದನ್ನು ಈಗ ಬರಹ ರೂಪದಲ್ಲಿ ಓದಿದಾಗಲೂ ಖುಷಿ ನೀಡಿತು. ದೇವನೂರರ 'ಮಾನವೀಯತೆ' ಕುರಿತ ಬರಹವನ್ನು ಬಹುಶಃ ಇಲ್ಲಿ ಹತ್ತನೇ ಪುನರ್‌ಮುದ್ರಣದಲ್ಲಿ ಓದುತ್ತಿರಬಹುದು! ಅಂತೂ ಈ ಹತ್ತನೇ ಬಾರಿಯ ಹೊತ್ತಿಗಾದರೂ ಅವರಿಗೆ ಈ ಬರಹ 'ಒರಟು' ಎನ್ನಿಸಿದೆಯಲ್ಲಾ ಎಂಬುದೇ ಸಂತೋಷದ ಸಂಗತಿ. ದೇವರು ಅವರಿಗೆ ಒಳ್ಳೆಯದನ್ನು ಮಾಡಲಿ!

ಇನ್ನು ಅನುಪಮಾ ಅವರ ದಲಿತ ಕ್ರಿಕೆಟಿಗ ಬಾಲು ಕುರಿತ ಲೇಖನ ಕುತೂಹಲಕಾರಿಯಾಗಿದೆ. ಆದರೆ, ಅದರಲ್ಲಿನ 'ರಾಜಕೀಯದ ಎಲ್ಲ ವರಸೆಗಳನ್ನೂ ಆ ವೇಳೆಗೆ ಕರಗತ ಮಾಡಿಕೊಂಡಿದ್ದ ಗಾಂಧಿ ಮತ್ತು ಕಾಂಗ್ರೆಸ್, ದಲಿತರ ಒಳಪಂಗಡಗಳ ಭಿನ್ನತೆ ಮುನ್ನೆಲೆಗೆ ಬರುವಂತೆ ನೋಡಿಕೊಂಡರು' ಎಂಬ ಮಾತಿನಲ್ಲಿ ಗಾಂಧಿಗೆ ಸಂಬಂಧಪಟ್ಟಂತಾದರೂ ಒಂದಿಷ್ಟು ಪುರಾವೆ ಒದಗಿಸಿ ಆ ಮಾತನ್ನು ದಾಖಲಿಸಿದ್ದರೆ ಚೆನ್ನಿತ್ತು. ಪುಟ್ಟಯ್ಯನವರ ಲೇಖನ 'ಪಂಚಮ' ಪತ್ರಿಕೆ ಕಡೆ ನಮ್ಮ ಸಂಶೋಧಕರ-ವಿದ್ವಾಂಸರ ಗಮನ ಈಗಲಾದರೂ ಹರಿಯಿತಲ್ಲಾ ಎಂಬ ಸಂತೋಷವನ್ನುಂಟು ಮಾಡಿತಾದರೂ, ಅವರು ತಮ್ಮ ಮೂಗಿನ ನೇರಕ್ಕಷ್ಟೇ ಅದರ ತಾತ್ವಿಕತೆಯನ್ನು ಗುರುತಿಸಿ ಅದರ ವಿಶಾಲ ತಾತ್ವಿಕ ಭಿತ್ತಿಯನ್ನು ಕಿರಿದುಗೊಳಿಸಿದ ಚಿತ್ರ ನೀಡಿರುವುದು ಸ್ವಲ್ಪ ಬೇಸರವನ್ನುಂಟು ಮಾಡಿತು. ಅದರ ಮೊದಲ ಸಂಚಿಕೆಯಿಂದ ಹಿಡಿದು ಕೊನೆಯ ಸಂಚಿಕೆಯವರೆಗೆ ಗಮನಿಸಿರುವ ಮತ್ತು ಈ ಪತ್ರಿಕೆಯ 'ಕಛೇರಿ' ಮೈಸೂರಿನ ಕೆ.ಜಿ.ಕೊಪ್ಪಲಿನಲ್ಲಿದ್ದ ನೆಲಮನೆ ಪ್ರಕಾಶನದ ಕಟ್ಟಡದಲ್ಲಿರುವವರೆಗೆ ಹಲವು ಬಾರಿ ಅದರ ವಿವಿಧ ಸಂಪಾದಕರ ವೈಯುಕ್ತಿಕ ಒಡನಾಟದಲ್ಲಿ ಆ ಪತ್ರಿಕೆಯ ಕೆಲವು ಸಂಚಿಕೆಗಳನ್ನಾದರೂ ರೂಪಿಸುವ ಕೆಲಸದಲ್ಲಿ ನನ್ನ ಅಲ್ಪ ಕೊಡುಗೆ ಸಲ್ಲಿಸಿರುವ ಸೌಭಾಗ್ಯ ಪಡೆದವನಾಗಿ ಈ ಮಾತನ್ನು ಹೇಳುತ್ತಿರುವೆ.

ಇಡೀ ಸಂಪುಟದಲ್ಲಿ ಹಾಸ್ಯ ಲೇಖನಗಳಿಲ್ಲದ ಕೊರತೆಯನ್ನು ಬಾಪು ಹೆದ್ದೂರಶೆಟ್ಟಿಯವರ 'ಲೋಹಿಯಾ, ಗಾಂಧಿ ಮತ್ತು ಗಾಂಧೀವಾದ' ಲೇಖನ ನೀಗಿದೆ ಎಂದು ಹೇಳಬಹುದು. ಮಿಕ್ಕ ಲೇಖನಗಳ ಬಗ್ಗೆ ಬರೆಯುವ ಧೈರ್ಯ ಸದ್ಯಕ್ಕಿಲ್ಲ.

ಡಿ.ಎಸ್.ನಾಗಭೂಷಣ, ಶಿವಮೊಗ್ಗ

# ಸಂವಾದ ನೆಲದ ಸೊಗಡು

ಸಂವಾದ ಮಾಸ ಪತ್ರಿಕೆ 2012ರ ವಿಶೇಷಾಂಕವನ್ನು ಹೊರತಂದಿದೆ. ಸಮಕಾಲೀನ ಸಂಗತಿಗಳ ಜೊತೆಗೆ ಸಾಹಿತ್ಯ, ಸಂಸ್ಕೃತಿ, ಭಾಷೆ, ನಾಡಿನ ಸಂಪತ್ತು... ಮುಂತಾಗಿ ತೀವ್ರತರ ಹುಡುಕಾಟವನ್ನು, ಮುಕ್ತ ಚರ್ಚೆಯನ್ನು ತನ್ನ ವಿನ್ಯಾಸವಾಗಿ ಹೊಂದಿರುವ ಪತ್ರಿಕೆ ಇದು. ಇದೇ ನೆಲೆಯಲ್ಲೇ ವಿಶೇಷಾಂಕವೂ ಹೊರ ಹೊಮ್ಮಿದೆ. ಇತ್ತೀಚೆಗೆ ನಿಯತಕಾಲಿಕಗಳು ರೂಪಿಸುವ ವಿಶೇಷಾಂಕಗಳು ಕೆಲವು ಗುಂಪಿನ, ವ್ಯಕ್ತಿಗಳ ಹಿತಾಸಕ್ತಿಗೆ, ತೆವಲಿಗೆ ವೇದಿಕೆ ಎಂದಾಗಿರುವಾಗ 'ಸಂವಾದ' ಇಂಥ ಮಿತಿಗಳನ್ನು ಮೀರಿಕೊಂಡಿದೆ.

ಈ ವಿಶೇಷಾಂಕದ 280 ಪುಟಗಳ ಉದ್ದಕ್ಕೆ ಹರಡಿಕೊಂಡಿರುವ ಅಕ್ಷರ ಲೋಕ ಕರ್ನಾಟಕದ ಸದ್ಯದ ಸಂದರ್ಭಕ್ಕೆ ಕನ್ನಡಿಯಂತಿರುವುದು ಹೆಗ್ಗಳಿಕೆ. ಜಾತಿ, ಹಿತಾಸಕ್ತಿ, ಪಕ್ಷಪಾತವನ್ನು ಬದಿಗಿಟ್ಟು ನಾಡಿನ ಜನಸಮುದಾಯವೊಂದರ ಬದುಕಿನ ವಿವಿಧ ಮಗ್ಗುಲುಗಳನ್ನು ಮುಕ್ತ ಕಣ್ಣುಗಳಿಂದ ನೋಡಿದರೆ, ದಾಖಲಾಗುವಂತೆ ಮಾಡಿದರೆ ಎಂಥ ಫಲಿತಾಂಶ ಹೊರಹೊಮ್ಮಬಲ್ಲದು ಎಂಬುದಕ್ಕೆ ಈ ವಿಶೇಷಾಂಕ ಇತ್ತೀಚಿನ ಪ್ರಮುಖ ಸಾಕ್ಷಿಯಂತಿದೆ. ಇಂಥ ಕಾಪಿಟ್ಟುಕೊಳ್ಳಬೇಕಾದ ಸಂಚಿಕೆ ರೂಪಿಸುವುದರ ಹಿಂದಿನ ಶ್ರಮ ಎಲ್ಲಾ ಪುಟದಲ್ಲೂ ಎದ್ದು ಕಾಣುತ್ತದೆ.

ಇಂಥ ಪ್ರಯತ್ನವನ್ನು ಕಾರ್ಯಗತಗೊಳಿಸುವಲ್ಲಿ 'ಸಂವಾದ' ಬಳಗ ಸಾರ್ಥಕ ಶ್ರಮವನ್ನೆ ಹರಿಸಿದೆ. ಸಂಪಾದಕರಾದ ಇಂದೂಧರ ಹೊನ್ನಾಪುರ, ಸಂಪಾದಕೀಯ ಬಳಗದ ಡಾ. ನಟರಾಜ್ ಹುಳಿಯಾರ್, ಪ್ರೊ. ರಹಮತ್ ತರೀಕೆರೆ, ಡಾ. ಕೆ.ಪುಟ್ಟಸ್ವಾಮಿ, ಡಾ. ದಾವೇರಪ್ಪ ಡೊಮಿನಿಕ್, ಡಾ. ಬಿ. ಯು. ಸುಮ ಹಾಗೂ ಕಲಾವಿದ ಮುರಳೀಧರ ರಾಠೋಡ್, ಉಪ ಸಂಪಾದಕ ಭೈರಸಂದ್ರ ಗಂಗರಾಜು; ಈ ಪತ್ರಿಕೆಯ ಪ್ರಕಟಣೆಕಾರರಾದ ಸ್ಫೂರ್ತಿಧಾಮ ಸಂಸ್ಥೆಯ ಎಸ್. ಮರಿಸ್ವಾಮಿಯವರ ಶ್ರದ್ಧೆ, ಶ್ರಮ ಮತ್ತು ದೃಷ್ಟಿಕೋನ ಇಂಥದ್ದೊಂದು ಸಂಚಿಕೆ ರೂಪುಗೊಳ್ಳಲು ಕಾರಣವಾಗಿದೆ. ನಾಡಿನ ಉದ್ದಗಲದ ಹಿರಿ-ಕಿರಿಯ ಬರಹಗಾರರ ದೊಡ್ಡ ಬಳಗವೇ ಇಲ್ಲಿ ಧ್ವನಿಸಿದೆ. ಈ ಸಂಚಿಕೆಯಲ್ಲಿ ಯಾರ್‍ಯಾರು ಬರೆಯಬೇಕು; ಎಂತೆಂಥಾ ವಿಚಾರಗಳನ್ನು ಕುರಿತು ಬರೆಯಬೇಕು ಎಂಬಲ್ಲಿ ಅನುಸರಿಸಿರುವ ನ್ಯಾಯದ ದೃಷ್ಟಿಯಂತೂ ಅನನ್ಯ.

ಸಂಚಿಕೆಯಲ್ಲಿ ಕರಡಿ ಖಲಂದರರಿಂದ ಮೊದಲ್ಗೊಂಡು ಬಾಡಿಗೆ ತಾಯಂದಿರ ತನಕ, ವಿಜ್ಞಾನದ ವಿರಾಟ್ ಬೆಳವಣಿಗೆಗಳಿಂದ ಕರ್ನಾಟಕದ ಜಾತ್ಯಾತೀತ ನೆಲೆಯ ತನಕ ಬೇರೆ ಬೇರೆ ಪ್ರಕಾರದ ನೆಲೆಯಲ್ಲಿ ವಿಚಾರಗಳು ಅಭಿವ್ಯಕ್ತಿ ಕಂಡಿವೆ. ಈ ನೆಲದ ನಿಜದ ಸ್ವಾಸ್ಥ್ಯಕ್ಕೆ ಹಂಬಲಿಸುವ, ಕ್ರಿಯಾಶೀಲರಾಗಿರುವ, ಚಿಂತಿಸುವ ಬರಹಗಾರರ ದೊಡ್ಡದೊಂದು ದಂಡು ಜಾತಿ, ಲಿಂಗ, ಪ್ರದೇಶವಾರು ತಾರತಮ್ಯದ ಹೊರತಾಗಿ ಇಲ್ಲಿ ಬರೆದಿದೆ. ಕಥೆ, ಕಾವ್ಯ, ನಾಟಕ ವೈಚಾರಿಕ ಲೇಖನಗಳು... ಹೀಗೆ ವಿವಿಧ ಮಜಲುಗಳಲ್ಲಿ ಈ ಬರಹಗಾರರ ಬಳಗ ಅತಿ ಸೂಕ್ತ ಅಂಶಗಳನ್ನು ಕುರಿತು ಧ್ವನಿಸಿದೆ. ಕಳೆದ ಹತ್ತು ವರ್ಷಗಳಿಂದಲೂ ಜನಪರ ದೃಷ್ಟಿಕೋನ ಹಾಗೂ ಸಕಲ ಸಂಗತಿಗಳ ಮುಕ್ತ ಚರ್ಚೆಯೊಂದಿಗೆ ಮೂಡಿ ಬಂದಿರುವ ಪತ್ರಿಕೆ ಸಂವಾದ.

ಕೋಮುವಾದಿಗಳು ಹಚ್ಚಿದ್ದ ದಳ್ಳುರಿ ದೇಶದ ಉದ್ದಗಲಕ್ಕೆ ಹತ್ತಿ ಉರಿಯುತ್ತಿದ್ದ ದಿನಗಳವು. ಜನಪರ, ಜಾತ್ಯಾತೀತ ನಿಲುವಿಗೆ; ದುಡಿಯುವ ಜನರ ಸಮಗ್ರ ಸಂಕಟಗಳಿಗೆ ಇಂಬಾಗಿ ನಿಂತಿದ್ದ, ನಿಲ್ಲಬೇಕಿದ್ದ ಶಕ್ತಿ ಛಿದ್ರಗೊಳ್ಳುತ್ತಿದ್ದ ದಿನಗಳು ಅವಾಗಿದ್ದವು. ಕರ್ನಾಟಕದ ಸಾಂಸ್ಕೃತಿಕ ಸಾಹಿತ್ಯಿಕ ಹಾಗೂ ರಾಜಕೀಯ ಸಂದರ್ಭದಲ್ಲಿ ಎಂಥದೋ ವಿಚಾರಶೂನ್ಯತೆ ಆವರಿಸುತ್ತಿದೆ ಎಂಬ ಕೂಗು ಎಲ್ಲೆಡೆ ಎದ್ದಿತ್ತು. ಅಂಥ ದಿನಗಳಿಗೆ ಒಂದು ಅರ್ಥಪೂರ್ಣ ಧ್ವನಿಯಾಗುವ ಪ್ರಯತ್ನದಲ್ಲಿ ಹುಟ್ಟಿದ್ದು 'ಸಂವಾದ'. ತನ್ನ ಉದ್ದೇಶದ ಸಫಲತೆಯಲ್ಲಿ ಸಂವಾದ ಸಂಪೂರ್ಣ ಯಶಸ್ಸು ಪಡೆಯಿತೇ? ಎಂದು ಪ್ರಶ್ನೆ ಮಾಡುವವರೂ ಇದ್ದಾರೆ. ಅದಿರಲಿ; ತನ್ನ ಉದ್ದೇಶದ ಕಡೆಗೆ 'ಸಂವಾದ' ದಿಟ್ಟ ಹೆಜ್ಜೆಗಳನ್ನೇ ಇಟ್ಟಿದೆ ಎಂಬುದು ನಿರ್ವಿವಾದ.

ಮಲ ಹೊರುವವರ ಸಂಕಟಗಳಿಂದ ರೈತರ ಆತ್ಮಹತ್ಯೆಗಳ ತನಕ, ಮಠಗಳ ಢೋಂಗಿತನದಿಂದ ಸರ್ಕಾರದ ನೀತಿಗಳ ತನಕ 'ಸಂವಾದ' ಮುಕ್ತವಾಗಿ ವಾಸ್ತವಕ್ಕೆ ಮುಖಾಮುಖಿಯಾಗಿ ಪಡಿಮೂಡಿದ್ದಿದೆ. ಈ ಹತ್ತು ವರ್ಷಗಳಲ್ಲಿ ಸಾಹಿತ್ಯ, ರಾಜಕೀಯ, ಆರ್ಥಿಕತೆ, ಸಾಮಾಜಿಕ ಸಂಗತಿಗಳನ್ನು ಸಂವಾದ ಅಟೆಂಡ್ ಮಾಡಿದ ರೀತಿ ಅರ್ಥಪೂರ್ಣವಾದದ್ದು. ಇದೇ ಕಾರಣದಿಂದಲೇ ರಾಜ್ಯದ ಹಲವಾರು ವಿಶ್ವವಿದ್ಯಾಲಯಗಳ ಸಂಶೋಧನಾ ವಿದ್ಯಾರ್ಥಿಗಳು ತಮ್ಮ ಅಧ್ಯಯನದ ಆಕರ ಸಾಮಾಗ್ರಿಯಾಗಿ 'ಸಂವಾದ'ವನ್ನು ಪರಿಗಣಿಸುವಂತೆ ಆಗಿರುವುದು.

'ಇಂಥವೇ ಆರೋಗ್ಯಕರ ಕಣ್ಣುಗಳು ಸಂವಾದಕ್ಕೆ ಮುಂಗಣ್ಣಾಗಲಿ. ಈ ನೆಲದ ಸೊಗಡಿನ ನೆಲೆಯಾಗಿಯೇ ಇದು ಹೊರಹೊಮ್ಮುತ್ತಿರಲಿ. ಎಲ್ಲ ಬಗೆಯ ದುಡಿಯುವ ಜನರ ಧ್ವನಿಯಾಗಿಯೇ ಹೊಮ್ಮುತ್ತಿರಲಿ. ಇದು ಸಮಸ್ತ ಓದುಗರ ನಿರೀಕ್ಷೆ; ವಿಶೇಷಾಂಕವನ್ನು ಅರ್ಥಪೂರ್ಣವಾಗಿ ರೂಪಿಸಿದ್ದಕ್ಕೆ 'ಸಂವಾದ' ಬಳಗದ ಮೇಲೆ ಏರಿಕೆಯಾಗುತ್ತಿರುವ ಹೊಣೆಗಾರಿಕೆ.

ಮಂಜುನಾಥ ಅದ್ದೆ
'ಅಗ್ನಿ' ವಾರಪತ್ರಿಕೆ

## ಸಂಪಾದಕರೊಡನೆ ಸಂವಾದ

# ಶಾಲೆಗಳನ್ನು ಮುಚ್ಚುವುದು ಬೌದ್ಧಿಕ ದಾರಿದ್ರ್ಯದ ಸಂಕೇತ

**ನಾ ದಿವಾಕರ್**

ಪ್ರಿಯ ಸಂಪಾದಕರೇ,

ಮನೆಯೇ ಮೊದಲ ಪಾಠಶಾಲೆ ಎಂದು ಹೇಳಲಾಗುತ್ತದೆ. ಹಾಗೆಯೇ ಶಾಲೆ ಎನ್ನುವುದು ಬಾಲ್ಯಾವಸ್ಥೆಯಲ್ಲಿ ಮಕ್ಕಳು ಕಂಡುಕೊಳ್ಳುವ ಮತ್ತೊಂದು ಮನೆ. ತಮ್ಮ ಮನೆಗಳಲ್ಲಿ ಕೌಟುಂಬಿಕ ಸಂಬಂಧಗಳ ಸೂಕ್ಷ್ಮತೆಗಳನ್ನು ಅರಿತುಕೊಳ್ಳುವ ಮಕ್ಕಳಿಗೆ ಸಾಮಾಜಿಕ ಸಂಬಂಧಗಳ ಸೂಕ್ಷ್ಮತೆಗಳು ಅರಿವಾಗುವುದು ಶಾಲೆಯಲ್ಲಿ. ಶಾಲೆ ಅಂದರೆ ಕೇವಲ ಅಕ್ಷರ, ಕಾಗುಣಿತ ಕಲಿಸುವ ಯಾಂತ್ರಿಕ ಸಾಧನವಲ್ಲ. ಏನೂ ಅರಿಯದ ಮುಗ್ಧ ಮನಸ್ಸಿನ ಹಸುಳೆಗಳಿಗೆ ತಮ್ಮ ಸುತ್ತಲಿನ ಜಗತ್ತಿನ ವಾಸ್ತವಗಳನ್ನು ಪರಿಚಯಿಸುತ್ತಲೇ ಒಂದು ಸಾಮಾಜಿಕ ಚೌಕಟ್ಟಿನ ಅನಿವಾರ್ಯತೆ ಮತ್ತು ಅಗತ್ಯತೆಗಳನ್ನು ಮನದಟ್ಟುಮಾಡುವ ಪವಿತ್ರ ಸ್ಥಳ ಶಾಲೆ. ಶೈಕ್ಷಣಿಕ ದೃಷ್ಟಿಯಿಂದ ಶಾಲೆಗಳು ಜ್ಞಾನಾಭಿವೃ ದ್ಧಿಯ ಬಿಡಾರಗಳಾಗಿ ಕಂಡರೂ ಮಾನವ ಸಂವೇದನೆ ಮತ್ತು ಸೌಹಾರ್ದತೆಗಳ ದೃಷ್ಟಿಯಿಂದ ಶಾಲೆ ಎಂದರೆ ವ್ಯಕ್ತಿತ್ವವನ್ನು ರೂಪಿಸುವ ಒಂದು ಬೌದ್ಧಿಕ ಸಾಧನಗಳ ಆಗರ.

ನಮ್ಮ ಬಾಲ್ಯದ ದಿನಗಳನ್ನು ನೆನಪಿಸಿಕೊಂಡಾಗ ಮೊದಲು ಮನದಲ್ಲಿ ಮೂಡುವುದೇ ನಾವು ಓದಿದ ಆ ಪ್ರಾಥಮಿಕ ಶಾಲೆಯ ಚಿತ್ರಣ. ಆ ಕಾಲದ ಸ್ನೇಹಿತರು, ಶಿಕ್ಷಕರು, ಅಲ್ಲಿ ನಾವುಗಳು ಆಟ ಆಡಿದ ಕ್ಷಣಗಳು, ಆ ಬಯಲಿನ ಮರಳಿನಲ್ಲಿ ಬಿದ್ದು ಹೊರಳಾಡಿದ ಕ್ಷಣಗಳು, ಸಹಪಾಠಿಗಳೊಡನೆ ಜಗಳವಾಡಿ ಮತ್ತೆ ಒಂದಾಗಿ, ಮಾಸ್ತರುಗಳಿಂದ ಬೈಗಳು ಕೇಳಿ, ಹೊಡೆತ ತಿಂದು ಮತ್ತೆ ಪುನರಾವರ್ತನೆ ಮಾಡುತ್ತಿದ್ದ ಆ ಕ್ಷಣಗಳನ್ನು ಮರೆಯುವುದು ಅಸಾಧ್ಯ. ನಾವು ಓದಿದ ಶಿಥಿಲವಾದ ಪುರಾತನ ಶಾಲಾ ಕಟ್ಟಡಗಳು ಈಗ ಧ್ವಂಸಗೊಂಡು ಅದೇ ಜಾಗದಲ್ಲಿ ಭವ್ಯ ಬಂಗಲೆಯೋ, ಷಾಪಿಂಗ್ ಮಳಿಗೆಯೋ ನಿರ್ಮಾಣವಾಗಿದ್ದರಂತೂ ನಮ್ಮ ಎದೆಯಾಳದಲ್ಲಾಗುವ ತುಮುಲಗಳನ್ನು ವರ್ಣಿಸಲೇ ಆಗದು. ಆ ಕಟ್ಟಡ ನಮ್ಮದಲ್ಲ, ಜಾಗವೂ ನಮ್ಮದಲ್ಲ, ಕೆಲವು ವರ್ಷಗಳ ಕಾಲ ನಮ್ಮ ಬಾಲ್ಯವನ್ನು ಅಲ್ಲಿ ಕಳೆದಿರುವುದಷ್ಟೇ ನಮ್ಮ ಹೆಗ್ಗಳಿಕೆ. ಆದರೂ ಆ ಶಾಲಾ ಕಟ್ಟಡದೊಡನೆ ನಮ್ಮ ಅವಿನಾಭಾವ ಸಂಬಂಧಗಳು ಬೆಸೆದುಕೊಂಡಿರುತ್ತವೆ. ಅಲ್ಲಿ ನಾವು ಕಲಿತದ್ದನ್ನು ಮರೆತರೂ ಆ ಕಟ್ಟಡವನ್ನು ಮರೆಯುವುದಿಲ್ಲ. ಇದು ಬಹುಶಃ ಎಲ್ಲರಿಗೂ ಆಗುವ ಅನುಭವ.

ಏಕೆ ಹೀಗೆ ಎಂದು ಯೋಚಿಸುತ್ತಾ ಹೋದಾಗ ಆ ಪ್ರಾಥಮಿಕ ಹಂತದ ಶಾಲೆಗಳೇ ನಮ್ಮ ಇಂದಿನ ವ್ಯಕ್ತಿತ್ವವನ್ನು ರೂಪಿಸಿದ ಬುನಾದಿ ಎಂಬ ಗ್ರಹಿಕೆ ಮನದಟ್ಟಾಗುತ್ತಾ ಹೋಗುತ್ತದೆ. ಅಲ್ಲಿ ನಾವು ಕೇವಲ ಅಕ್ಷರ ಕಲಿಯಲಿಲ್ಲ, ಜೀವನವನ್ನೇ ಕಲಿತೆವು, ಜೀವನದ ಸತ್ಯಾಸತ್ಯತೆಗಳನ್ನು ಗ್ರಹಿಸುವ ಕಲೆಯನ್ನು ಕಲಿತೆವು, ನಮ್ಮ ಸುತ್ತಲಿನ ಸಮಾಜವನ್ನು ಗ್ರಹಿಸುವ ವಿದ್ಯೆಯನ್ನು ಕಲಿತೆವು, ನಮ್ಮ ಒಡನಾಡಿಗಳ, ಸುತ್ತಲಿನ ಜನತೆಯ ಇಂಗಿತಗಳನ್ನು ಗ್ರಹಿಸುವ ಕಲೆಯನ್ನು ಕಲಿತೆವು ಎಂದು ಮನದಟ್ಟಾಗುತ್ತದೆ. ಹಾಗಾಗಿ ಈ ಶಾಲೆಯಲ್ಲಿ ಕಳೆದ ನಮ್ಮ ಬಾಲ್ಯದ ದಿನಗಳು ಜೀವನ ಪರ್ಯಂತವೂ ನಮ್ಮೊಡನೆಯೇ ಸಾಗುತ್ತದೆ. ಇಂದಿಗೂ ನನ್ನೂರಿಗೆ ಹೋದಾಗ ನಾನು ಓದಿದ ಶಾಲೆಯ ಕಟ್ಟಡದ ಜಾಗದಲ್ಲಿ ದೊಡ್ಡ ಕಾಂಪ್ಲೆಕ್ಸ್ ಇರುವುದನ್ನು ಕಂಡಾಗ ಎಲ್ಲೋ ಒಂದೆಡೆ ನೋವಾಗುತ್ತದೆ. ಇದು ನಾವು ಬಾಲ್ಯಾವಸ್ಥೆಯನ್ನು ಕಳೆದ ಒಂದು ಶಾಲೆಯ ಸುತ್ತ ನಾವು ನಿರ್ಮಿಸಿಕೊಳ್ಳುವ ಸುಂದರ ಪರಿಕಲ್ಪನೆ.

**ಕಲಿಕೆಯ ಕೇಂದ್ರವಾಗಿ ಶಾಲೆ**

ಕರ್ನಾಟಕ ರಾಜ್ಯ ಸರ್ಕಾರ ಐದು ವಿದ್ಯಾರ್ಥಿಗಳಿಗಿಂತಲೂ ಕಡಿಮೆಸಂಖ್ಯೆ ಇರುವ ಮೂರು ಸಾವಿರ ಸರ್ಕಾರಿ ಶಾಲೆಗಳನ್ನು ಮುಚ್ಚಿಹಾಕುವ ಘೋಷಣೆ ಮಾಡಿದಾಗ ನನ್ನ ಮನದಾಳದಲ್ಲಿ ಮೂಡಿದ ಭಾವನೆಗಳು ಇವು. ಇಲ್ಲಿ ಕನ್ನಡಶಾಲೆ ಅಥವಾ ಸರ್ಕಾರಿ ಶಾಲೆ ಎನ್ನುವುದಕ್ಕಿಂತಲೂ, ಗ್ರಾಮೀಣ ಮಟ್ಟದಲ್ಲಿ ತಮ್ಮದೇ ಆದ ಒಂದು ಚೌಕಟ್ಟನ್ನು ನಿರ್ಮಿಸಿಕೊಂಡು, ಅಲ್ಲಿನ ಸೀಮಿತ ಪರಿಸರದಲ್ಲೇ ಗ್ರಾಮದ ಮಕ್ಕಳಿಗೆ ಹೊರ ಪ್ರಪಂಚವನ್ನು ಪರಿಚಯಿಸುವ ಒಂದು ಪವಿತ್ರ ದೇಗುಲವಾಗಿ ಶಾಲೆಗಳನ್ನು ನೋಡಬೇಕಾಗುತ್ತದೆ. ಗ್ರಾಮದ ಶಾಲೆಗಳಲ್ಲಿ ಓದುವ ಮಕ್ಕಳಿಗೆ ಶಾಲೆಯೇ ಹೊರ ಪ್ರಪಂಚದ ಕಿಟಕಿಯಂತೆ ಕಾರ್ಯ ನಿರ್ವಹಿಸುತ್ತದೆ. ತಮ್ಮ ಗ್ರಾಮದಲ್ಲಿನ ವಾಸ್ತವ ಸನ್ನಿವೇಶಗಳಿಗಿಂತಲೂ ಭಿನ್ನವಾದ ಪ್ರಪಂಚದವೊಂದಿದೆ ಎಂದು ಮಕ್ಕಳು ಅರಿಯುವುದೇ ಈ ಶಾಲೆಗಳಲ್ಲಿ ಮತ್ತು ಅಲ್ಲಿ ದೊರೆಯುವ ಶಿಕ್ಷಣದ ಮೂಲಕ.

ಸರ್ವರಿಗೂ ಕಡ್ಡಾಯ ಸಾರ್ವತ್ರಿಕ ಉಚಿತ ಶಿಕ್ಷಣ ನೀಡುವುದು ಭಾರತದ ಆಳ್ವಿಕರ ಸಾಂವಿಧಾನಿಕ ಕರ್ತವ್ಯ ಮತ್ತು ನೈತಿಕ ಕರ್ತವ್ಯವೂ ಹೌದು. ಈವರೆಗಿನ ಆರು ದಶಕಗಳ ಸ್ವತಂತ್ರ ಆಳ್ವಿಕೆಯಲ್ಲಿ ಭಾರತ ಸರ್ಕಾರ ಅನೇಕ ರೀತಿಯ ಯೋಜನೆಗಳನ್ನು ಹಮ್ಮಿಕೊಂಡಿದ್ದು ಪ್ರತಿಯೊಂದು ಗ್ರಾಮದಲ್ಲೂ ಶಾಲೆಗಳನ್ನು ಆರಂಭಿಸುವ ಬೃಹತ್ ಯೋಜನೆಯನ್ನು ಅನುಷ್ಠಾನಗೊಳಿಸಿದೆ. ಹೊಸ ಶಿಕ್ಷಣ ನೀತಿಯ ಅನುಸಾರ 14 ವರ್ಷದವರೆಗಿನ ಮಕ್ಕಳನ್ನು ಶಿಕ್ಷಣದಿಂದ ವಂಚಿತರನ್ನಾಗಿ ಮಾಡದಿರಲು ಸರ್ಕಾರಗಳು ಅನೇಕ ಕಾರ್ಯಕ್ರಮಗಳನ್ನೂ ಹಮ್ಮಿಕೊಂಡಿವೆ. ನಲಿ-ಕಲಿ, ಅಕ್ಷರ ದಾಸೋಹ, ಶಾಲಾಭಿವೃದ್ಧಿ ಸಮಿತಿಗಳ ರಚನೆ ಮುಂತಾದ ಯೋಜನೆಗಳ ಮೂಲಕ ಗ್ರಾಮ ಮಟ್ಟದಲ್ಲಿ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಆದರೂ ಇಂದಿಗೂ ಸಹ ಅನೇಕ ಗ್ರಾಮಗಳಲ್ಲಿ ಶಾಲಾ ಸೌಲಭ್ಯಗಳು ಇಲ್ಲದಿರುವುದು ಕಂಡುಬರುತ್ತದೆ. ಕೆಲವು ಹಳ್ಳಿಗಳ ಮಕ್ಕಳು ಕಿಲೋಮೀಟರ್‌ಗಟ್ಟಲೆ ನಡೆದು ಹೋಗ ಬೇಕಾದ ಪರಿಸ್ಥಿತಿಯೂ ಇದೆ. ಇರುವ ಶಾಲೆಗಳಲ್ಲೂ ಮೂಲ ಭೂತ ಸೌಕರ್ಯಗಳಿಲ್ಲದಿರುವುದೂ ಸಾಮಾನ್ಯವಾಗಿ ಕಂಡು ಬರುತ್ತದೆ. ಇದು ಒಂದು ಆಯಾಮ.

ಮತ್ತೊಂದೆಡೆ ಗ್ರಾಮೀಣ ಕುಟುಂಬಗಳೂ ಸಹ ಹತ್ತಿರದ ಪಟ್ಟಣಗಳಲ್ಲಿರುವ ಆಂಗ್ಲ ಮಾಧ್ಯಮ ಶಾಲೆಗಳಿಂದ ಆಕರ್ಷಿತರಾಗಿ ಒಂದನೆ ತರಗತಿಯಿಂದಲೇ ಮಕ್ಕಳನ್ನು ದೂರದ ಊರುಗಳಿಗೆ ಕಳುಹಿಸುವ ಪ್ರವೃತ್ತಿ ಹೆಚ್ಚಾಗುತ್ತಿದೆ. ಬಸ್ಸು ಏರಲೂ ಆಗದಂತಹ ಹಸುಳೆಗಳೂ ಬಸ್ ನಿಲ್ದಾಣಗಳಲ್ಲಿ ಗಂಟೆಗಟ್ಟಲೆ ಕಾದು ನಿಂತು ತಮ್ಮ ಹೊರಲಾಗದ ಹೊರೆಯಂತಿರುವ ಪುಸ್ತಕಗಳನ್ನು ಹೊತ್ತು ನಿತ್ಯ ಓಡಾಡುವುದನ್ನು ನೋಡಿದರೆ, ಸರ್ಕಾರ ಏಕೆ ಈ ಹಳ್ಳಿಗಳಲ್ಲೇ ಜನತೆಗೆ ಅಗತ್ಯವಾದ ಶಿಕ್ಷಣವನ್ನು ನೀಡಬಾರದು ಎನಿಸದಿರುವುದಿಲ್ಲ. ಇನ್ನು ಕೆಲವು ದೊಡ್ಡ ಗ್ರಾಮಗಳಲ್ಲಿ ಸರ್ಕಾರಿ ಶಾಲೆಗಳಿದ್ದರೂ ರಾಜಕೀಯ ಒತ್ತಡಗಳಿಗೆ ಮಣಿದು ಖಾಸಗಿ ಶಾಲೆಗಳಿಗೆ, ಅನುದಾನಿತ ಶಾಲೆಗಳಿಗೆ ಅನುಮತಿ ನೀಡುವ ಮೂಲಕ ಮಕ್ಕಳನ್ನು ಸರ್ಕಾರಿ ಶಾಲೆಗಳಿಂದ ವಿಮುಖರನ್ನಾಗಿ ಮಾಡಲಾಗುತ್ತಿದೆ. ಈ ವಿದ್ಯಮಾನವನ್ನು ಆಂಗ್ಲ ಭಾಷಾ ವ್ಯಾಮೋಹ ಎನ್ನುವುದಕ್ಕಿಂತಲೂ, ಶಾಲಾ ಶಿಕ್ಷಣದಲ್ಲಿನ ತಾರತಮ್ಯಗಳು ಮತ್ತು ಪಠ್ಯಕ್ರಮದಲ್ಲಿ ಕಂಡುಬರುವ ತಾರತಮ್ಯಗಳ ಪರಿಣಾಮ ಎಂತಲೂ ಹೇಳಬಹುದು.

ಉದಾಹರಣೆಗೆ ಸಿಬಿಎಸ್‌ಇ ಅಥವಾ ಸೆಂಟ್ರಲ್ ಸಿಲಬಸ್ ಎಂದಾಕ್ಷಣ ತಮ್ಮ ಮಕ್ಕಳು ಬಹಳ ಬುದ್ಧಿವಂತರಾಗುತ್ತಾರೆ ಎಂಬ ಒಂದು ಭ್ರಮೆ ಜನಮಾನಸದಲ್ಲಿ ಹಾಸು ಹೊಕ್ಕಾಗಿದೆ. ಆ ಕಾರಣಕ್ಕಾಗಿಯೇ ಸ್ಟೇಟ್ ಸಿಲಬಸ್ ಇರುವ ಸರ್ಕಾರಿ ಶಾಲೆಗಳನ್ನು ಮಧ್ಯಮ ವರ್ಗಗಳು ಅಸಡ್ಡೆಯಿಂದ ಕಾಣುತ್ತವೆ. ಇದೇ ಪ್ರವೃತ್ತಿ ಗ್ರಾಮೀಣ ಪ್ರದೇಶಗಳಿಗೂ ಹರಡಿದ್ದು, ಸೆಂಟ್ರಲ್ ಸಿಲಬಸ್ ಇಲ್ಲದಿದ್ದರೂ ಪಟ್ಟಣದಲ್ಲಿನ ಖಾಸಗಿ ಶಾಲೆಗಳಲ್ಲಿ ಉತ್ತಮ ಶಿಕ್ಷಣ ದೊರೆಯುತ್ತದೆ, ಆಂಗ್ಲ ಭಾಷೆಯಲ್ಲಿ ಉತ್ತಮ ಪ್ರೌಢಿಮೆ ಇರುತ್ತದೆ ಎಂಬ ಭ್ರಮೆ ಗ್ರಾಮಸ್ಥರನ್ನು ಆವರಿಸಿರುತ್ತದೆ. ಈ ಭ್ರಮೆಯನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಯಾವುದೇ ಸರ್ಕಾರವೂ ಸೂಕ್ತ ಕ್ರಮ

(29ನೇ ಪುಟಕ್ಕೆ)

## ಸಂಪಾದಕರೊಡನೆ ಸಂವಾದ

# ಆರ್‌ಎಸ್‌ಎಸ್ ಶಿಸ್ತಿನ ಒಳಗುಟ್ಟು

**ಸನತ್‌ಕುಮಾರ್ ಬೆಳಗಲಿ**

ಪ್ರಿಯ ಸಂಪಾದಕರೇ

ಹುಬ್ಬಳ್ಳಿಯಲ್ಲಿ ನಡೆದ ಆರ್‌ಎಸ್‌ಎಸ್‌ನ ಹಿಂದೂಶಕ್ತಿ ಸಂಗಮ ಕಂಡು ರೋಮಾಂಚಿತಗೊಂಡ ಸ್ನೇಹಿತರೊಬ್ಬರು, "ಅದೇನು ಶಿಸ್ತು, ಅದೇನು ಅಚ್ಚುಕಟ್ಟು, ವಿರಾಟ ಜನಸ್ತೋಮ" ಎಂದು ಹೊಗಳಿದ್ದೇ ಹೊಗಳಿದ್ದು. ಸಂಘದ ಗಣವೇಷ ಧರಿಸಿ ಬಂದ ಮುಖ್ಯಮಂತ್ರಿಗಳು, "ಸ್ವಯಂಸೇವಕನಾಗಿ ಬಂದೆ" ಎಂದು ಹೆಮ್ಮೆಯಿಂದ ಹೇಳಿಕೊಂಡಿದ್ದು ಕೂಡ ಅನೇಕರಲ್ಲಿ ಉದ್ವೇಗಭರಿತ ಅಭಿಮಾನವನ್ನು ಉಂಟು ಮಾಡಿತು. ಆದರೆ ಆ ಶಿಸ್ತಿನ ಮೂಲ, ಉದ್ದೇಶ, ಗುರಿಗಳೇನು ಎಂಬ ಬಗ್ಗೆ ಈ ರೀತಿಯ ಆವೇಶ ಭರಿತರಾಗುವವರು ಈ ರೀತಿ ಯೋಚನೆ ಮಾಡುವುದಿಲ್ಲ. ಯೋಚನೆ ಮಾಡಿದಷ್ಟು ಮೆದುಳಿಗೆ ಕೇಸರಿ ಕಾಯಿಲೆ ಅಂಟಿಕೊಂಡಿರುತ್ತದೆ.

ಕಳೆದ ಎಂಟು ದಶಕಗಳಿಂದ ಆರ್‌ಎಸ್‌ಎಸ್ ತನ್ನ ಪ್ರಭಾವವನ್ನು ವಿಸ್ತರಿಸಿಕೊಂಡಿದ್ದು, ಹದಿಹರೆಯದ ಹುಡುಗರನ್ನು ಬಲೆಗೆ ಬೀಳಿಸಿಕೊಂಡಿದ್ದು, ಮಧ್ಯಮ ವರ್ಗದ ಜನರಲ್ಲಿ ಅಭಿಮಾನ ಮೂಡಿಸಿದ್ದು, ಇಂತಹ ಒಣ ಶಿಸ್ತಿನಿಂದ. ಅಂತಲೇ ನನ್ನ ಗೆಳೆಯರಿಗೆ ಕೇಳಿದೆ, "ಈ ಶಿಸ್ತಿನ ಸ್ವಯಂಸೇವಕರ ಗುರಿಯೇನು? ಯಾವ ಉದ್ದೇಶಕ್ಕಾಗಿ ಈ ಶಕ್ತಿಸಂಗಮ ನಡೆದಿದೆ? ಅದಕ್ಕೆ ಹಿಂದೂ ಎಂದು ಏಕೆ ಹೆಸರಿಟ್ಟಿದ್ದಾರೆ? ಅದಕ್ಕೆ ಒಂದು ಕ್ಷಣ ತಬ್ಬಿಬ್ಬಾದ ಗೆಳೆಯರು, "ಅದೇನೆ ಇರಲಿ ಶಿಸ್ತು ಮುಖ್ಯ" ಎಂದರು.

ಮೂರು ಹೊತ್ತು ಬಿಸಿಬಿಸಿಯಾದ ಮೃಷ್ಟಾನ್ನ ಭೋಜನ ಸಿದ್ಧವಾಗಿದ್ದರೆ, ಚಳಿಯಲ್ಲಿ ಬೆಚ್ಚಗೆ ಮಲಗಲು ಹಾಸಿಗೆ-ಹೊದಿಕೆಗಳಿದ್ದರೆ, ಶಿಸ್ತು ತಾನಾಗಿಯೇ ಮೂಡುತ್ತದೆ. ಈ ಶಕ್ತಿ ಸಂಗಮಕ್ಕೆ ಬಿಜೆಪಿ ಸರ್ಕಾರದಿಂದ ಹಿಂಬಾಗಿಲ ಮೂಲಕ ಕೋಟ್ಯಂತರ ರೂಪಾಯಿ ಹರಿದು ಬಂದಿದೆ. ಉತ್ತರ ಕರ್ನಾಟಕದ ಮೈನಿಂಗ್ ಮತ್ತು ರಿಯಲ್ ಎಸ್ಟೇಟ್ ಮಾಫಿಯಾ ಸಕಲ ಖರ್ಚನ್ನು ನೋಡಿಕೊಂಡಿದೆ. ಬಡರೈತರ ಹೊಟ್ಟೆಗೆ ಹೊಡೆದ ನಿರಾಣಿಯಂತಹವರು ಗಣವೇಷ ಧರಿಸಿ, ಪಥಸಂಚಲನದಲ್ಲಿ ಭಾಗವಹಿಸಿದ್ದು ಮಾತ್ರವಲ್ಲ ಸಕಲ ನೆರವನ್ನೂ ನೀಡಿದ್ದಾರೆ. ಹೀಗಿರುವಾಗ ಯಾವುದೇ ಸಂಘಟನೆಯ ಕಾರ್ಯಕರ್ತರಿಗೆ ಶಿಸ್ತಿನ ಕವಾಯತು ಮಾಡಲು ಸುಲಭವಾಗುತ್ತದೆ.

ಎಡಪಂಥೀಯ ಮತ್ತು ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು ಸಮಾಜದ ಅನಿಷ್ಟಗಳ ವಿರುದ್ಧ ದುಷ್ಟಶಕ್ತಿಗಳನ್ನು ಎದುರಿಸಿ, ಪ್ರಾಣವನ್ನೇ ಪಣಕ್ಕಿಟ್ಟು ಹೋರಾಡುತ್ತಾರೆ. ಎರಡು ಹೊತ್ತಿನ ಊಟಕ್ಕೂ ಅವರು ಪರದಾಡುತ್ತಾರೆ. ಯಾವ ಬಂಡವಾಳದಾರರು ತಮ್ಮ ವಿರೋಧ ಹೋರಾಟ ಮಾಡುವ ಇಂತಹವರಿಗೆ ಒಂದು ಲೋಟ ನೀರನ್ನು ಕೊಡುವುದಿಲ್ಲ. ಆದರೆ ನಂಬಿದ ಸಿದ್ಧಾಂತಕ್ಕೆ ಬದ್ಧವಾಗಿ ಹೋರಾಡುವುದು ಅತ್ಯಂತ ಉನ್ನತವಾದ ಧ್ಯೇಯಗಳಿಗಾಗಿ ಜೀವ ತೇಯುವುದು, ಸಂಘಪರಿವಾರದ ಪರಾನ್ನಪುಷ್ಟ ಶಿಸ್ತಿಗಿಂತ ಶ್ರೇಷ್ಠವಾದದ್ದು.

ದೇಶಕ್ಕಾಗಿ ಹಿಂದೂ ಶಕ್ತಿಸಂಗಮ ನಡೆಸಲಾಗಿದೆ ಎಂದು ಅನೇಕರು ಹೇಳುತ್ತಾರೆ. ದೇಶಕ್ಕಾಗಿ ಮಾಡುವುದಾದರೆ, ಹಿಂದೂ ಸಂಗಮವನ್ನೇ ಏಕೆ ಮಾಡಬೇಕು? ಭಾರತೀಯರ ಶಕ್ತಿಸಂಗಮವೆಂದು ಹೆಸರಿಡಬೇಕಿತ್ತು ಅಲ್ಲವೇ? ಹನ್ನೆರಡನೇ ಶತಮಾನದ ಮಹಾಚೇತನ ಬಸವಣ್ಣ ಹಿಂದೂಗಳೇ ಒಂದಾಗಿ ಎಂದು ಕರೆಕೊಡಲಿಲ್ಲ. ಸಕಲ ಜೀವಾತ್ಮಗಳ ಲೇಸನ್ನು ಬಯಸಲು ದೊರೆ ಬಿಜ್ಜಳನನ್ನು ಎದುರು ಹಾಕಿಕೊಂಡು ಅವರು ಹೋರಾಡಿದರು. ಹಸಿದವರಿಗೆ ಅನ್ನ ಕೊಡದ ದೇವರಲ್ಲಿ ನನಗೆ ನಂಬಿಕೆ ಇಲ್ಲ ಎಂದು ಸ್ವಾಮಿ ವಿವೇಕಾನಂದ ಹೇಳಿದರು. ಗಾಂಧೀಜಿ ಸ್ವಾತಂತ್ರ್ಯ ಹೋರಾಟ ನಡೆಸಿದಾಗ, ಬರೇ ಹಿಂದೂಗಳನ್ನು ಮಾತ್ರ ಅದರಲ್ಲಿ ತೊಡಗಿಸಲಿಲ್ಲ. ಎಲ್ಲ ಮತ ಧರ್ಮದವರನ್ನು ಒಂದುಗೂಡಿಸಿ ಹೋರಾಟ ರೂಪಿಸಿದರು.

ರಾಷ್ಟ್ರವಾದದ ಹೆಸರಿನಲ್ಲಿ ಒಂದು ಕೋಮಿನ ಜನರನ್ನು ಸಂಘಟಿಸುವುದು ಹುಸಿ ರಾಷ್ಟ್ರವಾದ ಎಂದು ಕರೆಯಲ್ಪಡುತ್ತದೆ. ಆರ್‌ಎಸ್‌ಎಸ್ ಇಂತಹ ಹುಸಿ ರಾಷ್ಟ್ರವಾದದ ಸಂಕೇತ.

ಆರ್‌ಎಸ್‌ಎಸ್ ಅಸ್ತಿತ್ವಕ್ಕೆ ಬಂದ 80 ವರ್ಷಗಳ ಕಾಲಾವಧಿಯಲ್ಲಿ ಭ್ರಷ್ಟಾಚಾರದ ವಿರುದ್ಧ ಒಂದೇ ಒಂದು ಹೋರಾಟ ಮಾಡಲಿಲ್ಲ. ಮೂಢನಂಬಿಕೆ ವಿರುದ್ಧ ಜನಜಾಗೃತಿ ಮೂಡಿಸಲಿಲ್ಲ. ಬಡವರ ಮೇಲೆ ಸಿರಿವಂತರು ದಬ್ಬಾಳಿಕೆ ಮಾಡಿದಾಗ, ಅದನ್ನು ತಡೆಯಲು ಲಾಠಿ ಬೀಸಲಿಲ್ಲ. ದಲಿತರ ಮೇಲೆ ದೌರ್ಜನ್ಯ ನಡೆದಾಗ ಪ್ರತಿಭಟಿಸಲಿಲ್ಲ. ವರದಕ್ಷಿಣೆ ಹೆಸರಿನಲ್ಲಿ ಮಹಿಳೆಯರನ್ನು ಸುಟ್ಟು ಹಾಕುತ್ತಿರುವಾಗ, ಅದರ ವಿರುದ್ಧ ಧ್ವನಿಯೆತ್ತಲಿಲ್ಲ. ಜೀವನಾವಶ್ಯಕ ಪದಾರ್ಥಗಳ ಬೆಲೆಗಳು ಗಗನಕ್ಕೇರಿದಾಗ ಕಳ್ಳವ್ಯಾಪಾರಿಗಳ ಬಳಿಯಿರುವ ಅಕ್ರಮ ದಾಸ್ತಾನು ಹೊರಗೆಳೆಯಲಿಲ್ಲ. ಇಂತಹ ಯಾವ ಹೋರಾಟವನ್ನು ಮಾಡದ ಸಂಘಟನೆಯೊಂದು ಧರ್ಮದ ಹೆಸರಿನಲ್ಲಿ ಶಕ್ತಿಸಂಗಮ ನಡೆಸುತ್ತಿರುವುದು ಏಕೆ?

ಆದರೆ ಎಲ್ಲ ವಿಷಯಗಳ ಬಗ್ಗೆ ಆರ್‌ಎಸ್‌ಎಸ್ ಮೌನವಾಗಿ ಉಳಿಯಲಿಲ್ಲ. ಎಲ್ಲೋ ದನ ಸಾಗಾಟ ಮಾಡುತ್ತಾರೆಂದರೆ, ಗೋರಕ್ಷಣೆ ಹೆಸರಿನಲ್ಲಿ ಅಲ್ಲಿ ಸ್ವಯಂಸೇವಕರು ಪ್ರತ್ಯಕ್ಷರಾಗುತ್ತಾರೆ. ವಿಭಿನ್ನ ಧರ್ಮಕ್ಕೆ ಸೇರಿದ ಯುವಕ-ಯುವತಿ ಸುಮ್ಮನೆ ಜೊತೆಗೆ ಮಾತನಾಡಿದರೆ, ಅಲ್ಲಿ ಹಿಂದೂರಕ್ಷಕರ ಪ್ರವೇಶವಾಗುತ್ತದೆ. ಹುಡುಗಿ ಹಿಂದೂವಾಗಿದ್ದರೆ, ಆಕೆಯ ಕೆನ್ನೆಗೆ ಬಾರಿಸಿ ಎಳೆದುಕೊಂಡು ಹೋಗುತ್ತಾರೆ. ಎಲ್ಲೋ ಚರ್ಚ್‌ನಲ್ಲಿ ಪ್ರಾರ್ಥನೆ ನಡೆಸಿದ್ದರೆ, ಅಲ್ಲಿ ಮತಾಂತರ ನಡೆದಿದೆ ಎಂದು ಗುಲ್ಲೆಬ್ಬಿಸಿ ಪುಂಡಾಟಿಕೆ ನಡೆಸುತ್ತಾರೆ. ಇದು ಆರ್.ಎಸ್.ಎಸ್.ನವರ ಶಿಸ್ತಿನ ವೈಖರಿ.

ಭಾರತೀಯರೆಲ್ಲ ಒಂದೇ ಎಂದು ಆರ್‌ಎಸ್‌ಎಸ್ ಹೇಳುವುದು ಬರೇ ಬೂಟಾಟಿಕೆ. ನಿಜಕ್ಕೂ ಭಾರತ ಒಂದಾಗಿದೆಯೇ? 8000 ಕೋಟಿ ರೂಪಾಯಿ ವೆಚ್ಚದ 30 ಅಂತಸ್ತಿನ ಅರಮನೆ ಕಟ್ಟಿಸುವ ಅಂಬಾನಿಯೂ ಈ ದೇಶದಲ್ಲಿ ಇದ್ದಾನೆ. ಅದೇ ಮುಂಬೈನ ಫುಟ್‌ಪಾತ್‌ನ ಚಳಿಯಲ್ಲಿ ನಡುಗುತ್ತ ಉಪವಾಸ ಮಲಗುವ ಬಡ ತುಕಾರಾಮನೂ, ಬುಡನ್‌ಸಾಬನೂ ಇಲ್ಲಿ ನೆಲೆಸಿದ್ದಾರೆ. ಕಾನೂನು ದೃಷ್ಟಿಯಲ್ಲಿ ಇವರಿಬ್ಬರು ಭಾರತೀಯ ಪ್ರಜೆಗಳು. ಆದರೆ ಒಬ್ಬ ಸ್ವರ್ಗದಲ್ಲಿ ಇದ್ದಾನೆ. ಇನ್ನೊಬ್ಬ ನರಕದಲ್ಲಿ ಇದ್ದಾನೆ. ಈ ಇಬ್ಬರು ಭಾರತೀಯರಲ್ಲಿ ಯಾವ ಭಾರತೀಯನ ಪರವಾಗಿ ಆರ್‌ಎಸ್‌ಎಸ್ ಹೋರಾಡುತ್ತದೆ.

ಇಂತಹ ಪ್ರಶ್ನೆಗಳು ಸಂಘದ ಹುಸಿ ಶಿಸ್ತನ್ನು ಕಂಡು ರೋಸಿ ಹೋದ ಅನೇಕರಲ್ಲಿ ಮೂಡುವುದು ಸಹಜ. ಇನ್ನೂ ಅನೇಕ ಪ್ರಶ್ನೆಗಳಿಗೆ ಪರಿವಾರ ಉತ್ತರಿಸ ಬೇಕಾಗಿದೆ. ಗಾಂಧೀಜಿಯನ್ನು ಕೊಂದ ಗೋಡ್ಸೆ ಯಾರು? ಸಾವರ್ಕರ್ ಬ್ರಿಟಿಷರ ಕ್ಷಮೆ ಕೇಳಿ ಬಿಡುಗಡೆಯಾಗಿ ಬಂದದ್ದು ಏಕೆ? ಅಯೋಧ್ಯ ಬಾಬ್ರಿ ಮಸೀದಿ ಕೆಡವಿದವರು ಯಾರು? ಇಂತಹ ಪ್ರಶ್ನೆಗಳನ್ನೆಲ್ಲ ಮಸೀದಿ ಕೆಡವಿದಾಗ ಅಟಲ್ ಬಿಹಾರಿ ವಾಜಪೇಯಿಯವರಿಗೆ ಪತ್ರಕರ್ತರೊಬ್ಬರು ಕೇಳಿದರು. ಆಗ ಅವರು ನಕ್ಕು, "ನಾನು ಅಲ್ಲಿ ಹೋಗಿಲ್ಲ". ಆದರೂ ಆ ಪರಿವಾರದ ಜೊತೆಗೆ ನೀವಿದ್ದೀರಲ್ಲ ಎಂದು ಕೇಳಿದಾಗ, "ಇಷ್ಟು ದಿನ ಅದರಲ್ಲಿ ಬಂದಿದ್ದೇನೆ. ಇನ್ನೆಲ್ಲಿಗೆ ಹೋಗಲಿ" ಎಂದು ನಗೆಬೀರಿದರು.

ಸದಾನಂದಗೌಡರಲ್ಲಿ ಇಂತಹ ಪ್ರಶ್ನೆಗಳು ಮೂಡಿಲ್ಲ ಎಂದಲ್ಲ. ಆದರೆ ಯಾವುದೋ ಗಾಳಿಯಲ್ಲಿ ಬಿಜೆಪಿ ಸೇರಿಕೊಂಡ ಅವರಿಗೆ ರಾಜಕೀಯದ ಉನ್ನತಾಧಿಕಾರ ದೊರೆತಿದೆ. ಇಲ್ಲದ ತರಲೆ ಪ್ರಶ್ನೆಗಳನ್ನು ಕೇಳಿ ಅನಾಯಸವಾಗಿ ದೊರಕಿದ ಅಧಿಕಾರವನ್ನು ಕಳೆದುಕೊಳ್ಳಲು ಇಷ್ಟವಿಲ್ಲ. ಒಂದೆರಡು ಗಂಟೆ ಚಡ್ಡಿ ಧರಿಸಿ, ನಮಸ್ತೆಸದಾ ವತ್ಸಲೆ ಎಂದು ಹೇಳಿದರೆ ಸಾಕು ಅಧಿಕಾರ ಅಬಾಧಿತವಾಗುತ್ತದೆ ಎಂಬ ವ್ಯವಹಾರಿಕ ಸತ್ಯ ಅವರಿಗೆ ಅರ್ಥವಾಗಿದೆ.

ಆದರೆ ಎಲ್ಲರೂ ಹೀಗಿಲ್ಲ. ಸಂಘ ಪರಿವಾರದಲ್ಲಿ ದಶಕಗಳಗಟ್ಟಲೇ ದುಡಿದು ಭ್ರಮನಿರಸನ ಹೊಂದಿ ಹೊರಬಂದವರು ಇದ್ದಾರೆ. ಅಂಥವರಲ್ಲಿ ಕರ್ನಾಟಕದ ಎ.ಕೆ.ಸುಬ್ಬಯ್ಯನವರು ಒಬ್ಬರು. ಅವರು ಹೊರಬಂದ ನಂತರ ಆರ್‌ಎಸ್‌ಎಸ್ ಅಂತರಂಗ ಎಂಬ ಪುಸ್ತಕವನ್ನು ಬರೆದಿದ್ದಾರೆ. ಅದರಲ್ಲಿ ಈ ಸಂಘದ ಶಿಸ್ತಿನ ಗುಟ್ಟನ್ನು ಬಯಲಿಗೆಳೆದಿದ್ದಾರೆ. ಹೀಗೆ ದೇಹ ದಂಡನೆ ಮಾಡುವುದನ್ನು ಬಿಟ್ಟು ಯೋಚನೆ ಮಾಡಲು ಆರಂಭಿಸಿದರೆ, ಅಂಥವರು ಸುಬ್ಬಯ್ಯನಂತೆ ಹೊರಗೆ ಬರುತ್ತಾರೆ. ಅದನ್ನು ತಡೆಯಲು ಇಂತಹ ಹಿಂದೂ ಶಕ್ತಿ ಸಂಗಮಗಳಿಂದ ಸಾಧ್ಯವಿಲ್ಲ. ■

# ಇಸ್ಲಾಂ ಪ್ರಜಾಪ್ರಭುತ್ವ ಹಾಗೂ ಹಿಂಸೆ

ಮೂಲ: ಅಸ್ಗರ್ ಅಲಿ ಇಂಜಿನಿಯರ್
ಅನು: ಹಸನ್ ನಯೀಂ ಸುರಕೋಡ

ಕಳೆದ ವಾರ ಏಷ್ಯಾ ಕಾಲಿಂಗ್ ಇಂಟರ್‌ನ್ಯಾಷನಲ್ ರೇಡಿಯೊ ಇಸ್ಲಾಂ, ಪ್ರಜಾಪ್ರಭುತ್ವ ಹಾಗೂ ರಾಷ್ಟ್ರಪ್ರಭುತ್ವ ಕುರಿತು ಉಪನ್ಯಾಸ ಮಾಲಿಕೆ ನೀಡಲು ನನ್ನನ್ನು ಆಹ್ವಾನಿಸಿತ್ತು. ಇತ್ತೀಚಿನ ದಿನಗಳಲ್ಲಿ ಇಂಡೋನೇಷ್ಯನ್ ಬುದ್ಧಿಜೀವಿಗಳು, ಐವತ್ತರ ದಶಕದ ಆದಿಭಾಗದಲ್ಲಿ ಭಾರತದಲ್ಲಿ ನಾವು ಎದುರಿಸಿದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇಸ್ಲಾಂ ಜಗತ್ತಿನಾದ್ಯಂತ ಕೇಳಲಾಗುತ್ತಿರುವ ಪ್ರಶ್ನೆಯೆಂದರೆ: ಇಸ್ಲಾಂ ಪ್ರಜಾಪ್ರಭುತ್ವ ಹಾಗೂ ರಾಷ್ಟ್ರಪ್ರಭುತ್ವಕ್ಕೆ ಒಗ್ಗುವಂಥದ್ದೆ ಎನ್ನುವುದು. ಜಗತ್ತಿನಲ್ಲಿ ಅತ್ಯಂತ ದೊಡ್ಡ ಇಸ್ಲಾಮಿಕ್ ದೇಶವಾದ ಇಂಡೋನೇಷ್ಯಾದಲ್ಲಿ ಸಹ ಇಸ್ಲಾಂ ಮೂಲಭೂತ ವಾದಿಗಳು ಈ ಚರ್ಚೆಯನ್ನು ಹುಟ್ಟುಹಾಕಿದ್ದಾರೆ. ಆದ್ದರಿಂದ ಅಲ್ಲಿನ ಪ್ರಗತಿಪರ ಇಸ್ಲಾಮಿಕ್ ಚಿಂತಕರನ್ನು ಈ ಪ್ರಶ್ನೆಗಳು ಮುತ್ತಿಕೊಂಡಿವೆ.

ಪ್ರಮುಖ ಸಾರ್ವಜನಿಕ ವ್ಯಕ್ತಿಗಳು, ರಾಜತಾಂತ್ರಿಕ ತಜ್ಞರು ಹಾಜರಿದ್ದ 'ಏಷ್ಯಾ ಕಾಲಿಂಗ್‌ಟಾಕ್' ಕಾರ್ಯಕ್ರಮವೊಂದರಲ್ಲಿ ಹಲವರು ಈ ಪ್ರಶ್ನೆಗಳನ್ನು ಕೇಳಿದರು. ಇಂಡೋನೇಷ್ಯಾದ ಮಾಜಿ ಅಧ್ಯಕ್ಷ ಹಾಗೂ ಪ್ರಮುಖ ಇಸ್ಲಾಂ ವಿದ್ವಾಂಸ ಅಬ್ದುರ್ ರೆಹಮಾನ್‌ವಾಹಿದ್ ಸ್ಥಾಪಿಸಿದ ವಾಹಿದ್ ಇಸ್ಲಾಮಿಕ್ ಇನ್‌ಸ್ಟಿಟ್ಯೂಟ್‌ನಲ್ಲೂ ನಾನು ಜಾತ್ಯತೀತ ಇಂಡಿಯಾದಲ್ಲಿ ಅಲ್ಪಸಂಖ್ಯಾತ ಮುಸ್ಲಿಮರ ಅನುಭವಗಳ ಕುರಿತು ಉಪನ್ಯಾಸ ನೀಡಿದೆ. ಜಗತ್ತಿನಲ್ಲೇ ಅತ್ಯಂತ ದೊಡ್ಡ ಮುಸ್ಲಿಂ ದೇಶವಾಗಿದ್ದರೂ ಇನ್ನೂ ತನಕ ಇಸ್ಲಾಮಿಕ್ ದೇಶವಾಗದೆ ಪಂಚಶೀಲ ಪ್ರಭುತ್ವವಾಗಿದೆ. ಅಧ್ಯಕ್ಷ ಸುಕರ್ಣೊ ಕಾಲಾವಧಿಯಲ್ಲಿ ಪಂಚಶೀಲ ತತ್ವವನ್ನು ಅಂಗೀಕರಿಸಲಾಗಿತ್ತು.

ಆದರೆ ಈಗ ಇಂಡೋನೇಷ್ಯಾ ಇಸ್ಲಾಮಿಕ್ ಪ್ರಭುತ್ವವಾಗ ಬೇಕೆನ್ನುವ ಒತ್ತಡಕ್ಕೆ ಸಿಲುಕಿದ್ದು ಅಲ್ಲಿ ಷರಿಯಾ ಕಾನೂನು ಜಾರಿಯಲ್ಲಿ ಬರಲಿದೆ ಹಾಗೂ ಕ್ರಿಶ್ಚಿಯನ್, ಬೌದ್ಧ ಹಾಗೂ ಇತರ ಧಾರ್ಮಿಕ ಅಲ್ಪಸಂಖ್ಯಾತರು ಎರಡನೆಯ ದರ್ಜೆಯ ನಾಗರಿಕರಾಗಲಿದ್ದಾರೆ. ಆದಾಗ್ಯೂ ಇಂಡೋನೇಷ್ಯನ್ ಜನತೆ ಈ ಬೇಡಿಕೆಯನ್ನು ವಿರೋಧಿಸುತ್ತಿರುವಂತಿದೆ. ಹಾಗಾಗಿ ಅವರು ಭಾರತದಂಥ ಜಾತ್ಯತೀತ ದೇಶದ ಅನುಭವಗಳನ್ನು ತಿಳಿದುಕೊಳ್ಳಲು ಕಾತರರಾಗಿದ್ದಾರೆ. ಜತೆಗೆ ಪಾಕಿಸ್ತಾನ ಹಾಗೂ ಬಾಂಗ್ಲಾದೇಶ ಒಳಗೊಂಡಂತೆ ದಕ್ಷಿಣ ಏಷ್ಯಾದಲ್ಲಿ ರಾಷ್ಟ್ರನಿರ್ಮಾಣದ ಅನುಭವಗಳನ್ನು ಸಹ. ಪ್ರಜಾಸತ್ತಾತ್ಮಕ ರಾಷ್ಟ್ರದಲ್ಲಿ ಮಾನವಾಧಿಕಾರಗಳಿಗೆ ಪ್ರಮುಖ ಆದ್ಯತೆ ಇರುವುದರಿಂದ ಇಸ್ಲಾಮಿನಲ್ಲಿ ಮಾನವಾಧಿಕಾರಗಳ ಪರಿಕಲ್ಪನೆ ಕುರಿತು ಸಹ ಮಾತನಾಡಲು ಕೇಳಿಕೊಳ್ಳಲಾಯಿತು. ಅತ್ಯಂತ ದೊಡ್ಡ ಇಸ್ಲಾಮಿಕ್ ದೇಶ ಇಂಡೋನೇಷ್ಯಾ ಸಹ ಈ ಸಮಸ್ಯೆಯನ್ನು ಎದುರಿಸುತ್ತಿದೆ. ಕಾರಣ ಅಲ್ಪಸಂಖ್ಯಾತರು ಹಲ್ಲೆಗೀಡಾಗುತ್ತಿದ್ದಾರೆ ಹಾಗೂ ಅವರ ಮಾನವಾಧಿಕಾರಗಳ ಉಲ್ಲಂಘನೆಯಾಗುತ್ತಿದೆ.

ನಿಜಕ್ಕೂ ಇಸ್ಲಾಂ ಪ್ರಜಾಪ್ರಭುತ್ವಕ್ಕೆ ಹೊಂದಿಕೊಳ್ಳಲಾರದು ಎಂದು ಹೇಳುವುದು ಎಳ್ಳಷ್ಟೂ ಸರಿಯಲ್ಲ ಎಂದು ನನ್ನ ಉಪನ್ಯಾಸದಲ್ಲಿ ಸೂಚಿಸಿದೆ. ಇಸ್ಲಾಮಿಕ್ ಜಗತ್ತಿನ ಸರ್ವಾಧಿಕಾರಿ ಪ್ರಭುತ್ವದ ಬೆಂಬಲಿಗರ ಮೂಲಕ ಈ ಮಿಥ್‌ಅನ್ನು ಹರಡಲಾಗುತ್ತಿದೆ. ಈ ಪ್ರಕ್ರಿಯೆಯಲ್ಲಿ ಇಸ್ಲಾಮಿಗೆ ಕೆಟ್ಟ ಹೆಸರು ಬಂದರೂ ಪರವಾಗಿಲ್ಲ, ಶೇಖ್‌ರು, ಅರಸರು ಹಾಗೂ ಮಿಲಿಟರಿಯ ಸರ್ವಾಧಿಕಾರಿಗಳು ಇಂಥ ಕಲ್ಪನೆಗಳನ್ನು ಬಿತ್ತುತ್ತಿದ್ದಾರೆ. ನಾನು ಈ ಮಿಥ್‌ಅನ್ನು ಬಲವಾಗಿ ನಿರಾಕರಿಸಿದೆ ಹಾಗೂ ಸರ್ವಾಧಿಕಾರಿಗಳು ಮತ್ತು ರಾಜಪ್ರಭುಗಳು ಪ್ರಜಾಪ್ರಭುತ್ವಕ್ಕೆ ಅಡ್ಡಿಯಾಗುತ್ತಾರೆಯೆ ವಿನಾ ಇಸ್ಲಾಂ ಅದಕ್ಕೆ ಅಡ್ಡಿಯಾಗಲಾರದು ಎಂದು ವಾದಿಸಿದೆ.

ಕುರ್‌ಆನ್ ಯಾವುದೇ ರಾಜ್ಯದ ಪರಿಕಲ್ಪನೆಯನ್ನು ನೀಡುವುದಿಲ್ಲ; ಅದು ಸಮಾಜದ ಒಂದು ಪರಿಕಲ್ಪನೆ ನೀಡುತ್ತದೆ ಎನ್ನುವುದನ್ನು ನೆನಪಿಡಬೇಕು ಎಂದು ನಾನು ಹೇಳಿದೆ. ಕುರ್‌ಆನ್ ನ್ಯಾಯಸಮ್ಮತ ಸಮಾಜವನ್ನು ಸ್ಥಾಪಿಸಬಯಸುತ್ತದೆ. ನ್ಯಾಯ ಸಮ್ಮತ ಸಮಾಜದ ಸ್ಥಾಪನೆಗೆ ಪ್ರಜಾಸತ್ತಾತ್ಮಕ ಸಮಾಜಕ್ಕಿಂತ ಬೇರೆ ಯಾವ ದಾರಿ ಸಹಕಾರಿಯಾಗಬಲ್ಲದು? ಅಷ್ಟೇ ಅಲ್ಲ, ವಿಭಿನ್ನ ಭಾಷೆ, ಬಣ್ಣ, ಜನಾಂಗ ಹಾಗೂ ರಾಷ್ಟ್ರೀಯತೆಗಳಿದ್ದರೂ ಎಲ್ಲ ಮನುಷ್ಯರ ಸಮಾನತೆ ಹಾಗೂ ಸಮಾನ ಘನತೆಗೆ ಒತ್ತು ಕೊಡುತ್ತದೆ. ಪ್ರಜಾಸತ್ತಾತ್ಮಕ ಸಮಾಜದ ಹೊರತಾಗಿ ಅದನ್ನು ಹೇಗೆ ಸಾಧಿಸುವುದು?

ಸರ್ವಾಧಿಕಾರಿ ಸಮಾಜಗಳು ಇವೆಲ್ಲವುಗಳನ್ನು ನಿರಾಕರಿಸುತ್ತವೆ. ಹೀಗಾಗಿ ರಾಜಪ್ರಭುತ್ವ ಮತ್ತು ಸರ್ವಾಧಿಕಾರಿ ಪ್ರಭುತ್ವ ಇಸ್ಲಾಂ ವಿರೋಧಿಯಾಗಿದೆಯೆ ವಿನಾ ಪ್ರಜಾಪ್ರಭುತ್ವವಲ್ಲ. ಮಧ್ಯಯುಗದಲ್ಲಿ ಸಮಾನ ಘನತೆ, ಲಿಂಗಸಮಾನತೆ ಹಾಗೂ ಮಾನವಾಧಿಕಾರಗಳಂಥ ಪರಿಕಲ್ಪನೆಗಳು ಅಸ್ತಿತ್ವದಲ್ಲೇ ಇರಲಿಲ್ಲ. ಹಾಗಾಗಿ ರಾಜಪ್ರಭುತ್ವ ಸ್ವೀಕಾರಾರ್ಹವಾಗಿತ್ತು. ಅದು ಅನಂತರ ಹಾಗೆಯೇ ಉಳಿಯಲಿಲ್ಲ. ಆಧುನಿಕ ಸಮಾಜವು ಯಾವುದೇ ತಾರತಮ್ಯವಿಲ್ಲದ ಮನುಷ್ಯ ಸಮಾನತೆಗೆ ಒತ್ತು ನೀಡುತ್ತದೆ. ಮಾನವಾಧಿಕಾರಗಳು ಹಾಗೂ ಲಿಂಗಸಮಾನತೆ ಅತ್ಯಂತ ಮಹತ್ವದ್ದಾಗುತ್ತವೆ.

ನ್ಯಾಯಸಮ್ಮತ ಸಮಾಜದ ಕುರ್‌ಆನ್‌ನ ಪರಿಕಲ್ಪನೆ. ನಿಜವಾಗಲೂ ಪ್ರಜಾಪ್ರಭುತ್ವ ಲಭ್ಯವಿರುವ ಏಕೈಕ ಮಾರ್ಗ. ನ್ಯಾಯಸಮ್ಮತ ಆಡಳಿತ ಕೇವಲ ಖಿಲಾಫತ್ ಸಂಸ್ಥೆಯ ಮೂಲಕ ಸಾಧ್ಯವೆಂದು ಕೆಲವರು, ವಿಶೇಷವಾಗಿ ಮೂಲಭೂತವಾದಿ ಇಸ್ಲಾಮಿಕ್ ಸಂಘಟನೆಗಳು ಅವಶ್ಯವಾಗಿ ವಾದಿಸುತ್ತವೆ. ಕುರ್‌ಆನ್ ಯಾವುದೇ ವಿಧದ ಸರ್ಕಾರವನ್ನು ವಿಧಿಸುವುದೇ ಇಲ್ಲವೆಂದು ಮೇಲೆ ಸೂಚಿಸಿರುವಂತೆ ಕುರ್‌ಆನ್ ಖಿಲಾಫತ್ ಸಂಸ್ಥೆಯನ್ನು ಸಮ್ಮತಿಸುವುದಿಲ್ಲವೆಂದು ನಾನು ಹೇಳಬಯಸುತ್ತೇನೆ. ಖಿಲಾಫತ್ ಸಂಸ್ಥೆ ಚಾರಿತ್ರಿಕ ಸಂದರ್ಭದ ಉತ್ಪತ್ತಿಯಾಗಿದೆ. ಅದು ಪ್ರವಾದಿಯ ಸುನ್ನಾದ ಭಾಗವೂ ಆಗಿರಲಿಲ್ಲ. ಆದ್ದರಿಂದ ವಾರಸುದಾರಿಕೆಯ ಸಮಸ್ಯೆಗೆ ಸಂಬಂಧಿಸಿದಂತೆ ಮುಸಲ್ಮಾನರಲ್ಲಿ ಭಿನ್ನಾಭಿಪ್ರಾಯಗಳುಂಟಾದವು. ಉತ್ತರಾಧಿಕಾರಿಯ ವಾರಸುದಾರಿಕೆಯ ವಿಧಾನ ಕುರಿತಂತೆ ಪ್ರವಾದಿಯ ಅತ್ಯಂತ ಪ್ರಮುಖ ಸಂಗಾತಿಗಳಿಗೂ ಖಚಿತ ತಿಳಿವಳಿಕೆ ಇರಲಿಲ್ಲ. ಪ್ರವಾದಿ ತಮ್ಮ ಕಕ್ಕನ ಮಗ ಹಾಗೂ ಅಳಿಯ ಅಲಿಯವರನ್ನು ಉತ್ತರಾಧಿಕಾರಿ ಎಂದು ನೇಮಕ ಮಾಡಿದ್ದರು ಎಂದು ಶಿಯಾಗಳು ವಾದಿಸುತ್ತಾರೆ. ಆದರೆ ಅಹ್ಲ್-ಎ-ಬೈತ್(ಪ್ರವಾದಿ ವಂಶಜರು)ನ ಬೆಂಬಲಿಗರು ಮಾತ್ರ ಈ ಅಭಿಪ್ರಾಯವನ್ನು ಸಮ್ಮತಿಸಿದರು. ಅವರ ಉತ್ತರಾಧಿಕಾರಿಯ ಸಮಸ್ಯೆ ಕುರಿತು ಚರ್ಚಿಸಲು ಉಳಿದವರೆಲ್ಲರು ಸಕೀಫಾ ಬಿನ್ ಸಈದಾದಲ್ಲಿ ಜಮಾಯಿಸಿದರು. ಅಲ್ಲಿಯೂ ಸಹ ಒಮ್ಮತವಿರಲಿಲ್ಲ. ಸಾಕಷ್ಟು ಚರ್ಚೆ ಹಾಗೂ ಸಲಹೆಗಳ ನಂತರ ಉಮರ್ ಅಬೂಬಕರ್ ಅವರ ಹೆಸರನ್ನು ಸೂಚಿಸಿದರು. ಜತೆಗೆ ಅವರ ಕೈ ಮೇಲೆ ಕೈ ಹಾಕಿ ಬೆಂಬಲ ವ್ಯಕ್ತಪಡಿಸಿದ ಮೇಲೆ ಉಳಿದವರೂ ಅವರನ್ನು ಹಿಂಬಾಲಿಸಿದರು.

ಹೀಗೆ ಖಲೀಫ್‌ರ ಆಯ್ಕೆಯಲ್ಲಿ ಒಮ್ಮತ ಸಾಧ್ಯವಾಗಲಿಲ್ಲ. ಮಕ್ಕಾದ ಕುರೈಷ್ ಬುಡಕಟ್ಟಿನವನೇ ಖಲೀಫ್ ಆಗಬೇಕೆಂದು ಬಹುತೇಕರು ಅಭಿಪ್ರಾಯ ಪಟ್ಟರು.' ತಾವು

ಮದೀನಾದಲ್ಲಿ ಪ್ರವಾದಿಗೆ ಸಹಾಯ ಮಾಡಿದ್ದರಿಂದ ಖಜ್ರಜ್ ಹಾಗೂ ಔಸ್‌ನಂಥ ಇತರ ಬುಡಕಟ್ಟುಗಳಿಗೆ ಸೇರಿದ ಮದೀನಾದ ಅನ್ಸಾರರು, ಖಲೀಫ್ ತಮ್ಮವನಾಗಿರಬೇಕೆಂದು ವಾದಿಸಿದರು. ಕುರೈಷರೊಳಗಿಂದ ಒಬ್ಬ ಹಾಗೂ ಅನ್ಸಾರರೊಳಗಿಂದ ಇನ್ನೊಬ್ಬ ಹೀಗೆ ಇಬ್ಬರು ವ್ಯಕ್ತಿಗಳನ್ನು ಆಯ್ಕೆ ಮಾಡಬಹುದು ಎಂದೂ ಸಲಹೆ ನೀಡಲಾಯಿತು. ಆದರೆ ಈ ಅಭಿಪ್ರಾಯವನ್ನು ಸಹ ತಳ್ಳಿಹಾಕಲಾಯಿತು. ಕೊನೆಗೆ ಕುರೈಷನ ಅಬೂಬಕರ್ ಅವರನ್ನು ಆಯ್ಕೆ ಮಾಡಲಾಯಿತು.

ಅನಂತರ ಒಂದುಕಾಲಕ್ಕೆ ಒಬ್ಬನೇ ಖಲೀಫ್‌ನಿರಬೇಕು ಎಂದು ಹೇಳಲಾಯಿತು. ಆದರೆ ಈ ಪರಿಕಲ್ಪನೆಯೂ ದುರ್ಬಲವೆನಿಸಿತು. ಕಾರಣ, ಅಬ್ಬಾಸಿಯರು ಉಮ್ಮೈಯಾರನ್ನು ಸೋಲಿಸಿದಾಗ ಉಮ್ಮೈಯಾ ಅರಸು ವಂಶದವನೊಬ್ಬ ಸ್ಪೇನ್‌ಗೆ ಪಲಾಯನಗೈದು ಅಲ್ಲೇ ಒಂದು ಸಾಮ್ರಾಜ್ಯ ಕಟ್ಟಿದನು. ಒಂದೇ ಕಾಲಕ್ಕೆ ಇಬ್ಬರು ಖಲೀಫರು ಅಸ್ತಿತ್ವಕ್ಕೆ ಬಂದರು. ಬುವಾಹಿಯರು ಅಧಿಕಾರ ಗಳಿಸಿದಾಗ, ಖಲೀಫ್ ಕೇವಲ ಹೆಸರಿಗೆ ಮುಖ್ಯಸ್ಥನಾದಾಗ ಖಿಲಾಫತ್ ಸುಲ್ತಾನ್‌ಶಾಹಿಯಾಗಿ ಪರಿವರ್ತನೆಗೊಂಡಿತು. ಖಿಲಾಫತ್ ಸಂಸ್ಥೆ ಕೂಡ ಕೇವಲ ಮುವ್ವತ್ತು ವರ್ಷ ನಡೆಯಿತು. ಮೊದಲ ಖಲೀಫ್‌ನ ಸಂದರ್ಭದಂತೆ ಮಾವ್ಯೆಯ ಜನತೆಯ ಸಮ್ಮತಿಯಿಲ್ಲದೆ ಅಧಿಕಾರ ಕಬಳಿಸಿದ. ಇನ್ನೂ ಹೆಚ್ಚಾಗಿ ಎಲ್ಲ ಮುಸಲ್ಮಾನರ ಆಶಯಕ್ಕೆ ವಿರುದ್ಧವಾಗಿ ಹಾಗೂ ಇನ್ನೂ ಬದುಕುಳಿದ್ದ ಪ್ರವಾದಿಯ ಹಲವಾರು ಪ್ರಮುಖ ಸಂಗಾತಿಗಳ ಆಶಯಕ್ಕೆ ವಿರುದ್ಧವಾಗಿ ಅವನು ತನ್ನ ಮಗನನ್ನೇ ತನ್ನ ಉತ್ತರಾಧಿಕಾರಿಯಾಗಿ ನೇಮಕ ಮಾಡಿಬಿಟ್ಟ.

ಖಿಲಾಫತ್ ಸಂಸ್ಥೆಯು ಕುರ್‌ಆನ್ ಇಲ್ಲಾ ಸುನ್ನಾ ಆಧರಿಸಿದ ದೈವೀ ಆಜ್ಞೆಯ ಉತ್ಪತ್ತಿಯಾಗಿರದೆ ಕೇವಲ ಇತಿಹಾಸದ ಒಂದು ಪ್ರಾಯೋಗಿಕ ವ್ಯವಸ್ಥೆಯಾಗಿತ್ತು ಎನ್ನುವುದನ್ನು ಇದೆಲ್ಲ ಸೂಚಿಸುತ್ತದೆ. ಖಿಲಾಫತ್ ಸಂಸ್ಥೆಯನ್ನು ಪುನರುಜ್ಜೀವನಗೊಳಿಸಬೇಕು ಹಾಗೂ ಇದೊಂದೇ ಮಾರ್ಗವೆಂದು ವಾದಿಸುವುದು ಸಾಧ್ಯವಿಲ್ಲ. ಅಷ್ಟೇ ಅಲ್ಲ, ಖಿಲಾಫತ್ ಸಂಸ್ಥೆ ಹೇಗೇ ಅಸ್ತಿತ್ವಕ್ಕೆ ಬಂದಿರಲಿ ಅದು, ಯಾವುದೇ ರೀತಿಯಲ್ಲಿ ಸಮ್ಮತವಾಗದ ರಾಜಪ್ರಭುತ್ವ, ಶೇಖಶಾಹಿ ಹಾಗೂ ನಿರಂಕುಶ ಪ್ರಭುತ್ವಕ್ಕಿಂತ ಹೆಚ್ಚು ಪ್ರಜಾಸತ್ತಾತ್ಮಕವಾಗಿತ್ತು.

**ಈಗ ಇಂಡೋನೇಷ್ಯಾ ಇಸ್ಲಾಮಿಕ್ ಪ್ರಭುತ್ವವಾಗಬೇಕೆನ್ನುವ ಒತ್ತಡಕ್ಕೆ ಸಿಲುಕಿದ್ದು ಅಲ್ಲಿ ಷರಿಯಾ ಕಾನೂನು ಜಾರಿಯಲ್ಲಿ ಬರಲಿದೆ ಹಾಗೂ ಕ್ರಿಶ್ಚಿಯನ್, ಬೌದ್ಧ ಹಾಗೂ ಇತರ ಧಾರ್ಮಿಕ ಅಲ್ಪಸಂಖ್ಯಾತರು ಎರಡನೆಯ ದರ್ಜೆಯ ನಾಗರಿಕರಾಗಲಿದ್ದಾರೆ. ಆದಾಗ್ಯೂ ಇಂಡೋನೇಷ್ಯನ್ ಜನತೆ ಈ ಬೇಡಿಕೆಯನ್ನು ವಿರೋಧಿಸುತ್ತಿರುವಂತಿದೆ. ಹಾಗಾಗಿ ಅವರು ಭಾರತದಂಥ ಜಾತ್ಯತೀತ ದೇಶದ ಅನುಭವಗಳನ್ನು ತಿಳಿದುಕೊಳ್ಳಲು ಕಾತರರಾಗಿದ್ದಾರೆ.**

# ಸಂವಾದ-10
# ಸಂಭ್ರಮ; ಸವಾಲು–ಒಂದು ಚರ್ಚೆ

## ಮಾರ್ಚ್ 17, 2012 ಸಂಜೆ 4.30ಕ್ಕೆ

ಸ್ಥಳ: ಬಾಪೂಜಿ ಸಭಾಂಗಣ, ಸರ್ಕಾರಿ ಕಲಾ ಕಾಲೇಜು, ಬೆಂಗಳೂರು.

**ಭಾಗವಹಿಸುವವರು:**

ಪದ್ಮಶ್ರೀ ದೇವನೂರು ಮಹಾದೇವ, ನಾಡೋಜ ಡಾ॥ ಬರಗೂರು ರಾಮಚಂದ್ರಪ್ಪ, ಪ್ರೊ॥ ವಿ.ಎಸ್ ಶ್ರೀಧರ್, ಪ್ರೊ॥ ಮುಜಾಫ್ಫರ್ ಅಸ್ಸಾದಿ, ಶ್ರೀ. ಎಸ್ ಮರಿಸ್ವಾಮಿ ಮತ್ತು ನೀವು

**ದಯವಿಟ್ಟು ಬನ್ನಿ**

- 'ಸಂವಾದ' ಬಳಗ

ಖಲೀಫ್‌ನ ಆಯ್ಕೆಯ ಸಂದರ್ಭದಲ್ಲಿ ಆ ಕಾಲದ ಬುಡಕಟ್ಟಿನ ಅನುಭವವನ್ನು ಬಳಸಿಕೊಳ್ಳಲಾಯಿತು. ಕಾರಣ ಬುಡಕಟ್ಟಿನ ಸದಸ್ಯರೇ ತಮ್ಮ ಮುಖ್ಯಸ್ಥನನ್ನು ಆಯ್ಕೆ ಮಾಡುತ್ತಿದ್ದರು. ಆ ಕಾಲದಲ್ಲಿ ಒಬ್ಬ ವ್ಯಕ್ತಿ ಒಂದು ಮತ ಎನ್ನುವ ಪರಿಕಲ್ಪನೆಯೂ ಇದ್ದಿರಲಿಲ್ಲ. ಆಧುನಿಕ ಪ್ರಜಾಪ್ರಭುತ್ವ ಸಂಸ್ಥೆಯಲ್ಲಿ ಒಬ್ಬ ವ್ಯಕ್ತಿ ಒಂದು ಮತ ಎನ್ನುವುದು ಪ್ರಜಾನಿಧಿಯನ್ನು ಆಯ್ಕೆ ಮಾಡುವುದು ಪ್ರಯೋಗಿಸಿ, ಪರೀಕ್ಷಿಸಲಾದ ವಿಧಾನವಾಗಿದೆ. ಹೊಸ ಇತಿಹಾಸದ ಅನುಭವ ಚುನಾಣೆಯ ಹೊಸ ವಿಧಾನಗಳನ್ನು ಹುಟ್ಟುಹಾಕಿತು. ಹೊಸ ಅನುಭವಗಳನ್ನು ಅಂಗೀಕರಿಸಿ ಜಾರಿಗೊಳಿಸಲು ಹಿಂದೇಟು ಹಾಕಬಾರದು. ಖಿಲಾಫತ್ ಕಾಲಾವಧಿಯಲ್ಲಿ ರೋಮನ್ ಹಾಗೂ ಸಾಸಾನಿ ಸಾಮ್ರಾಜ್ಯಗಳು ಹಲವಾರು ಸಂಸ್ಥೆಗಳನ್ನು ಮನಃಪೂರ್ವಕವಾಗಿ ಎರವಲು ಪಡೆಯಲಾಯಿತು. ಉದಾಹರಣೆಗೆ ಇರಾಣದಿಂದ ಸೈನಿಕರಿಗೆ ಸಂಬಳದ ದಾಖಲಾತಿ ಇಡುವ, ನೀಡುವ ವ್ಯವಸ್ಥೆ. ಮೊದಲು ಯುದ್ಧದಲ್ಲಿ ಪಾಲ್ಗೊಂಡಿರುತ್ತಿದ್ದವರಿಗೆ ಮಾತ್ರ ಕೊಳ್ಳೆ ಹೊಡೆದ ಸಂಪತ್ತಿನಲ್ಲಿ ಪಾಲು ಕೊಡಲಾಗುತ್ತಿತ್ತು.

ಇಸ್ಲಾಮ್‌ವಾದಿಗಳು ಎತ್ತಿರುವ ಇನ್ನೊಂದು ಪ್ರಶ್ನೆಯೆಂದರೆ ಷರಿಯಾ ಕಾನೂನನ್ನು ಜಾರಿಗೊಳಿ ಸುವುದಾಗಿದೆ. ಪ್ರಜಾಪ್ರಭುತ್ವದಲ್ಲಿ ಮಾನವ ನಿರ್ಮಿತ ಕಾನೂನುಗಳಿರುತ್ತವೆ. ಆದರೆ ಷರಿಯಾ ಕಾನೂನು ದೈವೀ ಕಾನೂನುಗಳಾಗಿರುತ್ತವೆ. ಇಸ್ಲಾಮಿಕ್ ರಾಷ್ಟ್ರದಲ್ಲಿ ಇದಕ್ಕೆ ಅವಕಾಶವಿರಲಾರದು. ಏಕೆಂದರೆ ಅಲ್ಲಿ ಕೇವಲ ಷರಿಯಾ ಕಾನೂನುಗಳನ್ನು ಜಾರಿಗೊಳಿಸತಕ್ಕದ್ದು ಎಂದು ಅವರು ವಾದಿಸುತ್ತಾರೆ. ಇದೂ ಸಹ ತಪ್ಪು ಪರಿಕಲ್ಪನೆ. ಷರಿಯಾ ಕಾನೂನುಗಳನ್ನು ಎರಡು ವಿಧವಾಗಿ ವರ್ಗೀಕರಿಸಬಹುದು: ಒಂದು ಇಬಾದತ್ ಹಾಗೂ ಎರಡನೆಯದು ಮುಆಮಲತ್ ಎಂದು. ಅಂದರೆ ಇಬಾದತ್‌ನ ಭಾಗವಾದ ಸಲಾತ್, ಸೌದಿ, ಹಜ್ ಇತ್ಯಾದಿಗಳಿಗೆ ಸಂಬಂಧಿಸಿದ ಕಾನೂನುಗಳು. ಮನುಷ್ಯ–ಮನುಷ್ಯರ ನಡುವಣ ಸಂಬಂಧಗಳನ್ನೊಳಗೊಂಡ ಮುಆಮಲತ್‌ಗೆ ಸಂಬಂಧಿಸಿದ ಕಾನೂನುಗಳು. ಮುಆಮಲಾತ್‌ಗೆ ಸಂಬಂಧಿಸಿದ ಕಾನೂನುಗಳು ಶಾಶ್ವತವಲ್ಲ. ಹೌದು, ಇಬಾದತ್ ಕುರಿತ ಷರಿಯ ಕಾನೂನುಗಳನ್ನು ತಿದ್ದುಪಡಿ ಮಾಡಲಾಗದು. ಆದರೆ ಮುಆಮಲತ್ ಕಾನೂನುಗಳು ಶಾಶ್ವತವಲ್ಲ ಹಾಗೂ ಆ ವಿಷಯವಾಗಿ ಕಾನೂನುಗಳನ್ನು ರೂಪಿಸುವ ಅಧಿಕಾರ ಸಂಸತ್ತಿಗಿರತಕ್ಕದ್ದು. ಎಲ್ಲ ಆಧುನಿಕ ಪ್ರಜಾಪ್ರಭುತ್ವಗಳು ತಮ್ಮ ತಮ್ಮ ಧರ್ಮಗಳನ್ನು ಪಾಲಿಸಲು ಅವಕಾಶ ಕಲ್ಪಿಸುತ್ತವೆ ಹಾಗೂ ಅವರ ಧಾರ್ಮಿಕ ಕಾರ್ಯಚಟುವಟಿಕೆಗಳಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ. ಎಲ್ಲ ಜಾತ್ಯತೀತ ಪ್ರಜಾಪ್ರಭುತ್ವಗಳಲ್ಲಿ ಧರ್ಮ ಅನುಸರಣೆಯ ಹಕ್ಕು ಸಹ ಮೂಲಭೂತ ಹಕ್ಕಾಗಿದೆ.

ಅಷ್ಟೇ ಅಲ್ಲ ಇಬಾದತ್‌ಗೆ ಸಂಬಂಧಿಸಿದ ಕಾನೂನುಗಳನ್ನು ಪ್ರಭುತ್ವವೇ ಜಾರಿಗೊಳಿಸಬೇಕಿಲ್ಲ. ಅದರ ಮಹತ್ವವಿರುವುದು ಅದರ ಐಚ್ಛಿಕ ಸ್ವರೂಪದಲ್ಲಿ. ಇಬಾದತ್ ವ್ಯಕ್ತಿಯ ಹೃದಯ ಮತ್ತು ಮನಸ್ಸುಗಳಿಗೆ ಸಂಬಂಧಿಸಿದ್ದು. ನಿಜವಾದ ಇಬಾದತ್‌ಅನ್ನು ಅತ್ಯಂತ ಪ್ರಾಮಾಣಿಕವಾಗಿ ಹೃದಯಾಂತರಾಳದಿಂದ ಮಾಡಲಾಗುತ್ತದೆ. ಅದನ್ನು ಕಾನೂನು ಮೇರೆಗೆ ಜಾರಿಗೊಳಿಸಲಾಗದು. ಆಡಳಿತ ಯಂತ್ರದ ಮೂಲಕ ಅದನ್ನು ಜಾರಿಗೊಳಿಸಿದರೆ ಅದು ಇಬಾದತ್ ಆಗಿ ಉಳಿಯಲಾರದು. ಧರ್ಮದ ವಿಷಯದಲ್ಲಿ ಬಲಪ್ರಯೋಗ ಸಲ್ಲದು ಎಂದು ಕುರ್‌ಆನ್ ಸಹ ಪ್ರತಿಪಾದಿಸುತ್ತದೆ.

ಹೀಗೆ ಷರಿಯಾ ವಿಷಯಗಳನ್ನು ಜಾರಿಗೊಳಿಸಲು ಯಾವುದೇ ಇಸ್ಲಾಮಿಕ್ ರಾಜ್ಯದ ಅವಶ್ಯಕತೆ ಇರುವುದಿಲ್ಲ. ಅಂಥ ಸಂದರ್ಭದಲ್ಲಿ ಇಸ್ಲಾಮಿಕ್ ರಾಜ್ಯವೆಂದರೆ ಆ ದೇಶದಲ್ಲಿ ವಾಸಿಸುತ್ತಿರುವ ಬಹುಸಂಖ್ಯಾತ ಮುಸ್ಲಿಂ ಪಂಥದವರು ನಿಜವಾದ ಸ್ವಾತಂತ್ರ್ಯ ಅನುಭವಿಸುವರು ಹಾಗೂ ಇತರ ಪಂಥದ ಮುಸಲ್ಮಾನರು ಶಿಕ್ಷೆಗೆ ಗುರಿಯಾಗುವರು ಎಂದರ್ಥ. ಇದು ಇಸ್ಲಾಂ ಚರಿತ್ರೆಯ ಆರಂಭದಲ್ಲಿ ಸರಿ ಎಂದು ತೋರಬಹುದು. ಅಬ್ಬಾಸಿಯರು ಮೊದಲು ಕುರ್‌ಆನ್ ರಚನೆಗೊಂಡದ್ದು ಎನ್ನುವ ಸಿದ್ಧಾಂತವನ್ನು ಮಾನ್ಯ ಮಾಡಿದ್ದರು. ಈ ಸಿದ್ಧಾಂತವನ್ನು ಅಲ್ಲಗಳೆಯುವವರನ್ನು ಕಠಿಣಶಿಕ್ಷೆಗೆ ಗುರಿಪಡಿಸಲಾಗುತ್ತಿತ್ತು. ಈ ಸಿದ್ಧಾಂತವನ್ನು ಅಲ್ಲಗಳೆದದ್ದಕ್ಕೆ ಅಬು ಹನೀಫಾರಂಥ ಪ್ರಮುಖ ಇಮಾಮರನ್ನು ಥಳಿಸಲಾಯಿತು.

ಆಧುನಿಕ ಇಸ್ಲಾಮಿಕ್ ರಾಜ್ಯಗಳಲ್ಲೂ ಈ ವಿದ್ಯಮಾನಗಳನ್ನು ನೋಡಬಹುದು. ಸೌದಿ ಅರೇಬಿಯಾದಲ್ಲಿ ಕೇವಲ ವಹಾಬಿ ಮುಸಲ್ಮಾನರು ನಿಜವಾದ ಧಾರ್ಮಿಕ ಸ್ವಾತಂತ್ರ್ಯ ಅನುಭವಿಸುತ್ತಾರೆ, ಈ ಸಿದ್ಧಾಂತವನ್ನು ಒಪ್ಪಿಕೊಳ್ಳದವರನ್ನು ಶಿಕ್ಷಿಸಲಾಗುತ್ತದೆ ಇಲ್ಲಾ ವಹಾಬಿಯರಂತೆ ತಮ್ಮ ಧರ್ಮ ಪಾಲಿಸಲು ಧಾರ್ಮಿಕ ಸ್ವಾತಂತ್ರ್ಯವನ್ನು ಅನುಭವಿಸಲಾರರು. ಹಾಗೆಯೇ ಸುನ್ನಿ ಬಹುಸಂಖ್ಯಾತರಾಗಿರುವ ರಾಷ್ಟ್ರಗಳಲ್ಲಿ ಶಿಯಾಗಳನ್ನು ಹಾಗೂ ಶಿಯಾ ಬಹುಸಂಖ್ಯಾತರಾಗಿರುವ ರಾಷ್ಟ್ರಗಳಲ್ಲಿ ಸುನ್ನಿಗಳನ್ನು ಶಿಕ್ಷೆಗೆ ಗುರಿಪಡಿಸಲಾಗುತ್ತದೆ. ರಾಜಕೀಯ ಅಧಿಕಾರ ಕಬಳಿಸಿಕೊಂಡ ಇರಾಕ್‌ದಲ್ಲಿನ ಸುನ್ನಿಗಳು ಅಲ್ಪ ಸಂಖ್ಯಾತರಿದ್ದು ಶಿಯಾಗಳ ಮೇಲೆ ಹಾಗೂ ಸಿರಿಯಾದಲ್ಲಿ ಅಲ್ವಿಯರು ಅಲ್ಪಸಂಖ್ಯಾತರಿದ್ದೂ ಸುನ್ನಿಗಳಮೇಲೆ ಪ್ರಭುತ್ವ ಸ್ಥಾಪಿಸಿದ್ದಾರೆ. ನಿಜವಾದ ಧಾರ್ಮಿಕ ಸ್ವಾತಂತ್ರ್ಯ ಕೇವಲ ಪ್ರಜಾಸತ್ತಾತ್ಮಕ ರಾಜ್ಯದಲ್ಲಿ ಸಾಧ್ಯ. ಅಲ್ಲಿ ಜಾತಿ, ಮತ, ಬಣ್ಣವೆನ್ನದೆ ಎಲ್ಲರೂ ಸಮಾನ ಹಕ್ಕುಗಳನ್ನು ಹೊಂದಿರುತ್ತಾರೆ. ಇಂದು ಹಲವಾರು ಏಷ್ಯನ್, ಆಫ್ರಿಕನ್ ಹಾಗೂ ಪಾಶ್ಚಿಮಾತ್ಯ ದೇಶಗಳಲ್ಲಿನ ಜಾತ್ಯತೀತ ಪ್ರಜಾಸತ್ತಾತ್ಮಕ ರಾಜ್ಯಗಳಲ್ಲಿ ಮುಸಲ್ಮಾನರು ಅಲ್ಪಸಂಖ್ಯಾತರಾಗಿ ದೊಡ್ಡ ಸಂಖ್ಯೆಯಲ್ಲಿ ವಾಸಿಸುತ್ತಿದ್ದಾರೆ, ತಮ್ಮ ಧರ್ಮವನ್ನು ನಿರಾತಂಕವಾಗಿ ಪಾಲಿಸುವ ಹಕ್ಕು ಪಡೆದಿದ್ದಾರೆ. ನಿರಾತಂಕವಾಗಿ ಇಸ್ಲಾಂ ಧರ್ಮ ಪಾಲಿಸಲು ಇಸ್ಲಾಮಿಕ್ ರಾಜ್ಯದ ಅವಶ್ಯಕತೆ ಇದೆ ಎಂದು ಹೇಳುವುದು ಸರಿಯಲ್ಲ.

ಪ್ರತಿಯೊಂದು ಪ್ರಜಾಪ್ರಭುತ್ವಾದಿ ರಾಜ್ಯವು ವಿವಾಹ, ವಿಚ್ಛೇದನೆ, ಆಸ್ತಿ, ವಾರಸುದಾರಿಕೆ ಮುಂತಾದ ವೈಯಕ್ತಿಕ ಕಾನೂನುಗಳಿಗೆ ಸಂಬಂಧಿಸಿದ ಷರಿಯಾ ಕಾನೂಗಳಿಗೆ ಅವಕಾಶ ಕಲ್ಪಿಸುತ್ತಿದೆ. ಜಾತ್ಯತೀತ ಭಾರತದಲ್ಲೂ ಮುಸಲ್ಮಾನರು ಸಮಗ್ರವಾಗಿ ಈ ಕಾನೂನುಗಳನ್ನು ಪಾಲಿಸಲು ಸ್ವತಂತ್ರರಾಗಿದ್ದಾರೆ. ಭಾರತೀಯ ಮುಸಲ್ಮಾನರು ತಮ್ಮ ಕಾನೂನುಗಳಲ್ಲಿ ಯಾವುದೇ ಸುಧಾರಣೆಯನ್ನು ಇಷ್ಟಪಡುವುದಿಲ್ಲ. ರಾಜ್ಯವೂ ಅದಕ್ಕೆ ಬಲವಂತ ಮಾಡುವುದಿಲ್ಲ, ಹಲವು ಮುಸ್ಲಿಂ ದೇಶಗಳಲ್ಲಿ ಈ ಕಾನೂನುಗಳಲ್ಲಿ ಸುಧಾರಣೆಯಾಗಿದ್ದರೂ ಸಹ.

ಇನ್ನು ಜಾತ್ಯತೀತ ರಾಜ್ಯಗಳಲ್ಲಿ ಅಪರಾಧಿಕ ಕಾನೂನುಗಳಿಗೆ ಅವಕಾಶ ಕಲ್ಪಿಸಬೇಕೆ ಎನ್ನುವ ಪ್ರಶ್ನೆ. ಉತ್ತರ ನಿಶ್ಚಿತವಾಗಿಯೂ 'ಇಲ್ಲ'. ಭಾರತದಲ್ಲಿ ಬ್ರಿಟಿಷರು 19ನೆಯ ಶತಮಾನದಲ್ಲೇ ಇಸ್ಲಾಮಿಕ್ ಕಾನೂನುಗಳನ್ನು ರದ್ದುಪಡಿಸಿದರು ಹಾಗೂ ತಮ್ಮ ಸಂಸತ್ತು ರೂಪಿಸಿದ ಅಪರಾಧಸಂಹಿತೆಯನ್ನು ಜಾರಿಮಾಡಿದರು. ಮುಸ್ಲಿಂ ಉಲಮಾಗಳು ಇಸ್ಲಾಮಿಕ್ ಸಂಹಿತೆಯ ರದ್ದತಿಗೆ ತಮ್ಮ ಸಮ್ಮತಿ ಸೂಚಿಸಿದರು ಹಾಗೂ ಸಮಾನ ಅಪರಾಧ ಸಂಹಿತೆಯ ಜಾರಿಗೆ ತಮ್ಮ ಒಪ್ಪಿಗೆ ನೀಡಿದರು. ಇಂದು ಆಧುನಿಕ ಜಗತ್ತಿನಲ್ಲಿ ಅನೇಕ ಮುಸ್ಲಿಂ ಬಹುಸಂಖ್ಯಾತ ರಾಷ್ಟ್ರಗಳು ಸಹ ಇಂಥವೇ ಕ್ರಮಗಳನ್ನು ಕೈಗೊಂಡಿವೆ. ಅಪರಾಧ ಶಿಕ್ಷೆ ಹೆಚ್ಚಾಗಿ ಸಾಂದರ್ಭಿಕವಾಗಿರುತ್ತವೆ. ಅರಬ್ ಬುಡಕಟ್ಟು ಸಮಾಜದಲ್ಲಿ ಕೆಲವು ಶಿಕ್ಷೆಗಳು ಹೆಚ್ಚು ಪರಿಣಾಮಕಾರಿಯಾಗಿರುತ್ತವೆಂದು ಭಾವಿಸಲಾಗಿದೆ. ಹೀಗಾಗಿ ಅವುಗಳನ್ನು ಶಿಫಾರಿಸು ಮಾಡಲಾಗುತ್ತದೆ. ಮುಖ್ಯ ಉದ್ದೇಶ ಅಪರಾಧ ತಡೆಯಾಗಿದ್ದು ಶಿಕ್ಷೆಯ ಸ್ವರೂಪ ಹಾಗೂ ಪರಿಮಾಣ ನಿಶ್ಚಿತವಾಗಿಯೂ ಬದಲಾಗುವ ಸಾಧ್ಯತೆ ಇದೆ. ಜೊತೆಗೆ ಇಸ್ಲಾಮ್‌ನಲ್ಲಿ ತಾಜಿರ್ ಶಿಕ್ಷೆಗೂ ಅವಕಾಶವಿದೆ ಹಾಗೂ ಆಡಳಿತಗಾರರು ತಾಜಿರ್ ಶಿಕ್ಷೆಯನ್ನು ವಿಧಿಸಿಯೂ ಇದ್ದಾರೆ. ಆದ್ದರಿಂದ ಹುದೂದ್ ಕಾನೂನುಗಳನ್ನು ಜಾರಿ ಮಾಡಬೇಕೊ ಬೇಡವೊ ಎನ್ನುವುದು ತಾತ್ವಿಕ ಪ್ರಶ್ನೆಯಾಗಲಾರದು. ಮುಖ್ಯ ವಿಷಯ ಅಪರಾಧ ತಡೆಯಾಗಿದೆ.

ಮುಸ್ಲಿಮರಿಗೆ ತಮ್ಮ ಧರ್ಮ ಪಾಲಿಸಲು ಅವಕಾಶವಿರುವವರೆಗೆ ಜಾತ್ಯತೀತ ಪ್ರಜಾಭುತ್ವವಾದಿ ರಾಜ್ಯ ಸಹ ಅಷ್ಟೇ ಒಳ್ಳೇಯದಾಗಿರುತ್ತದೆನ್ನುವುದನ್ನು ಗಮನಿಸಬಹುದು. ಭಾರತ ವಿಭಜನೆಯಾದಾಗ ಭಾರತದ ಉಲಮಾಗಳು

**ಯಾವುದೇ ಧರ್ಮಾಧಾರಿತ ರಾಜ್ಯದಲ್ಲಿ ವಿಭಿನ್ನ ಧರ್ಮಗಳ ಅನುಯಾಯಿಗಳು ಸಮಾನ ಹಕ್ಕುಗಳನ್ನು ಪಡೆಯಲಾರರು. ಯಾವುದೇ ಆಧುನಿಕ ರಾಜ್ಯ ಅದಕ್ಕೆ ಅವಕಾಶ ನೀಡಲಾರದು. ಆಧುನಿಕ ರಾಜ್ಯ ವ್ಯವಸ್ಥೆಯ ಮೂಲ ಆಶಯ, ಯಾವುದೇ ಧರ್ಮದವರಾಗಿರಲಿ ಎಲ್ಲಾ ನಾಗರಿಕರು ಸಮಾನ ಹಕ್ಕುಗಳನ್ನು ಹೊಂದಿರಬೇಕು ಎನ್ನುವುದಾಗಿದೆ.**

ಸುಕರ್ಣೋ

1947ರಲ್ಲಿ ಸ್ವಯ ಮೆಚ್ಚಿಯಿಂದ ಪಾಕಿಸ್ತಾನದ ರೂಪದಲ್ಲಿ ಇಸ್ಲಾಮಿಕ್ ರಾಷ್ಟ್ರಕ್ಕೆ ಬದಲಾಗಿ ಜಾತ್ಯತೀತ ರಾಜ್ಯವನ್ನು ಆಯ್ಕೆ ಮಾಡಿಕೊಂಡರೆನ್ನುವುದು ಮುಖ್ಯವಾಗುತ್ತದೆ. ಅವರು ಪ್ರತ್ಯೇಕ ಮುಸ್ಲಿಂ ರಾಷ್ಟ್ರದ ನಿರ್ಮಾಣವನ್ನು ಬಲವಾಗಿ ವಿರೋಧಿಸಿದರು, ಜಾತ್ಯತೀತ ಪ್ರಜಾಸತ್ತಾತ್ಮಕ, ಬಹುಧರ್ಮೀಯ, ಬಹುಸಂಸ್ಕೃತಿಯ ದೇಶಕ್ಕೆ ಆದ್ಯತೆ ನೀಡಿದರು. ದೇವಬಂದ್‌ನ ದಾರುಲ್ ಉಲೂಮಿನ ಉಲಮಾಗಳಿಗಿಂತ ಹೆಚ್ಚಾಗಿ ಯಾರಿಗೆ ಇದು ಅರ್ಥವಾದೀತು?

ಈ ಮೊದಲು ಸೂಚಿಸಿರುವಂತೆ ಇಸ್ಲಾಮಿಕ್ ರಾಜ್ಯ ಒಂದು ಚಾರಿತ್ರಿಕ ವ್ಯವಸ್ಥೆಯಾಗಿತ್ತೇ ವಿನಾ ಕುರ್‌ಆನ್‌ನ ಪರಿಕಲ್ಪನೆಯಾಗಿರಲಿಲ್ಲ. ಈ ಕಾರಣಕ್ಕಾಗಿ ಇಸ್ಲಾಮಿಕ್ ರಾಷ್ಟ್ರದ ಸ್ಥಾಪನೆಗೆ ಮುಸಲ್ಮಾನರು ಯಾವುದೇ ರೀತಿಯಲ್ಲಿ ಬದ್ಧರಲ್ಲ. ಇಸ್ಲಾಮಿಕ್ ರಾಜ್ಯದ ಪರವಾಗಿ ವಾದಿಸುವವರು ಕುರ್‌ಆನ್‌ನಿಂದಾಗಲೀ ಸುನ್ನಾದಿಂದಾಗಲೀ ಯಾವುದೇ ಪ್ರಮಾಣ ಒದಗಿಸಲಾರರು. ಪ್ರತಿಯೊಂದು ದೇಶದಲ್ಲೂ ಬಹುಸಂಖ್ಯಾತರ ಆಕ್ರಮಣಶೀಲ ನಿಲುವುಗಳನ್ನು ತಳೆದು ತಮ್ಮ ಧರ್ಮವನ್ನು ರಾಷ್ಟ್ರದ ಕಾರ್ಯಚಟುವಟಿಕೆಗಳೊಂದಿಗೆ ಬೆಸೆಯಬೇಕೆನ್ನುವ ಶಕ್ತಿಗಳು ಇದ್ದೇ ಇರುತ್ತವೆ. ಉದಾಹರಣೆಗೆ ಭಾರತದಲ್ಲಿ ಹಿಂದೂಗಳ ಒಂದು ಸಮೂಹ ಭಾರತ ಹಿಂದೂ ರಾಷ್ಟ್ರವಾಗ ಬೇಕೆಂದು ಬಯಸಿದರೆ ಜಾತ್ಯತೀತ ಹಿಂದೂಗಳು ಅವರ ಬೇಡಿಕೆಗೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ.

ಯಾವುದೇ ಧರ್ಮಾಧಾರಿತ ರಾಜ್ಯದಲ್ಲಿ ವಿಭಿನ್ನ ಧರ್ಮಗಳ ಅನುಯಾಯಿಗಳು ಸಮಾನ ಹಕ್ಕುಗಳನ್ನು ಪಡೆಯಲಾರರು. ಯಾವುದೇ ಆಧುನಿಕ ರಾಜ್ಯ ಅದಕ್ಕೆ ಅವಕಾಶ ನೀಡಲಾರದು. ಆಧುನಿಕ ರಾಜ್ಯ ವ್ಯವಸ್ಥೆಯ ಮೂಲ ಆಶಯ, ಯಾವುದೇ ಧರ್ಮದವರಾಗಿರಲಿ ಎಲ್ಲಾ ನಾಗರಿಕರು ಸಮಾನ ಹಕ್ಕುಗಳನ್ನು ಹೊಂದಿರ ಬೇಕು ಎನ್ನುವುದಾಗಿದೆ. ಮುಸ್ಲಿಮೇತರನೊಬ್ಬ ಪಾಕಿಸ್ತಾನದ ಮುಖ್ಯಸ್ಥ ಇಲ್ಲವೇ ಪ್ರಧಾನಿ ಆಗಲಾರನು ಎಂದು ಪಾಕಿಸ್ತಾನ ಜಮಾತೆ ಇಸ್ಲಾಮಿಯಾದ ಮೌಲಾನಾ ಮೌದೂದಿ ವಾದಿಸಿದ್ದರು. ಅವನು/ಅವಳು ಸರ್ಕಾರದ ಯಾವುದೇ ಪ್ರಮುಖ ಹುದ್ದೆಯನ್ನು ನಿರ್ವಹಿಸುವುದು ಸಾಧ್ಯವಿಲ್ಲ. ಜಾತ್ಯತೀತ ರಾಷ್ಟ್ರಗಳಲ್ಲೂ ಅಲ್ಪಸಂಖ್ಯಾತ ಧರ್ಮಕ್ಕೆ ಸೇರಿದ ವ್ಯಕ್ತಿ ರಾಷ್ಟ್ರದ ಮುಖ್ಯಸ್ಥನಾಗುವುದು ಸಹ ಖಂಡಿತವಾಗಿಯೂ ಸುಲಭವಲ್ಲ. ಆದರೆ ತಾತ್ವಿಕವಾಗಿ ಆ ಅವಕಾಶವನ್ನು ನಿರಾಕರಿಸಲಾಗದು. ಭಾರತದಲ್ಲಿ ಸಿಕ್ಖ್–ಹಿಂದುಯೇತರ–ವ್ಯಕ್ತಿಯೊಬ್ಬರು ಪ್ರಧಾನಿಯಾಗಿದ್ದಾರೆ ಹಾಗೂ ಮೂವರು ಮುಸ್ಲಿಮರು ರಾಷ್ಟ್ರಪತಿಗಳಾಗುವುದೂ ಸಾಧ್ಯವಾಗಿದೆ.

ಅನೇಕ ಇಸ್ಲಾಮ್‌ವಾದಿಗಳು ಎತ್ತುವ ಇನ್ನೊಂದು ಆಕ್ಷೇಪವೆಂದರೆ ಜಾತ್ಯತೀತ ಪ್ರಜಾಪ್ರಭುತ್ವಾದಿ ರಾಷ್ಟ್ರದಲ್ಲಿ ಮಾನವ ಹಕ್ಕುಗಳು ಮಹತ್ವದ್ದಾಗುತ್ತವೆ, ಆದರೆ ಮಾನವ ಹಕ್ಕುಗಳ ಪರಿಕಲ್ಪನೆಯೇ ಇಸ್ಲಾಮ್ ವಿರೋಧಿಯಾಗುತ್ತದೆ. ಮೊದಲನೆಯದಾಗಿ ಕೆಲವು ಅಪವಾದಗಳೊಂದಿಗೆ ಬಹುತೇಕ ಮುಸ್ಲಿಂ ರಾಷ್ಟ್ರಗಳು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಘೋಷಣಾಪತ್ರಕ್ಕೆ ಸಹಿ ಹಾಕಿವೆ. ಘೋಷಣಾಪತ್ರಕ್ಕೆ ಸಹಿಹಾಕದ ಕೆಲವು ದೇಶಗಳ ಆಕ್ಷೇಪವೇನೆಂದರೆ ಧಾರ್ಮಿಕ ಸ್ವಾತಂತ್ರ್ಯ ಮಾನವ ಹಕ್ಕುಗಳ ಮೂಲಭೂತ ತತ್ವವಾಗಿ ರುವುದರಿಂದ ಇಸ್ಲಾಮನ್ನು ತ್ಯಜಿಸಿದವನನ್ನು ಮರಣದಂಡನೆಗೆ ಗುರಿಪಡಿಸಲಾಗದು.

ಅದೇನೇ ಇರಲಿ, ಮೇಲೆ ಸೂಚಿಸಿರುವಂತೆ ಧಾರ್ಮಿಕ ಸ್ವಾತಂತ್ರ್ಯವನ್ನು ಕುರ್‌ಆನ್ ಎತ್ತಿ ಹಿಡಿಯುತ್ತದೆ. ಆಧುನಿಕ ಜಗತ್ತು ಅದರ ಮಹತ್ವವನ್ನು ಮನಗಾಣುವುದಕ್ಕೆ ಎಷ್ಟೋ ಮೊದಲು ಕುರ್‌ಆನ್ ಅದನ್ನು ಘೋಷಿಸಿಬಿಟ್ಟಿದೆ. ಕುರ್‌ಆನ್‌ನ ತತ್ವ–ಆ ಬಗ್ಗೆ ನ್ಯಾಯಸಮ್ಮತವಾಗಿ ಅಭಿಮಾನ ಪಡಬಹುದಾದರೂ–ಅದಕ್ಕೆ ತದ್ವಿರುದ್ಧವಾಗಿ ಕೆಲವು ಮುಸಲ್ಮಾನರು ಧಾರ್ಮಿಕ ಸ್ವಾತಂತ್ರ್ಯವನ್ನು ಆಧುನಿಕ ಪಾಶ್ಚಿಮಾತ್ಯ ಸಿದ್ಧಾಂತವಾಗಿದ್ದುದರಿಂದ ಸ್ವೀಕಾರಾರ್ಹವಲ್ಲವೆಂದು ಅದನ್ನು ತಿರಸ್ಕರಿಸುತ್ತಾರೆ. ಇಸ್ಲಾಮನ್ನು ತ್ಯಜಿಸುವವನನ್ನು ಮರಣ ದಂಡನೆಗೆ ಗುರಿಪಡಿಸಬೇಕೆನ್ನುವ ಷರಿಯಾ ಕಾನೂನು ಅತ್ಯಂತ ವಿವಾದಾತ್ಮಕವಾಗಿದೆ. ಮುಸ್ಲಿಂ ಕಾನೂನು ಪಂಡಿತರಲ್ಲೇ ಈ ವಿಷಯವಾಗಿ ಸಹಮತ ಇಲ್ಲ. ಉದಾಹರಣೆಗೆ ಮೌಲಾನಾ ಅಸ್ಲಂ ಜಯರಾಜಪುರಿ ಇದನ್ನು ಸಮ್ಮತಿಸುವುದಿಲ್ಲ. ಇಸ್ಲಾಂ ತ್ಯಜಿಸಿದವನನ್ನು ಮರಣದಂಡನೆಗೆ ಗುರಿಪಡಿಸಬೇಕೆನ್ನುವುದು ನ್ಯಾಯ ಸಮ್ಮತವಲ್ಲ ವೆನ್ನುವುದಕ್ಕೆ ಕುರ್‌ಆನ್ ಹಾಗೂ ಸುನ್ನಾದ ಹಲವಾರು ದೃಷ್ಟಾಂತಗಳನ್ನು ಸಾದರಪಡಿಸುತ್ತಾರೆ.

ಅಬ್ದುರ್ ರೆಹಮಾನ್

ವಾಸ್ತವದಲ್ಲಿ ಸ್ವಾತಂತ್ರ್ಯ ಹಾಗೂ ಶ್ರದ್ಧೆ ಜೊತೆಗೇ ಸಾಗುವಂಥವು. ಧರ್ಮವನ್ನು ಅಂಗೀಕರಿಸುವ ಇಲ್ಲಾ ತಿರಸ್ಕರಿಸುವ ಸಂಪೂರ್ಣ ಸ್ವಾತಂತ್ರ್ಯವಿಲ್ಲದೇ ಇದ್ದರೆ ಯಾವುದೇ ವ್ಯಕ್ತಿಗೆ ಆ ಧರ್ಮದಲ್ಲಿ ನಿಜವಾದ ನಂಬಿಕೆ ಬರಲಾರದು. ಒಬ್ಬ ವ್ಯಕ್ತಿಯನ್ನು ಒಂದು ಧರ್ಮವನ್ನು ಅಂಗೀಕರಿಸಲು ಬಲವಂತ ಮಾಡಿದರೆ ಅವನು ಅದನ್ನು ಹೃನ್ಮನಗಳಿಂದ ಅಂಗೀಕರಿಸಲಾರನು. ಅವನು ತೋರಿಕೆಗೆ ಅದನ್ನು ಅಂಗೀಕರಿಸಬಹುದು. ಆದರೆ ಅವನ ಹೃನ್ಮನಗಳು ಅಸಮಾಧಾನ ವ್ಯಕ್ತಪಡಿಸುತ್ತವೆ. ಈ ಮನೋವೈಜ್ಞಾನಿಕ ಕಾರಣದಿಂದಾಗಿಯೇ ಕುರ್‌ಆನ್ ಧಾರ್ಮಿಕ ಸ್ವಾತಂತ್ರ್ಯದ ತತ್ವವನ್ನು ಇಷ್ಟೊಂದು ಮಹತ್ವಪೂರ್ಣಗೊಳಿಸಿದೆ ಎನ್ನುವುದು ಸುಸ್ಪಷ್ಟವಿದೆ. ಮರಣದಂಡನೆಗೆ ಷರಿಯಾದ ಅವಕಾಶ ಧರ್ಮ ತ್ಯಜಿಸುವುದಕ್ಕಿಂತ ಹೆಚ್ಚಾಗಿ ಮತಾಂತರದ ಆಮಿಷಕ್ಕೆ ಎಂದಿತ್ತು. ಇಸ್ಲಾಂ ರಾಷ್ಟ್ರದಲ್ಲಿ ವಾಸಿಸುವ ವ್ಯಕ್ತಿ ಇಸ್ಲಾಂ ಧರ್ಮ ತ್ಯಜಿಸಿದರೆ ಅವನು ವೈರಿಗಳ ಜತೆ ಶಾಮೀಲಾಗಿ ಇಸ್ಲಾಂ ರಾಷ್ಟ್ರದ ವಿರುದ್ಧ ಪಿತೂರಿ ಮಾಡಬಹುದೆಂದು ಶಂಕಿಸಲಾಗುತ್ತಿತ್ತು. ಮತಾಂತರಕ್ಕಾಗಿ ಆಮಿಷ ಒಡ್ಡಿದ್ದಕ್ಕೆ ಜಗತ್ತಿನಾದ್ಯಂತ ಮರಣದಂಡನೆ ಶಿಕ್ಷೆಯಾಗಿತ್ತು. ಆಮಿಷದ ಆತಂಕ ನೈಜವಾಗಿತ್ತು. ಏಕೆಂದರೆ ಮುಸ್ಲಿಂ ರಾಷ್ಟ್ರಗಳು ಕ್ರಿಶ್ಚಿಯನ್ ರಾಷ್ಟ್ರಗಳಿಂದ ಸುತ್ತುವರಿಯಲ್ಪಟ್ಟಿದ್ದವು. ಎರಡು ರಾಷ್ಟ್ರಗಳ ನಡುವೆ ಧಾರ್ಮಿಕವಲ್ಲವಾದರೂ ನೇರವಾದ ರಾಜಕೀಯ ಸಂಘರ್ಷ ನಡೆಯುತ್ತಿತ್ತು. ಹಾಗಾಗಿ ಒಬ್ಬ ವ್ಯಕ್ತಿ ಇಸ್ಲಾಂ ಧರ್ಮ ತ್ಯಜಿಸಿದರೆ ಅವನು ಕ್ರಿಶ್ಚಿಯನ್ ರಾಷ್ಟ್ರಕ್ಕೆ ಸಹಾಯ ಮಾಡಬಹುದು ಎನ್ನುವ ಆತಂಕ ಸಹಜವಾಗಿತ್ತು. 11ರಿಂದ 13ನೆಯ ಶತಮಾನದವರೆಗಿನ ಧರ್ಮ ಯುದ್ಧಗಳು ಸುಪ್ರಸಿದ್ಧವಾಗಿವೆ. ಮುಸಲ್ಮಾನರು ಹಾಗೂ ಕ್ರಿಶ್ಚಿಯನ್ನರ ನಡುವಣ ಆ ಸಂಘರ್ಷದ ಕಾಲಾವಧಿ ಅತ್ಯಂತ ಉದ್ವಿಗ್ನಕಾರಿಯಾಗಿತ್ತು. ಈ ಸಂದರ್ಭವನ್ನು ಲಕ್ಷ್ಯದಲ್ಲಿರಿಸಿಕೊಳ್ಳಬೇಕು. ಆದರೆ ದೀರ್ಘಾವಧಿಯಲ್ಲಿ ಕುರ್‌ಆನ್‌ನ ಧಾರ್ಮಿಕ ಸ್ವಾತಂತ್ರ್ಯದ ತತ್ವವನ್ನು ಎತ್ತಿಹಿಡಿಯಬೇಕು.

ಇನ್ನು ಮಾನವಹಕ್ಕುಗಳ ಇತರ ತತ್ವಗಳ ವಿಷಯವಾಗಿ ಅತ್ಯಂತ ಸಂಪ್ರದಾಯವಾದಿ ಮುಸಲ್ಮಾನನೂ ಅವುಗಳಿಗೆ ಆಕ್ಷೇಪವೆತ್ತಲಾರನು. ಉದಾಹರಣೆಗೆ ಎಲ್ಲ ಮನುಷ್ಯರ ಸಮಾನತೆ ಕುರ್‌ಆನ್‌ನ ತತ್ವಗಳ ತಿರುಳೇ ಆಗಿದೆ ಕೂಡ. ಜೊತೆಗೆ ಮನುಷ್ಯನ ಘನತೆ ಅತ್ಯಂತ ಮಹತ್ವದ್ದಾಗಿದೆ. ಲಿಂಗ ಸಮಾನತೆಯನ್ನೂ ಕುರ್‌ಆನ್‌ನಲ್ಲಿ ಸ್ಪಷ್ಟವಾಗಿ ಬಿಂಬಿಸಲಾಗಿದೆ. ಅಷ್ಟೇ ಅಲ್ಲ ಮಹಿಳೆಗೆ ವಿವಾಹದ ಒಪ್ಪಂದದಲ್ಲೂ ಸಮಾನಹಕ್ಕು ನೀಡಲಾಗಿದೆ. ಪತಿ ಪತ್ನಿಯರು ಪರಸ್ಪರರ ಉಡುಗೆ ಇದ್ದಂತೆ ಎಂದು ಬಣ್ಣಿಸಲಾಗಿದೆ. ಇವೆಲ್ಲ ವಿಶ್ವಸಂಸ್ಥೆ ಹೊರಡಿಸಿರುವ ಮಾನವಹಕ್ಕುಗಳ ಘೋಷಣೆಯಲ್ಲಿ ಅಡಕವಾಗಿವೆ. ಮಾನವಹಕ್ಕುಗಳ ಘೋಷಣೆಗೆ ಸಹಿಹಾಕದ ಸೌದಿ ಅರೇಬಿಯದಂಥ ದೇಶಗಳು ಈ ಅವಕಾಶಗಳಿಗೆ ಆಕ್ಷೇಪವೆತ್ತಿಲ್ಲ.

**ಇಸ್ಲಾಮಿಕ್ ರಾಷ್ಟ್ರದ ಸ್ಥಾಪನೆಗೆ ಮುಸಲ್ಮಾನರು ಯಾವುದೇ ರೀತಿಯಲ್ಲಿ ಬದ್ಧರಲ್ಲ. ಇಸ್ಲಾಮಿಕ್ ರಾಜ್ಯದ ಪರವಾಗಿ ವಾದಿಸುವವರು ಕುರ್‌ಆನ್‌ನಿಂದಾಗಲೀ ಸುನ್ನಾದಿಂದಾಗಲೀ ಯಾವುದೇ ಪ್ರಮಾಣ ಒದಗಿಸಲಾರರು. ಪ್ರತಿಯೊಂದು ದೇಶದಲ್ಲೂ ಬಹುಸಂಖ್ಯಾತರ ಆಕ್ರಮಣಶೀಲ ನಿಲುವುಗಳನ್ನು ತಳೆದು ತಮ್ಮ ಧರ್ಮವನ್ನು ರಾಷ್ಟ್ರದ ಕಾರ್ಯಚಟುವಟಿಕೆಗಳೊಂದಿಗೆ ಬೆಸೆಯಬೇಕೆನ್ನುವ ಶಕ್ತಿಗಳು ಇದ್ದೇ ಇರುತ್ತವೆ.**

ಷರಿಯಾ ಜಾರಿಗೊಳಿಸುವುದು ಇಸ್ಲಾಂ ರಾಷ್ಟ್ರದ ಕರ್ತವ್ಯ ಎಂದು ವಾದಿಸುವವರು, ಅದು ಕ್ರಮೇಣ ವಿಕಸಿತಗೊಂಡಿದ್ದು, ಹಲವಾರು ವಿಷಯಗಳಿಗಳಿಗೆ ಸಂಬಂಧಿಸಿದಂತೆ ಮುಸ್ಲಿಂ ಕಾನೂನು ಪಂಡಿತರಲ್ಲಿ ಸಾಕಷ್ಟು ಭಿನ್ನಾಭಿಪ್ರಾಯವಿದೆ ಎನ್ನುವುದನ್ನು ಅರಿತುಕೊಳ್ಳಬೇಕು. ಇದೇ ರೀತಿ ಇಸ್ಲಾಂ ವಿದ್ವಾಂಸ ಪ್ರೊ. ಮೊಹಮ್ಮದ್ ಮುಜೀಬ್, ಷರಿಯಾ ಎನ್ನುವುದು ದೈವೀ ಆಜ್ಞೆಗಳಿಗೆ ಮಾನವೀಯ ಆಯಾಮ ನೀಡುವಂಥವು ಎಂದು ವಾದಿಸುತ್ತಾರೆ. ಇಸ್ಲಾಮಿನ ಮೊದಲ ನಾಲ್ಕು ಶತಮಾನಗಳ ಕಾಲಾವಧಿಯಲ್ಲಿ ಅನೇಕ ಪ್ರಮುಖ ಕಾನೂನು ಪಂಡಿತರು ವಿಕಾಸಗೊಳಿಸಿದ ಷರಿಯಾದ ಅತ್ಯಂತ ಸೂಕ್ಷ್ಮ ಬಣ್ಣನೆ ಇದಾಗಿದೆ.

(17ನೇ ಪುಟಕ್ಕೆ)

# ಕನ್ನಡ ಶಾಲೆಗಳನ್ನು ಮುಚ್ಚಿಸುತ್ತಿರುವವರು ಯಾರು?

**ಈಗ ಕನ್ನಡ ಶಾಲೆಗಳ ಪರವಾಗಿ ಬೊಬ್ಬೆ ಹಾಕುತ್ತಿರುವವರೆಲ್ಲರೂ ಮೊದಲಾಗಿ, ತಮ್ಮ ಮಕ್ಕಳನ್ನು ಕನ್ನಡ ಶಾಲೆಗಳಿಗೆ ಕಳಿಸಿದ್ದರೆ ಈ ಶಾಲೆಗಳಿಗೆ ಈ ದುರ್ಗತಿ ಬರುತ್ತಿರಲಿಲ್ಲ ಎಂಬ ಮೂಲ ಸತ್ಯವನ್ನು ಮನಗಾಣಬೇಕು. ಈಗಲಾದರೂ ತಮ್ಮ ಕನ್ನಡ ಪ್ರೇಮವನ್ನು ಮತ್ತು ಅದರ ಹಿಂದಿನ ತಾತ್ವಿಕತೆಯನ್ನು ತಮ್ಮ, ತಮ್ಮ ಬಂಧು-ಮಿತ್ರರ ಹಾಗೂ ನೆರೆಹೊರೆಯ ಕುಟುಂಬಗಳ ಮಕ್ಕಳು ಹತ್ತಿರದ ಕನ್ನಡ ಶಾಲೆಗಳಿಗೆ ಹೋಗುವಂತಹ ನಿಷ್ಠುರ ಕ್ರಮಗಳನ್ನು ಕೈಗೊಳ್ಳುವ ಮೂಲಕ ಪ್ರದರ್ಶಿಸಲು ಮತ್ತು ವಿಷದೀಕರಿಸಲು ಮುಂದಾಗ ಬೇಕು. ಇದಕ್ಕೆ ತಕ್ಕ ಕಾರ್ಯಕ್ರಮಗಳನ್ನು ರೈತ ಸಂಘ, ದಲಿತ ಸಂಘ ಮತ್ತು ಸ್ಥಳೀಯ ಜನಸಂಘಟನೆಗಳ ಸಹಯೋಗದೊಡನೆ ರೂಪಿಸಿಕೊಳ್ಳಬೇಕು.**

**ಡಿ.ಎಸ್. ನಾಗಭೂಷಣ**

ಎಲ್ಲ ಅನಿಷ್ಟಗಳಿಗೂ ಶನೇಶ್ವರನೇ ಹೊಣೆ ಎಂಬಂತೆ ಇತ್ತೀಚೆಗೆ ಎಲ್ಲ ಅನಾಹುತಗಳ ಜವಾಬ್ದಾರಿಯನ್ನೂ ಸರ್ಕಾರದ ತಲೆಗೆ ಕಟ್ಟಿ, ಈ ಅನಾಹುತಗಳಿಗೆ ತಾವೆಷ್ಟು ಕಾರಣರು ಎಂಬ ಪ್ರಶ್ನೆಯಿಂದ ನುಣುಚಿಕೊಳ್ಳುವ ಪ್ರವೃತ್ತಿ ನಮ್ಮ ಪ್ರಜಾ ಸಮುದಾಯದಲ್ಲಿ ಕಂಡುಬರುತ್ತಿರುವುದು ಆತಂಕಕಾರಿ ಸಂಗತಿಯಾಗಿದೆ. ಇದು ಪ್ರಜಾಪ್ರಭುತ್ವದ ಕಲ್ಪನೆಯನ್ನು ಏಕಮುಖಗೊಳಿಸಿ ಸಂಕುಚಿತಗೊಳಿಸುವ ಬೆಳವಣಿಗೆಯೂ ಆಗಿದ್ದು, ಇದರಲ್ಲಿ ನಮ್ಮ ಬುದ್ಧಿಜೀವಿ ವರ್ಗವೂ ಪಾಲ್ಗೊಳ್ಳುತ್ತಿರುವುದು ಇನ್ನೂ ಹೆಚ್ಚಿನ ಆತಂಕಕ್ಕೆ ಎಡೆ ಮಾಡಿಕೊಟ್ಟಿದೆ.

ಈ ಆತಂಕಕಾರಿ ಪ್ರವೃತ್ತಿ ಈಗ ಎದ್ದು ಕಾಣತೊಡಗಿರುವುದು ಸರ್ಕಾರ ಕನ್ನಡ ಶಾಲೆಗಳನ್ನು ಮುಚ್ಚಬೇಕಾಗಿ ಬಂದಿರುವ ಪ್ರಸಂಗ ಕುರಿತು ಎದ್ದಿರುವ ಹಾಹಾಕಾರದ ವೈಖರಿಯಲ್ಲಿ. ಕನ್ನಡ ಶಾಲೆಗಳನ್ನು ಈಗ ಸಾಮೂಹಿಕವಾಗಿ ಮುಚ್ಚಬೇಕಾಗಿ ಬಂದಿರುವ ಸಂದರ್ಭಕ್ಕೆ ಕಾರಣವೇನು ಎಂಬುದರ ಆಳವಾದ ಮತ್ತು ವಿವರವಾದ ಪರಿಶೀಲನೆಗೆ ಹೋಗದೆ, ಇಡೀ ಸಂದರ್ಭವನ್ನು ಸರಳೀಕರಿಸಿ ಇದಕ್ಕೆ ಸರ್ಕಾರವನ್ನಷ್ಟೇ ಹೊಣೆ ಮಾಡಿ ಅದನ್ನು ದೂಷಿಸತೊಡಗಿರುವುದು ಕನ್ನಡ ಜನತೆ ಇತ್ತೀಚಿನ ವರ್ಷಗಳಲ್ಲಿ ಬೆಳೆಸಿಕೊಂಡು ಬಂದಿರುವ ಆತ್ಮದ್ರೋಹಿ ಪ್ರವೃತ್ತಿಯ ಪ್ರತೀಕವಷ್ಟೇ ಆಗಿದೆ. ಇದರ ಬಹು ಒಳ್ಳೆಯ ಪ್ರಾತ್ಯಕ್ಷಿಕೆಯನ್ನು ಕಳೆದ ನವೆಂಬರ್‌ನಲ್ಲಿನ ರಾಜ್ಯೋತ್ಸವ ಆಚರಣೆಯ ಭಾಗವಾಗಿ ಕನ್ನಡ ಶಾಲೆಗಳನ್ನು ಮುಚ್ಚುವುದರ ವಿರುದ್ಧ ಹಲವು ವೇದಿಕೆಗಳ ವೇದಿಕೆಯ ವತಿಯಿಂದ ನಡೆದ ವೈವಿಧ್ಯಮಯ ಮತ್ತು ವೀಕ್ಷಣೀಯ ಪ್ರತಿಭಟನೆಗಳ ಆಚರಣೆಯಲ್ಲಿ ನಾವು ಕಂಡೆವು. ಹಾಗೇ ಹಲವು ಬುದ್ಧಿಜೀವಿಗಳು ಮತ್ತು ಕನ್ನಡ ಹೋರಾಟಗಾರರು, ಮಾಧ್ಯಮಗಳೂ ಸೇರಿದಂತೆ ವಿವಿಧ ವೇದಿಕೆಗಳಲ್ಲಿ ಮಂಡಿಸುತ್ತಿರುವ ಚಿತ್ರ ವಿಚಿತ್ರವಾದ-ಸಲಹೆಗಳನ್ನೂ ಕುತೂಹಲದಿಂದ ಜನ ಗಮನಿಸುತ್ತಿದ್ದಾರೆ. ವಾಸ್ತವ ಸಂಗತಿ ಎಂದರೆ, ಕನ್ನಡ ಶಾಲೆಗಳ ಇಂದಿನ ದುರ್ಗತಿಗೆ ಹಿಂದಿನ ಎಲ್ಲ ಸರ್ಕಾರಗಳೂ ಸೇರಿದಂತೆ ಇಂದಿನ ಸರ್ಕಾರವೂ ಭಾಷೆ ಮತ್ತು ಶಿಕ್ಷಣ ಕುರಿತ ತನ್ನ ಸಂದಿಗ್ಧ ನೀತಿ, ಆಲಸ್ಯ ಮತ್ತು ಬದ್ಧತೆಯ ಕೊರತೆಗಳಿಂದಾಗಿ ಕಾರಣವಾಗಿದೆಯಾದರೂ, ಅದೊಂದೇ ಕಾರಣವಲ್ಲ ಎಂಬುದನ್ನು ನಾವು ಅರಿಯಬೇಕಿದೆ.

ವಿಚಿತ್ರವೆಂದರೆ, ಕನ್ನಡ ಶಾಲೆಗಳನ್ನು ಮುಚ್ಚಬೇಕಾದ ಸಂದರ್ಭದ ಸಂಬಂಧವಾಗಿ ಈ ಶಾಲೆಗಳ ಗುಣಮಟ್ಟದ ಬಗ್ಗೆ ಹೆಚ್ಚು ಮಾತನಾಡಲಾಗುತ್ತಿದೆ. ಸರ್ಕಾರ ಇದರ ಗುಣಮಟ್ಟವನ್ನು ಕಾಪಾಡಲಾಗದಿದ್ದರಿಂದ ಅವು ಮುಚ್ಚಲ್ಪಡುತ್ತಿವೆ ಎಂದು ಸರಳವಾಗಿ ವಾದಿಸಲಾಗುತ್ತಿದೆ. ಅತ್ಯುತ್ತಮ ಫಲಿತಾಂಶ ನೀಡುತ್ತಿದ್ದ ಶ್ರೇಷ್ಠ ಮಟ್ಟದ ಗುಣಮಟ್ಟದ ಅನೇಕ ಕನ್ನಡ ಶಾಲೆಗಳು ಕರಾವಳಿ ಮತ್ತು ಮಲೆನಾಡಿನ ಅನೇಕ ಊರುಗಳಲ್ಲಿ ಕಳೆದ ಎರಡು ಮೂರು ವರ್ಷಗಳಲ್ಲಿ ಮುಚ್ಚಿಹೋದ/ಹೋಗುತ್ತಿರುವುದನ್ನು ಕಣ್ಣಾರೆ ಕಂಡವರು ಈ ವಾದವನ್ನು ಅದರ ಮುಖಬೆಲೆಯಲ್ಲಿ ಒಪ್ಪಲಾಗುವುದಿಲ್ಲ. ಅಲ್ಲದೆ ಇಂತಹ ವಾದದ ಹಿಂದೆ ಖಾಸಗಿ ಇಂಗ್ಲಿಷ್ ಶಾಲೆಗಳ ಗುಣಮಟ್ಟವನ್ನು ಸಾರಾಸಗಟಾಗಿ ಒಪ್ಪುವ ಭೋಳೆತನ ಎದ್ದು ಕಾಣುವಂತಿದೆ. ಇದು ಆಳದಲ್ಲಿ ಪ್ರತಿಷ್ಠಿತ ಖಾಸಗಿ

ಶಾಲೆಗಳಲ್ಲಿ ತಮ್ಮ ಮಕ್ಕಳನ್ನು ಓದಿಸುತ್ತಿರುವವರ ವಾದದಂತೆ ತೋರುತ್ತದಷ್ಟೆ. ಸರ್ಕಾರಿ ಶಾಲೆಗಳ ಸಿಬ್ಬಂದಿ ಪಡೆಯುವ ಸಂಬಳದ ಶೇ. 30 ಭಾಗವನ್ನೂ ಪಡೆಯದ ಖಾಸಗಿ ಶಾಲೆಗಳ ಸಿಬ್ಬಂದಿ ಯಾವ ಮಟ್ಟದ ಶಿಕ್ಷಣವನ್ನು ಮಕ್ಕಳಿಗೆ ಒದಗಿಸುತ್ತಿದೆ ಎಂಬುದನ್ನು ಬಲ್ಲವರೇ ಬಲ್ಲರು! ಇನ್ನು ಇಲ್ಲಿ ಲಭ್ಯವಿರುವ ಮೂಲ ಸೌಕರ್ಯಗಳನ್ನು ನೋಡಿಯೇ ತೀರಬೇಕು.

ಸರ್ಕಾರಿ ಶಾಲೆಗಳ ಗುಣಮಟ್ಟ(ಶಿಕ್ಷಣ ಮತ್ತು ಮೂಲ ಸೌಕರ್ಯಗಳ ವಿಷಯದಲ್ಲಿ) ಈಗ ತೃಪ್ತಿಕರವಾಗಿಲ್ಲ ನಿಜ, ಅಲ್ಲಿಗೆ ತಮ್ಮ ಮಕ್ಕಳನ್ನು ಕಳಿಸಿದರೆ ಕೆಟ್ಟು ಹೋಗುತ್ತಾರೆ ಎಂಬ ನಂಬಿಕೆ ಪಟ್ಟಣಿಗರಲ್ಲಿ ಗಟ್ಟಿಯಾಗಿ ಬೇರೂರಿದೆ. ಆದರೆ ಇದಕ್ಕೆ ಯಾರು ಹೊಣೆ? ಖಾಸಗಿ ಇಂಗ್ಲಿಷ್ ಶಾಲೆಗಳ ಬಿನ್ನಾಣಗಳಿಗೆ ಮಾರು ಹೋಗಿ ಕ್ರಮೇಣ ನಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಂದ ಸ್ಥಳಾಂತರಿಸಿ ಅವುಗಳ ಹೊಣೆಗೇಡಿತನಕ್ಕೆ ಕಾರಣವಾಗಿ, ಅವನ್ನು ಶಾಪಾರ್ಹ 'ದೊಡ್ಡಿ'ಗಳನ್ನಾಗಿ ಪರಿವರ್ತಿಸಿದವರು ಯಾರು? ಎಲ್ಲರ ಮಕ್ಕಳೂ ಸರ್ಕಾರಿ ಕನ್ನಡ ಶಾಲೆಗಳಲ್ಲಿ ಓದುವಂತಿದ್ದ ಸಂದರ್ಭದಲ್ಲಿ ಗುಣಮಟ್ಟದ ಮಾತೆಲ್ಲಿತ್ತು? 'ದೊಡ್ಡಿ'ಗಳು ಎಲ್ಲಿದ್ದವು? ಈಗಲೂ ಸರ್ಕಾರಿ ಶಾಲೆಗಳಲ್ಲದೆ ಬೇರೆ ದೊಡ್ಡಿಗಳೂ ಇವೆ... ಆದರೆ ಅವುಗಳಿಗೆ 'ಮಮ್ಮಿ-ಡ್ಯಾಡಿ'ಗಳು ಹೆಚ್ಚಿನ ಪ್ರವೇಶ ಶುಲ್ಕ ನೀಡಿ ಠಾಕೂಠೀಕಾದ ಸಮವಸ್ತ್ರಗಳನ್ನು ಧರಿಸಿರುವಂತೆ ಮಾಡಿರುವ ಮಕ್ಕಳಿಂದ ಕೂಡಿರುವುದರಿಂದ ಅವನ್ನು ದೊಡ್ಡಿಗಳೆಂದು ಕರೆಯಲಾಗುವುದಿಲ್ಲವಷ್ಟೆ. ಅವು ಬೆಂಗಳೂರು ಮತ್ತು ಇತರ ಪಟ್ಟಣಗಳಲ್ಲಿನ ಇಕ್ಕಟಾದ ಬೀದಿಗಳಲ್ಲಿ ಇಕ್ಕಟ್ಟಾಗಿ ಕಟ್ಟಲ್ಪಟ್ಟಿರುವ ಕಟ್ಟಡಗಳಲ್ಲಿ ನಡೆಯುತ್ತಿರುವ ಇಂಗ್ಲಿಷ್ ಶಾಲೆಗಳ ರೂಪದಲ್ಲಿವೆ.

ಇರಲಿ ಈ ಖಾಸಗಿ ಇಂಗ್ಲಿಷ್ ಶಾಲೆಗಳು ಆರಂಭವಾದ್ದಾದರೂ ಏಕೆ? ಬೇಡಿಕೆ ಇದ್ದರೆ ಮಾತ್ರ ಸರಕು ಉತ್ಪಾದನೆಯಾಗುತ್ತದಲ್ಲವೇ? ಇಂಗ್ಲಿಷ್ ಶಾಲೆಗಳ ಬೇಡಿಕೆ ಏಕೆ ಹೆಚ್ಚುತ್ತಾ ಹೋಯಿತು? ಇತ್ತೀಚಿನ ವರ್ಷಗಳಲ್ಲಿ ಎಲ್ಲವೂ ಸರ್ಕಾರದ ನಿಯಂತ್ರಣ ಮೀರಿ, ಸಾರ್ವಜನಿಕ ಜೀವನದಲ್ಲಿ ವ್ಯಾವಹಾರಿಕ ಲಾಭ ಮತ್ತು ಅನುಕೂಲಗಳಷ್ಟೇ ಮುನ್ನೆಲೆಗೆ ಬಂದುದನ್ನು ನಾವು ಕಂಡಿದ್ದೇವೆ. ಈ ಸಂದರ್ಭದಲ್ಲಿ ನಮ್ಮ ಕೆಲ ಬುದ್ಧಿಜೀವಿಗಳೂ ಸೇರಿದಂತೆ ಹಲವು ವಲಯಗಳು ತಮ್ಮ ಜಾಣ ಮತ್ತು ಸಮಯಸಾಧಕ ವಾದಗಳ ಮೂಲಕ ಸಾರ್ವಜನಿಕ ವ್ಯವಹಾರಗಳಲ್ಲಿ ಇಂಗ್ಲಿಷ್‌ನ ಮಹತ್ವವನ್ನು ಹೊಸ ಉತ್ಸಾಹದಿಂದ ಎತ್ತಿ ಹಿಡಿಯುತ್ತಾ ಕನ್ನಡದ ಪ್ರಾಥಮಿಕತೆಯನ್ನು ಅಲ್ಲಗಳೆಯುತ್ತಾ ಹೋದವು. ಇದಕ್ಕೆ ಒಂದು ಕಡೆ ಕನ್ನಡದ ಬಗೆಗಿನ ಬದ್ಧತೆಯನ್ನು ಪುನರುಚ್ಚರಿಸುತ್ತಾ, ಇನ್ನೊಂದು ಕಡೆ ತನ್ನ ರಾಜಕೀಯ ಹಿತಾಸಕ್ತಿ ಕಾಪಾಡಿಕೊಳ್ಳಲು ಕುಮ್ಮಕ್ಕು ಕೊಡುತ್ತಾ ಹೋದ ಸರ್ಕಾರದ ವರ್ತನೆ ಈ ಬೆಳವಣಿಗೆಗೆ ಒಂದು ಕಾರಣವಾದರೆ, ಜನಪ್ರಿಯವೆಂದು ಕರೆಯಬಹುದಾದ ಕನ್ನಡ ಚಳವಳಿಯ ಮುಂಚೂಣಿಯಲ್ಲಿದ್ದ ಹಲವು ಸಂಘ-ಸಂಸ್ಥೆಗಳು ಮತ್ತು ಅದರ ನಾಯಕರು ಈ ಹೊಸ 'ಆಸೆ ಬುರುಕ' ವಾತಾವರಣದಲ್ಲಿ ಮೈಮರೆತವರಂತೆ ಈ ವಲಯದೊಂದಿಗೆ ನಿಧಾನವಾಗಿ ಶಾಮೀಲಾಗುತ್ತಾ ಹೋದದ್ದು ಇನ್ನೊಂದು ಕಾರಣ.

ನಾಲ್ಕೈದು ವರ್ಷಗಳ ಹಿಂದೆ ದಲಿತ-ಹಿಂದುಳಿದ ವರ್ಗಗಳ ಹಿತದ ಹೆಸರಿನಲ್ಲಿ ಸರ್ಕಾರಿ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸಬೇಕೆನ್ನುವ ಚಳವಳಿಯನ್ನು ನಮ್ಮ ಕೆಲವು ಲೇಖಕರು-ಬುದ್ಧಿಜೀವಿಗಳು ಹಮ್ಮಿಕೊಂಡಿದ್ದು ಸರ್ಕಾರದ ಕಡೆಯಿಂದ ಸಿಕ್ಕ ಕುಮ್ಮಕ್ಕಿನಿಂದ ಎಂಬುದು ಈಗ ಬಹಿರಂಗ ಸತ್ಯವಾಗಿದೆ. ಈ ಸಂಬಂಧ ಸರ್ಕಾರದ ಹಿಂದೆ ಯಾರಿದ್ದರು ಮತ್ತು ಅವರ ಉದ್ದೇಶ ಏನಾಗಿತ್ತು ಎಂಬುದೂ ಈಗ ಅಷ್ಟೇ ಬಹಿರಂಗ ಸತ್ಯವಾಗಿದೆ. ಈ ಸಂದರ್ಭದಲ್ಲಿ ಈ ಲೇಖಕರು-ಬುದ್ಧಿಜೀವಿಗಳು ಕನ್ನಡ ಭಾಷಾ ಪರಂಪರೆಯ ವಿರುದ್ಧ- ಅದು ದಲಿತ ಮತ್ತು ಶೂದ್ರ ಮಕ್ಕಳಿಗೆ ಮಾರಕ ಎಂಬಂತೆ- ಮಂಡಿಸಿದ ವಾದಗಳನ್ನು ಗಮನಿಸಿದರೆ ಯಾರಿಗಾದರೂ ಗಾಬರಿಯಾದೀತು!

ಆದರೆ ಈಗ ಇವರ ಈ ಚಳವಳಿಯು ಸೃಷ್ಟಿಸಿದ ಪರೋಕ್ಷ ಕನ್ನಡ ವಿರೋಧಿ ವಾತಾವರಣದ ಪರಿಣಾಮವೋ ಎಂಬಂತೆ ಸಾವಿರಾರು ಕನ್ನಡ ಶಾಲೆಗಳನ್ನು ಒಮ್ಮೆಲೇ ಮುಚ್ಚಬೇಕಾಗಿ ಬಂದಿರುವ ಸಂದರ್ಭದಲ್ಲಿ ಇದೇ ಲೇಖಕರು ಮತ್ತು ಬುದ್ಧಿಜೀವಿಗಳು ದಾಖಲಿಸುತ್ತಿರುವ ಪ್ರತಿಭಟನೆ, ಮಂಡಿಸುತ್ತಿರುವ ವಾದ ಮತ್ತು ಸುರಿಸುತ್ತಿರುವ ಕಣ್ಣೀರನ್ನು ನೋಡಿದರೆ, ಇವರೂ ಸೇರಿದಂತೆ ಈಗ ರಾಜ್ಯೋತ್ಸವ ಆಚರಣೆಯ ಅಂಗವಾಗಿ ಕನ್ನಡ ಭುವನೇಶ್ವರಿ ಮೈಮೇಲೆ ಬಂದಂತೆ ಕಿರುತೆರೆಗಾಗಿ ವೀರಾವೇಶದ ಪ್ರತಿಭಟನೆಗಳನ್ನು ಆಚರಿಸುತ್ತಿರುವ ಕನ್ನಡ ಪರವೆಂದು ಹೇಳಲಾಗುವ ಸಂಘಟನೆಗಳ ಎಷ್ಟು ಜನ ಕಾರ್ಯಕರ್ತರು ಮತ್ತು ನಾಯಕರು ತಮ್ಮ ಮಕ್ಕಳು ಮತ್ತು ಮೊಮ್ಮಕ್ಕಳನ್ನು ಕನ್ನಡ ಶಾಲೆಗಳಿಗೆ ಕಳಿಸಿದ್ದಾರೆ ಅಥವಾ ಕಳಿಸುತ್ತಿದ್ದಾರೆ ಎಂಬುದನ್ನು ಪರಿಶೀಲಿಸಿದರೆ ಈ ಪ್ರತಿಭಟನೆ, ವಾದ ಮತ್ತು ಕಣ್ಣೀರಿನ ಪ್ರಾಮಾಣಿಕತೆ ಬಯಲಾಗುತ್ತದೆ. ಏಕೆಂದರೆ, ಕೆಲವು ವರ್ಷಗಳ ಹಿಂದೆ ಸರ್ಕಾರವು ಎಲ್ಲ ಶಾಲೆಗಳಲ್ಲಿ ಐದನೇ ತರಗತಿಯವರೆಗೆ ಕನ್ನಡ ಮಾಧ್ಯಮವನ್ನು ಕಡ್ಡಾಯ ಮಾಡುವ ತನ್ನ ನೀತಿಯನ್ನು ಜಾರಿಗೆ ತರಲು ಯತ್ನಿಸಿದಾಗ ವ್ಯಕ್ತವಾದ ವಿರೋಧ ಮತ್ತು ಆರಂಭವಾದ ನ್ಯಾಯಾಂಗ ಹೋರಾಟದ ಸಂದರ್ಭದಲ್ಲಿ ನಡೆದ ಕನ್ನಡ ಮಾಧ್ಯಮಪರ ಹೋರಾಟದಲ್ಲಾಗಲೀ, ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆ ಪರವಾದ ಚಳವಳಿಯ ಹಿಂದೆ ವ್ಯಕ್ತವಾದ ಕನ್ನಡ ವಿರೋಧಿ ಧ್ವನಿಯ ಬಗ್ಗೆ ನಡೆದ ಪ್ರತಿಭಟನೆಗಳ ಸಂದರ್ಭದಲ್ಲಾಗಲೀ ಇವರಾರೂ ತುಟಿಕ್ ಪಿಟಿಕ್ ಎನ್ನಲಿಲ್ಲ!

ಆದರೆ ಈಗ ಸರ್ಕಾರವನ್ನು ಸುಲಭವಾಗಿ ದೂಷಿಸುವ ಸುಲಭದ ಕೆಲಸದಲ್ಲಿ ಇವರೆಲ್ಲ ಒಂದಾಗಿದ್ದಾರೆ! ಏಕೆಂದರೆ, ಇದರಿಂದ ಇವರು ಈಗ ಕಳೆದುಕೊಳ್ಳುವುದು ಏನೂ ಇಲ್ಲ! ಶಾಲೆಗಳನ್ನು ಮುಚ್ಚದೆ ನಾಲ್ವರು ವಿದ್ಯಾರ್ಥಿಗಳಿಗೆ ಶಾಲೆಯೊಂದನ್ನು ನಡೆಸುವ ವೆಚ್ಚದ ನೇರ ಮತ್ತು ತಾಕ್ಷಣಿಕ ಜವಾಬ್ದಾರಿ ಇವರದ್ದೇನಲ್ಲವಲ್ಲ! ಇವರ ಮನೆಗಳಲ್ಲಿ ಇಂತಹ ನಷ್ಟದ ಬಾಬತ್ತನ್ನು ಆದರ್ಶದ ನೆಲೆಯಲ್ಲಿ ಎಷ್ಟು ಕಾಲ ಮುಂದುವರೆಸಿಕೊಂಡು ಹೋಗುವರು ಎಂಬುದನ್ನು ಅವರನ್ನೇ ಕೇಳಿ ತಿಳಿದುಕೊಳ್ಳಬೇಕಷ್ಟೆ! ಕೆಲವರು ಇದಕ್ಕೆಲ್ಲ ಪರಿಹಾರವಾಗಿ ಇಂಗ್ಲಿಷ್ ಶಾಲೆಗಳನ್ನು ಮುಚ್ಚುವಂತೆ ಮತ್ತು ಇನ್ನು ಕೆಲವರು ಕನ್ನಡ ಮಾಧ್ಯಮಕ್ಕೆ ಪರವಾನಗಿ ಪಡೆದು ಇಂಗ್ಲಿಷ್ ಮಾಧ್ಯಮದಲ್ಲಿ ಬೋಧಿಸುತ್ತಿರುವ ಶಾಲೆಗಳನ್ನು ಮುಚ್ಚುವಂತೆ ಸಲಹೆ ನೀಡಿದ್ದಾರೆ! ಐದನೇ ತರಗತಿವರೆಗೆ ಮಾತ್ರ ಕನ್ನಡ ಮಾಧ್ಯಮ ಕಡ್ಡಾಯ ಮಾಡಿದಾಗ ಎದ್ದ ಹಾಹಾಕಾರ ಮತ್ತು ಅದು ನ್ಯಾಯಾಲಯದ ಮೆಟ್ಟಲೇರಿ ಪಡೆದ ತೀರ್ಪನ್ನು ಬಲ್ಲವರಾರೂ ಹುಡುಗಾಟದ ಹೊರತಾಗಿ ಇಂತಹ ಸಲಹೆಗಳನ್ನು ನೀಡಲಾರರು! ರಾಜ್ಯದ ಶ್ರೇಷ್ಠ ನ್ಯಾಯಾಲಯವು ತನ್ನಲ್ಲಿ ಈ ಸಂಬಂಧವಾಗಿ ಮೊಕದ್ದಮೆ ದಾಖಲಾದ 13 ವರ್ಷಗಳ ಕಾಲ ಸುಮ್ಮನಿದ್ದು, ಕೊನೆಗೆ ಕೆಲವು ಕನ್ನಡಪರ ಶಕ್ತಿಗಳು ಸರ್ಕಾರದ ಮೇಲೆ ತಂದ ಒತ್ತಡದಿಂದಾಗಿ ವಿಚಾರಣೆ ನಡೆಸಿ, ಮತ್ತೆ 2 ವರ್ಷಗಳ ಕಾಲ ತೀರ್ಪನ್ನು ಕಾದಿರಿಸಿ; ಅಂತಿಮವಾಗಿ ಈ ವಿಚಾರಣೆಯ ನೇತೃತ್ವ ವಹಿಸಿದ್ದ ಮುಖ್ಯ ನ್ಯಾಯಾಧೀಶರು ಬಡ್ತಿ ಪಡೆದು ಸರ್ವೋನ್ನತ ನ್ಯಾಯಾಲಯಕ್ಕೆ ಹೋಗಬೇಕಾಗಿ ಬಂದ ಕೊನೆಯ ದಿನ ಅನಿವಾರ್ಯವೆಂಬಂತೆ ಈ ತೀರ್ಪನ್ನು ಪ್ರಕಟಿಸಲಾಯಿತು. ಈ ತೀರ್ಪಿನ ಸಾರಾಂಶ, ಮಕ್ಕಳ ಶಿಕ್ಷಣ ಮಾಧ್ಯಮದ ಆಯ್ಕೆ ತಂದೆ ತಾಯಿಗಳ ಮೂಲಭೂತ ಹಕ್ಕಿಗೆ ಸಂಬಂಧಿಸಿದ ವಿಷಯ ಎಂಬುದಾಗಿತ್ತು! ಈಗ ಈ ತೀರ್ಪಿನ ವಿರುದ್ಧ ಸರ್ವೋನ್ನತ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿ ವರ್ಷಗಳೇ ಸಂದು ಹೋದವು! ವಿಚಾರಣೆ ಯಾವ ಹಂತದಲ್ಲದೆ ಎಂಬುದರ ಸುಳಿವೂ ಯಾರಿಗೂ ಇಲ್ಲ!

ನಮ್ಮ ಪ್ರಬಲ ರಾಜಕಾರಣಿಗಳ ಮತ್ತು ಅಧಿಕಾರಿಗಳ ಜಾಮೀನು ಅರ್ಜಿಗಳನ್ನು ಕೂಡಲೇ ವಿಚಾರಣೆಗೆ ಎತ್ತಿಕೊಂಡು ಕೆಲವೇ ದಿನಗಳಲ್ಲಿ ಇತ್ಯರ್ಥಪಡಿಸುವ ನಮ್ಮ ನ್ಯಾಯಾಲಯಗಳಿಗೆ ನಮ್ಮ ರಾಷ್ಟ್ರದ ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯ ಅಷ್ಟು ಮುಖ್ಯವಾಗಿ ಕಾಣುತ್ತಿಲ್ಲ ಮತ್ತು ಸಂದರ್ಭ ಸಿಕ್ಕಾಗಲೆಲ್ಲ ತನ್ನ ಕನ್ನಡ ಬದ್ಧತೆಯ ಬಗ್ಗೆ ದೊಡ್ಡ ಗಂಟಲಲ್ಲಿ ಉದ್ಘೋಷಣೆಗಳನ್ನು ಮಾಡುವ ಸರ್ಕಾರ ಈ ಬಗ್ಗೆ ಯಾವ ವಿಶೇಷ ಪ್ರಯತ್ನವನ್ನೂ ಮಾಡುತ್ತಿಲ್ಲ. ಇದು ನಮ್ಮ ರಾಷ್ಟ್ರ ಜೀವನದ ಆದ್ಯತೆಗಳು ಹೇಗೆ ಬುಡದಿಂದ ತುದಿಯವರೆಗೆ ತಲೆಕೆಳಗಾಗಿ ಹೋಗಿವೆ

**ಸರ್ಕಾರ, ಸರ್ವೋನ್ನತ ನ್ಯಾಯಾಲಯದಲ್ಲಿ ವಿಚಾರಣೆಗಿರುವ ಕನ್ನಡ ಮಾಧ್ಯಮಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ರಾಜ್ಯ ಶ್ರೇಷ್ಠ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ, ಸಂವಿಧಾನದ ವಿವಿಧ ಕಲಮುಗಳನ್ನು ಕನ್ನಡ ಮಾಧ್ಯಮಪರ ತೀರ್ಪು ಹೊಮ್ಮುವ ರೀತಿಯಲ್ಲಿ ವ್ಯಾಖ್ಯಾನಿಸಬಲ್ಲ ಸಮರ್ಥ ಮತ್ತು ಕನ್ನಡ ಪ್ರೇಮಿ ಸಂವಿಧಾನ ತಜ್ಞರ ನೆರವನ್ನು ಪಡೆಯಲು ಎಲ್ಲ ಪ್ರಯತ್ನಗಳನ್ನೂ ಮಾಡಬೇಕು.**

ಎಂಬುದರ ಸೂಚನೆಯಾಗಿದೆ. ಪರಿಸ್ಥಿತಿ ಹೀಗಿರುವಾಗ ಸರ್ಕಾರಕ್ಕೆ ಇಂಗ್ಲಿಷ್ ಶಾಲೆಗಳನ್ನು ಮುಚ್ಚಿ ಎಂದು ಸೂಚಿಸುವುದು ಸಾರ್ವಜನಿಕರ ಕಣ್ಣಿಗೆ ಮಣ್ಣೆರಚುವ ಮಾತು ಮಾತ್ರ ಆಗುತ್ತದೆ.

ಹಾಗಾಗಿ ಇಂದು ಕನ್ನಡ ಶಾಲೆಗಳನ್ನು ಉಳಿಸುವ ನಿಜವಾದ ಮತ್ತು ಏಕೈಕ ಮಾರ್ಗವೆಂದರೆ, ಈಗ ಕನ್ನಡ ಶಾಲೆಗಳ ಪರವಾಗಿ ಬೊಬ್ಬೆ ಹಾಕುತ್ತಿರುವ ವರೆಲ್ಲರೂ ಮೊದಲಾಗಿ, ತಮ್ಮ ಮಕ್ಕಳನ್ನು ಕನ್ನಡ ಶಾಲೆಗಳಿಗೆ ಕಳಿಸಿದ್ದರೆ ಈ ಶಾಲೆಗಳಿಗೆ ಈ ದುರ್ಗತಿ ಬರುತ್ತಿರಲಿಲ್ಲ ಎಂಬ ಮೂಲ ಸತ್ಯವನ್ನು ಮನಗಾಣಬೇಕು. ಈಗಲಾದರೂ ತಮ್ಮ ಕನ್ನಡ ಪ್ರೇಮವನ್ನು ಮತ್ತು ಅದರ ಹಿಂದಿನ ತಾತ್ವಿಕತೆಯನ್ನು ತಮ್ಮ, ತಮ್ಮ ಬಂಧು-ಮಿತ್ರರ ಹಾಗೂ ನೆರೆಹೊರೆಯ ಕುಟುಂಬಗಳ ಮಕ್ಕಳು ಹತ್ತಿರದ ಕನ್ನಡ ಶಾಲೆಗಳಿಗೆ ಹೋಗುವಂತಹ ನಿಷ್ಠುರ ಕ್ರಮಗಳನ್ನು ಕೈಗೊಳ್ಳುವ ಮೂಲಕ ಪ್ರದರ್ಶಿಸಲು ಮತ್ತು ವಿಷದೀಕರಿಸಲು ಮುಂದಾಗಬೇಕು. ಇದಕ್ಕೆ ತಕ್ಕ ಕಾರ್ಯಕ್ರಮಗಳನ್ನು ರೈತ ಸಂಘ, ದಲಿತ ಸಂಘ ಮತ್ತು ಸ್ಥಳೀಯ ಜನಸಂಘಟನೆಗಳ ಸಹಯೋಗದೊಡನೆ ರೂಪಿಸಿಕೊಳ್ಳಬೇಕು. ಕನ್ನಡಪರ ಸಂಘಟನೆಗಳು ಅಕಾಲಿಕವಾಗಿ ಮತ್ತು ಅರ್ಥಹೀನವಾಗಿ ಕನ್ನಡಪರ ಬೊಬ್ಬೆ ಹಾಕುವುದನ್ನು ನಿಲ್ಲಿಸಿ, ಪ್ರತಿ ವರ್ಷ ಶಾಲಾ ಪ್ರವೇಶಾತಿ ಸಮಯದಲ್ಲಿ ಪ್ರತಿ ಊರು ಮತ್ತು ಬಡಾವಣೆಗಳಲ್ಲಿ ಕನ್ನಡ ಶಾಲಾ ಪ್ರವೇಶಾತಿ ಆಂದೋಲನಗಳನ್ನು ಹಮ್ಮಿಕೊಳ್ಳಬೇಕು. ಅದೇ ನಿಜವಾದ ಕನ್ನಡದ ಕೆಲಸ, ಕನ್ನಡವನ್ನು ಉಳಿಸಿ ಬೆಳಸುವ ಕೆಲಸ ಎಂಬುದನ್ನು ಅವು ಅರಿಯಬೇಕು.

ಸರ್ಕಾರ ಕೂಡಾ ಇಂಗ್ಲಿಷ್ ಮಾಧ್ಯಮ ಶಾಲೆಗಳ ಮೇಲೆ ಅವುಗಳ ಒಟ್ಟು ಹೂಡಿಕೆ ಆಧಾರದ ಮೇಲೆ ವಿಶೇಷ ತೆರಿಗೆ ಹಾಕುವ ಕಾನೂನಿನ ಅವಕಾಶಗಳನ್ನು ಪರಿಶೀಲಿಸಬೇಕು. ಇದರಿಂದ ಒಂದು ವಿಶೇಷ ನಿಧಿಯನ್ನು ಸ್ಥಾಪಿಸಿ ಅದನ್ನು ಈಗಿರುವ ಕನ್ನಡ ಶಾಲೆಗಳ ಶೈಕ್ಷಣಿಕ ಮತ್ತು ಮೂಲ ಸೌಕರ್ಯಗಳ ಸುಧಾರಣೆಗಾಗಿ ಬಳಸಲು ಒಂದು ಕಾಲಬದ್ಧ ಕಾರ್ಯಕ್ರಮವನ್ನು ರೂಪಿಸಿ, ಅದರ ಸುಪರ್ದಿಯನ್ನು ಅದಕ್ಕೆಂದೇ ವಿಶೇಷವಾಗಿ ನಿಯೋಜಿತವಾದ ಸ್ಥಳೀಯ ಸಮಿತಿಗಳಿಗೆ ನೀಡಬೇಕು. ಅವುಗಳ ಜವಾಬ್ದಾರಿಯನ್ನೂ ಫಲಿತಾಂಶಾಧಾರಿತವಾಗಿ ನಿಗದಿಪಡಿಸಬೇಕು. ಕೇಂದ್ರೀಯ ಪಠ್ಯಕ್ರಮದ ಶಾಲೆ ತೆರೆಯಲು ಅನುಮತಿ ಕೊಡುವ ಮುನ್ನ ಅದರ ಅಗತ್ಯವನ್ನು, ಅಲ್ಲಿನ ಪ್ರವೇಶಾವಕಾಶಗಳನ್ನು ಕಟ್ಟುನಿಟ್ಟಾಗಿ ಪರಾಮರ್ಶಿಸಬೇಕು. ಈಗ ಅನಗತ್ಯವಾಗಿ ನಾಯಿಕೊಡೆಗಳಂತೆ ತಲೆ ಎತ್ತಿರುವ ಇಂತಹ ಶಾಲೆಗಳನ್ನು ಮುಚ್ಚಲು ಕೂಡಲೇ ಕ್ರಮ ಕೈಗೊಳ್ಳಬೇಕು. ಕನ್ನಡವನ್ನು ಒಂದು ಭಾಷೆಯಾಗಿಯಾದರೂ ಕಲಿಸುವ ಅವಕಾಶವನ್ನು ಬೇಕೆಂದೇ ಹತ್ತಿಕ್ಕಿರುವ ಮತ್ತು ಶಾಲಾ ಆವರಣದಲ್ಲಿ ಕನ್ನಡ ಮಾತಾಡಿದರೆ ದಂಡ ಹಾಕುವಂತಹ ಮತಿಗೆಟ್ಟ ಕ್ರಮಗಳನ್ನು ಕೈಗೊಂಡಿರುವ ಶಾಲೆಗಳನ್ನು ಗುರುತಿಸಿ ಅವುಗಳ ಆಡಳಿತ ಮಂಡಳಿಗೆ ಸಾರ್ವಜನಿಕವಾಗಿ ಛೀಮಾರಿ ಹಾಕಬೇಕು; ಅವುಗಳ ಆವರಣದಲ್ಲಿ ಕನ್ನಡ ವಾತಾವರಣವನ್ನು ಉಂಟು ಮಾಡುವಂತಹ ಕಾನೂನಿನ ಕ್ರಮಗಳನ್ನು ಕೈಗೊಳ್ಳಬೇಕು.

ಈಗ ಬರೀ ಕೆಲಸಕ್ಕೆ ಬಾರದ ವಿಚಾರ ಸಂಕಿರಣ, ಮೆರವಣಿಗೆ, ಯಾತ್ರೆಗಳನ್ನು ಆಯೋಜಿಸುತ್ತಾ ಕಂತ್ರಾಟುದಾರರಿಗೆ ಮತ್ತು ಭಾಷಣಕೋರರಿಗೆ ಭರ್ಜರಿ ಸಂಭಾವನೆ, ಪ್ರಯಾಣ ಭತ್ಯೆಗಳನ್ನು ನೀಡುತ್ತಾ ಕಾಲ ಕಳೆಯುತ್ತಿರುವ ಕನ್ನಡ ಅಭಿವೃದ್ಧಿ ಪ್ರಾಧಿಕಾರವನ್ನು ಕೂಡಲೇ ವಿಸರ್ಜಿಸಿ, ವಿಶೇಷಜ್ಞರನ್ನೊಳಗೊಂಡ ಒಂದು ಸ್ವಾಯತ್ತ ಕನ್ನಡ ಶಾಲಾ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಬೇಕು. ಅದರ ನಿಗಾದಲ್ಲಿ ಪ್ರತಿ ಹೋಬಳಿ ಕೇಂದ್ರದಲ್ಲಾದರೂ ಮುಂದಿನ ಶೈಕ್ಷಣಿಕ ವರ್ಷದ ಆರಂಭದ ವೇಳೆಗಾದರೂ ಸುಸಜ್ಜಿತವಾದ ಒಂದು ಮಾದರಿ ಕನ್ನಡ ಶಾಲೆಯನ್ನು ತೆರೆಯಲು ಕೂಡಲೇ ಕ್ರಮ ಕೈಗೊಳ್ಳಬೇಕು. ಇದರ ಪ್ರವೇಶಾತಿಗಾಗಿ ಒಂದು ವಿಶೇಷ ಶುಲ್ಕವನ್ನೂ ನಿಗದಿಪಡಿಸಬಹುದು. ಉಚಿತ ಶಾಲಾ ಶಿಕ್ಷಣದ ನಿಯಮಗಳು ಇದಕ್ಕೆ ಅಡ್ಡಿಯಾಗಬಾರದು. ಇಂದು ಬಡವರೆಂದು ಹೇಳಿಕೊಳ್ಳುವವರು ಕೂಡಾ ದುಬಾರಿ ಶುಲ್ಕ ನೀಡಿ ತಮ್ಮ ಮಕ್ಕಳನ್ನು ಇಂಗ್ಲಿಷ್ ಶಾಲೆಗಳಿಗೆ ಸೇರಿಸುತ್ತಿಲ್ಲವೇ? ಹಾಗೇ ಕನ್ನಡ ಶಾಲೆ ತರೆಯಲು ಆಸಕ್ತಿ ವಹಿಸಿ ಮುಂದೆ ಬರುವ ವ್ಯಕ್ತಿಗಳಿಗೆ ನಿವೇಶನ, ಕಟ್ಟಡಗಳಿಗಾಗಿ ಸರ್ಕಾರ ಆದ್ಯತೆಯ ಮೇಲೆ ಸಹಾಯ ಒದಗಿಸಬೇಕು.

ಜೊತೆಗೆ ಸರ್ಕಾರ ಕನ್ನಡ ಮಾಧ್ಯಮದಲ್ಲಿ ಶಾಲಾ ಶಿಕ್ಷಣ ಪೂರೈಸಿದವರಿಗೆ, ರಾಜ್ಯದಲ್ಲಿನ ಸರ್ಕಾರಿ ಇಲಾಖೆಗಳಲ್ಲಿ ಮತ್ತು ರಾಜ್ಯ ಸರ್ಕಾರದ ಕೃಪಾಶ್ರಯದಲ್ಲಿ ನಡೆಯುತ್ತಿರುವ ಸಂಘ-ಸಂಸ್ಥೆ ಹಾಗೂ ಉದ್ಯಮಗಳಲ್ಲಿನ ಉದ್ಯೋಗಗಳಲ್ಲಿ ಶೇಕಡಾ ಐವತ್ತರಷ್ಟನ್ನು ಮೀಸಲಿರಿಸುವ ಕಾನೂನನ್ನು ಜಾರಿಗೆ ತರಬೇಕು. ಹಾಗೇ ಎಲ್ಲ ರಾಜ್ಯ ಸರ್ಕಾರದ ಉದ್ಯೋಗಿಗಳು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೇ ಕಳಿಸಬೇಕೆನ್ನುವ ನಿಯಮ ಜಾರಿಗೆ ತರುವ ನಿಟ್ಟಿನಲ್ಲಿ ಆಲೋಚನೆ ಮಾಡಬೇಕು. ಈ ಕ್ರಮಗಳು ಸ್ವಲ್ಪ ಕಾಲ ಮತ್ತು ಕೆಲವು ವಲಯಗಳಲ್ಲಿ ಅಸಮಾಧಾನಕ್ಕೆ, ವಿರೋಧಕ್ಕೆ ಹಾಗೂ ಕಾನೂನು ಹೋರಾಟಕ್ಕೆ ಆಸ್ಪದ ನೀಡಬಹುದು.

ಆದರೆ ಸರ್ಕಾರ ನಿಜವಾದ ಕನ್ನಡಪರ ಸಂಘಟನೆಗಳ ಮತ್ತು ಶಿಕ್ಷಣತಜ್ಞ-ಬುದ್ಧಿಜೀವಿಗಳ ಸಮನ್ವಯದ ಕಾರ್ಯಾಚರಣೆಯ ಮೂಲಕ ಈ ಅಸಮಧಾನ-ಹೋರಾಟಗಳು ಹೇಗೆ ಅನೈತಿಕ ಎಂಬುದನ್ನು ಜನತೆಗೆ ಮನದಟ್ಟು ಮಾಡುವ ಗಂಭೀರ ಪ್ರಯತ್ನ ಮಾಡಬೇಕು. ಪ್ರತಿ ರಾಜಕೀಯ ಪಕ್ಷವೂ ಇಂಗ್ಲಿಷ್ ಶಾಲೆಗಳನ್ನು ನಡೆಸುವ ತನ್ನ ನಾಯಕರನ್ನು, ಅವನ್ನು ಕೂಡಲೇ ಮುಚ್ಚುವಂತೆ ಕನ್ನಡ ಶಾಲೆಗಳಾಗಿ ಪರಿವರ್ತಿಸುವಂತೆ ನಿರ್ದೇಶನ ನೀಡಬೇಕು.

ಈ ಎಲ್ಲ ಕೆಲಸಗಳು ಒಟ್ಟಿಗೇ, ಸ್ವಲ್ಪ ಸ್ವಲ್ಪ ಪ್ರಮಾಣದಲ್ಲಾದರೂ ನಡೆದಲ್ಲಿ ನಮ್ಮ ಶಾಲಾ ಶಿಕ್ಷಣದ ಚಿತ್ರವೇ ನಿರ್ಣಾಯಕವಾಗಿ ಬದಲಾಗಿ ಈ ಕೆಲಸಗಳು ಪೂರ್ಣ ಪ್ರಮಾಣದಲ್ಲಿ ನಡೆಯುವಂತಹ ವಾತಾವರಣ ನಿರ್ಮಾಣವಾಗಬಹುದು. ಒಟ್ಟಿನಲ್ಲಿ ರಾಜ್ಯದಲ್ಲಿ ಕನ್ನಡಪರವಾದ ಒಂದು 'ಹವಾ' ಸೃಷ್ಟಿಯಾಗಬೇಕಿದೆ. ಅದು ಎಲ್ಲ ಭಾಷಣ-ಘೋಷಣೆಗಳಿಗಿಂತ ಹೆಚ್ಚು ಚುರುಕಾಗಿ ಕೆಲಸ ಮಾಡಬಲ್ಲದಾಗಿದೆ! ಇದಕ್ಕೆಲ್ಲ ನಮ್ಮ ರಾಜಕಾರಣಿಗಳಲ್ಲಿ ಶಿಕ್ಷಣ ಕುರಿತ ಗಂಭೀರ ಚಿಂತನೆ ಮತ್ತು ಇಚ್ಛಾಶಕ್ತಿ ಜಾಗೃತವಾಗಬೇಕಿದೆ ಎಂಬುದನ್ನೂ ಈ ಸಂದರ್ಭದಲ್ಲಿ ಹೇಳಬೇಕು.

ಎಲ್ಲಕ್ಕಿಂತ ಮುಖ್ಯವಾಗಿ ಸರ್ಕಾರ, ಸರ್ವೋನ್ನತ ನ್ಯಾಯಾಲಯದಲ್ಲಿ ವಿಚಾರಣೆಗಿರುವ ಕನ್ನಡ ಮಾಧ್ಯಮಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ರಾಜ್ಯ ಶ್ರೇಷ್ಠ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ, ಸಂವಿಧಾನದ ವಿವಿಧ ಕಲಮುಗಳನ್ನು ಕನ್ನಡ ಮಾಧ್ಯಮಪರ ತೀರ್ಪು ಹೊಮ್ಮುವ ರೀತಿಯಲ್ಲಿ ವ್ಯಾಖ್ಯಾನಿಸಬಲ್ಲ ಸಮರ್ಥ ಮತ್ತು ಕನ್ನಡ ಪ್ರೇಮಿ ಸಂವಿಧಾನ ತಜ್ಞರ ನೆರವನ್ನು ಪಡೆಯಲು ಎಲ್ಲ ಪ್ರಯತ್ನಗಳನ್ನೂ ಮಾಡಬೇಕು.

ಒಂದು ವೇಳೆ ಸರ್ವೋನ್ನತ ನ್ಯಾಯಾಲಯ ನಮ್ಮ ಶ್ರೇಷ್ಠ ನ್ಯಾಯಾಲಯದ ತೀರ್ಪನ್ನೇ ಎತ್ತಿ ಹಿಡಿದರೆ, ಆ ತೀರ್ಪಿನ ಆಧಾರದ ಮೇಲೆ, ಮಾತೃಭಾಷಾ ಶಿಕ್ಷಣಕ್ಕೆ ಪೂರಕವಾಗಿ ಸಂವಿಧಾನದ ಸೂಕ್ತ ತಿದ್ದುಪಡಿಗಾಗಿ ಒತ್ತಾಯಿಸುವ ಜನಾಂದೋಲನವೊಂದನ್ನು ರೂಪಿಸುವ ಜವಾಬ್ದಾರಿಯನ್ನು ಈಗ ಕನ್ನಡ ಶಾಲೆಗಳ ಪರ ಬೊಬ್ಬೆ ಹಾಕುತ್ತಿರುವ ಬುದ್ಧಿಜೀವಿಗಳು ಮತ್ತು ಚಳವಳಿಕಾರರು ವಹಿಸಿಕೊಳ್ಳಬೇಕು. ಅದು ಮಾತ್ರ ನಿಜವಾದ ಕನ್ನಡದ ಕೆಲಸವಾದೀತು. ಇದಲ್ಲದೆ, ಕನ್ನಡ ಶಾಲೆಗಳನ್ನು ಮತ್ತು ಆ ಮೂಲಕ ಕನ್ನಡವನ್ನು ಉಳಿಸುವ ಅನ್ಯ ಮಾರ್ಗವಿಲ್ಲ.

# ಇಸ್ಲಾಂ ಪ್ರಜಾಪ್ರಭುತ್ವ ಹಾಗೂ ಹಿಂಸೆ

(13ನೇ ಪುಟದಿಂದ

ಭಾರತೀಯ ಉಪಖಂಡದ ಮಹಾನ್ ಉರ್ದು ಕವಿ ಇಕಬಾಲ್ ಸಹ, ಷರಿಯಾ ವಿಷಯಗಳ ಕುರಿತು ಮರುಚಿಂತನೆ ಮಾಡುವ ಹಕ್ಕು ಮುಸಲ್ಮಾನರ ಪ್ರತಿಯೊಂದು ತಲೆಮಾರಿಗೂ ಇರಬೇಕು ಹಾಗೂ ಇದಕ್ಕಾಗಿ ಮುಸ್ಲಿಮರು ಬಹುಸಂಖ್ಯಾತರಾಗಿರುವ ದೇಶದಲ್ಲಿ ಸಂಸತ್ತು ಸೂಕ್ತ ವೇದಿಕೆ ಎಂದು ವಾದಿಸುತ್ತಿದ್ದರು. ಇಜ್ತಿಹಾದ್ ಇಸ್ಲಾಮಿನ ಚಲನಶೀಲ ತತ್ವವಾಗಿದ್ದು ಆಧುನಿಕ ಜಗತ್ತಿನ ಬದಲಾದ ಪರಿಸ್ಥಿತಿಗಳಲ್ಲಿ ಇಜ್ತಿಹಾದ್ ಅವಶ್ಯಕವಾಗುತ್ತದೆಂದೂ ಅವರು ಸ್ಪಷ್ಟಪಡಿಸಿದ್ದರು. ಹೀಗೆ ಚುನಾಯಿತ ಸಂಸತ್ತು ಹೊಂದಿರುವ ಪ್ರಜಾಸತ್ತಾತ್ಮಕ ಸಮಾಜವು, ಷರಿಯಾವನ್ನು ನಮ್ಮ ಸಮಕಾಲೀನ ಜಗತ್ತಿಗೆ ಹೆಚ್ಚು ಪ್ರಸ್ತುತಗೊಳಿಸಲು ಹೆಚ್ಚು ಸೂಕ್ತವಾದ ಸಾಂಸ್ಥಿಕ ವ್ಯವಸ್ಥೆಯಾಗಬಲ್ಲದು. ಅನೇಕ ಹೊಸ ಸಮಸ್ಯೆಗಳು ಉದ್ಭವಿಸಿದ್ದು ಅವುಗಳಿಗೆ ಇಜ್ತಿಹಾದ್‌ನ ತುರ್ತಾದ ಅನ್ವಯದ ಅಗತ್ಯವಿದೆ.

ಎಲ್ಲೇ ಮುಸಲ್ಮಾನರು ಅಲ್ಪಸಂಖ್ಯಾತರಾಗಿ ವಾಸಿಸುತ್ತಿದ್ದರೆ ಹಾಗೂ ಜಾತ್ಯತೀತ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ವಾಸಿಸುತ್ತಿದ್ದರೆ ಅವರು ಅವಶ್ಯಕವಾದ ಬದಲಾವಣೆ ತರಲು ತಮ್ಮದೇ ಆದ ವೇದಿಕೆಗಳನ್ನು ನಿರ್ಮಿಸಿಕೊಳ್ಳಬೇಕು. ಇಂದು ಹೆಚ್ಚಿನ ಮುಸಲ್ಮಾನರು ಬಹುಸಂಖ್ಯಾತರಾಗದೆ ಅಲ್ಪಸಂಖ್ಯಾತರಾಗಿಯೇ ಬದುಕುತ್ತಿದ್ದಾರೆ. ಹೀಗಾಗಿ ಉಲಮಾ ಹಾಗೂ ಆಧುನಿಕ ವಿದ್ವಾಂಸರ ಸಹಕಾರದೊಂದಿಗೆ ಇಜ್ತಿಹಾದ್ ಮಾಡುವುದಕ್ಕಾಗಿ ಅವರು ತಮ್ಮದೇ ಆದ ಸಂಸ್ಥೆಗಳನ್ನು ವಿಕಸಿತಗೊಳಿಸಬೇಕು. ತಮ್ಮ ಕಾನೂನುಗಳಲ್ಲಿ ಇಂಥ ರಚನಾತ್ಮಕ ಬದಲಾವಣೆಗಾಗಿ ಪ್ರಯತ್ನಿಸುವುದನ್ನು ಯಾವ ಜಾತ್ಯತೀತ ಪ್ರಜಾಪ್ರಭುತ್ವ ರಾಷ್ಟ್ರವೂ ತಡೆಯಲಾರದು. ಇದೆಲ್ಲವನ್ನು ಇಸ್ಲಾಮಿನ ಚೌಕಟ್ಟಿನಲ್ಲಿ ಮಾಡಬೇಕು. ಹೆಚ್ಚಿನ ಮುಸಲ್ಮಾನರಿಗೆ ಇವು ಸ್ವೀಕಾರಾರ್ಹವಾಗಬೇಕಾದರೆ ಈ ಚೌಕಟ್ಟಿನ ಆಚೆಯ ಬದಲಾವಣೆ ತರಕೂಡದು.

ಪ್ರಜಾಪ್ರಭುತ್ವ ರಾಷ್ಟ್ರವನ್ನು ಅಂಗೀಕರಿಸುವುದು ಮುಸಲ್ಮಾನರಿಗೆ ಹೆಚ್ಚು ಪ್ರಯೋಜನಕಾರಿಯಾಗಬಲ್ಲದು, ಇಸ್ಲಾಂ ರಾಷ್ಟ್ರದಲ್ಲಿಗಿಂತ ಹೆಚ್ಚು ನಿರ್ಭೀತರಾಗಿ ಹಾಗೂ ಹೆಚ್ಚು ಪ್ರಾಮಾಣಿಕವಾಗಿ ತಮ್ಮ ಧರ್ಮದ ಅನುಸರಣೆಗೆ ಸಹಕಾರಿಯಾಗಬಲ್ಲದು. ಕಾರಣ ಇಸ್ಲಾಂ ರಾಷ್ಟ್ರವೆನ್ನುವೆಡೆ ಬರೀ ಪಕ್ಷಪಾತ ಹಾಗೂ ಮೂಲಭೂತವಾದವೇ ಮೆರೆಯುತ್ತಿರುವುದು. ಯಾವುದೇ ಧರ್ಮವನ್ನಾಧರಿಸಿದ ರಾಷ್ಟ್ರಕ್ಕಿಂತ ಪ್ರಜಾಪ್ರಭುತ್ವ ರಾಷ್ಟ್ರವೇ ನಿಜವಾದ ಧಾರ್ಮಿಕ ಸ್ವಾತಂತ್ರ್ಯಕ್ಕೆ ಹೆಚ್ಚಿನ ಭದ್ರತೆ ನೀಡಬಲ್ಲದು. ಇದು ವಿರೋಧಾತ್ಮಕವಾಗಿ ಕಂಡರೂ ವಾಸ್ತವದಲ್ಲಿ ಸರಿಯೇ.

ಹೀಗೆ ಮುಸ್ಲಿಂ ಜನತೆಗೆ ಸರಿಯಾಗಿ ತಿಳಿವಳಿಕೆ ನೀಡಬೇಕು ಹಾಗೂ ಇಸ್ಲಾಮಿಕ್ ಜಗತ್ತಿನಲ್ಲಿ ಪ್ರಜಾಪ್ರಭುತ್ವದ ಅಂಗೀಕಾರಕ್ಕೆ ಅವರನ್ನು ಸನ್ನದ್ಧಗೊಳಿಸಬೇಕು. ಇಸ್ಲಾಮಿನ ಹೆಸರಿನಲ್ಲಿ ಪ್ರಜಾಪ್ರಭುತ್ವವನ್ನು ವಿರೋಧಿಸುವವರು ಇಸ್ಲಾಮಿಗೆ ಬದಲಾಗಿ ಕೆಲವು ನಿರ್ದಿಷ್ಟ ಪಟ್ಟಭದ್ರ ಹಿತಾಸಕ್ತಿಗಳಿಗೆ ನಿಜವಾದ ನಿಷ್ಠೆ ತೋರುತ್ತಿದ್ದಾರೆ ಎನ್ನುವುದರ ಕುರಿತು ಅವರಲ್ಲಿ ಜಾಗೃತಿ ಮೂಡಿಸಬೇಕು. ಇಸ್ಲಾಮಿನ ಹೆಸರಿನಲ್ಲಿ ತಮ್ಮ ಸ್ವಂತ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುತ್ತಿರುವ ಮಧ್ಯಕಾಲೀನ ಪಾಳೆಯಗಾರಿ ಶಕ್ತಿಗಳ ಪ್ರಭಾವದಡಿ ಇಸ್ಲಾಂ ಜಗತ್ತು ಇನ್ನೂ ಬಸವಳಿಯುತ್ತಿದೆ. ಇಸ್ಲಾಂ ಪ್ರಜಾಪ್ರಭುತ್ವಕ್ಕೆ ಸಾಕಷ್ಟು ಪೂರಕವಾಗಿದೆ. ಮುಸ್ಲಿಂ ದೇಶಗಳ ಆಡಳಿತಗಾರರ ಹಿತಾಸಕ್ತಿಗಳೇ ಪ್ರಜಾಪ್ರಭುತ್ವಕ್ಕೆ ಪೂರಕವಾಗಿಲ್ಲ.

ನಿರಂಕುಶಪ್ರಭುತ್ವದಡಿ ದೀರ್ಘಕಾಲ ನಲುಗಿಹೋದ ಮಲೇಷ್ಯಾ ಕಡೆಗೂ ಪ್ರಜಾಪ್ರಭುತ್ವವನ್ನು ಪಡೆದಿದೆ ಅದನ್ನು ಹೇಗಾದರೂ ಮಾಡಿ ರಕ್ಷಿಸಬೇಕು ಹಾಗೂ ಎಲ್ಲ ಧಾರ್ಮಿಕ ಅಲ್ಪಸಂಖ್ಯಾತರಿಗೆ ತಮ್ಮ ತಮ್ಮ ಧರ್ಮವನ್ನು ಅನುಸರಿಸಲು ಸ್ವಾತಂತ್ರ್ಯದ ಭರವಸೆ ನೀಡಬೇಕೆಂದು ನಾನು ನನ್ನ ಉಪನ್ಯಾಸಗಳಲ್ಲಿ ಹೇಳಿದ್ದೇನೆ. ಭಿನ್ನಾಭಿಪ್ರಾಯ ಕುರಿತ ಸಹನೆ ಪ್ರಜಾಪ್ರಭುತ್ವದ ಮುಖ್ಯ ತತ್ವವಾಗಿದೆ. ಎಲ್ಲ ವಿಭಿನ್ನ ಧಾರ್ಮಿಕ ಅಭಿಪ್ರಾಯಗಳಿಗೂ ತಕ್ಕ ಸಹನೆ ತೋರಬೇಕು. ಅದು ಇಸ್ಲಾಮಿನ ಯಾವ ತತ್ವದ ಉಲ್ಲಂಘನೆಯಾಗಲಾರದು. ■

WITH BEST COMPLIMENTS FROM:

K.B ARASAPPA

PROPRIETOR

**AS Machine Tools & Spares**

No. 5, I Stage, Near TVS Cross,
Peenya Industrial Area, Bangalore-560058
Ph. 41179339, Mob: 9845513190

Machine Tool Dealers, Welding Machine Dealers,
Lathe Machine Dealers

**ಕರ್ನಾಟಕ ಒಂದು ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ, ನಿಜ; ಆದರೆ ಕನ್ನಡಿಗರೆಲ್ಲರು ಭಾವನಾತ್ಮಕವಾಗಿ ಒಂದಾಗಲೇ ಇಲ್ಲ. ಸಾಹಿತ್ಯಕ ಮತ್ತು ಸಾಂಸ್ಕೃತಿವಾಗಿ ಸಾಕಷ್ಟು ವೈವಿಧ್ಯಗಳಿದ್ದರೂ ಸಹ ಏಕಭಾವ ಸೃಷ್ಟಿಯಾಗಿದೆ. ಪ್ರಾದೇಶಿಕ ಭಾಷಾ ಪ್ರಭೇದದ ನಡುವೆ ಏಕರೂಪ ಗ್ರಂಥಸ್ಥ ಭಾಷೆ ನಿರ್ಮಾಣವಾಗಿದೆ. ಆದರೆ, ಎಲ್ಲ ಭಾಗಗಳ ಸಾಹಿತಿಗಳಿಗೆ, ಕಲಾವಿದರಿಗೆ ಹಾಗೂ ಹೋರಾಟಗಾರರಿಗೆ ಸಮಾನ ಅವಕಾಶಗಳು ಹಾಗೂ ಅರ್ಹತೆಗೆ ತಕ್ಕ ಗೌರವ ಮತ್ತು ಪುರಸ್ಕಾರಗಳು ಲಭಿಸುತ್ತಿಲ್ಲ.**

# ಕನ್ನಡ ಮತ್ತು ಕನ್ನಡಿಗರ ಮುಂದಿನ ಸವಾಲುಗಳು

ಮಲ್ಲಿಕಾರ್ಜುನ ಗುಮ್ಮಗೋಳ




ವಿದ್ಯಾರ್ಥಿಗಳ ಸಂಖ್ಯೆ ಸಾಕಷ್ಟು ಇಲ್ಲ ಎಂಬ ಕಾರಣಕ್ಕಾಗಿ ಕನ್ನಡ ಶಾಲೆಗಳನ್ನು ಮುಚ್ಚಲು ಮುಂದಾದ ಸರಕಾರಕ್ಕೆ ಸಾಹಿತಿಗಳು ಮತ್ತು ಕನ್ನಡಪರ ಹೋರಾಟಗಾರರು ಹಾಕಿದ ಒತ್ತಡ ಮತ್ತು ಸೃಷ್ಟಿಸಿದ ಜನಾಭಿಪ್ರಾಯಕ್ಕೆ ಮಣಿದು ಆ ವಿಚಾರವನ್ನು ಕೈಬಿಟ್ಟಿದೆ. ಆದರೆ, ಇಲ್ಲಿ ಮೂಲಭೂತವಾಗಿ ಯೋಚಿಸಬೇಕಾದ ಅಂಶವೆಂದರೆ ಕನ್ನಡ ಶಾಲೆಗೆ ಮಕ್ಕಳ ಪ್ರವೇಶ ಯಾಕೆ ಕಡಿಮೆಯಾಗುತ್ತಿದೆ ಎಂಬುದು. ಕನ್ನಡ ಕೇವಲ ಭಾವನಾತ್ಮಕ ವಿಷಯವಾಗದೆ ಅದು ಅನ್ನಕೊಡುವ ಮಾಧ್ಯಮವಾಗಬೇಕಾಗಿದೆ. ಕೇವಲ ಭಾವನೆಯಿಂದಲೇ ಬದುಕು ಸಾಗಲಾರದು. ಬುದ್ಧಿ-ಭಾವಗಳ ಕೆಳಗೆ ಹಸಿದ ಹೊಟ್ಟೆ ಕಾದು ಕುಳಿತಿದೆ. ಕನ್ನಡ ಶಾಲೆಗಳ ಕಡೆಗೆ ಮಕ್ಕಳನ್ನು ಸೆಳೆಯುವ ಪ್ರಯತ್ನ ನಡೆಯಬೇಕು. ಕನ್ನಡದೊಂದಿಗೆ ಇಂಗ್ಲಿಷನ್ನು ಕಡ್ಡಾಯ ಭಾಷೆಯಾಗಿ ಕಲಿಸುವ ಅನಿವಾರ್ಯತೆಯನ್ನು ನಾವು ಅರ್ಥಮಾಡಿಕೊಳ್ಳಬೇಕು. ಕೇವಲ ಕನ್ನಡದ ಗತ ವೈಭವದ ಹಳವಂಡದಲ್ಲಿ ಕುಳಿತರೆ ಕನ್ನಡ ಮತ್ತು ಕನ್ನಡಿಗರ ಅಭಿವೃದ್ಧಿ ಆಗಲಾರದು. ಆಧುನಿಕತೆಯ ಗಾಳಿ ಎಲ್ಲೆಡೆ ಬೀಸುತ್ತಿರುವ ಈ ಜಾಗತೀಕರಣದ ಸನ್ನಿವೇಶದಲ್ಲಿ ಜಾಗತಿಕ ಸವಾಲು ಮತ್ತು ಸನ್ನಿವೇಶಗಳನ್ನು ಎದುರಿಸಿ ಹೊಸತನಕ್ಕೆ ತೆರೆದುಕೊಳ್ಳಬೇಕಾಗಿದೆ.

ಕನ್ನಡದ ಕುರಿತು ಮಾತನಾಡುವಾಗಲೆಲ್ಲ ಕನ್ನಡದ ಮೊಟ್ಟಮೊದಲ ಶಾಸನ 'ಹಲ್ಮಿಡಿ ಶಾಸನ'ದ ಉಲ್ಲೇಖ ಮಾಡುವ ಮುಖಾಂತರ ಕನ್ನಡ ಪ್ರಾಚೀನತೆಯನ್ನು ನೆನೆಸಿಕೊಳ್ಳುತ್ತೇವೆ. ಆಗಷ್ಟೆ ಅದು ಶಿಷ್ಟರೂಪವನ್ನು ಮೈದೋರುತ್ತಿತ್ತು. ಆದರೆ, ಕನ್ನಡ ಎಂಬುದು ಜನಪದರ ಭಾಷೆಯಾಗಿ, ಕರ್ನಾಟಕ ಎಂಬುದು ಸೀಮಾತೀತ ಪ್ರದೇಶವಾಗಿ ಅಸ್ತಿತ್ವದಲ್ಲಿತ್ತು ಎಂಬುದನ್ನು ಮಹಾಭಾರತದ ಕಾಲದಲ್ಲಿಯೇ ಕಾಣುತ್ತೇವೆ. ಪಾಂಡುಪುತ್ರರಲ್ಲಿ ನಾಲ್ಕನೆಯವನಾದ ನಕುಲನು ಕರ್ನಾಟಕ ಪ್ರದೇಶವನ್ನು ಜಯಿಸಿದ ಕುರಿತು ಉಲ್ಲೇಖ ಮಹಾಭಾರತದಲ್ಲಿ ಲಭಿಸುತ್ತದೆ. ತಮಿಳಿನ 'ಸಿಲಪ್ಪದಿಗಾರಂ'ನಲ್ಲಿ, ಗ್ರೀಕ್ ನಾಟಕದಲ್ಲಿ ಕನ್ನಡದ ಉಲ್ಲೇಖ ಕಂಡುಬರುತ್ತದೆ. ಚಾಲುಕ್ಯರ ಕಾಲಕ್ಕಾಗಲೇ ಕನ್ನಡ ಸಾಹಿತ್ಯ ಮತ್ತು ಸಂಗೀತ ಅಸ್ತಿತ್ವವನ್ನು ಕಂಡುಕೊಂಡಿತ್ತು. ಇಂದಿನ 'ಕರ್ನಾಟಕ ಸಂಗೀತ'ದ ಉಗಮ ಅಂದೇ ಆಗಿತ್ತು. ಅಲ್ಲದೇ ಗಂಗ, ಕದಂಬ, ರಾಷ್ಟ್ರಕೂಟ, ಹೊಯ್ಸಳರು ಹಾಗೂ ವಿಜಯನಗರ ಅರಸರ ಕಾಲದಲ್ಲಿ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗೆ ಅಬಾಧಿತವಾದ ಬೆಳವಣಿಗೆಯ ಅವಕಾಶಗಳು ಲಭಿಸಿದವು.

ಆದರೆ, ಕ್ರಿ.ಶ. 1565ರಲ್ಲಿ ನಡೆದ ತಾಳಿಕೋಟೆ ಕದನವು ಕನ್ನಡದ ಪಾಲಿಗೆ ದೊಡ್ಡ ದುರಂತವನ್ನೇ ಸೃಷ್ಟಿಸಿತು. ಕನ್ನಡಿಗರ ಸ್ವಾಭಿಮಾನದ ಸಾಮ್ರಾಜ್ಯವಾಗಿದ್ದ ವಿಜಯನಗರವು ಪತನವಾಗುವುದರೊಂದಿಗೆ ನಿಜಾಮರ ಉರ್ದು ಆಳ್ವಿಕೆ ತನ್ನ ಆಧಿಪತ್ಯವನ್ನು ಸ್ಥಾಪಿಸಿತು. ನಿಜಾಮರ ಆಳ್ವಿಕೆಗೆ ಒಳಪಟ್ಟ ಪ್ರದೇಶವು ಹೈದರಾಬಾದ್ ಕರ್ನಾಟಕವೆಂದಾಯಿತು. ಮರಾಠಾ ಪೇಶ್ವೆಯರ ಆಳ್ವಿಕೆಗೆ ಒಳಪಟ್ಟ ಉತ್ತರ ಕರ್ನಾಟಕವು ಮುಂಬೈ ಕರ್ನಾಟಕವೆಂದಾಯಿತು. ಹೈದರಾಬಾದ್ ಕರ್ನಾಟಕದಲ್ಲಿ ಉರ್ದು ಹಾಗೂ ಮುಂಬೈ ಕರ್ನಾಟಕದಲ್ಲಿ ಮರಾಠಿ ಭಾಷೆಗಳು ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಿದವು. ಇಂದಿಗೂ ಆಯಾ ಪ್ರದೇಶದ ಆಡಳಿತ ವ್ಯವಹಾರದಲ್ಲಿ ಹಾಗೂ ಜನ ಬಳಕೆಯಲ್ಲಿ ಉರ್ದು ಹಾಗೂ ಮರಾಠಿ ಭಾಷೆಗಳ ಬಳಕೆಯನ್ನು ಕಾಣುತ್ತೇವೆ. ಇತ್ತ ದಕ್ಷಿಣ ಕರ್ನಾಟಕದಲ್ಲಿ ಮೈಸೂರು ಅರಸರು, ಸುಲ್ತಾನರ ಕಾಲದಲ್ಲಿ ಕಮರಿಹೋಗುತ್ತಿದ್ದ ಕನ್ನಡವನ್ನು ಮತ್ತೆ ಪ್ರಬಲಗೊಳಿಸಿದರು. ಮುಂದೆ 16ನೇ ಶತಮಾನಕ್ಕೆ ಕಾಲಿಟ್ಟ ಬ್ರಿಟಿಷ್ ವಸಾಹಾತುಶಾಹಿಯು ಕ್ರಮೇಣ ಈ ದೇಶದ ಸಂಪತ್ತನ್ನು ಮಾತ್ರ ಲೂಟಿ ಮಾಡಲಿಲ್ಲ. ಅದು ಪ್ರಗತಿಪರ ಶಿಕ್ಷಣದ ಹೆಸರಿನಲ್ಲಿ ತನ್ನ ಭಾಷೆ ಮತ್ತು ಸಂಸ್ಕೃತಿಯನ್ನು ಈ ನೆಲದಲ್ಲಿ ಬಿತ್ತಿತು. ನಮ್ಮ ಭಾಷೆ ಮತ್ತು ಬದುಕಿನ ಮೇಲೆ ಅಗಾಧವಾದ ಪರಿಣಾಮವನ್ನು ಬೀರಿತು.

ಆರಂಭ ಕಾಲದಲ್ಲಿ ದ್ರವಿಡ ಭಾಷೆಯಿಂದ ಟಿಸಿಲೊಡೆದ ಕನ್ನಡ ನಂತರ ಸಂಸ್ಕೃತ ಮತ್ತು ಇಂಗ್ಲಿಷ್‌ಗಳ ಪ್ರಭಾವಕ್ಕೆ ಸಿಕ್ಕರೂ ತನ್ನತನವನ್ನು ಉಳಿಸಿಕೊಂಡು ಬಂದಿದೆ. ಭೂತಕಾಲದಲ್ಲಿ ಹಾಗಿತ್ತೆಂಬ ಕನವರಿಕೆ, ವರ್ತಮಾನದಲ್ಲಿ ಹೀಗಾಯಿತೆಂಬ ಕಳವಳ, ಭವಿಷ್ಯತ್ತಿನಲ್ಲಿ ಇನ್ನೇನಾಗುತ್ತದೆಯೋ ಎಂಬ ದಿಗಿಲುಗಳನ್ನು ಬಿಟ್ಟು, ಎಲ್ಲ ಹೊಡೆತಗಳನ್ನು ಸಹಿಸಿಕೊಂಡು ಬಂದ ಕನ್ನಡ ಬಹುದಿಟವಾಗಿ ನಿಲ್ಲುವಂತೆ ಮಾಡಬೇಕಾಗಿದೆ.

ಸ್ವಾತಂತ್ರ್ಯ ಪೂರ್ವದಲ್ಲಿಯೇ ಹರಿದು ಹಂಚಿಹೋಗಿದ್ದ ಪ್ರದೇಶವನ್ನು ಹಾಗೂ ಕನ್ನಡ ಭಾಷಿಕರೆಲ್ಲರನ್ನೂ ಒಂದೇ ಆಡಳಿತ ವ್ಯವಸ್ಥೆಗೆ ತರಬೇಕು. ಕರ್ನಾಟಕವೆಂಬ ಅಮೂರ್ತ ರಾಜ್ಯವನ್ನು ಏಕೀಕರಣ ಗೊಳಿಸಬೇಕು, ಆ ಮೂಲಕ ಕನ್ನಡ ಕನ್ನಡಿಗರಿಗೆ ಒಂದು ಸ್ವಾಭಿಮಾನದ ಮತ್ತು ಸ್ವಾವಲಂಬನೆಯ ಬದುಕನ್ನು ಕಟ್ಟಬೇಕೆಂಬ ಮಹದುದ್ದೇಶದಿಂದ ಕರ್ನಾಟಕ ಏಕೀಕರಣ ಚಳವಳಿ ಆರಂಭವಾಯಿತು.

ಅದಕ್ಕೆ ಒಂದು ಸಾಂಘಿಕ ಮತ್ತು ಸಾಂಸ್ಥಿಕ ನೆಲೆಗಟ್ಟನ್ನು ಕಲ್ಪಿಸುವ ಸಲುವಾಗಿ "ಕರ್ನಾಟಕ ವಿದ್ಯಾವರ್ಧಕ ಸಂಘ" ಎಂಬ ಕನ್ನಡದ ಗುಡಿ 1890 ಜುಲೈ 20 ರಂದು ಧಾರವಾಡದಲ್ಲಿ ಅಸ್ತಿತ್ವಕ್ಕೆ ಬಂದಿತು. ಸಂಘವು 1917ರಲ್ಲಿ ಕರ್ನಾಟಕ ಏಕೀಕರಣ ಗೊತ್ತುವಳಿಯನ್ನು ಪಾಸುಮಾಡಿ, ಸತತ ಹೋರಾಟದ ಮೂಲಕ ಆ ಕನಸನ್ನು 1956ರಲ್ಲಿ ನನಸುಗೊಳಿಸಿತು.

ಕರ್ನಾಟಕ ಒಂದು ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ, ನಿಜ; ಆದರೆ ಕನ್ನಡಿಗರೆಲ್ಲರು ಭಾವನಾತ್ಮಕವಾಗಿ ಒಂದಾಗಲೇ ಇಲ್ಲ. ಸಾಹಿತ್ಯಕ ಮತ್ತು ಸಾಂಸ್ಕೃತಿವಾಗಿ ಸಾಕಷ್ಟು ವೈವಿಧ್ಯಗಳಿದ್ದರೂ ಸಹ ಏಕಭಾವ ಸೃಷ್ಟಿಯಾಗಿದೆ. ಪ್ರಾದೇಶಿಕ ಭಾಷಾ ಪ್ರಭೇದದ ನಡುವೆ ಏಕರೂಪ ಗ್ರಂಥಸ್ಥ ಭಾಷೆ ನಿರ್ಮಾಣವಾಗಿದೆ. ಆದರೆ, ಎಲ್ಲ ಭಾಗಗಳ ಸಾಹಿತಿಗಳಿಗೆ, ಕಲಾವಿದರಿಗೆ ಹಾಗೂ ಹೋರಾಟಗಾರರಿಗೆ ಸಮಾನ ಅವಕಾಶಗಳು ಹಾಗೂ ಅರ್ಹತೆಗೆ ತಕ್ಕ ಗೌರವ ಮತ್ತು ಪುರಸ್ಕಾರಗಳು ಲಭಿಸುತ್ತಿಲ್ಲ.

ಕನ್ನಡದ ಹಲವಾರು ಪ್ರದೇಶಗಳು ಏಕೀಕರಣದಿಂದ ಹೊರಗೇ ಉಳಿದವು. ಪ್ರಾದೇಶಿಕ ಅಸಮಾನತೆಯಿಂದಾಗಿ ಅಲ್ಲಲ್ಲಿ ಭಿನ್ನ ಧ್ವನಿಗಳು ಕೇಳಲಾರಂಭಿಸಿದವು. ಮತ್ತೊಂದೆಡೆ ಕನ್ನಡಕ್ಕೆ ಸಿಗಬೇಕಾದ ಸ್ಥಾನಮಾನ ಆಡಳಿತದಲ್ಲಾಗಲಿ, ಶಿಕ್ಷಣದಲ್ಲಾಗಲಿ ಸಿಗಲೇಯಿಲ್ಲ. ಅಂದಿನಕ್ಕಿಂತ ಇಂದು ಕನ್ನಡ ಸಂಕಷ್ಟಕ್ಕೆ ಸಿಕ್ಕಿದೆ.

ಸುಮಾರು 1912ರಲ್ಲಿ ಬಿ. ಎಂ. ಶ್ರೀ.ಯವರು ಧಾರವಾಡದ ವಿದ್ಯಾವರ್ಧಕ ಸಂಘಕ್ಕೆ ಬಂದಿದ್ದರು, ಅಲ್ಲಿ ತಮ್ಮ ಜೀವನದ ಮೊಟ್ಟ ಮೊದಲ ಸಾರ್ವಜನಿಕ ಭಾಷಣವನ್ನು 'ಕನ್ನಡ ತಲೆ ಎತ್ತುವ ಬಗೆ ಹೇಗೆ?' ಎಂಬ ವಿಷಯದ ಕುರಿತು ಮಾತನಾಡಿದ್ದರು. ಅದಾಗಿ ಇಂದಿಗೆ ಒಂಭತ್ತು ದಶಕಗಳೆ ಕಳೆದು ಹೋಗಿವೆ. ಆದರೆ ಇಂದಿಗೂ ನಾವು

ಕನ್ನಡ ತಲೆಎತ್ತುವ ಬಗೆ ಹೇಗೆ ಎಂದು ಮಾತನಾಡುತ್ತಲೇ ಇದ್ದೇವೆ. ಕನ್ನಡಿಗರು ಮೊದಲು ತಲೆಎತ್ತಬೇಕಾಗಿದೆ. 'ಸಾಯುವ ಸ್ಥಿತಿಗೆ ಬಂದು ತಲುಪಿರುವ ಭಾಷೆಯನ್ನು ಬದುಕಿಸುವ ಕೆಲಸ ಮಾಡಬೇಕಾಗಿದೆ' ಎಂದು ಡಾ. ಪಾಟೀಲ ಪುಟ್ಟಪ್ಪ ವ್ಯಥೆಪಡುತ್ತಿದ್ದಾರೆ.

ಕನ್ನಡ ಮಾತನಾಡುವವರೆಂದರೆ ಬಡವರು ಹಾಗೂ ಕೆಳವರ್ಗದ ಜನ. ಇಂಗ್ಲಿಷ್ ಮಾತನಾಡುವವರು ಸುಸಂಸ್ಕೃತ ಹಾಗೂ ಮೇಲ್ವರ್ಗದ ಜನ ಎಂಬ ಸಮೂಹ ಸನ್ನಿ ಆವರಿಸಿಕೊಂಡಿದೆ. ಬಡವರ ಗುಡಿಸಲುಗಳಿಂದ ಶ್ರೀಮಂತರ ಬಂಗಲೆಗಳ ಕಡೆಗೆ ಕನ್ನಡ ಪ್ರಯಾಣ ಮಾಡಬೇಕಾಗಿದೆ.

ನಮ್ಮ ಶಾಲೆಗಳಿಗೆ ಕನ್ನಡ ಬೋಧಿಸುವ ಶಿಕ್ಷಕರ ನೇಮಕಾತಿ ಸರಿಯಾದ ಸಮಯಕ್ಕೆ ನಡೆಯುತ್ತಿಲ್ಲ. ಪಕ್ಕದ ತಮಿಳುನಾಡಿನಲ್ಲಿ ಒಬ್ಬ ಶಿಕ್ಷಕನ ನಿವೃತ್ತಿಯ ದಿನವೇ ಮತ್ತೊಬ್ಬ ಶಿಕ್ಷಕನ ನೇಮಕವಾಗುತ್ತದೆ. ಅಲ್ಲಿ ಸಾಧ್ಯವಾಗುವದು ನಮ್ಮಲ್ಲಿ ಏಕೆ ಸಾಧ್ಯವಾಗುತ್ತಿಲ್ಲ? ಪ್ರಾಥಮಿಕ ಶಿಕ್ಷಣವನ್ನು ಸಬಲಗೊಳಿಸದೆ ಮೂಲೆಗೊಂದು-ಮುಂಗಾಟಿಗೊಂದು ವಿಶ್ವವಿದ್ಯಾಲಯಗಳನ್ನು ಸರಕಾರ ಸ್ಥಾಪಿಸುತ್ತಿದೆ. ವಿದೇಶಿ ವಿಶ್ವವಿದ್ಯಾಲಯಗಳಿಗೆ ರತ್ನಗಂಬಳಿ ಹಾಸಿ ಸ್ವಾಗತಿಸಲಾಗುತ್ತಿದೆ. ಇಂತಹ ವಿಶ್ವವಿದ್ಯಾಲಯಗಳಿಂದ ಕನ್ನಡದ ಅಸ್ತಿತ್ವಕ್ಕೆ ಎಂತಹ ಕಂಟಕ ಬರಬಹುದೆಂಬುದರ ಬಗ್ಗೆ ಯಾರೂ ಯೋಚನೆ ಮಾಡುತ್ತಿಲ್ಲ.

ಇನ್ನು ಗಡಿಭಾಗದ ಕನ್ನಡದ ಸ್ಥಿತಿಯನ್ನು ನೆನೆಸಿಕೊಂಡರೆ ಸಂಕಟವಾಗುತ್ತದೆ. ಇತ್ತೀಚೆಗೆ ನಾನು ಬೆಳಗಾವಿ ಜಿಲ್ಲೆಯ ಗಡಿಭಾಗದ ಖಾನಾಪುರ ತಾಲೂಕಿನ ಕುಂಬಾರ್ಡಾ ಎಂಬ ಊರಿಗೆ ಹೋಗಿದ್ದೆ. ಅಲ್ಲಿ ನಮ್ಮ ಕರ್ನಾಟಕ ಘನ ಸರಕಾರ ಸ್ಥಾಪಿಸಿದ ಮರಾಠಿ ಶಾಲೆಯನ್ನು ನೋಡಿದೆ. ಅದರೊಟ್ಟಿಗೆ ಕನ್ನಡ ಶಾಲೆಯೂ ಅಲ್ಲಿ ಇರಬಹುದೆಂದು ಊರಲ್ಲೆಲ್ಲ ಹುಡುಕಿದೆ. ಎಲ್ಲೂ ಕಾಣಲಿಲ್ಲ ! ಸರಕಾರವೇ ಖುದ್ದಾಗಿ ನಿಂತು ಕನ್ನಡವನ್ನು ಕೊಲ್ಲುತ್ತಿರುವಾಗ ಅದು ಉಳಿಯುವದಾದರೂ ಎಲ್ಲಿ!? ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು ಹಾಗೂ ಕೇರಳ ರಾಜ್ಯಗಳ ಗಡಿಗೆ ಹೊಂದಿಕೊಂಡ ಊರುಗಳಿಗೆ ಹೋದರೆ ಅಲ್ಲಿ ಕನ್ನಡಿಗರೇ ಪರಕೀಯರಾಗಿದ್ದಾರೆ. ಇತ್ತ ರಾಜ್ಯದ ರಾಜಧಾನಿ ಬೆಂಗಳೂರಿನಲ್ಲೇ ಕನ್ನಡ ಅನಾಥವಾಗುತ್ತಿರುವಾಗ ಕನ್ನಡವನ್ನು ಬೇರೆ ಯಾರು ಬಂದು ರಕ್ಷಿಸಬೇಕು?

ಒಂದುಕಾಲದಲ್ಲಿ ಅತ್ಯಂತ ಶ್ರೀಮಂತವಾಗಿದ್ದ ಸಂಸ್ಕೃತ ಭಾಷೆ ಇಂದು ಮರಣ ಶೈಯೆಯಲ್ಲಿ ನರಳುತ್ತಿದೆ. ದೇಶದ ಪ್ರಾಚೀನ ಮಹೋನ್ನತ ಕೃತಿಗಳೆಲ್ಲ ಸಂಸ್ಕೃತದಲ್ಲೇ ರಚನೆಯಾಗಿವೆ. ಆಸ್ಥಾನಿಕರ, ಪಂಡಿತರ ಆದರಣೆಗೆ ಒಳಗಾಗಿದ್ದ ಭಾಷೆ, ದೈವಭಾಷೆ ಎಂದು ಮನ್ನಣೆ ಪಡೆದಿತ್ತು. ಅಂತಹ ಭಾಷೆಗೆ ಒದಗಿದ ಗತಿ ಕನ್ನಡಕ್ಕೆ ಬಾರದೇ ಇರುತ್ತದೆಯೇ? ಮುಸ್ಲಿಮರು ಉರ್ದು ಶಾಲೆಗೆ, ಕ್ರಿಶ್ಚಿಯನ್ನರು ಇಂಗ್ಲಿಷ್ ಶಾಲೆಗೆ, ಬೌದ್ಧರು, ಜೈನರು ಹಿಂದಿ ಶಾಲೆಗಳಿಗೆ ಹೋದರೆ, ಕನ್ನಡ ಕಲಿಯುವವರಿಲ್ಲದೆ ಸಂಸ್ಕೃತ ಭಾಷೆಗೆ ಆದ ಗತಿ ಕನ್ನಡಕ್ಕೂ ಆಗುತ್ತದೆ.

ಇಂಗ್ಲಿಷ್ ಭಾಷೆ ಹುಟ್ಟುವದಕ್ಕಿಂತ 500ವರ್ಷಗಳಿಗಿಂತ ಮುಂಚೆ ಕನ್ನಡ ಹುಟ್ಟಿದೆ. ಕನ್ನಡದ ಮೊದಲನೆಯ ಗ್ರಂಥ 'ಕವಿರಾಜಮಾರ್ಗ' 9ನೇ ಶತಮಾನದಲ್ಲಿ ಬಂದರೆ, ಇಂಗ್ಲಿಷಿನ ಮೊದಲ ಗ್ರಂಥ ಚಾಸರ್‌ನ 'ಕೌಂಟರ್‌ಬೆರಿ ಟೈಲ್ಸ್' 14ನೇ ಶತಮಾನದಲ್ಲಿ ಬಂದಿದೆ. ಕ್ರಿ. ಪೂ. 3ನೇ ಶತಮಾನದಲ್ಲೇ ಗಟ್ಟಿಮುಟ್ಟಾಗಿ ಬೆಳೆದ ಕನ್ನಡ ಭಾಷೆಗಿಂತ ನಿನ್ನೆ ಮೊನ್ನೆ ಹುಟ್ಟಿದ ಇಂಗ್ಲಿಷ್ ಕನ್ನಡಕ್ಕೆ ಉರುಳು ಹಾಕುತ್ತಿದೆ.

ಜಗತ್ತಿನಲ್ಲಿ ಸುಮಾರು 7000 ಭಾಷೆಗಳಿವೆ. ಪ್ರತಿ 2 ವಾರಗಳಿಗೊಂದು ಭಾಷೆ ಅವಸಾನವಾಗುತ್ತಿದೆ ಎಂದು ಭಾಷಾ ಶಾಸ್ತ್ರಜ್ಞರು ಲೆಕ್ಕ ಹಾಕಿದ್ದಾರೆ. ಭಾರತಲ್ಲಿ ಜಗತ್ತಿನ ಶೇ.45 ರಷ್ಟು ಭಾಷೆಗಳಿವೆ. ಕರ್ನಾಟಕದಲ್ಲಿ ಸು.170 ಭಾಷೆಗಳಿವೆ. ಈ ಭಾಷೆ ಎಂಬುದು ಮನುಷ್ಯನ ಸಂವಹನದ ಸೌಕರ್ಯಕ್ಕಾಗಿ ಜನ್ಮ ತಳೆದಂತಹದ್ದು. ಅಂತಹ ಭಾಷೆ ಕಾಲಾನಂತರದಲ್ಲಿ ಕಣ್ಮರೆಯಾಗುತ್ತದೆ ಎಂದರೆ ಅದಕ್ಕೆ ನಿರ್ದಿಷ್ಟವಾದ ಕಾರಣಗಳು ಇರಲೇಬೇಕು.

ಹೀಗೆ ಅವಸಾನವಾಗುವುದಕ್ಕೆ ಹಲವಾರು ಕಾರಣಗಳಿರಬಹುದು. ಒಂದು ಅಂತಹ ಭಾಷೆಗಳು ದೈವವಾಣಿಯಿಂದ ಜನವಾಣಿಯಾಗದೆ(ಶಿಷ್ಟತೆಯಿಂದ ದೇಶಿಗೆ ಹೊರಳಿದೆ) ಇರುವದು. ಎರಡು, ಈ ಭಾಷೆಯ ಉಚ್ಚಾರಣೆ ಮತ್ತು ಬರವಣಿಗೆ ಸಾಮಾನ್ಯರ ಬಳಕೆಗೆ ಕ್ಲಿಷ್ಟವಾಗಿರುವುದು. ಮೂರನೆಯದು, ಆ ಭಾಷೆಯ ವ್ಯಾಪ್ತಿ ಸೀಮಿತವಾಗಿರುವುದು ಹಾಗೂ ಸಮೃದ್ಧ ಸಾಹಿತ್ಯ ಇಲ್ಲದೇ ಇರುವುದು ಮುಖ್ಯ ಕಾರಣವಾಗಿರಬೇಕು.

ಒಂದು ಭಾಷೆಯ ಅನುಕೂಲ ಮತ್ತು ಆ ಭಾಷೆಯ ಮೇಲೆ ಇರುವ ಅಭಿಮಾನಗಳು ಗಟ್ಟಿಯಾಗಿದ್ದಾಗ ಮಾತ್ರ ಆ ಭಾಷೆ ಬಹುಶೃತವಾಗಿ ಉಳಿಯ ಬಲ್ಲದು. ಕನ್ನಡ ಸಾಹಿತ್ಯ ರಚನೆಯಲ್ಲಿ ಮೊದಲಿನ ಬದ್ಧತೆ, ಶ್ರದ್ಧೆ, ಶ್ರಮ ಮತ್ತು ಶಕ್ತಿ ಇಂದು ಕಾಣುತ್ತಿಲ್ಲ. ಚಂಪು, ರಗಳೆ, ವಚನ, ಷಟ್ಪದಿ, ತ್ರಿಪದಿ, ಸಾಂಗತ್ಯ, ಗದ್ಯ, ನಾಟಕ, ಹರಟೆ, ಪ್ರಬಂಧ, ನಿಬಂಧ, ಕಥೆ, ಕವನ, ಕಾದಂಬರಿ ಹೀಗೆ ನಾನಾ ಪ್ರಕಾರಗಳಲ್ಲಿ ಅದೆಷ್ಟು ಸಾಹಿತ್ಯ ಸಂಪತ್ತನ್ನು ಕನ್ನಡ ಹೊಂದಿದೆ! ನಿಜವಾಗಲು ಅಚ್ಚರಿಯಾಗುತ್ತದೆ. ಆದರೆ ಮುಂದೆ ನವೋದಯ, ನವ್ಯ, ಪ್ರಗತಿಶೀಲ, ದಲಿತ-ಬಂಡಾಯ ಎಂಬ ಹೊಸ ರೂಪಗಳನ್ನು ಮೈದೋರುತ್ತ ಬಂದ ಸಾಹಿತ್ಯ ಪ್ರಕಾರ ಈಗ ಯಾವುದೇ ಗತಿಯಿಲ್ಲದೆ ಒಂದು ನಿರ್ವಾತಕ್ಕೆ ಬಂದು ನಿಂತಿದೆ. ಆರಂಭ ಕಾಲದಲ್ಲಿ ಶಿಷ್ಟ ಪರಂಪರೆಯಲ್ಲಿ ಸಾಹಿತ್ಯ ರಚನೆಯಾದರೆ ನಂತರ ಜಾನಪದ ಮತ್ತು ಪರಿವರ್ತನಶೀಲ ರೂಪದಲ್ಲಿ ಸಾಹಿತ್ಯ ರಚನೆಯಾಗುತ್ತ ಬಂದಿತು. ಆದರೆ ಪಂಪ-ರನ್ನ, ಶರಣ-ದಾಸ, ಹರಿಹರ-ರಾಘವಾಂಕ, ಕುಮಾರವ್ಯಾಸ-ಚಾಮರಸ... ಕುವೆಂಪು-ಬೇಂದ್ರೆ, ಮಾಸ್ತಿ-ಕಾರಂತ, ಕಣವಿ-ಜಿ.ಎಸ್.ಎಸ್, ಕಂಬಾರ-ತೇಜಸ್ವಿ ... ಹೀಗೆ ಶ್ರೇಷ್ಠ ಸಾಹಿತಿ ದಿಗ್ಗಜರ ಸಂತತಿ ಬೆಳೆಯದೆ ಇರುವದು ತುಂಬ ವಿಷಾದದ ಸಂಗತಿ.

ಗಂಭೀರ ಸಾಹಿತ್ಯ ರಚನೆಯಾಗದಿರುವುದಕ್ಕೆ ಇಂದಿನ ಆಧುನಿಕ ಜೀವನ ಶೈಲಿಯೇ ಬಹಳಷ್ಟು ಕಾರಣವಾಗಿದೆ. ಯಾರಿಗೂ ಸಮಯವಿಲ್ಲ, ಎಲ್ಲವೂ ಫಾಸ್ಟ್ ಫುಡ್ ಯುಗ ಹೀಗಾಗಿ ಲಘು ಸಾಹಿತ್ಯದ ರಚನೆಯ ಕಾಲ ಆರಂಭವಾಗಿದೆ. ಯಾರಿಗೂ ಗಂಭೀರ

(32ನೇ ಪುಟಕ್ಕೆ)

# ಮಾಧ್ಯಮಗಳು ಮತ್ತು ಹಿಂಸೆ

**ನರಸಿಂಹ ಗುಂಜಹಳ್ಳಿ**

**ಇಂದು ಮಾಧ್ಯಮಗಳಿಗೆ ಸಾಮಾಜಿಕ ಜವಾಬ್ದಾರಿ ಇಲ್ಲವಾಗಿದೆ. ಮಾಧ್ಯಮ ಸಂಸ್ಥೆಗಳು ದಿನೇ ದಿನೇ ಬೃಹತ್ ಕಾರ್ಪೊರೇಟ್ ಸಂಸ್ಥೆಗಳಾಗಿ ಬೆಳೆಯುತ್ತಿವೆ. ಮಾಧ್ಯಮಗಳ ಮಾಲಿಕರು ಪ್ರಭಾವಶಾಲಿಗಳು ಆರ್ಥಿಕವಾಗಿ ಶಕ್ತಿಯುಳ್ಳವರು ಮತ್ತು ರಾಜಕೀಯ ವಲಯಕ್ಕೆ ಬಹಳ ಹತ್ತಿರವಾಗಿರುವವರೂ ಆಗಿರುತ್ತಾರೆ.**

ಹಿಂಸೆ ಎಂದರೆ ಯಾವುದೇ ವ್ಯಕ್ತಿಗೆ ಒಂದು ವಸ್ತುವಿನಿಂದ ತಿವಿದಾಗ, ಬಡಿದಾಗ, ಗಾಯಗೊಳಿಸಿದಾಗ ರಕ್ತ ಬಂದರೆ ಅದನ್ನು ನಾವು ಹಿಂಸೆ ಎಂದು ಕರೆಯುತ್ತೇವೆ. ಒಬ್ಬ ವೈದ್ಯ ರೋಗಿಗೆ ಬಹಳ ತೀವ್ರತರವಾದ ರೋಗಬಂದಾಗ ಕತ್ತರಿ, ಬ್ಲೇಡ್ ಇನ್ನಿತರ ವಸ್ತುಗಳಿಂದ ರೋಗಿಯ ದೇಹವನ್ನು ರಕ್ತಬರುವ ಹಾಗೆ ಗಾಯಗೊಳಿಸಿ ಚಿಕಿತ್ಸೆ ಮಾಡುತ್ತಾನೆ. ಇದು ಕೂಡ ಒಂದು ರೀತಿಯ ಹಿಂಸೆಯೇ. ಆದರೆ ಮೊದಲು ನಾನು ಹೇಳಿದ ವ್ಯಕ್ತಿಯ ಹಿಂಸೆ ಒಬ್ಬ ವ್ಯಕ್ತಿಯ ಪ್ರಾಣವನ್ನು ತೇಗೆಯಬೇಕು ಎಂಬ ಉದ್ದೇಶ ಇದ್ದರೆ, ಒಬ್ಬ ರೋಗಿಯ ಪ್ರಾಣವನ್ನು ಉಳಿಸಬೇಕೆಂಬ ಉದ್ದೇಶ ವೈದ್ಯರಿಗೆ ಇರುತ್ತದೆ. ಹಾಗಾಗಿ ನಮಗೆ ಒಬ್ಬ ಡಾಕ್ಟರ್ ತರಹ ಹಿಂಸೆ ಬೇಕೇ ಹೊರತು ನಾನು ಮೊದಲು ಹೇಳಿದ ಒಬ್ಬ ವ್ಯಕ್ತಿಯ ತರಹ ಹಿಂಸೆ ಬೇಡ. ಹಾಗೆಯೇ ಮಾಧ್ಯಮಗಳಲ್ಲಿ ಹಿಂಸಾಪ್ರೇರಿತ ದೃಶ್ಯಗಳು ಪ್ರಸಾರವಾದರೂ ಕೂಡ ಆ ದೃಶ್ಯಗಳು ಸಮಾಜಕ್ಕೆ ಉಪಯುಕ್ತವಾಗಿರಬೇಕು. ಆ ಹಿಂಸಾಪ್ರೇರಿತ ದೃಶ್ಯಗಳು ಸಮಾಜದ ಮೇಲೆ ಯಾವುದೇ ತರಹವಾದ ಕೆಟ್ಟ ಪರಿಣಾಮಗಳನ್ನು ಬೀರಬಾರದು.

ಇಂದು ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿರುವ ಹಿಂಸೆಯ ರಂಜಕ ವರದಿಗಳು ಪತ್ರಿಕಾ ಮಾಧ್ಯಮದಲ್ಲಿ ಕಂಡು ಬಂದರೂ ಸಮಾಜದ ಮೇಲೆ ಅದು ಬಹಳ ಗಂಭೀರವಾದ ಪರಿಣಾಮ ಬೀರಿದಂತೆ ಕಂಡುಬರುವುದಿಲ್ಲ. ಆದರೆ ಅದೇ ಹಿಂಸೆಯ ಬಗ್ಗೆ ರಂಜಕ ವರದಿಗಳು, ಹಿಂಸೆಯ ದೃಶ್ಯಾವಳಿಗಳು ಚಲನಚಿತ್ರ, ಟಿ.ವಿ.ಗಳಲ್ಲಿ ಪ್ರಸಾರವಾದರೆ, ಆ ಹಿಂಸಾ ಪ್ರವೃತ್ತಿಗಳು ಜನರ ಮೇಲೆ ಬಹಳ ಗಂಭೀರವಾದ ಪರಿಣಾಮಗಳನ್ನು ಬೀರುತ್ತವೆ. ಮಾಧ್ಯಮಗಳು ಹಿಂಸೆಗೆ ಪ್ರಚೋದನೆ ನೀಡುತ್ತಿವೆ ಎಂಬ ಬಗ್ಗೆ ಹಲವು ದಶಕಗಳಿಂದ ಚರ್ಚೆ ನಡೆಯುತ್ತಲೆ ಇದೆ. ಅಪಾರಾಧ ಹಿಂಸೆ ಮತ್ತು ಸೆಕ್ಸ್ ಪತ್ರಿಕೆಗಳಿಗೆ, ಚಲನಚಿತ್ರಗಳಿಗೆ, ದೂರದರ್ಶನಗಳಿಗೆ ಬಹಳ ಕಾಲದಿಂದಲೂ ಜನರನ್ನು ಆಕರ್ಷಿಸುವ ಸುದ್ದಿಗಳಾಗಿವೆ. ಇವುಗಳನ್ನು ಪ್ರಸಾರ ಮಾಡುವುದರಿಂದ ನಮ್ಮ ಖ. ಖ. ಕ ಜಾಸ್ತಿ ಆಗುತ್ತದೆ. ಎಂಬ ಉದ್ದೇಶದಿಂದ ಟಿ.ವಿ.ಗಳು, ನಮ್ಮ ಪತ್ರಿಕೆ ಓದುಗರ ಸಂಖ್ಯೆ ಜಾಸ್ತಿ ಆಗುತ್ತದೆ ಎಂಬ ಭ್ರಮೆಯಿಂದ ಪತ್ರಿಕೋದ್ಯಮದ ಮಾಲಿಕರು ಹಾಗೂ ಇವುಗಳಿಂದ ನಮ್ಮ ಚಲನಚಿತ್ರಗಳು 100 ದಿನಗಳು ಓಡುತ್ತವೆ ಎಂಬ ಭಾವನೆಯಿಂದ ಚಲನಚಿತ್ರ ನಿರ್ಮಾಪಕರು, ನಿರ್ದೇಶಕರು ಈ ತಂತ್ರಗಳಿಂದ ಅಪರಾಧ, ಹಿಂಸೆ ಮತ್ತು ಸೆಕ್ಸ್ ದೃಶ್ಯಗಳಿಗೆ ಒತ್ತುಕೊಟ್ಟು ಒಂದು ಅನಾರೋಗ್ಯಕರ ಸಮಾಜ ನಿರ್ಮಾಣ ಮಾಡುತ್ತಿದ್ದಾರೆ. ಒಟ್ಟಾರೆ ಇಂದು ಮಾಧ್ಯಮಗಳಲ್ಲಿ ಈ ವಿಷಯಗಳನ್ನು ಕ್ರೂರವಾಗಿ ನಿರೂಪಿಸಿ ವೈಭವೀಕರಿಸಲಾಗುತ್ತಿದೆ. ಚಲನಚಿತ್ರಗಳಲ್ಲಿ ಹಿಂಸೆ, ಸೆಕ್ಸ್, ಅಪರಾಧ ವಿಷಯಗಳನ್ನು ಸೆನ್ಸಾರ್‌ಗೆ ಒಳಪಡಿಸಿ ಅದನ್ನು ಕಡಿಮೆ ಮಾಡುವ ಅಧಿಕಾರ ಸೆನ್ಸಾರ್ ಮಂಡಳಿಗೆ ಇದೆ. ಆದರೂ ಕೂಡ ಚಲನಚಿತ್ರಗಳಲ್ಲಿ ಬಹಳ ಹೆಚ್ಚಾಗಿ ಇವುಗಳೇ ಕಂಡುಬರುತ್ತವೆ. ದುರದೃಷ್ಟ ಎಂದರೆ ಮೇಲಿನ ಈ ಮೂರು ಅಂಶಗಳು ಚಲನಚಿತ್ರಗಳಲ್ಲಿ ಇಲ್ಲವೆಂದರೆ ಆ ಚಲನಚಿತ್ರ ಬಹಳ ದಿನ ಓಡುವುದಿಲ್ಲ. ಅಂದರೆ ಇಂದು ಸಮಾಜದಲ್ಲಿ ಜನರು ಹಿಂಸೆಯ ಬಗ್ಗೆ ಅಷ್ಟು ಒಲವು ಹೊಂದಿದ್ದಾರೆ ಎಂದು ಅನಿಸುತ್ತದೆ ಮತ್ತು ಹಿಂಸೆ ಬಗ್ಗೆ ಒಲವು ಹೊಂದಲು ಮಾಧ್ಯಮಗಳೇ ಕಾರಣ ಎಂದು ಹೇಳಿದರೆ ತಪ್ಪಾಗುವುದಿಲ್ಲ.

ಟಿ.ವಿ.ಗಳಲ್ಲಿ ಪ್ರಸಾರ ಮಾಡುವ ಹಿಂಸಾತ್ಮಕ ಕಾರ್ಯಕ್ರಮಗಳಿಗೆ ಯಾವುದೇ ನಿರ್ಬಂದ ಇಲ್ಲ. ಟಿ.ವಿ. ವಾಹಿನಿಗಳು ದಿನದ ಇಪ್ಪತ್ತನಾಲ್ಕು ಗಂಟೆಗಳೂ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವುದರಿಂದ ಅವುಗಳನ್ನು ಸೆನ್ಸಾರ್‌ಗೆ ಒಳಪಡಿಸುವುದು ಬಹಳ ಕಷ್ಟ ಆದುದರಿಂದ ಇಂದು ಟೆಲಿವಿಷನ್‌ಗಳಲ್ಲಿ ಬಹಳಷ್ಟು ಹಿಂಸೆ ಪೂರಿತವಾದ ಕಾರ್ಯಕ್ರಮಗಳು ಯಾವುದೇ ನಿರ್ಬಂಧ ಇಲ್ಲದೆ ನಡೆಯುತ್ತವೆ. ಜನರು ಚಲನಚಿತ್ರ ಮತ್ತು ಪತ್ರಿಕೆಗಳನ್ನು ನೋಡುವುದು ಬಹಳ ವಿರಳ. ಆದುದರಿಂದ ಜನ ಹೆಚ್ಚಾಗಿ ಟೆಲಿವಿಷನ್‌ಗಳನ್ನೇ ನೋಡುವುದರಿಂದ ಇದರಲ್ಲಿ ಪ್ರಸಾರವಾಗುತ್ತಿರುವ ಹಿಂಸಾತ್ಮಕ ಕಾರ್ಯಕ್ರಮಗಳು ಜನರ ಮೇಲೆ ಬಹಳ ಪ್ರಭಾವ ಬೀರುತ್ತವೆ. ಮಾಧ್ಯಮಗಳು ಮತ್ತು ಹಿಂಸೆ ಕುರಿತಂತೆ ಹಲವಾರು ಸಿದ್ಧಾಂತಗಳು ಟೆಲಿವಿಷನ್ ಮಾಧ್ಯಮವನ್ನೇ ಕೇಂದ್ರವಾಗಿಟ್ಟುಕೊಂಡಿವೆ. ಅದರಲ್ಲಿ ಪ್ರಮುಖವಾಗಿ ಈ ಕೆಳಗಿನ ಸಿದ್ಧಾಂತಗಳು ಹೀಗಿವೆ.

1, **ಪ್ರಚೋದನೆ:–** ಈ ಸಿದ್ಧಾಂತ ಪ್ರತಿಪಾದಕರಾದ ಪಿ.ಹೆಚ್. ಟಾನ್‌ರಾಮ್ ಪ್ರಕಾರ ಟಿ.ವಿ ನೋಡುವುದರಿಂದ ಅಕ್ರಮಣಕಾರಿ ಪ್ರವೃತ್ತಿ ಹೆಚ್ಚಾಗುತ್ತಿದೆ. ಏಕೆಂದರೆ ಹಿಂಸೆ ಉದ್ವೇಗವನ್ನು ಹೆಚ್ಚಿಸುತ್ತದೆ. ಟೆಲಿವಿಷನ್ ಮತ್ತು ಆಕ್ರಮಣ ಕುರಿತು ಪ್ರಯೋಗಗಳು ತೋರಿಸಿರುವಂತೆ ಆಕ್ರಮಣ ಸರಿ ಎಂದು ಬಿಂಬಿತವಾದಾಗ ಅದು ನಿಜ ಘಟನೆಗಳಲ್ಲಿ ಬಳಕೆ ಆಗಬಹುದು. ಟೆಲಿವಿಷನ್‌ಗಳಲ್ಲಿ ಬಿತ್ತರವಾಗುತ್ತಿರುವ ಹಿಂಸೆ, ಆಕ್ರಮಣಕಾರಿ ವರ್ತನೆಗಳು ಅಪರಾಧ ಮನೋಭಾವ ಬೆಳೆಸಿಕೊಳ್ಳಲು ಮತ್ತೊಂದು ರೀತಿಯಲ್ಲಿ ಪ್ರಚೋದನೆ ನೀಡಬಹುದು.

2, **ಸಾಮಾಜಿಕ ಕಲಿಕೆ:–** ಅಲ್ಬರ್ಟ್ ಬಂಡೂರು ಸಾಮಾಜಿಕ ಕಲಿಕೆಯ ಪ್ರಮುಖ ಪ್ರತಿಪಾದಕ. ಈತನ ಪ್ರಮುಖ ವಾದವೆಂದರೆ ವರ್ತನೆ ಬೆರೆಯುವುದರಿಂದ ನೋಡಿ ಕಲಿತದ್ದು. ಅಂದರೆ ಜನರು ಮತ್ತು ಮಕ್ಕಳು ಟಿ.ವಿ. ನಿರೂಪಣೆಗಳನ್ನು ಮತ್ತು ವ್ಯಕ್ತಿಯ ಕ್ರಿಯೆಗಳನ್ನು ವೀಕ್ಷಿಸುವುದರಿಂದ ಕಲಿಯುತ್ತಾರೆಂಬುದು. ಅಂದರೆ ಟಿ.ವಿ.ಗಳಲ್ಲಿ ನಿರೂಪಣೆ ಮಾಡುವ ಕಾರ್ಯಕ್ರಮಗಳಿಂದ ಹಾಗೂ ಅವರು ಮಾತನಾಡುವ ಭಾಷೆ, ಅವರ ಅನುಭವ, ವೇಷ ಭೂಷಣ, ಅವರ ನಿರೂಪಣೆ ಶೈಲಿ ಮತ್ತು ಪರಿಸರ ಎರಡರಿಂದಲೂ ಜನರು ಮಕ್ಕಳು ತಮ್ಮ ವರ್ತನೆಗಳನ್ನು ಕಲಿಯುತ್ತಾರೆ.

3. **ಪ್ರತಿಬಂಧವಿಲ್ಲದಿರುವಿಕೆ (ಡಿಸ್‌ಇನ್ಹಿಬಿಷನ್):–** ಟಿ.ವಿ. ಗಳಲ್ಲಿ ಪ್ರಸಾರವಾಗುತ್ತಿರುವ ಹಿಂಸೆ ಕೆಲವು ಸಂದರ್ಭಗಳಲ್ಲಿ ಜನರಲ್ಲಿ ಆಕ್ರಮಣ ಪ್ರವೃತ್ತಿ ಹೆಚ್ಚಾಗಲು ಕಾರಣವಾಗುತ್ತದೆ ಏಕೆಂದರೆ ಅದು ಅಂತಹ ವರ್ತನೆಯ ವಿರುದ್ಧವಿರುವ ಅಂದರೆ ಅಹಿಂಸಾವಾದಿಯನ್ನು ಪ್ರತಿಬಂಧ ಶಕ್ತಿಯನ್ನು ಕುಂದಿಸುತ್ತದೆ. ಟೆಲಿವಿಷನ್ ನಿರೂಪಣೆಯಲ್ಲಿ ಹಿಂಸೆಗೆ ಉತ್ತೇಜಕ ಪ್ರತಿಫಲ ಅಥವಾ ಬಹುಮಾನ ದೊರಕಿದರೆ ವಿಕ್ಷಕರು ಯಾವುದೇ ಹಿಂಜರಿಕೆಯಿಲ್ಲದೆ ಅಂತಹ ಹಿಂಸಾತ್ಮಕ ಕ್ರಿಯೆಯಲ್ಲಿ ತೊಡಗುವ ಸಾಧ್ಯತೆಯಿರುತ್ತದೆ.

4, **ಮಕ್ಕಳು ಮತ್ತು ಟಿ.ವಿ ಹಿಂಸೆ:–** ಪೋಷಕರು, ಶಿಕ್ಷಕರು ಮತ್ತು ಮಾನಸಿಕ ಆರೋಗ್ಯ ಪರಿಣಿತರು ಟಿ.ವಿ. ಮಾಧ್ಯಮದಲ್ಲಿ ಪ್ರಸಾರವಾಗುವ ಹಿಂಸಾತ್ಮಕ ದೃಶ್ಯಗಳಿಂದ ಮಕ್ಕಳ ಮೇಲೆ ಉಂಟಾಗುವ ಪರಿಣಾಮಗಳ ಬಗ್ಗೆ ಬಹಳ ಆತಂಕಗೊಂಡಿದ್ದಾರೆ. ಟಿ.ವಿ. ನೋಡುವುದರಿಂದ ಮಕ್ಕಳ ಮೇಲೆ ಆಗುವ ಪರಿಣಾಮಗಳ ಕುರಿತು ಪ್ರಪಂಚದಲ್ಲಿ

ಬಹಳಷ್ಟು ಅಧ್ಯಯನಗಳು ನಡೆದಿವೆ. ಒಬ್ಬ ಅಧ್ಯಯನಕಾರ 1982ರಲ್ಲಿ ರಾಷ್ಟ್ರೀಯ ಮಾನಸಿಕ ಆರೋಗ್ಯ ಸಂಸ್ಥೆಯ ವರದಿಗಳು ಟೆಲಿವಿಷನ್‌ನಲ್ಲಿ ಹಿಂಸೆಯನ್ನು ನೋಡುವುದರಿಂದ ಮಕ್ಕಳ ಮೇಲೆ ಆಗುವ ಪ್ರಮುಖ ಪರಿಣಾಮಗಳನ್ನು ಗುರುತಿಸಿದೆ.

1. ಮಕ್ಕಳಲ್ಲಿ ನೋವು ಮತ್ತು ಇತರರ ಕಷ್ಟಗಳ ಬಗ್ಗೆ ಸಂವೇದನಶೀಲತೆ ಕಡಿಮೆ ಆಗಬಹುದು.
2. ತಮ್ಮ ಸುತ್ತಲ ಪರಿಸರ ಮತ್ತು ಪ್ರಪಂಚದ ಬಗ್ಗೆ ಹೆಚ್ಚು ಭಯ ಬೆಳೆಸಿಕೊಳ್ಳಬಹುದು.
3. ಇತರರೊಡನೆ ಹೆಚ್ಚು ಆಕ್ರಮಣಕಾರಿ ಅಥವಾ ಅಪಾಯಕಾರಿಯಾಗಿ ವರ್ತಿಸಬಹುದು.

ಮಕ್ಕಳಲ್ಲಿ ಟೆಲಿವಿಷನ್ ನೋಡುವುದರಿಂದ ಮಾತ್ರ ಅಲ್ಲದೇ ವಿಡಿಯೋಗೇಮ್ಸ್ ಆಡುವುದರಿಂದ ಆಕ್ರಮಣಕಾರಿ ವರ್ತನೆಗೆ ಕಾರಣವಾಗುತ್ತದೆ. ಈ ವಿಡಿಯೋ ಮಕ್ಕಳಿಗೆ ಟಿ.ವಿ. ಗಿಂತಲೂ ಬಹಳ ಅಪಾಯಕಾರಿಯಾದದ್ದು. ವಿಡಿಯೋಗೇಮ್ಸ್‌ಗಳಲ್ಲಿ ಹಿಂಸೆಯೇ ಪ್ರಧಾನವಾಗಿರುತ್ತದೆ. ಹೊಡೆಯುವುದು, ಬಡಿಯುವುದು, ವಿನಾಶಕಾರಿ ಆಯುಧಗಳನ್ನು ಬಳಸುವುದು, ಕೊಲ್ಲುವುದು ಮತ್ತು ಅದರಿಂದ ಹೆಚ್ಚು ಅಂಕಗಳನ್ನು ಪಡೆಯುವುದು ಸ್ಪರ್ಧೆಯಲ್ಲಿ ಗೆಲ್ಲುವುದು ಹಾಗೂ ಮೋಟಾರ್ ಸ್ಪರ್ಧೆಯಲ್ಲಿ ತನ್ನ ಜೊತೆಗೆ ಇರುವ ಪ್ರತಿಸ್ಪರ್ಧಿಯನ್ನು ಹೊಡೆಯುವುದು, ಆತನ ವಾಹನಕ್ಕೆ ಹೊಡೆಯುವುದು ಇಂತಹ ಹಲವಾರು ಕ್ರಿಯೆಗಳು ವಿಡಿಯೋಗೇಮ್ಸ್ ಯಶಸ್ವಿಗೆ ಕಾರಣವಾಗುತ್ತದೆ. ಈ ರೀತಿಯ ಹಿಂಸೆ ಸಹಜ ಮತ್ತು ಅಗತ್ಯ ಎನ್ನುವ ಭಾವನೆ ಮಕ್ಕಳಲ್ಲಿ ಬರುವುದರಿಂದ ಉತ್ತೇಜನ ಸಿಗುತ್ತದೆ.

**5. ಶಿಕ್ಷಣ ಮತ್ತು ಮಾಧ್ಯಮ ಹಿಂಸೆ:-** ಮಕ್ಕಳಿಗೆ ವಿದ್ಯಾರ್ಥಿಗಳಿಗೆ, ಜನರಿಗೆ ಪ್ರಭುತ್ವ ಕೂಡ ಕೆಲವು ಪಠ್ಯ ಪುಸ್ತಕಗಳಲ್ಲಿ ಹಿಂಸೆಗೆ ಸಂಬಂಧಿಸಿದ ಪಾಠಗಳ ಮೂಲಕ ಹಿಂಸೆಯನ್ನು ಬಿತ್ತರಿಸುತ್ತವೆ ಹಾಗೂ ಸಂಗೀತಾ-Comic Booksಗಳ ಮೂಲಕ ಜನರಲ್ಲಿ ಹಿಂಸೆ ಪ್ರವೃತ್ತಿ ಬೆಳೆಯುತ್ತದೆ. ಹಲವಾರು ಲೇಖಕರು ಬರೆದಿರುವ ಕಾದಂಬರಿ, ನಾಟಕ, ರೂಪಕ, ಕಥೆ, ಕವನ, ಚುಟುಕಗಳು, ಸಿನಿಮಾ, ಇವುಗಳಲ್ಲಿ ಕೆಲವು ಹಿಂಸೆ, ಅಪರಾಧ ಹಾಗೂ ಸೆಕ್ಸ್ ವಿಷಯಗಳಿಗೆ ಸಂಬಂಧಿಸಿದ ವಿಷಯಗಳಿದ್ದರೆ ಸಮಾಜದ ಮೇಲೆ ಅದು ಬಹಳ ಪರಿಣಾಮ ಬೀರುತ್ತದೆ. ಶಿಕ್ಷಣದ ಪಠ್ಯಪುಸ್ತಕಗಳಲ್ಲಿ ಕೆಲವು ತಾರತಮ್ಯ ವಿಷಯಗಳು, ಮೇಲು-ಕೀಳು ಭಾವನೆಗಳು ಬಡವ-ಶ್ರೀಮಂತ, ಜಾತಿ-ಧರ್ಮ, ಜನಾಂಗಿಯ, ಪ್ರಾದೇಶಿಕ, ಅಸ್ಮಿತೆ ವಿಷಯಗಳ ಬಗ್ಗೆ ಜನರಲ್ಲಿ ತಪ್ಪು ಕಲ್ಪನೆಯ ಶಿಕ್ಷಣ ಕೊಡಿಸಿದರೆ ಅದು ಮುಂದೆ ವಿದ್ಯಾರ್ಥಿಗಳಲ್ಲಿ ಅಸಹಾಯಕತೆ ಬೆಳೆದು ಅದು ಹಿಂಸೆರೂಪ ಪಡೆದುಕೊಳ್ಳುವ ಸಾಧ್ಯತೆ ಹೆಚ್ಚು.

**6. ಮಾಧ್ಯಮಗಳ ಹಿಂಸೆ ಮತ್ತು ಅನಾಗರಿಕತೆ:-**

ಅನಾಗರಿಕತೆ ಎಂದರೆ ಮನುಷ್ಯ ಬದುಕುವ ಜೀವನ ಪದ್ಧತಿಗಳಿಂದ. ಒಂದು ಸಂಪ್ರದಾಯದಿಂದ, ಶಿಕ್ಷಣದಿಂದ ದೂರವಿರುವ ಸಮಾಜಕ್ಕೆ ಅನಾಗರಿಕತೆ ಅಥವಾ ಅನಾಗರಿಕ ಸಮಾಜ ಎಂದು ಕರೆಯುತ್ತೇವೆ. ಅನಾಗರಿಕತೆಯಿಂದ ಬದುಕುತ್ತಿರುವ ಜನರಿಗೆ ತಮಗೆ ನಾಗರಿಕ ಸಮಾಜದಿಂದ ಆಗುತ್ತಿರುವ ದೌರ್ಜನ್ಯ, ಮೋಸ, ಇನ್ನಿತರ ವಿಷಯಗಳಿಂದ ಬಹಳ ಅಸಮಾಧಾನಗೊಂಡಿರುತ್ತಾರೆ.

ಈ ಸಮಾಜ ನಾಗರಿಕ ಸಮಾಜದಿಂದ ಬಹಳ ಅಂತರವನ್ನು ಕಾಪಾಡಿಕೊಂಡು ಬಂದಿರುತ್ತದೆ. ಮತ್ತು ವೈಜ್ಞಾನಿಕವಾಗಿ ಬಹಳ ದೂರವಿರುತ್ತದೆ. ಇಂತ ಸಂದರ್ಭದಲ್ಲಿ ಮಾಧ್ಯಮಗಳಲ್ಲಿ ಅಂದರೆ ಧಾರಾವಾಹಿ, ಚಲನಚಿತ್ರ, ಪತ್ರಿಕಾವರದಿಗಳು ಸುದ್ದಿಪ್ರಸಾರ ಜಾಹಿರಾತುಗಳಲ್ಲಿ ಹಿಂಸೆ, ಅಪರಾಧ ಸೆಕ್ಸ್‌ಗಳ ಬಗ್ಗೆ ಬಹಳ ಯಥೇಚ್ಚವಾಗಿ ಬಿತ್ತರಗೊಂಡರೆ ಅದು ಈ ಅನಾಗರಿಕ ಸಮಾಜದ ಮೇಲೆ ಬಹಳ ಗಂಭೀರವಾದ ಪರಿಣಾಮಗಳನ್ನು ಉಂಟುಮಾಡುತ್ತವೆ. ಮತ್ತು ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿರುವ ಹಿಂಸಾಕೃತ್ಯಗಳಲ್ಲಿ ತೊಡಗಿರುವ ವ್ಯಕ್ತಿಗಳನ್ನು Rolemodel (ಮಾದರಿಯ ವ್ಯಕ್ತಿ)ಯನ್ನಾಗಿ ಸ್ವೀಕರಿಸಿ ಈ ಅನಾಗಾರಿಕ ಸಮಾಜ ತನ್ನ ನಿಜ ಜೀವನದಲ್ಲಿ ಕೂಡ ಹಾಗೆ ಮಾಡಲು ಹೊರಡುತ್ತಾರೆ. ಇದರಿಂದ ಸಮಾಜಕ್ಕೆ ನಾಗರಿಕ ಸಮಾಜದ ಮೇಲೆ ಬಹಳ ಗಂಭೀರವಾದ ಪರಿಣಾಮವನ್ನು ಉಂಟುಮಾಡುತ್ತದೆ. ಕೆಲವೊಮ್ಮೆ ಮಾಧ್ಯಮಗಳಲ್ಲಿ ಬಿತ್ತರವಾಗುತ್ತಿರುವ ಹಿಂಸೆ-ಅಪರಾದ-ಸೆಕ್ಸ್ ವಿಷಯಗಳಿಂದ ಈ ಅನಾಗರಿಕ ಸಮಾಜದ ವ್ಯಕ್ತಿಗಳು ತಮ್ಮ ಜೀವನವನ್ನು ಹಾಳುಮಾಡಿಕೊಂಡಿರುವ ಉದಾಹರಣೆಗಳು ಬಹಳಷ್ಟು ಸಿಗುತ್ತವೆ.

**7. ಮಾಧ್ಯಮದ ಹಿಂಸೆ ಮತ್ತು ಅಸಮಾನತೆಯ ಸಮಾಜ:-** ಅಸಮಾನತೆಯ ಸಮಾಜದ ಮೇಲೆ ಮಾಧ್ಯಮಗಳಲ್ಲಿ ಅಂದರೆ ಧಾರಾವಾಹಿ, ನ್ಯೂಸ್, ಚಲನಚಿತ್ರ, ಪತ್ರಿಕಾ ವರದಿಗಳಲ್ಲಿ ಬಿತ್ತರವಾಗುತ್ತಿರುವ ಹಿಂಸೆಯ ದೃಶ್ಯಾವಳಿಗಳು ಈ ರಾಜಕೀಯ ಸಾಮಾಜಿಕ-ಆರ್ಥಿಕವಾಗಿ-ಸಾಂಸ್ಕೃತಿಕವಾಗಿ ಅಸಮಾನತೆಯಿಂದ ನರಳುತ್ತಿರುವ ಸಮಾಜದ ಮೇಲೆ ಬಹಳ ಗಂಭೀರವಾದ ಪರಿಣಾಮ ಬೀರುತ್ತವೆ. ಈ ಅಸಮಾನತೆಯಿಂದ ಕೂಡಿರುವ ಸಮಾಜ ಬಹಳ ತಾರತಮ್ಯ-ಮೇಲು-ಕೀಳು ಬಡವ-ಶ್ರೀಮಂತ, ಜಾತಿ-ವರ್ಗ ಇನ್ನಿತರ ವಿಷಯಗಳಿಂದ ಮಾನಸಿಕವಾಗಿ ಕೂಡ ಬಹಳ ನರಳುತ್ತಿರುತ್ತದೆ. ಮತ್ತು ನಿರುದ್ಯೋಗ ಸಮಸ್ಯೆ ಹಸಿವು ಕಾಡುತ್ತಿರುತ್ತದೆ. ಒಟ್ಟಾರೆ ಶ್ರೀಮಂತರ ಬಗ್ಗೆ, ಪ್ರಭುತ್ವದ ಬಗ್ಗೆ, ಈ ವ್ಯವಸ್ಥೆಯ ಬಗ್ಗ ಹತಾಶೆಯಿಂದ ಆಕ್ರೋಶಗೊಂಡಿರುತ್ತಾರೆ. ಇಂತಹ ಸಂದರ್ಭಗಳಲ್ಲಿ ಅಸಮಾನತೆಯ ಸಮಾಜ ತನ್ನ ಆಕ್ರೋಶವನ್ನು ಹೊರಹಾಕಲು ಅವಕಾಶಕ್ಕಾಗಿ ಕಾಯುತ್ತಿರುತ್ತವೆ.

ಇಂತಹ ಸಂದರ್ಭದಲ್ಲಿ ಸ್ವಲ್ಪ ನೆಪ ಸಿಕ್ಕರೆ ಸಾಕು ಬಹಳ ಅನಾಹುತವಾಗುವ ಅಪಾಯವಿರುತ್ತದೆ. ಇತ್ತೀಚಿಗೆ ಇದಕ್ಕೆ ಉದಾಹರಣೆ ಎಂದರೆ ನಾರ್ವೇನ್, ಲಂಡನ್. ಕೊಲಂಬಿಯ, ಸಿರಿಯ, ಪ್ಯಾಲೆಸ್ಟೇನ್ ಕಾಶ್ಮೀರ, ಜಾರ್ಖಂಡಗಳಲ್ಲಿ ನಾವು ಕಾಣಬಹುದು. ಮತ್ತು ಈ ಅಸಮಾನತೆಯಿಂದ ಕೂಡಿರುವ ಜನತೆಯೇ ಇತ್ತೀಚಿಗೆ ಮಂಗಳೂರಿನಲ್ಲಿ ನಡೆದಿರುವ ಪಬ್‌ದಾಳಿ. ಚರ್ಚ್‌ದಾಳಿ. ಹಾಗೂ ಗುಜರಾತ್ ನರಮೇಧದಲ್ಲಿ ಭಾಗವಹಿಸಿರುವವರು ದಲಿತರು ಮತ್ತು ಆದಿವಾಸಿಗಳು. ಏಕೆಂದರೆ ಈ ಜನತೆ ನಿರುದ್ಯೋಗ ಸಮಸ್ಯೆ ಸಾಮಾಜಿಕ-ಆರ್ಥಿಕ, ರಾಜಕೀಯ, ಸಾಂಸ್ಕೃತಿಕವಾಗಿ ಶೋಷಣೆಗೆ ಒಳಪಟ್ಟಿರುವ ಈ ಜನತೆ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸುತ್ತಾರೆ ಮತ್ತು ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿರುವ ಹಿಂಸೆಯು ಈ ಜನರ ಮೇಲೆ ಗಾಢವಾಗಿ ಪರಿಣಾಮಬೀರುತ್ತದೆ. ಏಕೆಂದರೆ ಹಿಂಸೆಯ ದೃಶ್ಯಾವಳಿಗಳನ್ನು ನೋಡಿದ ಜನ ಇವರು ಹಿಂಸೆಯ ಪ್ರವೃತ್ತಿಗೆ ಇಳಿಯುತ್ತಾರೆ. ಏಕೆಂದರೆ ಹಿಂಸೆಯೂ-ಹಿಂಸೆಯನ್ನು ಸೃಷ್ಟಿಮಾಡುತ್ತದೆ.

1991ರಿಂದ ಜಾಗತಿಕರಣ ಪ್ರಭಾವದಿಂದ ಮಾಧ್ಯಮಗಳು ಸುದ್ದಿಯಿಂದ ಮನರಂಜನೆ ಕಡೆಗೆ ಗಮನಕೊಟ್ಟವು. ಮಾಧ್ಯಮಗಳಲ್ಲಿ ಕೊಳ್ಳುಬಾಕ ಸಂಸ್ಕೃತಿ, ವಿಲಾಸಿ ಜೀವನ ಶೈಲಿಗಳ ಬಗ್ಗೆ ವರದಿಗಳು ಪ್ರಕಟವಾಗುತ್ತ ಹಳ್ಳಿಗಳ ಜನಜೀವನದ ಬಗ್ಗೆ, ರೈತರ ಬಗ್ಗೆ ಬರೆಯಲೇ ಇಲ್ಲ. ಇಂದು ಮಾಧ್ಯಮಗಳಿಗೆ ಸಾಮಾಜಿಕ ಜವಾಬ್ದಾರಿ ಇಲ್ಲವಾಗಿದೆ. ಮಾಧ್ಯಮ ಸಂಸ್ಥೆಗಳು ದಿನೇ ದಿನೇ ಬೃಹತ್ ಕಾರ್ಪೋರೇಟ್ ಸಂಸ್ಥೆಗಳಾಗಿ ಬೆಳೆಯುತ್ತಿವೆ. ಮಾಧ್ಯಮಗಳ ಮಾಲಿಕರು ಪ್ರಭಾವಶಾಲಿಗಳು ಆರ್ಥಿಕವಾಗಿ ಶಕ್ತಿಯುಳ್ಳವರು ಮತ್ತು ರಾಜಕೀಯ ವಲಯಕ್ಕೆ ಬಹಳ ಹತ್ತಿರವಾಗಿರುವವರೂ ಆಗಿರುತ್ತಾರೆ.

ಇವರಿಗೆ ಅಸಮಾನತೆ, ಬಡತನ, ರೈತರ ಆತ್ಮಹತ್ಯೆಯಂತಹ ವಿಷಯಗಳ ಬಗ್ಗೆ ಚಿಂತೆಯಿಲ್ಲ. ಇವರಿಗೆ ಲಾಭವೇ ಮುಖ್ಯ ಗುರಿಯಾಗಿದೆ. ಆದುದರಿಂದ ಇಂದು ಮಾಧ್ಯಮಗಳಲ್ಲಿ ಜಾಹೀರಾತುಗಳೇ ತುಂಬಿರುತ್ತವೆ.. ದಲಿತರ-ಅಲ್ಪ ಸಂಖ್ಯಾತರ ಮೇಲೆ ದೌರ್ಜನ್ಯಗಳು ನಡೆದಾಗ ಸಮಪರ್ಕವಾಗಿ ವರದಿ ಮಾಡುವುದಿಲ್ಲ. ಏಕೆಂದರೆ ಇಂದು ಮಾಧ್ಯಮಗಳಲ್ಲಿ ಮೇಲು ವರ್ಗದವರು ಜಾಸ್ತಿ ಇರುವುದರಿಂದ ಅವರು ವರ್ಗ ಹಿತಾಸಕ್ತಿಯನ್ನೇ ಕಾಪಾಡುತ್ತಿದ್ದಾರೆ. ಮತ್ತು ಮಾಧ್ಯಮಗಳಲ್ಲಿ ಹಿಂಸೆ, ಅಪರಾಧ, ಸೆಕ್ಸ್ ವಿಷಯಗಳನ್ನು ಹೆಚ್ಚು ಬಿತ್ತರಿಸಿ ತಮ್ಮ ಟಿ.ಆರ್.ಪಿ. ಜಾಸ್ತಿ ಮಾಡಿಕೊಳ್ಳಬೇಕೆಂಬ ಉದ್ದೇಶವಿದೆಯೇ ಹೊರತು ಮಾಧ್ಯಮಗಳ ಮಾಲಿಕರಿಗೆ ಅದರಿಂದ ಅನಾರೋಗ್ಯಕರ ಸಮಾಜ ನಿರ್ಮಾಣವಾಗುತ್ತಿದೆ ಎಂಬುದರ ಬಗ್ಗೆ ಚಿಂತೆ ಇಲ್ಲ.

ಮಾಧ್ಯಮಗಳಲ್ಲಿ ಹಿಂಸೆಯನ್ನು ಕಡಿಮೆ ಮಾಡಲು ಮತ್ತು ಮಕ್ಕಳು ಹಾಗೂ ಸಮಾಜದ ಮೇಲೆ ಆಗುವ ದುಷ್ಪರಿಣಾಮಗಳನ್ನು ತಡೆಯಲು ಮಾರ್ಗಗಳನ್ನು ಕಂಡುಹಿಡಿಯಬೇಕಾಗಿದೆ. ಆದರೆ ಹಿಂಸೆ-ಅಪರಾಧ ಸೆಕ್ಸ್‌ಗಳನ್ನು ಪ್ರಸಾರಮಾಡುವ ಮಾಧ್ಯಮಗಳನ್ನು ನಿಷೇಧ ಮಾಡಬಾರದು. ಏಕೆಂದರೆ ನಿಷೇಧ ಪ್ರಜಾತಾಂತ್ರಿಕ ವ್ಯವಸ್ಥೆಗೆ ವಿರುದ್ಧವಾದ ಕ್ರಮವಾಗಿದೆ.

ಮಾನಸಿಕ ನೆಮ್ಮದಿಯನ್ನು ಹಾಳು ಮಾಡುವ ಹಾಗೂ ಸಮಾಜ ಬಾಹಿರ ಕೃತ್ಯಗಳಲ್ಲಿ ತೊಡಗುವಂತೆ ಪ್ರೇರೇಪಿಸುವ ದೃಶ್ಯಗಳನ್ನು ಮಾಧ್ಯಮಗಳು ತಾವೇ ಬಿತ್ತರಿಸುವುದನ್ನು ನಿಲ್ಲಿಸಲು ಮುಂದಾಗಬೇಕಾಗಿದೆ. ■

# ಜೈ ಭೀಮ್ ಕಾಮ್ರೇಡ್: ಇಂಡಿಯನ್ನರ ತಪ್ಪೊಪ್ಪಿಗೆ

ಹುಲಿಕುಂಟೆ ಮೂರ್ತಿ

**1992ರಿಂದಲೂ ಉತ್ತರ ಭಾರತದಲ್ಲಿ ಅದರಲ್ಲೂ ಮಹಾರಾಷ್ಟ್ರದ ಒಳಗಿನ ದಲಿತರ ಮೇಲಿನ ದೌರ್ಜನ್ಯ ಕುರಿತು ಅದ್ಭುತ ಎನಿಸುವ ಮಾಹಿತಿಗಳನ್ನು ಕಲೆಹಾಕಲಾಗಿದೆ. ಬಾಬಾ ಸಾಹೇಬರು ಪರಿ ನಿಬ್ಬಾಣಗೊಂಡ ಚೈತ್ಯಭೂಮಿಯ ಕುರಿತಾದ ಜನಾಭಿಪ್ರಾಯ ವನ್ನು ಸಂಗ್ರಹಿಸುವುದರಿಂದ ಹಿಡಿದು ಮಹಾರಾಷ್ಟ್ರದ ವಿಮೋಚನೆಯ ದನಿಯಾದ ವಿಲಾಸ ಗೋಗ್ರೆಯ ಮಗನ ಮದುವೆಯವರೆಗೂ ಈ ದೇಶದ ಮಾನವಪ್ರೀತಿಯನ್ನು ಕನಸುವ ಎಲ್ಲರೂ ನೋಡಲೇಬೇಕಾದ ಬಹುಮುಖ್ಯ ಮಾಹಿತಿಗಳನ್ನು ಈ ಸಿನಿಮಾ ಒದಗಿಸಿದೆ. ಅದರಲ್ಲೂ ಇಂಡಿಯಾದ ಎಲ್ಲ ದಲಿತ ಚಳವಳಿಕಾರರೂ, ಯುವಜನರೂ ಈ ಸಿನಿಮಾವನ್ನು ನೋಡಲೇಬೇಕು. ಮಹಾರಾಷ್ಟ್ರದ ದಲಿತ ಸಾಂಸ್ಕೃತಿಕ ಪ್ರತಿಭಟನೆಯ ಮಾದರಿಯೊಂದನ್ನು ಈ ಚಿತ್ರ ಬಹುಮುಖ್ಯವಾಗಿ ಹೇಳುತ್ತದೆ.**

ಆನಂದ್ ಪಟವರ್ಧನ್ ಎಂದರೆ ನೆನಪಿಗೆ ಬರುವುದು ಈ ದೇಶದ ಅಸ್ಥಿಪಂಜರದಂತಹ ದೇಹಗಳು, ಕಣ್ಣೀರು, ಮಾಸಿದ ಬಟ್ಟೆ, ಹೊಳೆಯುವ ರಟ್ಟೆ, ತಳ್ಳುವ ಗಾಡಿಗಳು, ಬೆವರು ಹೀಗೆ.. ಒಟ್ಟಿನಲ್ಲಿ ಭಾರತ ಯಾವುದನ್ನು ಜಗತ್ತಿಗೆ ತೋರಿಸಲು ಹೆದರುತ್ತದೋ ಆ ಜಗತ್ತು ಇವರ ಕ್ಯಾಮರಾದ ಮೂಲಕ ಅನಾವರಣಗೊಳ್ಳುತ್ತವೆ. ಇವರು ಮಾಡಿದ 'ವಾರ್ ಅಂಡ್ ಪೀಸ್', 'ಫಾದರ್ ಸನ್ ಅಂಡ್ ಹೋಲಿ ವಾರ್', 'ಇನ್ ದ ನೇಮ್ ಆಫ್ ಗಾಡ್', 'ವೇವ್ಸ್ ಆಫ್ ರೆವಲೂಶನ್' ಮುಂತಾದ ಸಿನಿಮಾಗಳು ಭಾರತದ ಹಿಪೋಕ್ರಸಿಯನ್ನು ಜಾಗತಿಕ ಮಟ್ಟದಲ್ಲಿ ಬಯಲುಗೊಳಿಸಿ ಜಗತ್ತಿನ ಅತಿದೊಡ್ಡ ಸಾಂಸ್ಕೃತಿಕ ದೇಶದ ಹಮ್ಮಿನಲ್ಲಿರುವ ದೇಶವನ್ನು ಬೆತ್ತಲುಗೊಳಿಸಿದವು. ಭಾರತದ ಕ್ಯಾಮರಾಗಳಿಗೆ ವರ್ಜ್ಯವಾದ, ಅಸಹ್ಯ ಎನಿಸುವ, ನೋಡಲು ಹೇಸಿಗೆ ಎನಿಸುವ ವಸ್ತು ಮತ್ತು ಭಾವಪ್ರಪಂಚವೇ ಇವರ ಕ್ಯಾಮರಾದ ಪ್ರಮುಖ ವಸ್ತುಗಳು ಮತ್ತು ಭಾವಜಗತ್ತು. ಎಡಪಂಥೀಯ ಧೋರಣೆಯ ಮಾನವೀಯ ಕಾಳಜಿಯನ್ನು ಎದೆಯಲ್ಲೊತ್ತು ದೇಶವನ್ನು ಸುತ್ತುತ್ತಾ, ಶೋಷಣೆಗೆ ಒಳಗಾದ ಮೈ ಮನಗಳಿಗೆ ನ್ಯಾಯವನ್ನು ಒದಗಿಸುವ ಕಾರ್ಯದಲ್ಲಿ ಆನಂದ್ ಮುಂದಿನ ಸಾಲಿನವರು. ಅವರ ಸಿನಿಮಾ ಕೈಂಕರ್ಯ ಆ ಕಾಳಜಿಯ ಅಭಿವ್ಯಕ್ತಿ ಮಾಧ್ಯಮ.




ಆನಂದ್ ಪಟವರ್ಧನ್ ಅವರ ಇತ್ತೀಚಿನ ಸಿನಿಮಾ 'ಜೈಭೀಮ್ ಕಾಮ್ರೇಡ್' ಬಗ್ಗೆ ಮಾತನಾಡುವ ಸಲುವಾಗಿ ಮೇಲಿನೆಲ್ಲಾ ಮಾತುಗಳನ್ನು ಬರೆಯಬೇಕಾಯಿತು. ಚಿತ್ರದ ಹೆಸರೇ ಭಾರತದ ಮನಸ್ಸುಗಳಿಗೆ ರೋಮಾಂಚಕ ಅನುಭವ ನೀಡುತ್ತದೆ. ಕಳೆದ ಮೂರ್ನಾಲ್ಕು ದಶಕಗಳಲ್ಲಿ ಭಾರತದ ಶೋಷಿತ ಸಮುದಾಯಗಳಿಗೆ ಘನತೆಯನ್ನು ತಂದುಕೊಡಲು ಶ್ರಮಿಸಿದ ಎರಡು ವಿಭಿನ್ನ ಚಳವಳಿಯ ಧಾರೆಗಳು ಇಲ್ಲಿ ಮೇಳೈಸಿವೆ. ದಲಿತ ಚಳವಳಿ ಮತ್ತು ಕಮ್ಯುನಿಸ್ಟ್ ಚಳವಳಿಗಳು ಈ ದೇಶದ ನೊಂದವರ ಬಾಳಿನಲ್ಲಿ ಸಮಾನತೆಯ ಹೂ ಅರಳಿಸಲು ಶ್ರಮಿಸಿದ ಪ್ರತೀಕವಾಗಿ ಈ 'ಜೈಭೀಮ್' ಮತ್ತು 'ಕಾಮ್ರೇಡ್' ಪದಗಳು ಇಂದಿಗೂ ಬಳಕೆಯಲ್ಲಿವೆ. ಆಶಯ ಒಂದೇ ಇದ್ದರೂ ವಿಭಿನ್ನ ಪಾತಳಿಗಳಲ್ಲಿ ಹೋರಾಟಗಳನ್ನು ರೂಪಿಸಿದ ಈ ಎರಡೂ ಚಳವಳಿಗಳು ಸಮತೆಯನ್ನು ಕನಸುವ ಎಲ್ಲ ಮನಸ್ಸುಗಳಲ್ಲಿ ವಿಶಿಷ್ಟವಾದ ಸ್ಥಾನ ಗಿಟ್ಟಿಸಿವೆ. ಇಂಡಿಯಾದ ಸಮಸ್ಯೆಗಳಿಗೆ ಜಾತಿ ವ್ಯವಸ್ಥೆಯೇ ಆತ್ಯಂತಿಕ ಕಾರಣ ಎಂಬ ಅಂಶವನ್ನು ಮೊದ ಮೊದಲಿಗೆ ಕಮ್ಯುನಿಸಂ ಅರ್ಥಮಾಡಿಕೊಳ್ಳಲಿಲ್ಲ. ಆದರೆ, ಬಾಬಾ ಸಾಹೇಬರು ಕಂಡ ಕಾಣ್ಕೆಯ ಫಲವಾಗಿ ಈ ನೆಲದ ವಾರಸು ದಾರರಾದ ದಲಿತರು ತಮ್ಮ ಶತಮಾನಗಳ ನರಳಿಕೆಗಳಿಂದ ಮುಕ್ತರಾಗಿ ಕೊಂಚ ಎದೆಯೆತ್ತಿ ನಡೆದಾಡುವ ಹಂತಕ್ಕೆ ಬಂದರು ಎಂಬ ಸತ್ಯವನ್ನು ಇಲ್ಲಿನ ಕಮ್ಯುನಿಸಂ ಸಹ ನಿಧಾನಕ್ಕೆ ಅರ್ಥಮಾಡಿಕೊಂಡಿದೆ.

ಜಗತ್ತಿನ ಸಕಲ ದುಃಖಗಳಿಗೂ ವರ್ಗ ಅಸಮಾನತೆಯೇ ಕಾರಣ ಎಂಬ ವಾದವನ್ನು ಇಂಡಿಯಾದ ನೊಂದ ಮನಸ್ಸುಗಳ ಮೇಲೂ ಪ್ರಯೋಗಿಸಿದ ಕಮ್ಯುನಿಸಂ, ಅದರ ಫಲಿತಗಳನ್ನು ಕಂಡು ನಿರಾಶೆಗೊಂಡಿದ್ದರೂ ಅಂಬೇಡ್ಕರರ ಹಾದಿಯನ್ನು ಅದ್ಯಾಕೋ ಒಪ್ಪಿಕೊಳ್ಳುವಲ್ಲಿ ಮೀನಾಮೇಶ ಎಣಿಸುತ್ತಿರುವುದು ಇಂದಿಗೂ ಕಾಣುತ್ತಿದೆ. ಈ ದ್ವಂದ್ವವನ್ನು ಸಮರ್ಥವಾಗಿ ಬಳಸಿಕೊಂಡ ಇಲ್ಲಿನ ಮನುವಾದಿಗಳು ಶತಮಾನಗಳ ನೋವನ್ನನುಭವಿಸಿದ ದೇಹ ಮನಸ್ಸುಗಳನ್ನು ಮತ್ತೆ ಮತ್ತೆ ಗುಲಾಮಗಿರಿಯ ಒಳಕ್ಕೆ ಎಳೆದುಕೊಳ್ಳಲು ಯತ್ನಿಸಿ ಕೊಂಚಮಟ್ಟಿಗೆ ಯಶಸ್ವಿಯೂ ಆದರು. ಸರಿಯಾದ ಶಿಕ್ಷಣ, ಅಕ್ಷರಜ್ಞಾನ ಇಲ್ಲದಿರುವುದೇ ಈ ಅನಾಹುತಕ್ಕೆ ಕಾರಣ ಎಂಬ ಮಾತು ಆಂಶಿಕವಾಗಿ ನಿಜವಾದರೂ ತಲೆಮಾರುಗಳ ಶೋಷಣೆಯ ಭಾರದಿಂದ ತಪ್ಪಿಸಿಕೊಳ್ಳಲು ಈ ಶೋಷಿತರಿಗೆ ಸಾಧ್ಯವಾಗದೇ ಇರುವುದಕ್ಕೆ ಕಾರಣಗಳು ನಮಗೆ ತಿಳಿಯದವೇನಲ್ಲ. ಬಾಬಾ ಸಾಹೇಬರ ಹಾದಿ ಈ ಎಲ್ಲ ಅನಿಷ್ಟಗಳಿಗೆ ಪರಿಹಾರ ಎಂಬುದನ್ನು ಇನ್ನೂ ಅರ್ಥ ಮಾಡಿಕೊಳ್ಳುವುದರಲ್ಲೇ ಶೋಷಿತರು ಕಾಲಕಳೆಯುತ್ತಿದ್ದಾರೆ. ಈ ದ್ವಂದ್ವಕ್ಕೆ ಕಮ್ಯುನಿಸಂ ಕೂಡ ಕಾರಣ ಎಂಬ ಅಂಶವನ್ನು ಅಲ್ಲಗಳೆಯಲಾಗದು. ಆನಂದ್ ಪಟವರ್ಧನ್ ಮೂಲತಃ ಕಮ್ಯುನಿಸಂ ಸಿದ್ಧಾಂತಗಳ ಜಾಡಿನವರು ಎಂಬ ಕಾರಣಕ್ಕೆ ಈ ಅಂಶಗಳನ್ನು ಹೇಳಬೇಕಾಯಿತು.

'ಜೈಭೀಮ್ ಕಾಮ್ರೇಡ್' ಸಿನಿಮಾದ ಒಂದು ದೃಶ್ಯ ಹೀಗಿದೆ: ಬಾಬಾ ಸಾಹೇಬರು ಆಯ್ಕೆ ಮಾಡಿಕೊಂಡ ಬೌದ್ಧ ಧಮ್ಮ ದಲಿತರಿಗೆ ಎಷ್ಟರಮಟ್ಟಿಗೆ ವಿಮೋಚನೆಯನ್ನು ಕಾಣಿಸಿದೆ ಎಂಬ ಅಂಶವನ್ನು ಕುರಿತು ದಲಿತ ವ್ಯಕ್ತಿಯೊಬ್ಬರು ಮಾತನಾಡುತ್ತಾರೆ; ಅವರ ಮಾತುಗಳಲ್ಲಿಯೂ ದ್ವಂದ್ವ ಇರುತ್ತದೆ (ಈ ದ್ವಂದ್ವ ಅವರನ್ನು ಸಂದರ್ಶಿಸುವ ವ್ಯಕ್ತಿಗಳ ಪ್ರಶ್ನೆಯಿಂದಲೇ ಮೂಡಿದ್ದು ಎಂಬುದನ್ನು ಗಮನದಲ್ಲಿಡಬೇಕು). ದೃಶ್ಯ ಮುಗಿಯುವ ಮೊದಲು ದಾರಿಯಲ್ಲಿ ಹುಡುಗನೊಬ್ಬ ಎರಡು ಬೈಕ್ ಟೈರ್‌ಗಳನ್ನು ತನ್ನೆರಡೂ ಕೈಗಳಿಂದ ಓಡಿಸಲು ಯತ್ನಿಸುತ್ತಾನೆ ಆದರೆ, ಎರಡೂ ಕೆಳಗೆ ಬೀಳುತ್ತವೆ. ದೃಶ್ಯ ಬದಲಾಗುತ್ತದೆ. ಇದರಿಂದ ಚಿತ್ರದ ನಿರ್ದೇಶಕರು ಏನು ಹೇಳಲು ಹೊರಟಿದ್ದಾರೆ

ಎಂಬುದನ್ನು ಈ ನೆಲದ 'ದಡ್ಡ' ದಲಿತರು ಅರ್ಥ ಮಾಡಿಕೊಳ್ಳಲಾಗದೇನೋ ಎಂಬ 'ಕೊರಗು' ಈ ನಿರ್ದೇಶಕ ಹಾಗೂ ಸಿನಿಮಾದ ಅಭಿಮಾನಿಗಳಿಗೆ ಸುಳಿಯುತ್ತದೆ.

ಆದರೆ, ಅದು ಸುಲಭವಾಗಿ ಅರ್ಥವಾಗುವಂಥದ್ದು. ದಲಿತರು ಹಿಂದೂ ಧರ್ಮವನ್ನು ಬಿಡಲೂ ಆಗದೆ, ಬೌದ್ಧ ಧಮ್ಮವನ್ನು ಅಪ್ಪಿಕೊಳ್ಳಲೂ ಆಗದೆ ದ್ವಂದ್ವವನ್ನು ಅನುಭವಿಸುವ ರೂಪಕಾತ್ಮಕ ದೃಶ್ಯ. ಈ ದೃಶ್ಯವನ್ನು ರೂಪಿಸಿದ ತಾತ್ವಿಕತೆಯ ಹಿಂದೆ ಒಂದು ದೊಡ್ಡ ದುರಂತ ಅಡಗಿದೆ. ಅದೇನೆಂದರೆ, ದಲಿತರು ಹಿಂದೂ ಧರ್ಮವನ್ನು ಬಿಡಲು ಹೆಣಗಾಡುತ್ತಿದ್ದಾರೆ ಎಂಬುದು.

ಧರ್ಮ ಎಂದರೆ ಆಚರಣೆ ಮಾತ್ರವೇ ಎಂದು ಅರ್ಥ ಮಾಡಿಕೊಂಡವರು ಸೃಷ್ಟಿಸುವ ಅನಾಹುತವಿದು. ದಲಿತರು ಆಚರಿಸುವ ಹಬ್ಬಗಳು, ಮದುವೆಗಳು, ಉತ್ಸವಗಳು ಯಾವ ಧರ್ಮಕ್ಕೆ ಸೇರಿದವು ಎಂಬ ಅಂಶ ಇನ್ನೂ ಕಮ್ಯುನಿಸ್ಟರಿಗೆ ಅರ್ಥವಾಗಿಲ್ಲ ಎಂಬುದು ಈ ದೃಶ್ಯ ನೋಡಿದ ಯಾರಿಗಾದರೂ ಅರ್ಥವಾಗಿ ಬಿಡುತ್ತದೆ. ದಲಿತರ ಬದುಕನ್ನು ಅರ್ಥ ಮಾಡಿಕೊಳ್ಳಲು ಅವರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ಅರ್ಥ ಮಾಡಿಕೊಳ್ಳಲು ನಮಗೆ ರೂಪಕಗಳ ಅಗತ್ಯವಿದೆ ಎಂದರೆ ಎಲ್ಲಿದ್ದೇವೆ ನಾವು ಎಂದು ಭಯವಾಗುತ್ತದೆ.

ಮೊದಲ ಶತಮಾನದಿಂದಲೇ ಈ ನೆಲದ ಮೇಲೆ ಜೀವಕಾರುಣ್ಯದ ನೂರಾರು ಧಾರೆಗಳು ಹರಿದಾಡಿದ್ದಾವೆ. ಆ ಧಾರೆಗಳ ಅಂತ್ಯವಿಲ್ಲದ ವಿಕಾಸದ ಹಾದಿಯಲ್ಲಿ ಐದು ಶತಮಾನಗಳ ಹಿಂದೆ ಅದರಲ್ಲೂ ಆರ್ಯರು ಭಾರತಕ್ಕೆ ಬಂದ ನಂತರ ಮಾನವೀಯತೆಗೆ ಪೆಟ್ಟು ಬಿದ್ದಿದೆ ಎಂಬುದನ್ನು ಈಗಾಗಲೇ ಎಷ್ಟೋಂದು ಜನ ಇತಿಹಾಸಕಾರರು ನಮಗೆ ತೋರಿಸಿಕೊಟ್ಟಿದ್ದಾರೆ. ಅಷ್ಟೇ ಏಕೆ.. ಈಗಲೂ ಆ ಧಾರೆಗಳ ಜನ ತಮ್ಮ ವಿರುದ್ಧದ ಯಾವುದೇ ದೌರ್ಜನ್ಯವನ್ನು ತಣ್ಣಗೆ ಸಹಿಸಿಕೊಂಡು ಸುತ್ತಲೂ ಬದುಕುವವರಿಗೆಲ್ಲಾ ಒಳ್ಳೆಯದನ್ನೇ ಬಯಸುತ್ತಿದ್ದಾರೆ ಎಂಬುದನ್ನು ಗಮನಿಸಿದರೇ ಗೊತ್ತಾಗುತ್ತದೆ; ಆ ಜನಾಂಗಗಳ ಶಕ್ತಿ ಎಂಥಹದ್ದು ಎಂದು. ಇದನ್ನು ಅರ್ಥ ಮಾಡಿಕೊಳ್ಳಲು ನಾವು ಅಡ್ಡದಾರಿಗಳನ್ನೇಕೆ ಹಿಡಿಯಬೇಕು..?

ಆನಂದ್ ಪಟವರ್ಧನ್ ಇಂಡಿಯಾದ ಅತ್ಯದ್ಭುತ ನಿರ್ದೇಶಕ ಎಂಬುದರಲ್ಲಿ ಎರಡು ಮಾತಿಲ್ಲ. ನೆಲದ ಮೇಲೆ ಮೂಡುವ ಸಣ್ಣದೊಂದು ಗರಿಕೆಯಿಂದಲೇ ಜಗತ್ತಿಗೆ ತಾತ್ವಿಕತೆಯ ಪಾಠ ಮಾಡಿಸಬಲ್ಲ ಪ್ರತಿಭಾವಂತರು. ಈ ಸಿನಿಮಾ ಮಾಡಲು ಅವರು ಹತ್ತು ವರ್ಷಗಳ ಕಾಲ ಪಟ್ಟಿರುವ ಶ್ರಮವನ್ನು ಯಾರಾದರೂ ಗೌರವಿಸಲೇಬೇಕು. ಆದರೆ, ನಾವು ನಂಬಿರುವ ಸಿದ್ಧಾಂತಗಳಿಂದಲೇ ಇಡೀ ಜಗತ್ತನ್ನು ಕಾಣುವ ಹಠ ಒಳ್ಳೆಯದಲ್ಲವೇನೋ.. ಅದರಲ್ಲೂ ದಲಿತರ ಕುರಿತು ಮಾತನಾಡುವಾಗ ಬಹಳ ಎಚ್ಚರದಿಂದ ಇರಬೇಕು ಎಂಬ ಅಂಶವನ್ನು ಇವರಿಗೆ ಯಾರು ಹೇಳಿಕೊಡಬೇಕು..? ಬಾಬಾ ಸಾಹೇಬರು ನಮಗೆ ಸಾಕಾಗುವುದಿಲ್ಲವೇ..?

1992ರಿಂದಲೂ ಉತ್ತರ ಭಾರತದಲ್ಲಿ ಅದರಲ್ಲೂ ಮಹಾರಾಷ್ಟ್ರದ ಒಳಗಿನ ದಲಿತರ ಮೇಲಿನ ದೌರ್ಜನ್ಯ ಕುರಿತು ಅದ್ಭುತ ಎನಿಸುವ ಮಾಹಿತಿಗಳನ್ನು ಕಲೆಹಾಕಲಾಗಿದೆ. ಬಾಬಾ ಸಾಹೇಬರು ಪರಿ ನಿಬ್ಬಾಣ ಗೊಂಡ ಚೈತ್ಯಭೂಮಿಯ ಕುರಿತಾದ ಜನಾಭಿಪ್ರಾಯ ವನ್ನು ಸಂಗ್ರಹಿಸುವುದರಿಂದ ಹಿಡಿದು ಮಹಾರಾಷ್ಟ್ರದ ವಿಮೋಚನೆಯ ದನಿಯಾದ ವಿಲಾಸ ಗೋಗ್ರೆಯ ಮಗನ ಮದುವೆಯವರೆಗೂ ಈ ದೇಶದ ಮಾನವಪ್ರೀತಿಯನ್ನು ಕನಸುವ ಎಲ್ಲರೂ ನೋಡಲೇಬೇಕಾದ ಬಹುಮುಖ್ಯ ಮಾಹಿತಿಗಳನ್ನು ಈ ಸಿನಿಮಾ ಒದಗಿಸಿದೆ. ಅದರಲ್ಲೂ ಇಂಡಿಯಾದ ಎಲ್ಲ ದಲಿತ ಚಳವಳಿಕಾರರೂ, ಯುವಜನರೂ ಈ ಸಿನಿಮಾವನ್ನು ನೋಡಲೇಬೇಕು. ಮಹಾರಾಷ್ಟ್ರದ ದಲಿತ ಸಾಂಸ್ಕೃತಿಕ ಪ್ರತಿಭಟನೆಯ ಮಾದರಿಯೊಂದನ್ನು ಈ ಚಿತ್ರ ಬಹುಮುಖ್ಯವಾಗಿ ಹೇಳುತ್ತದೆ.

1997ರ ಜುಲೈ 11ರ ಬೆಳಿಗ್ಗೆ ಮಹಾರಾಷ್ಟ್ರದ ರಮಾಬಾಯಿ ನಗರದ ಅಂಬೇಡ್ಕರ್ ಪ್ರತಿಮೆಗೆ ಯಾರೋ ಚಪ್ಪಲಿಹಾರ ಹಾಕಿದ್ದನ್ನು ಮಹಿಳೆಯೊಬ್ಬರು ನೋಡುತ್ತಾರೆ. ಕೆಲವೇ ನಿಮಿಷಗಳಲ್ಲಿ ಇಡೀ ನಗರದ ದಲಿತರು ಅಲ್ಲಿ ನೆರೆದು ಪ್ರತಿಭಟನೆಗೆ ತೊಡಗುತ್ತಾರೆ. ಪ್ರತಿಭಟನೆ ಪ್ರಾರಂಭವಾದ ಕೆಲವೇ ನಿಮಿಷಗಳಲ್ಲಿ ಇದನ್ನು ನಿರೀಕ್ಷಿಸಿದ್ದವರಂತೆ ಅಲ್ಲಿಗೆ ಬರುವ ನೂರಾರು ಪೊಲೀಸರು ನೆರೆದಿದ್ದ ಪ್ರತಿಭಟನಾಕಾರರ ಮೇಲೆ ಸುಮಾರು ಐವತ್ತು ಸುತ್ತು ಏಕಾಏಕಿ ಗುಂಡು ಹಾರಿಸುತ್ತಾರೆ. ಹತ್ತು ಜನ ಸ್ಥಳದಲ್ಲೇ ಸಾಯುತ್ತಾರೆ. ಈ ದೃಶ್ಯವನ್ನು ಕಂಡು ನೋವನ್ನು ಸಹಿಸಲಾರದೆ ಮಹಾರಾಷ್ಟ್ರದ ವಿಮೋಚನಾ ಹಾಡುಗಾರ ವಿಲಾಸ ಗೋಗ್ರೆ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. 'ಜೈಭೀಮ್ ಕಾಮ್ರೇಡ್' ಚಿತ್ರ ಈ ಘಟನೆಯ ಸುತ್ತಾ ಮಾಹಿತಿಗಳನ್ನು ಕಲೆಹಾಕುತ್ತಲೇ ಪ್ರಭುತ್ವದ ಕ್ರೌರ್ಯವನ್ನು ಅನಾವರಣ ಮಾಡುತ್ತದೆ. ಅದರ ಭಾಗವಾಗಿ ಬಹಳಷ್ಟು ದಲಿತ ಹೋರಾಟಗಾರರ ಸಂದರ್ಶನ ಇಲ್ಲಿದೆ. ಇದರೊಟ್ಟಿಗೆ ದಲಿತ ಹೋರಾಟದ ವಿಭಿನ್ನ ಮುಖಗಳನ್ನು ಹಿಡಿದಿಟ್ಟಿದೆ. ಈ ಹಿನ್ನೆಲೆಯಲ್ಲಿ ಮಹಾರಾಷ್ಟ್ರದ 'ಕಬೀರ್ ಕಲಾ ಮಂಚ್' ಚಿತ್ರದಲ್ಲಿ ಗಮನ ಸೆಳೆಯುತ್ತದೆ.



ಆನಂದ್ ಪಟವರ್ಧನ್

ಈ ಕಲಾತಂಡದ ಕೇಂದ್ರಬಿಂದು 'ಶೀತಲ್ ಸಾತೆ'. ದಲಿತರ ಶತಮಾನಗಳ ನೋವುಗಳೇ ಅವಳ ಕೊರಳೊಳಗೆ ರಾಗಗಳಾಗಿ ಹೊಮ್ಮುತ್ತಿವೆಯೇನೋ ಎನ್ನುವಷ್ಟರಮಟ್ಟಿಗೆ ಹಾಡುತ್ತಾಳೆ.. ದೌರ್ಜನ್ಯಗಳ ಕುರಿತು ಮಾತಾಡುತ್ತಾಳೆ.. ಬಾಬಾ ಸಾಹೇಬರ ಕುರಿತು ಕಣ್ಣೀರಾಗುತ್ತಾಳೆ.. ಆ ಮೂಲಕ ಎದುರಿಗಿರುವವರ ಎದೆಗಳಲ್ಲಿ ನೋವಿನ ಕಿಚ್ಚೊಂದನ್ನು ಹೊತ್ತಿಸಿ ಅದು ದೀಪವಾಗುವ ಸೋಜಿಗವ ಕಾಣಲು ಹಂಬಲಿಸುತ್ತಾಳೆ.. ಪ್ರತಿ ಹಾಡುಗಾರಿಕೆಯ ಕಾರ್ಯಕ್ರಮದ ಹಿಂದಿನ ದಿನ ತಾಯಿಗೆ ಹೇಳುತ್ತಾಳೆ 'ನಾವು ಯಾವುದೇ ಕಾರಣಕ್ಕೂ ಅಸ್ತ್ರವನ್ನು ಹಿಡಿಯುವುದಿಲ್ಲ; ನಮ್ಮ ರಾಗಗಳಿಂದಲೇ ಜಗತ್ತನ್ನು ಬದಲಿಸುತ್ತೇವೆ..' ಇಂಥ ತಂಡವನ್ನು ಸರ್ಕಾರ ನಿಷೇಧಿಸಿ ಕ್ರೌರ್ಯವನ್ನು ಮೆರೆಯುತ್ತದೆ. ಶೀತಲ್ ತಂಡದೊಂದಿಗೆ ಕಣ್ಮರೆಯಾಗುತ್ತಾಳೆ.. ಅವಳ ಅವ್ವ ಕಣ್ಣಲ್ಲಿ ಮಗಳ ಮಾತುಗಳನ್ನು ದೀಪದಂತೆ ಉರಿಸುತ್ತಾ ಕಾದು ಕೂರುತ್ತಾಳೆ.. ಆನಂದ್ ಇಲ್ಲಿ ಗೆದ್ದುಬಿಡುತ್ತಾರೆ.

ಈ ಚಿತ್ರ ನೋಡಿದ ಯಾರಿಗಾದರೂ ಇಂಥಾದ್ದೊಂದು ಚಿತ್ರದ ಅಗತ್ಯವಿತ್ತು ಎಂದೆನ್ನಿಸುತ್ತದೆ. ಇನ್ನೂರು ನಿಮಿಷಗಳ ಸಿನಿಮಾ ಇಂಡಿಯಾದಲ್ಲಿ ದಲಿತರ ಮೇಲಾಗಿರುವ ದೌರ್ಜನ್ಯದ ಮರಳ ಕಣವೊಂದನ್ನು ಜಗತ್ತಿಗೆ ತೋರಿಸಲು ಹೊರಟಿದೆ. ಆನಂದ್ ಪಟವರ್ಧನ್ ಮೂಲತಃ ದಲಿತರಲ್ಲ; ಆದರೆ, ದಲಿತರ ಮೇಲಿನ ಈ ದೌರ್ಜನ್ಯಕ್ಕೆ ತಾವೆಲ್ಲರೂ ಕಾರಣ ಎಂದೆನ್ನುತ್ತಾ ಪ್ರಾಯಶ್ಚಿತ್ತದ ಕಣ್ಣೀರಾಗಿ ಈ ಚಿತ್ರ ಮಾಡಿದ್ದಾರೆ. 'ಅವರು ದಲಿತರಲ್ಲ, ಹಾಗೂ ನಂಬಿರುವ ಸಿದ್ಧಾಂತ ಸರಿಯಲ್ಲ' ಎಂದು ಹೇಳಿದರೆ ನಾವು ತುಂಬಾ ಕ್ರೂರಿಗಳಾಗುತ್ತೇವೆ.. ಆದರೆ, ಕಣ್ಣೀರನ್ನು ನೋಡಲು ಸಿದ್ಧಾಂತಗಳ ಅಗತ್ಯವಿದೆಯೇ ಎಂದು ಮಾತ್ರ ಕೇಳಬಹುದೇನೋ..?

ಬಾಬಾ ಸಾಹೇಬ್ ಅಂಬೇಡ್ಕರ್ ಈ ದೇಶದ ಅನಿಷ್ಟಕ್ಕೆಲ್ಲಾ ಸರಿಯಾದ ದಾರಿಗಳನ್ನು ನಮಗೆ ಕೊಟ್ಟಿದ್ದಾರೆ. ಬೌದ್ಧ ಧಮ್ಮ ದೀಕ್ಷೆ ಪಡೆಯುವ ಸಂದರ್ಭದಲ್ಲಿ 'ನಾನು ಹಿಂದೂವಾಗಿ ಸಾಯಲಾರೆ' ಎಂಬ ಮಾತನ್ನು ಅವರು ಕೇವಲ ಸಾಂಸ್ಕೃತಿಕ ರಾಜಕಾರಣದ ಬಾಗವಾಗಿ ಹೇಳಿದ್ದು ಎಂಬುದನ್ನು ನಾವು ಅರ್ಥ ಮಾಡಿಕೊಂಡರೆ ಅವರಿಗೆ ಅವಮರ್ಯಾದೆ ಮಾಡಿದಂತೇನೂ ಆಗುವುದಿಲ್ಲ. ಯಾಕೆಂದರೆ ದಲಿತರು ಹಿಂದೂಗಳಲ್ಲ ಎಂದು ಅವರೇ ಇಡೀ ಜಗತ್ತಿಗೇ ತೋರಿಸಿದ್ದಾರೆ.
ಇದನ್ನು ಅರ್ಥಮಾಡಿಕೊಂಡರೆ ಕಮ್ಯುನಿಸಂ ಒಂದನ್ನೇ ವಿಮೋಚನೆಯ ಆತ್ಯಂತಿಕ ಅಸ್ತ್ರವನ್ನಾಗಿ ನೋಡುವ ಆನಂದ್ ಅಂಥವರಿಗೆ ಇಂಡಿಯಾ ಇನ್ನಷ್ಟು ನಿಚ್ಚಳವಾಗಿ ಕಾಣಬಹುದು. ಹಾಗೂ ಅವರ ಚಿತ್ರಗಳನ್ನು ಎಲ್ಲೆಂದರಲ್ಲಿ ಹುಡುಕಿಕೊಂಡು ನೋಡುವ ಅವರ ಅಭಿಮಾನಿ ಎನ್‌ಜಿಒ ಮಾನವರೂ ಕೊಂಚ ತಮ್ಮ ಕಣ್ಣುಗಳನ್ನು ತೊಳೆದುಕೊಂಡು ಸರಿಯಾದ ಕನ್ನಡಕಗಳನ್ನು ಹಾಕಿಕೊಳ್ಳಬೇಕು. 'ಅಯ್ಯೋ ಈ ಅಸ್ಪೃಶ್ಯರಿಗೆ ಆಗುತ್ತಿರುವ ಅನ್ಯಾಯಗಳನ್ನು ನಮ್ಮಿಂದ ನೋಡಲಾಗುತ್ತಿಲ್ಲ..' ಎಂದು ಕಣ್ಣುಮುಚ್ಚಿಕೊಂಡರೆ ಏನೂ ಮಾಡಿದಂತೆ ಆಗುವುದಿಲ್ಲ ಎಂಬುದನ್ನು ಅವರೂ ಅರ್ಥ ಮಾಡಿಕೊಳ್ಳಬೇಕು.

ಬೆಂಗಳೂರಿನಲ್ಲಿ ಇಂಥಾದ್ದೊಂದು ಚಿತ್ರ ಪ್ರದರ್ಶನವನ್ನು ಏರ್ಪಡಿಸಿದ 'ಪೆಡೆಸ್ಟ್ರಿಯನ್ ಪಿಕ್ಚರ್ಸ್' ಗೆಳೆಯರು ನಿಜಕ್ಕೂ ಅಭಿನಂದನಾರ್ಹರು. ಬೆಂಗಳೂರಿನ ಮಹಲುಗಳ ನಡುವೆ, ನುಣ್ಣನೆಯ ರಸ್ತೆಗಳ ನಡುವೆ ಬಿಯರ್ ಹೀರುತ್ತಾ ದಲಿತ, ಮಹಿಳಾ ದೌರ್ಜನ್ಯಗಳ ಬಗ್ಗೆ ಬಕೆಟ್ಟುಗಟ್ಟಲೆ ಕಣ್ಣೀರು ಹಾಕುತ್ತಾ 'ಯೋಚಿಸುವ' ಜನರಿಗೂ ಇಂಥ ಚಿತ್ರ ತೋರಿಸಿ ಪ್ರಾಯಶ್ಚಿತ್ತಕ್ಕೆ ದಾರಿ ತೋರಿಸಿದ್ದಾರೆ. ಖೈರ್ಲಾಂಜಿ, ಕಂಬಾಲಪಲ್ಲಿಗಳನ್ನು ಕಂಡೂ ಹೊಟ್ಟೆತುಂಬಾ ಉಣ್ಣುತ್ತಿರುವ ನಮಗೆಲ್ಲಾ ಇಂಥಾದ್ದೊಂದು ಸಿನಿಮಾ ದಾರಿಯಾಗಬಹುದು ಎಂದು ಹೇಳಿಕೊಳ್ಳುವ ಧೈರ್ಯ ನಮಗಿಲ್ಲವಾದರೂ, ಉಣ್ಣುವ ಹಿಟ್ಟಿಗೆ ಕೊಂಚ ಪಶ್ಚಾತ್ತಾಪವನ್ನು ಕಲೆಸಿಕೊಳ್ಳಬೇಕೆಂಬ ಸಲಹೆಯನ್ನು ನಮಗೆ ಕೊಟ್ಟೇ ಕೊಡುತ್ತದೆ. ■

# ಜೈ ಭೀಮ್ ಕಾಮ್ರೇಡ್... ನೆನಪುಗಳ ಚಿಗುರಿಸುವ ಸಾಕ್ಷ್ಯಚಿತ್ರ

**ಶಾಂತರಾಜು ಎಸ್. ಮಳವಳ್ಳಿ**

ಮಹಾರಾಷ್ಟ್ರದ ರಾಮ್‌ಬಾಯ್ ನಗರದಲ್ಲಿ 1997ರ ಒಂದು ಮುಂಜಾನೆ ಬಾಬಾ ಸಾಹೇಬ್ ಅಂಬೇಡ್ಕರರ ಮೂರ್ತಿಗೆ ಚಪ್ಪಲಿ ಹಾರವನ್ನಾಕಿ ಅವಮಾನಿಸಲಾಗಿರುತ್ತದೆ. ಇದನ್ನು ಖಂಡಿಸಿ ಹತ್ತಾರು ಮಂದಿ ದಲಿತರು ಪ್ರತಿಭಟನೆಗೆ ಮುಂಧಾಗುತ್ತಾರೆ. ಬೆಳಿಗ್ಗೆ 7.30ರೊತ್ತಿಗೆ ಪೊಲೀಸರೂ ಜಮಾಯಿಸುತ್ತಾರೆ. ಜನಗಳು ಸೇರುವುದನ್ನು ನಿಲ್ಲಿಸಲು ಪೊಲೀಸರು, ಸುಮಾರು ಹತ್ತು ಸುತ್ತು ಗುಂಡನ್ನು ಹಾರಿಸುತ್ತಾರೆ. ಘಟನೆಯಲ್ಲಿ 10 ಮಂದಿ ಅಮಾಯಕ ದಲಿತರು ಸ್ಥಳದಲ್ಲೇ ಅಸುನೀಗುತ್ತಾರೆ. (ನಂತರದ ದಿನಗಳಲ್ಲಿ ಗುಂಡು ಹೊಕ್ಕವರೊಬ್ಬರನ್ನು ಸೇರಿ ಒಟ್ಟು 11 ದಲಿತರು ಘಟನೆಯಿಂದ ನೇರವಾಗಿ ಹತ್ಯೆಗೊಳಗಾದವರು) ಈ ಘಟನೆಯಿಂದ ಮನನೊಂದ ಹಾಡುಗಾರ-ಹೋರಾಟಗಾರ ವಿಲಾಸ್ ಘಾಗ್ರೆ, ಪೊಲೀಸ್ ಫೈರಿಂಗ್‌ನ ಆರನೆ ಧಿನಕ್ಕೆ ಆತ್ಮಹತ್ಯೆಗೆ ಶರಣಾಗುತ್ತಾರೆ. ಬದಲಾಗದ ದಲಿತರ ಮೇಲಿನ ದೌರ್ಜನ್ಯವನ್ನು ತಮ್ಮ ಸಾವಿನ ಮೂಲಕ ಪ್ರತಿಭಟಿಸುವ ಘಾಗ್ರೆಯವರಿಂದಲೇ 'ಜೈ ಭೀಮ್' ಶುರುವಾಗುವುದು. ಸುಮಾರು 15 ವರುಷಗಳ ದಲಿತ ನಡೆಯನ್ನು ಸಮಗ್ರವಾಗಿ ದೃಶ್ಯ ಮಾಧ್ಯಮದಲ್ಲಿ ಕಟ್ಟಿಕೊಟ್ಟಿರುವ ಪಟವರ್ಧನ್‌ರವರ ಪ್ರಯತ್ನವನ್ನು ಅಭಿನಂದಿಸಲೇಬೇಕು.

ಸಾಮಾನ್ಯ ದಲಿತರ ಮನೆಯ ಪ್ರತಿಭೆಗಳೇ 'ಜೈ ಭೀಮ್'ನ ನಾಯಕ-ನಾಯಕಿಯರು. ಹಾಡುಗಾತಿ ಸರಸ್ವತಿ ಬಸೋಡೆ, ಸಾಹಿತಿ ವಿಲಾಸ್ ಘಾಗ್ರೆ, ಅಂತರ್-ಜಾತಿ ಮದುವೆಯಾದ ಜೋಡಿಗಳು, ತಮ್ಮ ಕವ್ವಾಲಿ ಮೂಲಕ ಸ್ತ್ರೀ-ಪುರಷರ ಲಿಂಗ ಸಮಾನತೆಯನ್ನು ಎತ್ತಿಹಿಡಿಯುವ ಹಾಡುಗಾರರು, ಅಲೆಮಾರಿ ಬದುಕಿನ ಬ್ಯಾರಿಸ್ಟರ್ ಕಥೆಯನ್ನು ರಸವತ್ತಾಗಿ ಹೇಳುವ ಮಾತುಗಾರರು...ಇಂತಹವರ ಜೀವನವನ್ನು ಬಿಡಿಸಿಡುತ್ತಲೇ, ರಾಜಕೀಯ ಬಯಲಾಟಗಳನ್ನು 200 ನಿಮಿಷದ 'ಜೈ ಭೀಮ್' ದೃಶ್ಯ ಕಥಾನಕ, ಎಲ್ಲೂ ಬೇಸರವಾಗದಂತೆ ಪ್ರೇಕ್ಷಕರನ್ನು ಹಿಡಿದಿಡುತ್ತದೆ. 14 ವರುಷಗಳ ತಮ್ಮ ಅಗಾಧ ದೃಶ್ಯಪರ್ವವನ್ನು ಎಲ್ಲೂ ಗೊಂದಲಕ್ಕೀಡು ಮಾಡದಂತೆ ಸಂಕಲಿಸಿದ್ದಾರೆ ಪಟವರ್ಧನ್‌ರವರು.

**ಸಾಮಾನ್ಯ ದಲಿತರ ಮನೆಯ ಪ್ರತಿಭೆಗಳೇ 'ಜೈ ಭೀಮ್'ನ ನಾಯಕ-ನಾಯಕಿಯರು. ಹಾಡುಗಾತಿ ಸರಸ್ವತಿ ಬಸೋಡೆ, ಸಾಹಿತಿ ವಿಲಾಸ್ ಘಾಗ್ರೆ, ಅಂತರ್-ಜಾತಿ ಮದುವೆಯಾದ ಜೋಡಿಗಳು, ತಮ್ಮ ಕವ್ವಾಲಿ ಮೂಲಕ ಸ್ತ್ರೀ-ಪುರಷರ ಲಿಂಗ ಸಮಾನತೆಯನ್ನು ಎತ್ತಿಹಿಡಿಯುವ ಹಾಡುಗಾರರು, ಇಂತಹವರ ಜೀವನವನ್ನು ಬಿಡಿಸಿಡುತ್ತಲೇ, ರಾಜಕೀಯ ಬಯಲಾಟಗಳನ್ನು 200 ನಿಮಿಷದ 'ಜೈ ಭೀಮ್' ದೃಶ್ಯ ಕಥಾನಕ, ಎಲ್ಲೂ ಬೇಸರವಾಗದಂತೆ ಪ್ರೇಕ್ಷಕರನ್ನು ಹಿಡಿದಿಡುತ್ತದೆ.**

'ಜೈ ಭೀಮ್' ಚಿತ್ರವನ್ನು ತಾಂತ್ರಿಕವಾಗಿ ನೋಡಿದರೆ ಪೇಲವವಾಗಿ ಕಂಡುಬಿಡುತ್ತದೆ. ಇದು ಸಾಕ್ಷ್ಯಚಿತ್ರಕ್ಕಿರುವ ಧನಸಹಾಯದ ಮಿತಿಗಳಿಂದಲೂ ಆಗಿದ್ದಿರಬಹುದು. ಆದರೆ ಚಿತ್ರವು ತನ್ನ ಸತ್ವದಿಂದ ನೋಡಿಸಿಕೊಳ್ಳುವ ಮತ್ತು ಚಿಂತನೆಗೆ ಹಚ್ಚುವ ಗುಣವನ್ನು ಹೇರಳವಾಗಿ ಹೊಂದಿದೆ ಎಂದರೆ ತಪ್ಪಾಗಲಾರದು. ಪಟವರ್ಧನ್‌ರವರು ಉತ್ತಮ ಸಂಕಲನಕಾರರಾಗಿರುವು ದರಿಂದ ಅವರ ಎಂದಿನ 'ಮ್ಯುಸಿಕಲ್-ಹಿಸ್ಟರಿ ಮಾಂಟೇಜ್' ಕಟ್ಟಿಕೊಡಲು ಸಾಧ್ಯವಾಗಿದೆ. ಉದಾಹರಣೆಗೆ, "ನನ್ನ ಬ್ಯಾರಿಸ್ಟರ್ ಗಂಡ ಮನೆಗೆ ಬರುತ್ತಾನೆ "ಎಂದು ಹಿನ್ನಲೆಯಲ್ಲಿ ಹಾಡು ಬರುವಾಗ, ದಲಿತನೊಬ್ಬ ನಗರದ ರಸ್ತೆಯನ್ನು ತಾರಿಸುತ್ತಿರುತ್ತಾನೆ. ಅಂಬೇಡ್ಕರ್ ಜಯಂತಿಯ ಪ್ರಯುಕ್ತ ಜನಪ್ರಿಯ ಹಿಂದಿ ಹಾಡುಗಳಿಗೆ (ಲೋಕಂಡ್‌ವಾಲಾ, ಮುಂಬೈ ಡಾನ್‌ನಂತಹ ಹಾಡುಗಳು) ದಲಿತ ಮಕ್ಕಳು ನರ್ತಿಸುತ್ತಿರುತ್ತಾರೆ. ಮತ್ತೊಂದು ದೃಶ್ಯದಲ್ಲಿ, ಪ್ರತಿಷ್ಠಿತ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳು ಮೀಸಲಾತಿಯನ್ನು ವಿರೋಧಿಸುತ್ತಿರುವಾಗಲೇ, ಜಾತಿಯ ಕಾರಣದಿಂದಲೆ ತನ್ನ ಗಂಡನನ್ನು ಕಳೆದುಕೊಳ್ಳುವ ದಲಿತ ಮಹಿಳೆಯೊಂದಿಗೆ ನಿರ್ದೇಶಕರು ತಮ್ಮ 'ವಿಷ್ಯುವಲ್ ಕಟ್'ನಿಂದ ಧನಿಗೂಡಿಸುತ್ತಾರೆ. ತನ್ನ ಗಂಡನನ್ನು ಕೊಂದವರು 20 ಲಕ್ಷದ ಆಮಿಷ-ಬೆದರಿಕೆ ಒಡ್ಡಿ ಕೇಸನ್ನು ಬಿಟ್ಟುಬಿಡಲು ಹೇಳಿದರೂ, ಇಂತಹ ಘಟನೆ ಮುಂದೆಂದೂ ಯಾವ ದಲಿತನಿಗೂ ನಡೆಯದಂತೆ ತಡೆಯುವ ವಿಶ್ವಾಸದಿಂದ ಹೋರಾಡುತ್ತಿರುವ ಅನಕ್ಷರಸ್ಥ ದಲಿತ ಮಹಿಳೆಯ ಕಥೆ ಎಂಥಹವರ ಹೃದಯವನ್ನೂ ತಟ್ಟದೆ ಇರದು. ಹೀಗೆ ಒಂದರೊಳಗೆ ಮತ್ತೊಂದು ಅರ್ಥವನ್ನು, ಪರ-ವಿರುದ್ಧ ಎರಡನ್ನೂ ಪ್ರತೀ ದೃಶ್ಯದಲ್ಲಿ ಪ್ರಜ್ಞಾಪೂರ್ವಕವಾಗಿ ಹೆಣೆದು, ಒಂದು ತೀರ್ಮಾನವನ್ನು ಪ್ರೇಕ್ಷಕನ ಮುಂದಿಡುವ ಚಾತಿಯನ್ನು ಚಿತ್ರದುದ್ದಕ್ಕೂ ಕಾಣಬಹುದು.

ಗಣರಾಜ್ಯವಾದ 63 ವರ್ಷಗಳಿಂದಲೂ ತಳವಿಲ್ಲದ ಮಡಿಕೆಗೆ ನೀರುಯ್ಯುವಂತೆ ಮಾತನಾಡುವ ರಾಜಕೀಯ ನಾಯಕರನ್ನು ಮತ್ತು ಪಕ್ಷಗಳನ್ನು ಚಿತ್ರ ತೀವ್ರ ವಿಶ್ಲೇಷಣೆಗೆ ಒಳಪಡಿಸಲು ಬಲವಾದ ಕಾರಣವಿದೆ. ಎಲ್ಲಾ ಚುನಾವಣಾ ಭಾಷಣಗಳಲ್ಲಿ ದಲಿತರ ಓಟ್‌ಬ್ಯಾಂಕ್‌ಗಾಗಿ ಆಯಾ ಪಕ್ಷಗಳು ಮಾಡುವ ಹುನ್ನಾರವನ್ನೂ ಪ್ರಸ್ತುತ ದಲಿತರು

ಅರಿಯದೇ ಇರುವುದು ವಿಷಾದವೆನಿಸುತ್ತದೆ. 1977ರಲ್ಲಿ ದಲಿತನೊಬ್ಬನನ್ನು ಕಲ್ಲಿನಿಂದೊಡೆದು ಕೊಂದ ಶಿವಸೇನೆ 97ರ ಹೊತ್ತಿಗೆ ಬಿಜೆಪಿಯೊಂದಿಗೆ ಗದ್ದುಗೆಗೇರಿತ್ತು. 1997ರಲ್ಲಿ 10 ದಲಿತರ ಗೋಲಿಬಾರ್‌ಗೆ ಖುದ್ದು ಆದೇಶವನ್ನು ನೀಡಿದ್ದೂ ಅವರೇ. ಈ ಹನ್ನೊಂದು ವರುಷಗಳಲ್ಲಿ ಶಿವಸೇನೆ, ಬಿಜೆಪಿಯ ಮಾತಿನ ಬಣ್ಣವೇ ಬದಲಾಗಿದೆ. ಜನಗಳೂ ಸಹಾ 97ರ ಘಟನೆ ನಡೆದೇ ಇಲ್ಲವೆಂಬಂತೆ ಅಥವಾ ಘಟನೆ ನೆನಪಿದ್ದರೂ ಯಾವ ಪಕ್ಷ ಅವರ ಬಲಿಗೆ ಕಾರಣವಾಯಿತು ಎಂಬುದನ್ನೂ ಮರೆತಂತೆ ಇದೆ. ಇಷ್ಟು ಸಾಲದೆಂಬಂತೆ 2007ರ ಹೊತ್ತಿಗೆ ದಲಿತ ಬಣಗಳೇ ಹಿಂದುತ್ವವಾದಿ ಪಕ್ಷಗಳೊಂದಿಗೆ ಬಹಿರಂಗವಾಗಿ ಕೈ ಜೋಡಿಸುತ್ತಿರುವುದು ಇಡೀ ದಲಿತ ಸಂಘಟನೆಯ, ಅಂಬೇಡ್ಕರ್ ಆಶಯಗಳಿಗೆ ಕೊಳ್ಳಿ ಇಟ್ಟಂತೆ ಅಲ್ಲವೇ?. ಚಿತ್ರ ಧ್ವನಿಸುವುದೂ ಇದನ್ನೇ. 'ಹಿಂದೂ ನಾವೆಲ್ಲಾ ಒಂದು' ಎನ್ನುವುದರ ಹಿಂದೆ ಬೆನ್ನಿಗೆ ಚೂರಿ ಹಾಕುವ ಹಿಂದುತ್ವವಾದಿ ಅಜೆಂಡಾಗಳಿಗೆ ನಮ್ಮ ದಲಿತ ನಾಯಕರು ಸಾಥ್ ನೀಡುತ್ತಿರುವುದು ಸರಿಯೇ?

ಇಂತಹ ವಿಚಾರಹೀನ ಬೆಳವಣಿಗೆ ಕೇವಲ ಮುಂಬೈಗೆ ಮಾತ್ರ ಸೀಮಿತವಾಗಿಲ್ಲ. ಕರ್ನಾಟಕವೂ ಸೇರಿದಂತೆ ದೇಶದ ಬಹುತೇಕ ದಲಿತರು 'ಹಿಂದೂ'ಗಳಾಗುತ್ತಿರುವುದನ್ನು ಕಾಣಬಹುದಾಗಿದೆ. ಉದಾಹರಣೆಗೆ, ಕರ್ನಾಟಕ-ಒಡಿಸ್ಸಾದಲ್ಲಿ ಚರ್ಚ್‌ಗಳ ಮೇಲೆ ಧಾಳಿ ಮಾಡಿಸಲು ದಲಿತರನ್ನೇ ಬಳಸಿಕೊಂಡಿದ್ದು, ಪರಿವರ್ತಿತ ದಲಿತ ಐಡೆಂಟಿಯ ಪ್ರತೀಕವಲ್ಲವೇ? ಬಹುಶಃ ಸಮಾಜದ ಒಂದು ದಲಿತ ವರ್ಗವನ್ನು ಹೊರೆತು ಮಿಕ್ಕೆಲ್ಲಾ ಸಂಘಟನೆಗಳು ಶೋಷಕ ವರ್ಗದೊಂದಿಗೆ ಮಿಳಿತವಾಗಿಬಿಟ್ಟಿವೆ. ಇಲ್ಲದಿದ್ದರೆ, ಗಲ್ಲಿಗಲ್ಲಿಗೊಂದು ವಿಭಿನ್ನ ಅಂಬೇಡ್ಕರ್ ಸಂಘಟನೆಗಳಿರುತ್ತಿರಲಿಲ್ಲವೇನೊ... 'ಜೈ ಭೀಮ್' ದಮನಿತ ಸಮುದಾಯಗಳ ದಾರಿಯನ್ನು ವಿವೇಚಿಸುವಂತೆ ಮಾಡುವ ಶಕ್ತಿ ಹೊಂದಿರುವುದು ಇದೇ ಕಾರಣದಿಂದ. ನಮ್ಮ ನೆನಪುಗಳನ್ನು ಮತ್ತೆ ಮತ್ತೆ ಚಿಗುರಿಸುವ ಕಾರ್ಯದಿಂದ. ಚಿತ್ರದಲ್ಲಿ ಮತ್ತೆ ಮತ್ತೆ ಬರುವ "ಸರ್ಕಾರಿ ದಾಖಲೆಗಳ ಆಧಾರಿತ, ದೇಶದಲ್ಲಿ ಇಂದೂ ಸಹಾ ದಿನವೊಂದಕ್ಕೆ ಸರಾಸರಿ 2 ದಲಿತ ಹೆಣ್ಣಿನ ಅತ್ಯಾಚಾರ ಮತ್ತು 3 ಕೊಲೆ ನಡೆಯುತ್ತವೆ" ಎಂಬಿತ್ಯಾದಿ ಅಂಶಗಳ ಉದ್ದೇಶ, ಸಾವಿರಾರು ಖೈರ್ಲಾಂಜಿಗಳನ್ನು ಪ್ರತಿನಿಧಿಸುತ್ತದೆ. ಇಡೀ ಚಿತ್ರ ನಮ್ಮ ನೆರೆತ ನೆನಪುಗಳ ಪುನರ್‌ವ್ಯಾಖ್ಯಾನದ ತುಣುಕುಗಳಷ್ಟೆ. ರಾಜಕೀಯ ದೊಂಬರಾಟವನ್ನು ಟೀಕಿಸುತ್ತಲೇ, ಸಂಘಟನೆ ಮತ್ತು ಅನ್ಯಮಾರ್ಗಗಳೆಡೆಗೂ ಚಿಂತಿಸುವಂತೆ ಚಿತ್ರ ಮಾಡುತ್ತದೆ. ಅಂಬೇಡ್ಕರರ ಪರಿನಿರ್ವಾಣದ ದಿನದಂದು ಮಹಾರಾಷ್ಟ್ರದಲ್ಲಿ ನಡೆಯುವ ಬುದ್ಧ ಧರ್ಮ ಮತಾಂತರವು ನಿಜವಾಗಿಯೂ ಜಾತಿ ಅಳಿಸಲು ಸಾಧ್ಯವೇ ಎಂಬ ಪ್ರಶ್ನೆಯನ್ನು ಹುಟ್ಟುಹಾಕುತ್ತದೆ.

ಈ ಹದಿನಾಲ್ಕು ವರುಷಗಳಲ್ಲಿ ತಮಗೆ ದೊರೆತ ಎಲ್ಲಾ ಅವಕಾಶಗಳನ್ನು ಚಿತ್ರೀಕರಿಸಲು ಪಟವರ್ಧನ್ ಪ್ರಯತ್ನಿಸಿದ್ದಾರೆ. ಇದರಲ್ಲಿ ತಮಗೆ ದೊರೆತ ಕೋಮು ಪ್ರಚೋದಿತ ಭಾಷಣಗಳನ್ನು ತಮ್ಮದೇ 'ಬ್ರಾಂಡ್ ಎಡಿಟ್'ನಿಂದ ಲೇವಡಿ ಮಾಡಿದ್ದಾರೆ. ಉದಾಹರಣೆಗೆ. ಚವನ್ ಬ್ರಾಹ್ಮಣರ ಮೆರವಣಿಯ ದೃಶ್ಯದ ನಂತರ, ಅಶೋಕ್ ಸರಸ್ವತ್‌ರ ಇನ್ನೊಂದು ಭಾಷಣದ ಮಾತುಗಳನ್ನು ಸೇರಿಸುತ್ತಾರೆ. ಗುಂಡನನ್ನು ಕೇಳುತ್ತಾರಂತೆ, 'ಗಣೇಶ ಯಾರು?' "ಗಣೇಶ ಮಣ್ಣಿನ ಮೂರ್ತಿ, ಅವನನ್ನು ಮಾಡುವುದು ಕುಂಬಾರ ಹಾಗಾಗಿ ಕುಂಬಾರನೇ ಗಣೇಶನ ಅಪ್ಪ" -ಎಂದು ಗುಂಡ ಉತ್ತರಿಸುತ್ತಾನೆ. ಇನ್ನೊಂದು ಕಥೆಯಲ್ಲಿ, ಭಾಷಣಕಾರ ಪ್ರೇಕ್ಷಕರನ್ನು ಪ್ರಶ್ನಿಸುತ್ತಾನೆ, "ಜಗತ್ತನ್ನೇ ಕಾಪಾಡುವ ಆ ತಿರುಪತಿ ತಿಮ್ಮಪ್ಪನಿಗೆ ಯಾಕೆ ಗನ್‌ಮ್ಯಾನ್ ಪ್ರೊಟೆಕ್ಷನ್?" ಹೀಗೆ ಜನಸಾಮಾನ್ಯರ ಸಂಭಾಷಣೆಗಳನ್ನು ಮತ್ತು ಅಷ್ಟೇ ಪ್ರಭಾವಿಯಾಗಿ ನಂಜಿಗಗಳ ಬುಡವನ್ನೇ ಅಲುಗಾಡಿಸುವ ಅನೇಕ ಅಂಶಗಳನ್ನು ಪಟವರ್ಧನ್ ಜೋಡಿಸಿರುವುದು, ಪ್ರೇಕ್ಷಕನನ್ನು 3 ಗಂಟೆ ಹಿಡಿದುತ್ತಾ, ಚಿಂತನೆಗೆ ಹಚ್ಚುವಂತೆ ಮಾಡುತ್ತವೆ.

ನನ್ನ ನೆಚ್ಚಿನ ಸಾಕ್ಷ್ಯಚಿತ್ರಕಾರ ಅಮರ್ ಕನ್ವರ್ 'ನೈಟ್ ಆಫ್ ಪ್ರಾಫೆಸಿ'ಯಲ್ಲಿ ದಮನಿತ ಧನಿಗಳನ್ನು ಅವರವರ ಸಂಗೀತದ ಮೂಲಕ ಸಂವಹಿಸಲು ಯತ್ನಿಸಿದ್ದಾರೆ. ಚಿತ್ರದಲ್ಲಿ ಆಂಧ್ರದ ವೆಂಕಣ್ಣ, ಗದ್ದರ್, ನಾಗಾ ಹಾಡುಗಾರರು... ಮುಂತಾದವರು ತಮ್ಮ ಹಾಡುಗಳ ಮೂಲಕ ತಮ್ಮ ಕಿಚ್ಚನ್ನು ಅಭಿವ್ಯಕ್ತಿಸುತ್ತಾರೆ. 'ಜೈ ಭೀಮ್' ಇದೇ ಎಳೆಯನ್ನು ನೆನಪಿಸಿದರೂ, ಕನ್ವರ್‌ರ ಚಿತ್ರಕ್ಕೆ ನೇರವಾಗಿ ಯಾವುದೇ ಹೋಲಿಕೆ ಮಾಡಲು ಸಾಧ್ಯವಿಲ್ಲ. 'ಜೈ ಭೀಮ್' ಅಮರ್ ಕನ್ವರರ ಚಿತ್ರಕ್ಕಿಂತ ಬಹುಹಿಂದಿನಿಂದಲೇ ಚಿತ್ರೀಕರಣವಾಗುತ್ತಾ ಬಂದಿದ್ದು, ಈ ವರುಷ ಬಿಡುಗಡೆಗೆ ಸಿದ್ಧವಾಗಲು ಒಂದು ಮುಖ್ಯ ಕಾರಣವಿದೆ. 97ರ ಘಟನೆಯಲ್ಲಿ ಸುಳ್ಳು ಕೇಸ್‌ಗಳಿಗೆ ಗುರಿಯಾದವರ ವಿರುದ್ಧದ ಎಲ್ಲಾ ಮೊಕದ್ದಮೆಗಳ ರದ್ದು ಮತ್ತು ಹತ್ತು ಮಂದಿ ದಲಿತರ ಸಾವಿಗೆ ಕಾರಣವಾದ ಅಧಿಕಾರಿಗಳಿಗೆ ಶಿಕ್ಷೆಯಾಗುವ ವರೆವಿಗೆ ಚಿತ್ರೀಕರಿಸಿ, ನಂತರ ಎಡಿಟ್ ಮಾಡಲು ಪಟವರ್ಧನ್ ತೀರ್ಮಾನಿಸಿದ್ದರಂತೆ. 'ಕಬೀರ್ ಕಲಾ ಮಂಚ್' ಎಂಬ ಉತ್ಸಾಹಿ ಯುವ ತಂಡ ಕಲೆಯ ಮೂಲಕ, ನಿರ್ಗತಿಕ-ನಿರ್ವಸತಿಯ ಹಾದಿಯಲ್ಲಿರುವವರಿಗೆ ಧನಿಯಾಗುತ್ತಾ ಬಂದಿದೆ. ಸಮಾನತೆಯ ಆದರ್ಶಗಳನ್ನು ತಮ್ಮ ಹಾಡು-ನಾಟಕಗಳ ಮೂಲಕ ಬಿತ್ತಿಸುತ್ತಾ, ಸಂಘಟಿತ ಉದ್ದೇಶವನ್ನು ಮನನ ಮಾಡುತ್ತಾ ಬಂದಿರುವ ಈ ತಂಡ ಇತ್ತೀಚೆಗೆ 'ಪ್ರಭುತ್ವದ ಹಿಂಸೆ' ತಾಳಲಾರದೆ ಭೂಗತವಾಗಿಬಿಟ್ಟಿದೆ.

ಪ್ರಜಾಪ್ರಭುತ್ವದಲ್ಲಿ ಅಭಿವ್ಯಕ್ತಿ ಸ್ವಾಂತಂತ್ರ್ಯ ಪ್ರತಿಯೊಬ್ಬರ ಹಕ್ಕಲ್ಲವೇ? ಇದನ್ನು ಹರಣ ಮಾಡುತ್ತಿರುವ ಪ್ರಭುತ್ವದ ಅನ್ಯಾಯವನ್ನು ನಾವು ಪ್ರಶ್ನಿಸದಿದ್ದರೆ 'ಕಬೀರ್ ಕಲಾ ಮಂಚ್' ತಂಡದ ಅಮಾಯಕ ಹೋರಾಟಗಾರರು ನಕ್ಸಲ್ ಹೆಸರಿನಲ್ಲಿ ಹತರಾಗುವುದು ಖಂಡಿತ. ಇದನ್ನು ಮನಗಂಡ ನಿರ್ದೇಶಕರು ತಮ್ಮ ಚಿತ್ರವನ್ನು ಬಿಡುಗಡೆಗೆ ಅಣಿಮಾಡಿಕೊಂಡರು. ಚಿತ್ರ ಕೊನೆಯಾಗುವುದೂ ಸಹಾ ಇದೇ ಅರ್ಥದೊಂದಿಗೆ. 'ಕಬೀರ್ ಕಲಾ ಮಂಚ್' ಸದಸ್ಯೆ ಸೋತಾಲ್ ಸಾಥೇಯ ತಾಯಿ, ತನ್ನ ಮಗಳು ಮಾಡುತ್ತಿರುವ ಕಾರ್ಯವನ್ನು ಹೆಮ್ಮೆಯಿಂದ ಮೆಚ್ಚುವ ದೃಶ್ಯದಿಂದ ಸ್ವೀಕ್ಸ್ ಔಟ್(ಸ್ಥಿರ ಚಿತ್ರ) ಆಗುವ ಮೂಲಕ.

ಪಟವರ್ಧನ್‌ರವರ ಹಿಂದಿನ 'ರಾಮ್ ಕೇ ನಾಮ್' ಮತ್ತು ಇತರೆ ಚಿತ್ರಗಳಂತೆ 'ಜೈ ಭೀಮ್', ವರ್ಷಗಟ್ಟಲೆ ಸೆನ್ಸಾರ್ ಮಂಡಳಿಯ ಅವಕೃಪೆಗೆ ಒಳಗಾಗದೆ ಇರುವುದು ಸಂತಸದಾಯಕ. ಹೀಗಾಗಲೇ ಮುಂಬೈನಲ್ಲಿ ಹಲವು ಸಂಘಟನೆಗಳು ಒಗ್ಗೂಡಿ ಕೆಲಸ ಮಾಡಲು ಶುರುವಿಟ್ಟಿವೆ. ಕಳೆದ ತಿಂಗಳು ಪೆಡೆಸ್ಟ್ರಿಯನ್ ಪಿಕ್ಚರ್ಸ್, ಬೆಂಗಳೂರಿನಲ್ಲೂ ಮೌಂಟ್ ಕಾರ್ಮೆಲ್ ಕಾಲೇಜು ಸಭಾಂಗಣದಲ್ಲಿ 'ಜೈ ಭೀಮ್ ಕಾಮ್ರೇಡ್' ಪ್ರದರ್ಶನವನ್ನು ಏರ್ಪಡಿಸಿತ್ತು. ಅಂದು 'ನ್ಯಾಯ ಪರಿಪಾಲಕ' ವಕೀಲರ ದಿಢೀರ್ ಪ್ರತಿಭಟನೆ ಶುರುವಾಗಿ, ನಗರದ ಹೃದಯ ಭಾಗದಲ್ಲಿ 8 ಗಂಟೆಗೂ ಹೆಚ್ಚು ಹೊತ್ತು ಟ್ರಾಫಿಕ್ಕಾದರೂ, 650 ಮಂದಿ ಪ್ರದರ್ಶನಕ್ಕೆ ನೆರೆದಿದ್ದರು. ಉದ್ಯಾನ ನಗರಿಯಲ್ಲಿ ಒಂದು ಸಾಕ್ಷ್ಯಚಿತ್ರಕ್ಕೆ, ಹಲವು ಒತ್ತಡಗಳಿಂದಾಚೆಗೂ ಇಷ್ಟು ಮಂದಿ ಸೇರಿದ್ದು ನನಗೆ ಆಶ್ಚರ್ಯ ಮತ್ತು ಸಂತೋಷವೆರಡನ್ನೂ ಮೂಡಿಸಿತ್ತು.

ಏಕೆಂದರೆ ಈ ಹಿಂದೆಯ ಯಾವುದೇ ಸಾಕ್ಷ್ಯಚಿತ್ರ ಪ್ರದರ್ಶನದಲ್ಲೂ ನಾನು 650 ಮಂದಿಯನ್ನು ಕಂಡಿದ್ದಿಲ್ಲ. ಕಾಲೇಜಿನ ಸಿಬ್ಬಂದಿ ಬಾಗಿಲು ಹಾಕಬೇಕು ದಯಮಾಡಿ ನಡೆಯಿರಿ ಎನ್ನುವವರೆವಿಗೂ ಚಿತ್ರದ ನಂತರ ನಿರ್ದೇಶಕರೊಂದಿಗಿನ ಮಾತುಕತೆ ಮುಂದುವರೆದಿತ್ತು. ಚಿತ್ರ ಮರಾಠಿಯಲ್ಲಿದ್ದರೂ, ಆಸಕ್ತರು ತಮ್ಮ ಭಾಷೆಗೆ ಅನುವಾದಿಸಿ ತಮ್ಮ ತಮ್ಮ ಊರುಗಳಲ್ಲಿ ತೋರಿಸಲು ನಿರ್ದೇಶಕರಿಗೆ ಯಾವುದೇ ತಕರಾರಿಲ್ಲ. ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರಿಸಿರುವವರೆಲ್ಲಾ ಮತ್ತು ಮುಖ್ಯವಾಗಿ ದಲಿತ ಸಂಘಟನೆಕಾರರು ಆತ್ಮವಿಮರ್ಶೆಗಾದರೂ ನೋಡಲೇಬೇಕಾದ ಚಿತ್ರ 'ಜೈ ಭೀಮ್'. ■

# ಸಾಹಿತ್ಯ ಪರಂಪರೆಯ ಪರಮಹಂಸ:
# ಡಾ|| ಎಲ್. ಬಸವರಾಜು

ವಿ. ಚಂದ್ರಶೇಖರ ನಂಗಲಿ



ಅರವತ್ತರ ದಶಕ (1960–70) ಕನ್ನಡದಲ್ಲಿ ಬಹು ಮುಖ್ಯವಾದ ಪರ್ವ ಕಾಲವಾಗಿದೆ. ಈ ಅವಧಿಯಲ್ಲಿ ನವ್ಯ ಕಾವ್ಯ ಮತ್ತು ನವ್ಯ ವಿಮರ್ಶೆಯ ಅಬ್ಬರವನ್ನು ಕಾಣುತ್ತೇವೆ. ಇಡೀ ಕನ್ನಡ ಸಾಹಿತ್ಯ ಜಗತ್ತಿನಲ್ಲಿ ಕಾವ್ಯವೆಂದರೆ ನವ್ಯಕಾವ್ಯ, ವಿಮರ್ಶೆಯೆಂದರೆ ನವ್ಯವಿಮರ್ಶೆ ಎಂಬ ವಾತಾವರಣವಿತ್ತು. ಇಂಥ ಅಬ್ಬರದ ಅಧಿಕೃತ ಸಾಹಿತ್ಯ ಸಂಸ್ಕೃತಿಯಿಂದಾಚೆಗೆ ಸಲ್ಲುವ ಕುವೆಂಪು ಮತ್ತು ಎಲ್. ಬಸವರಾಜು ನಿರಂಕುಶಮತಿಗಳಾಗಿ ಕರ್ತವ್ಯ ನಿರ್ವಹಣೆ ಮಾಡಿದ್ದಾರೆ:

1. ಕುವೆಂಪು: ಮಲೆಗಳಲ್ಲಿ ಮದುಮಗಳು (1967)
2. ಎಲ್. ಬಸವರಾಜು:
   ಅಲ್ಲಮನ ವಚನ ಚಂದ್ರಿಕೆ (1960)
   ಅಲ್ಲಮನ ವಚನಗಳು (1969)

ಪ್ರತಿಷ್ಠಿತ ಸ್ಥಾನ–ಮಾನಗಳೆಂಬ ಅವಕಾಶಗಳು ಮತ್ತು ಹೇಗಾದರೂ ಸರಿ! ಪ್ರಾಪ್ತವಾಗುವ ವಿಶೇಷ ಸವಲತ್ತುಗಳನ್ನು ಕಣ್ಣೆತ್ತಿಯೂ ನೋಡದ ನಿರಂಕುಶಮತಿಗಳು 'ನಾ ನಿಮ್ಮೊಳಗು' ಎಂಬಂತೆ ಸತ್ಯದೊಂದಿಗೆ ಅನುಸಂಧಾನದಲ್ಲಿರುತ್ತಾರೆ. ಕನ್ನಡ ಸಾಹಿತ್ಯ ಜಗತ್ತು 'ನವ್ಯ' ಮಂತ್ರ ಪಠಣ ಮಾಡುತ್ತಿದ್ದಾಗ ಕುವೆಂಪು ಮತ್ತು ಬಸವರಾಜು ಅವರು 'ಗುಹೇಶ್ವರ'ರಾಗಿ ಕನ್ನಡ ಸಂಸ್ಕೃತಿಗೆ ಕೊಟ್ಟಿರುವ ಕೊಡುಗೆ ಅತ್ಯುನ್ನತವಾಗಿದೆ. 'ಮಲೆಗಳಲ್ಲಿ ಮದುಮಗಳು' ಮೂಲಕ ಕುವೆಂಪು ಮುಂಬರಲಿದ್ದ ದಲಿತ–ಬಂಡಾಯ ಸಾಹಿತ್ಯಕ್ಕೆ ಗಟ್ಟಿ ತಳಹದಿಯೊಂದನ್ನು ನಿರ್ಮಾಣ ಮಾಡಿದ್ದರೆ, ಎಲ್. ಬಸವರಾಜು ಅವರು ಅಲ್ಲಮನ ವಚನಗಳನ್ನು ವ್ಯಾಖ್ಯಾನಿಸುತ್ತಾ ಇವು ಹನ್ನೆರಡನೆ ಶತಮಾನದಲ್ಲೇ ಸಂಭವಿಸಿದ 'ದಲಿತ ಸಾಹಿತ್ಯ'ವೆಂಬಂತೆ (ಅಲ್ಲಮನ ಧಾತು ಮತ್ತು ಧೋರಣೆಗಳು) ನಿರೂಪಿಸಿದ್ದಾರೆ. ನಮ್ಮ ಕಾಲದ ಭಾಷೆಯಲ್ಲಿರುವ 'ಪ್ರಾಣಘಾತಕ' ಪರಿಭಾಷೆಗಳಿಂದ ಹೇಳುವುದಾದರೆ ಸೃಜನ ಕ್ಷೇತ್ರದಲ್ಲಿ ಕುವೆಂಪು ಮತ್ತು ಸೃಜನೇತರ ಕ್ಷೇತ್ರದಲ್ಲಿ ಎಲ್. ಬಸವರಾಜು ಇವರಿಬ್ಬರು ಯಜಮಾನ ಸಂಸ್ಕೃತಿಯ ಗುಲಾಮರಾಗದೆ ನಿರಂಕುಶಮತಿಯ ಕಾರ್ಯಾಚರಣೆ ನಡೆಸುತ್ತಾ ಕನ್ನಡ ಸಾಹಿತ್ಯ ಸಂಸ್ಕೃತಿಗೆ ಅನನ್ಯವಾದ ಮುಂಗಾಣ್ಕೆಯನ್ನೇ ಕೊಟ್ಟಿದ್ದಾರೆ.

## I. ಗುಹೇಶ್ವರನ ಗುಹೆಯಲ್ಲಿ

ಅಲ್ಲಮ ಪ್ರಭುವಿಗೆ ಸಂಬಂಧಪಟ್ಟಂತೆ ಎಲ್. ಬಸವರಾಜು ಕೃತಿಗಳಿವು:

1. ಅಲ್ಲಮನ ವಚನಚಂದ್ರಿಕೆ (1960)
2. ಅಲ್ಲಮನ ವಚನಗಳು (1969)
3. ಶಿವಗಣ ಪ್ರಸಾದಿ ಮಹಾದೇವಯ್ಯನ 'ಪ್ರಭುದೇವರ ಶೂನ್ಯ ಸಂಪಾದನೆ' (1967)
4. ಅಲ್ಲಮನು ಮೈಮೇಲೆ ಬಂದಾಗ (2004)
5. ಪ್ರಭುದೇವರ ಷಟ್ಸ್ಥಲದ ವಚನಗಳು (2005)
   (ಸಹಸ್ಪಂದನ ವ್ಯಾಖ್ಯಾನ ಸಹಿತ)

ಅಲ್ಲಮನನ್ನು ಒಳಗೊಳ್ಳುವ ಎಲ್. ಬಸವರಾಜು ದೃಷ್ಟಿಗೆ ನಿಲುಗಡೆಯಿಲ್ಲ. ತನ್ನನ್ನು ತಾನು ಮುರಿದುಕೊಂಡು ನಿತ್ಯ ನೂತನವಾಗಿ ಮತ್ತು ನಿರಂತರವಾಗಿ ಕಟ್ಟಿಕೊಳ್ಳುತ್ತಿರುವ ಎಲ್. ಬಸವರಾಜು ಅವರ 'ಅಲ್ಲಮ ಕೇಂದ್ರಿತ' ಪಠ್ಯ ನಿರ್ಮಾಣಗಳನ್ನು ಅಧ್ಯಯನ ಮಾಡುವವರಿಗೆ ಯಾವುದು ಸ್ಥಾವರ? ಯಾವುದು ಜಂಗಮ? ಎಂಬುದು ನಿಚ್ಚಳವಾಗಿ ಕಾಣಿಸುತ್ತದೆ. 'ಧರ್ಮದ ಮಿಥ್ಯಾದೃಷ್ಟಿಗಳೇ ಸಾಹಿತ್ಯದ ಓದಿಗೆ ಅವಜ್ಞಕಾರಿಯಾಗಿವೆ' ಎಂದು ನಂಬಿರುವ ಎಲ್. ಬಸವರಾಜು ಅವರು ಮಠಾಚಾರ್ಯರ ಪ್ರಭಾವಳಿಯಲ್ಲಿ ಮುಚ್ಚಿಹೋಗಿದ್ದ ಶೂನ್ಯ ಸಂಪಾದನೆಯ ಪ್ರಥಮ ಆವೃತ್ತಿಯನ್ನು ಬಯಲಿಗಿಡುವುದರ ಮೂಲಕ ಕೆಂಡವನ್ನು ಗೆದ್ದಲು ತಿನ್ನುವುದಿಲ್ಲವೆಂಬುದನ್ನು ಮನಗಾಣಿಸಿದ್ದಾರೆ. ಎಲ್. ಬಸವರಾಜು ಅವರ ಮಾತುಗಳನ್ನೇ ಆಲಿಸಿರಿ:

"...ಶಿವಶರಣರ ಒಂದೇ ಒಂದು ಸಾವಿರ (ಚಿಲ್ಲರೆ) ವಚನಗಳನ್ನು ಇಟ್ಟಿಗೆಯಾಗಿ ಎತ್ತಿಕೊಂಡು ನಡುನಡುವೆ ಗದ್ಯದ ವಜ್ರಗಾರೆಯನ್ನು ಬಳಸಿಕೊಂಡು, ಅಲ್ಲಲ್ಲಿ ಹಾಡುಗಳ ಶಿಖರವನ್ನು–ತಿದ್ದಿಕೊಂಡು ಒಂದು ವಿಶ್ವಧರ್ಮದ ಅನುಭವ ಮಂಟಪವನ್ನು ಕಟ್ಟಲಾಗಿದೆ. ಇದರ ಜಕಣಾಚಾರಿಯೆಂದರೆ ಶಿವಗಣ ಪ್ರಸಾದಿ ಮಹಾದೇವಯ್ಯ. ಅವನ ಆ ಅಪೂರ್ವ ಶಬ್ದಾರ್ಥ ಶಿಲ್ಪವನ್ನು ಕಾಲಕ್ರಮದಲ್ಲಿ ಹಲಗೆಯಾರ್ಯ, ಗುಮ್ಮಳಾಪುರದ ಸಿದ್ದಲಿಂಗ, ಗೂಳೂರು ಸಿದ್ದವೀರ ಎಂಬ ಓಜರು ತಿದ್ದಿ ತೀಡಿ ವಿಸ್ತರಿಸಿದ್ದಾರೆ, ವಿಂಗಡಣೆಗೊಳಿಸಿದ್ದಾರೆ..." (ಸರಳ ಶೂನ್ಯ ಸಂಪಾದನೆ, ಮಟ 8)

'ಸಂವಾದ' ಪತ್ರಿಕೆಯ ಓದುಗರ ಬಳಗ ಹಾಗೂ ಮೈಸೂರು ವಿವಿ. ಪತ್ರಿಕೋದ್ಯಮ ವಿಭಾಗ ಮೈಸೂರಿನ ಮಾನಸಗಂಗೋತ್ರಿಯಲ್ಲಿ ಫೆಬ್ರವರಿ 2004ರಲ್ಲಿ ಏರ್ಪಡಿಸಲಾಗಿದ್ದ 'ಸಂವಾದ' ಪತ್ರಿಕೆಯ ಕುರಿತ ವಿಚಾರ ಸಂಕಿರಣವೊಂದರಲ್ಲಿ ಡಾ॥ ಎಲ್. ಬಸವರಾಜು ಅವರು 2004ರ ವಿಶೇಷಾಂಕವನ್ನು ಬಿಡುಗಡೆ ಮಾಡಿದರು.



ವಚನ ಸಾಹಿತ್ಯವನ್ನು ಶೈವ ಮತ್ತು ವೀರಶೈವ ಮತಧರ್ಮದ ಗೂಟಕ್ಕೆ ಬಿಗಿದು ಕಟ್ಟುವ ರಭಸಮತಿಗಳಾದ ವಿದ್ವಾಂಸರಿಂದ ತುಂಬಿಹೋಗಿರುವ ಕನ್ನಡದ ವಾತಾವರಣದಲ್ಲಿ ಎಲ್. ಬಸವರಾಜು ಅವರು ವಚನಸಾಹಿತ್ಯವನ್ನು ವಿಶ್ವಧರ್ಮದ ಅನುಸಂಧಾನಕ್ಕೆ ವೇದಿಕೆಯಾಗಿಸಿರುವುದು ಅವರ ನಿರಂಕುಶಮತಿಗೆ ಮತ್ತು ವಚನಸಾಹಿತ್ಯದ ತಿರುಳಿಗೆ ಅನುಗುಣವಾಗಿದೆ. ಎಲ್. ಬಸವರಾಜು ಅವರು ಇಂಥ ಮುಕ್ತ ಮನೋಧರ್ಮದಿಂದ ಕರ್ತವ್ಯ ನಿಷ್ಠರಾಗಿ 'ಬಸವಣ್ಣನ ವಚನಗಳು' (1952), 'ಘನಲಿಂಗ ದೇವರ ವಚನಗಳು' (1964), 'ಅಕ್ಕನ ವಚನಗಳು' (1966), 'ಜೇಡರ ದಾಸಿಮಯ್ಯನ ವಚನಗಳು' (1970), 'ಸೊನ್ನಲಾಪುರದ ಸಂತ ಸಿದ್ಧರಾಮನ ನಿಜ ವಚನಗಳು' (2007), 'ನೂರಾರು ಶರಣರ ಸಾವಿರ ವಚನಗಳು' (2008), ಎಂಬ ವಚನ ಸಂಪುಟ ಶ್ರೇಣಿಯನ್ನೇ ಹೊರತಂದಿದ್ದಾರೆ. ಈ ಸಂಪುಟಗಳಲ್ಲಿರುವ ಬಸವರಾಜು ಅವರ ಪಠ್ಯನಿರ್ಮಾಣಗಳು ಮತ್ತು ಮುನ್ನುಡಿ ರೂಪದ ಸಾಂಸ್ಕೃತಿಕ ವಿಮರ್ಶೆ ಬಹುಮುಖ್ಯವಾದವು. ಸಿದ್ಧರಾಮಯ್ಯನಿಗಾಗುವ ಇಷ್ಟಲಿಂಗ ದೀಕ್ಷಾ ಪ್ರಕರಣವನ್ನು 'ಹುಸಿ ನುಸುಳು' ಎಂದು ಪ್ರಾಚೀನ ಶಾಸನಗಳ ಸಾಕ್ಷಾಧಾರಗಳಿಂದ ತೋರಿಸಿಕೊಟ್ಟಿರುವ ಎಲ್. ಬಸವರಾಜು ಅವರು ಸಿದ್ಧರಾಮನ ಹೆಸರಿನಲ್ಲಿ ಹೊಸೆಯಲ್ಪಟ್ಟಿರುವ ಖೋಟಾ ವಚನಗಳನ್ನು ಗುರುತಿಸಿ 'ನಿಜವಚನಗಳು' ಯಾವುವು? ಎಂಬುದನ್ನು (ಸತ್ಯವನ್ನು) ಎತ್ತಿ ಹಿಡಿದಿದ್ದಾರೆ. ಆದರೆ ಇಷ್ಟಲಿಂಗ ದೀಕ್ಷೆಯೆಂಬ ಹುಸಿ ಸುಳ್ಳನ್ನು ಐತಿಹಾಸಿಕ ಘಟನೆ ಎಂದು ಪರಿಗಣಿಸಿರುವ ವಿದ್ವಾಂಸರ ಮಂಡಳಿಯೇ ಸಮಗ್ರ ವಚನ ಸಂಪುಟಗಳ ಬೆನ್ನಿಗಿರುವುದರಿಂದ ಮತ್ತು ಈ ಸಂಪುಟಗಳು 1993 ಮತ್ತು 2001ರಲ್ಲಿ ಎರಡು ಸರ್ತಿ ಮುದ್ರಣಗೊಂಡಿರುವುದರಿಂದ ಸುಳ್ಳು ಸೃಷ್ಟಿಗಳ ವ್ಯಾಪಕ ಪ್ರಸಾರವನ್ನು ಕರ್ನಾಟಕ ಸರ್ಕಾರದ ಕೃಪೆಯಿಂದಲೇ ನಡೆಸಿದಂತಾಗುತ್ತದೆ. ಇದನ್ನು ಗಮನಿಸಿದರೆ, ಕರ್ನಾಟಕ ಸರ್ಕಾರವು ವಚನಸಾಹಿತ್ಯ ಸಂಪುಟಗಳ ಪ್ರಕಟನೆಯಲ್ಲಿ ನವಿಲುಗರಿಯನ್ನು (ಎಲ್. ಬಸವರಾಜು ಅವರನ್ನು) ಬಿಸುಟು, ಕನ್ನಡ ಸಂಸ್ಕೃತಿಯ ಕಿರೀಟಕ್ಕೆ ಕೋಳಿಪುಕ್ಕಗಳನ್ನು ಆಯ್ದುಕೊಂಡಂತಾಗಿದೆ. ನನ್ನಂಥ ಎಷ್ಟೋ ಮಂದಿ ಸಹೃದಯರು ಎಲ್. ಬಸವರಾಜು ಅವರ ಪಠ್ಯ ನಿರ್ಮಾಣಗಳನ್ನು ಕಣ್ಣಿಗೊತ್ತಿಕೊಂಡು ಹೃದಯ ಸಿಂಹಾಸನದಲ್ಲಿಟ್ಟುಕೊಂಡಿದ್ದಾರೆಂಬುದೇ ಒಂದು ಸಮಾಧಾನ!

## II. ಪಂಪನ ಮರಿದುಂಬಿಯಾಗಿ

ಪಂಪ ರನ್ನರಿಗೆ ಸಂಬಂಧಪಟ್ಟಂತೆ ಎಲ್. ಬಸವರಾಜು ಅವರು ಹೊರತಂದಿರುವ ಕೃತಿಗಳಿವು:

1. ಪಂಪನ ಆದಿಪುರಾಣ (1979)
2. ಪಂಪನ ಸರಳ ಆದಿಪುರಾಣ (2002)
3. ಪಂಪನ ಆದಿಪುರಾಣ ಕಥಾಮೃತ (2003)
4. ಪಂಪನ ವಿಕ್ರಮಾರ್ಜುನ ವಿಜಯಂ (2007)
5. ಸರಳ ಪಂಪಭಾರತ (1999)
6. ಸಮಸ್ತಭಾರತ ಕಥಾಮೃತ (2000)
7. ರನ್ನನ ಸರಳ ಗದಾಯುದ್ಧ (2005)
8. ರನ್ನನ ಗದಾಯುದ್ಧ (ವ್ಯಾಖ್ಯಾನ ಸಹಿತ)– 2006

ಪ್ರಾಚೀನ ಕನ್ನಡ ಕಾವ್ಯ ಪರಂಪರೆಯ ಬಾನಿನಲ್ಲಿ ಸೂರ್ಯ–ಚಂದ್ರರಂತೆ ಪ್ರಕಾಶಿಸುತ್ತಿರುವ ಕವಿಗಳೆಂದರೆ ಪಂಪ ಮತ್ತು ರನ್ನ. ಇವರ ಕಾವ್ಯಗಳನ್ನು ಪ್ರವೇಶಮಾಡಲು ಅತ್ಯಂತ ಕ್ಲಿಷ್ಟಕರ ಮತ್ತು ದೂರಗ್ರಾಹಿ ಎಂಬ ಅಭಿಪ್ರಾಯ ಸಾಮಾನ್ಯವಾಗಿರುವುದು ಕೂಡ ಹಸಿ ಸುಳ್ಳಾಗಿದೆ. ಹಿಟ್ಲರ್‌ನ ಪ್ರಚಾರಮಂತ್ರಿ ಗೋಬೆಲ್ಸ್ ಹೇಳಿರುವಂತೆ 'ಒಂದು ಸುಳ್ಳನ್ನು ನೂರು ಸರ್ತಿ ಹೇಳುತ್ತಿರು, ಅದು ನಿಜವಾಗಿ ಪರಿಣಮಿಸುವುದು' ಎಂಬ ಮಾತು ಕನ್ನಡದ ಪ್ರಾಚೀನ ಗ್ರಂಥ ಸಂಪಾದನೆಗಳನ್ನು ಗಮನಿಸಿದರೆ ಸರಿಯೆನಿಸುತ್ತದೆ. ಎಲ್. ಬಸವರಾಜು ಅವರು ಹೊರತಂದಿರುವ ಮೇಲಿನ ಪಠ್ಯನಿರ್ಮಾಣಗಳನ್ನು ಯಥಾಶಕ್ತಿ ಒಳಗೊಂಡವರಿಗೆ ಪಂಪ–ರನ್ನರು ಆತ್ಮೀಯರಾಗಿಬಿಡುತ್ತಾರೆ. ಈ ದೃಷ್ಟಿಯಿಂದ ಎಲ್. ಬಸವರಾಜು ಅವರು ಕೇವಲ ಗ್ರಂಥಸಂಪಾದನಾಕಾರರಲ್ಲ! ಸ್ವಾಮಿ ವಿವೇಕಾನಂದರನ್ನು 'ಕಾವಿಧಾರಿ ಸನ್ಯಾಸಿ' ಎಂದು ವರ್ಣಿಸಿದರೆ ಅದು ಕೇವಲ ತೋರಿಕೆಯ ವಿವರಣೆಯೇ ಹೊರತು ಅಂತರಂಗ ಸತ್ವದ ದರ್ಶನವಾಗುವುದಿಲ್ಲ. ಬದಲಿಗೆ 'ನಿರ್ಭೀತಿಯ ದಾರ್ಶನಿಕ' ಎಂದು ಕರೆದಲ್ಲಿ ಅವರ ವ್ಯಕ್ತಿತ್ವದ ಆಳವೊಂದನ್ನು ಸೂಚಿಸಿದಂತಾಗುತ್ತದೆ. ಎಲ್. ಬಸವರಾಜು ಅವರನ್ನು ಗ್ರಂಥ ಸಂಪಾದನಾಕಾರನೆಂದು ಕರೆಯುವುದು ಕೇವಲ ತೋರಿಕೆಯ ವಿವರಣೆಯಾಗಿ ರುವಂತೆಯೇ ಅವರು ಜೀವಮಾನದುದ್ದಕ್ಕೂ ಮಾಡಿದ ಯಾರೂ ಮಾಡಲಾಗದ ಕಾರ್ಯನಿಷ್ಠೆಗೆ ಮಸಿ ಬಳಿದಂತಾಗುತ್ತದೆ. ಎಲ್. ಬಸವರಾಜು ಅವರನ್ನು ಕನ್ನಡ ಸಂಸ್ಕೃತಿಯ ಸೃಜನಶೀಲ ಮತ್ತು ಗತಿಶೀಲ ಕಾಣ್ಕೆಯ ಪಠ್ಯನಿರ್ಮಾಣಕಾರ ಹಾಗೂ ಜನಮುಖಿಯಾದ ಸಾಂಸ್ಕೃತಿಕ ದೃಷ್ಟಿಕೋನದ ವಿಮರ್ಶಕನೆಂದು ಕರೆದಲ್ಲಿ ನಿಜದ ಮಾತಾಗುತ್ತದೆ. ದಿನಾಂಕ 3. 2. 12ರಂದು ಎಲ್. ಬಸವರಾಜು ಅವರ ಅಂತಿಮ ದರ್ಶನದ ಸಂದರ್ಭದಲ್ಲಿ ಮೈಸೂರಿನ ಅವರ ಮನೆಯ ಮುಂದೆ ಹಾಜರಿದ್ದ ದೇವನೂರು ಮಹಾದೇವ ಅವರು ಆಪ್ತಮಿತ್ರರೊಡನೆ ಮಾತನಾಡುತ್ತಾ ಹೇಳಿದ ಮಾತುಗಳಿವು:

"...ಎಲ್. ಬಸವರಾಜು ಇಲ್ಲದಿದ್ದರೆ 'ವಿದ್ವಾಂಸ' ಪದಕ್ಕೆ ಅರ್ಥವೇ ಇರುತ್ತಿರಲಿಲ್ಲ. ಈ ವಿದ್ವಾಂಸರೆಲ್ಲ 'ವಿಧ್ವಂಸಕ'ರಾಗಿ ಬಿಟ್ಟಿದ್ದಾರೆ. ಪಂಪಭಾರತ ಮತ್ತು ಆದಿಪುರಾಣಗಳನ್ನು ಓದಿಕೊಳ್ಳಲು ನನಗೆ ಸಾಧ್ಯವಾಗಿದ್ದು ಎಲ್. ಬಸವರಾಜು ಅವರಿಂದಲೇ! ಅವರಿಲ್ಲದಿದ್ದರೆ ಅವುಗಳನ್ನು ಓದಿಕೊಳ್ಳಲು ನನಗೆ ಸಾಧ್ಯವೇ ಆಗುತ್ತಿರಲಿಲ್ಲ..." ಆದಿಪುರಾಣದ ಭರತ–ಬಾಹುಬಲಿ ಪ್ರಸಂಗವನ್ನು ಪಿಯುಸಿ ಓದುತ್ತಿದ್ದ ನನ್ನ ಮಗಳು ಕೂಡ ಗ್ರಹಿಸಿದ್ದು ಎಲ್. ಬಸವರಾಜು ಅವರಿಂದಲೇ! ಬಸವರಾಜು ಅವರ ಪಠ್ಯನಿರ್ಮಾಣವನ್ನು ಗ್ರಹಿಸಿದ ನನ್ನ ಮಗಳು ಬೇರೆ ಪದ್ಯಭಾಗಗಳಿಗೆ ಇದೇ ರೀತಿ ಸಿಗುತ್ತದೆಯೇ? ಎಂದು ನನ್ನನ್ನು ಕೇಳಿದ್ದಳು. ಏಕೆಂದರೆ ಇದು ಎಲ್ಲರ ಎದೆಯಾಳದ ಪ್ರಶ್ನೆಯಾಗಿದೆ.

ಕನ್ನಡದಲ್ಲಿ ಸಾಹಿತಿಗಳು, ಪ್ರಸಿದ್ಧ ವಿಮರ್ಶಕರು ದೇವನೂರು ಮಹಾದೇವರ 'ಕುಸುಮಬಾಲೆ'ಯನ್ನು ಕನ್ನಡಕ್ಕೆ ಅನುವಾದ ಮಾಡಬೇಕೆಂದು ಅಪ್ಪಣೆ ಕೊಡುತ್ತಿದ್ದಾಗ ಎಲ್. ಬಸವರಾಜು ಅವರು ಸದ್ದುಗದ್ದಲವಿಲ್ಲದಂತೆ ಕುಸುಮಬಾಲೆಗೆ ಹೊಸ ಲಯಾಕಾರ ವಿನ್ಯಾಸವನ್ನು ಮಾಡಿ ಅದಕ್ಕೆ ನವನವೀನ ಓದಿಕೆಯ ಬಾಗಿನವನ್ನಿಟ್ಟು ಸಹೃದಯರ ಮಡಿಲು ತುಂಬಿದರು. ಜಾತಿ ಮತ್ತು ಮತಧರ್ಮಗಳ ಚೌಕಟ್ಟಿನಲ್ಲಿ ಸಂಶೋಧನೆ ಮಾಡಿ ಹೆಸರು ಗಳಿಸಿದವರು; ಅದಕ್ಕನುಗುಣವಾಗಿ ಶೈಕ್ಷಣಿಕ ಪುರೋಹಿತಶಾಹಿ ವ್ಯವಸ್ಥೆಯಲ್ಲಿ ಅತ್ಯುನ್ನತ ಸ್ಥಾನ–ಮಾನಗಳನ್ನು ಪಡೆದುಕೊಂಡವರು ಹಸುರು ಕಾಡಿನ ಬೆಳ್ಳಕ್ಕಿ ಕೊಕ್ಕರೆಗಳಂತೆ ಎದ್ದುಕಾಣುತ್ತಾರೆ. ಅದೇ ಆ ಹಸುರು ಕಾಡಿನ ಜೀವಸೆಲೆಯಾಗಿ ಜಿನುಗುತ್ತಾ ಇಡೀ ಪರಿಸರವನ್ನು ಒದ್ದೆಯಾಗಿ ಶುದ್ಧವಾಗಿಟ್ಟು, ಸದಾ ಜಂಗಮವಾಗಿರುವ ಜಲದ ಕಣ್ಣುಗಳು ಮೊದಲ ನೋಟಕ್ಕೆ ಎದ್ದು ಕಾಣುವುದಿಲ್ಲ. ಡಾ. ಎಲ್. ಬಸವರಾಜು ಅವರು ಇಂಥ ಜೀವ ಜಲದ ಕಣ್ಣುಗಳನ್ನುಳ್ಳ ಸಾಹಿತ್ಯ ಪರಂಪರೆಯ ಪರಮಹಂಸ ರಾಗಿದ್ದಾರೆ. ಇವರಿಂದ ಮೂಡಿಬಂದಿರುವ ಪ್ರಾಚೀನ ಕಾವ್ಯದ ಪಠ್ಯನಿರ್ಮಾಣಗಳನ್ನು ಗಮನಿಸಿದರೆ, ಅಂದು ಕವಿರಾಜ ಮಾರ್ಗ ಇಂದು ಬಸವರಾಜಮಾರ್ಗ ಎಂದು ಉದ್ಗರಿಸಬೇಕಾಗುತ್ತದೆ.

(29ನೇ ಪುಟಕ್ಕೆ)

ಸಹಕಾರ ವಲಯದಲ್ಲಿ
ಐತಿಹಾಸಿಕ ಹೆಜ್ಜೆಗಳು
ಕರ್ನಾಟಕ ಮುನ್ನಡೆಯುತ್ತಿದೆ
ರಾಷ್ಟ್ರದಲ್ಲೇ ಪ್ರಪ್ರಥಮ ಬಾರಿಗೆ
ಪ್ರತ್ಯೇಕ ಕೃಷಿ ಬಜೆಟ್ ಅನ್ನು ಮಂಡಿಸಲಾಗಿದೆ
ಶ್ರೀ ಡಿ.ವಿ. ಸದಾನಂದಗೌಡ
ಸನ್ಮಾನ್ಯ ಮುಖ್ಯಮಂತ್ರಿಗಳು
2010-11ನೇ ಸಾಲಿನಲ್ಲಿ ಪ್ರಪ್ರಥಮ ಬಾರಿಗೆ 8 ಜಿಲ್ಲೆಗಳಲ್ಲಿ ಶೇ.100ರಷ್ಟು ಲೆಕ್ಕಪರಿಶೋಧನಾ ಪ್ರಗತಿ ಸಾಧಿಸಲಾಗಿದೆ. ಈ ಪ್ರಕ್ರಿಯೆಗೆ ಮುಂದುವರೆದಂತೆ 2011-12ನೇ ಸಾಲಿನಲ್ಲಿ ಇನ್ನೂ 5 ಜಿಲ್ಲೆಗಳಲ್ಲಿ ಶೇ.100ರಷ್ಟು ಪ್ರಗತಿ ಸಾಧಿಸುವ ಗುರಿಯನ್ನು ಹೊಂದಲಾಗಿದೆ. 2011-12ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿನ ಎಲ್ಲಾ ಕಾರ್ಯನಿರತ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ವರದಿಗಳು ಸರ್ವ ಸದಸ್ಯರ ಸಭೆಗೆ ಲಭ್ಯವಾಗುವಂತೆ ಸೆಪ್ಟೆಂಬರ್ 2011ರೊಳಗಾಗಿ ವರದಿ ನೀಡುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.
ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಸಾಧನೆಗಳು
ಸಹಕಾರ ತತ್ವಗಳ ಪ್ರಚಾರಕ್ಕಾಗಿ ಹಾಗೂ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಅಗತ್ಯವಾದ ಶಿಕ್ಷಣ, ತರಬೇತಿ ಮತ್ತು ಸಹಕಾರ ಕ್ಷೇತ್ರದ ಚಟುವಟಿಕೆಗಳಿಗೆ ಪ್ರಚಾರ ನೀಡುವುದು ಮಹಾಮಂಡಳದ ಮುಖ್ಯ ಉದ್ದೇಶವಾಗಿದೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ:
ಸಹಕಾರ ಶಿಕ್ಷಣ ಯೋಜನೆಯಡಿ ಸದಸ್ಯ ಶಿಕ್ಷಣ ಮತ್ತು ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಸಹಕಾರ ಸಂಘಗಳ ಕಾರ್ಯದರ್ಶಿಗಳಿಗೆ, ಸದಸ್ಯರುಗಳಿಗೆ, ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿಗಳಿಗೆ, ಮಹಿಳಾ ಮತ್ತು ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಸದಸ್ಯರುಗಳಿಗೆ ಶಿಕ್ಷಣ ನೀಡುವುದು
ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಪ್ರಚಾರ ನೀಡುವ ಕಾರ್ಯವನ್ನು ವಾರಪತ್ರಿಕೆ ಹೊರಡಿಸುವ ಮೂಲಕ ಮಾಡುವುದು ಇತ್ಯಾದಿ.
2008-09, 2009-10 ಮತ್ತು 2010-11ನೇ ಸಾಲಿನಲ್ಲಿ ಮಹಾಮಂಡಳದ ವತಿಯಿಂದ ನಡೆಸಲಾದ ಶಿಕ್ಷಣ ಮತ್ತು ತರಬೇತಿ ಕಾರ್ಯಕ್ರಮಗಳಲ್ಲಿ 2013 ತರಗತಿಗಳನ್ನು ನಡೆಸಿದ್ದು, 90449 ಪ್ರತಿನಿಧಿಗಳು ಶಿಕ್ಷಣ ಪಡೆದಿರುತ್ತಾರೆ
ಮುಂದಿನ 5 ವರ್ಷಗಳಲ್ಲಿ ಸಹಕಾರ ಕ್ಷೇತ್ರದ ಎಲ್ಲಾ ಸದಸ್ಯರುಗಳಿಗೆ ಶಿಕ್ಷಣ ಮತ್ತು ತರಬೇತಿಯನ್ನು ನೀಡುವ ಯೋಜನೆಯನ್ನು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳವು ಹಮ್ಮಿಕೊಂಡಿರುತ್ತದೆ.
ಸಹಕಾರ ರಂಗ - ಸಮಾಜದ ಅಂಗ
ಕರ್ನಾಟಕ ವಾರ್ತೆ

(27ನೇ ಪುಟದಿಂದ)

## III. ಅಂದು ಕವಿರಾಜಮಾರ್ಗ; ಇಂದು ಬಸವರಾಜಮಾರ್ಗ

'ಕವಿರಾಜಮಾರ್ಗ'ವನ್ನು ಸಹೃದಯ ಸಮುದಾಯದ ಕನ್ನಡಿಯೆಂದೂ, ಕೈದೀವಿಗೆಯೆಂದೂ ಪರಿಗಣಿಸಲಾಗಿದೆ. ಇದಾದ ಮೇಲೆ ಒಂದು ಸಾವಿರ ವರ್ಷಗಳ ನಂತರ ಎಲ್. ಬಸವರಾಜು ಅವರು ಒಬ್ಬಂಟಿಯಾಗಿ ನಿಃಶಬ್ದವಾಗಿ ನಡೆದ ಮೇಕೆ ಹಾದಿಯೇ ಇದೀಗ ತೇರೆಳೆವ ಹೆದ್ದಾರಿಯಾಗಿ ಪರಿಣಮಿಸಿದೆ. ಸಾಹಿತ್ಯ ಕ್ಷೇತ್ರದಲ್ಲಿ ಸಂಶೋಧಕರೆನಿಸಿಕೊಂಡವರು ತಂತಮ್ಮ ಜಾತಿಯ ಜಗದ್ಗುರುಗಳಂತೆ ಆಯಾ ಮತಧರ್ಮಗಳ ಮತಾಚಾರ್ಯರಂತೆ ಸಲ್ಲುತ್ತಾ, ಸುಳ್ಳುಸೃಷ್ಟಿಗಳಿಂದ ಕೂಡಿದ ಬೂಸಲು ತತ್ವಗಳನ್ನು ಪ್ರಸಾರ ಮಾಡುತ್ತಿರುವುದು ಸಾಮಾನ್ಯ ಸಂಗತಿಯಾಗಿದೆ. ಆದ್ದರಿಂದಲೇ ನಮ್ಮ ಜಾತಿಪದ್ಧತಿಯ ಸಮಾಜದ ತದ್ರೂಪಿನಂತಿರುವ ಜೈನಸಂಶೋಧಕರು, ಶೈವಸಂಶೋಧಕರು, ವೀರಶೈವಸಂಶೋಧಕರು, ವೈದಿಕಸಂಶೋಧಕರು, ಬೌದ್ಧಸಂಶೋಧಕರು ಚಲಾವಣೆಯಾಗುತ್ತಾ ಜಾತೀಯ ಮತ್ತು ಮತೀಯ ಪೀಠಾಧಿಕಾರಿಗಳ ಪ್ರಭಾವಳಿಯಾಗಿ ಮೆರೆಯುತ್ತಿದ್ದಾರೆ. ಆದರೆ ಎಲ್. ಬಸವರಾಜು ಅವರು ಈ ಜಾತಿ ಪದ್ಧತಿಯ ಸಮಾಜಕ್ಕೆ ಸಿಂಹಸ್ವಪ್ನವಾಗಿದ್ದುಕೊಂಡು ಜೈನಸಾಹಿತ್ಯ, ಶೈವಸಾಹಿತ್ಯ, ವೀರಶೈವಸಾಹಿತ್ಯ, ವೈದಿಕಸಾಹಿತ್ಯ, ಬೌದ್ಧಸಾಹಿತ್ಯ ಎಂಬ ಸಂಕುಚಿತ ಸ್ಥಾವರಗಳಿಗೆ ಸಿಲುಕಿಕೊಳ್ಳದೆ, ಆ ಎಲ್ಲ ಸ್ಥಾವರಗಳನ್ನು ತಮ್ಮ ಸತ್ಯ ಶುದ್ಧ ಕಾರ್ಯದಿಂದ ಜಂಗಮಗೊಳಿಸಿದ್ದಾರೆ. ಜಾತಿ ಮತ್ತು ಮತಧರ್ಮಗಳನ್ನು ಮೀರುತ್ತಾ ವಿಶ್ವಮಾನವ ಮತ್ತು ವಿಶ್ವಧರ್ಮ ಪ್ರಜ್ಞೆಯಿಂದ ಹಗಲಿರುಳು ದುಡಿಯುತ್ತಿರುವ ಏಕಲವ್ಯ ಪ್ರತಿಭೆಯೆನ್ನಬಹುದಾದ ಎಲ್. ಬಸವರಾಜು ಅವರು 'ಬಸವರಾಜಮಾರ್ಗ'ವನ್ನೆ ನಿರ್ಮಾಣ ಮಾಡಿದ್ದಾರೆ. ಇಂದಿನ ಮತ್ತು ಮುಂದಿನ ತಲೆಮಾರುಗಳ ಸಹೃದಯ ಸಮುದಾಯದ ಪಾಲಿಗೆ ಬಸವರಾಜು ಅವರ ಕೃತಿಶ್ರೇಣಿ ಕನ್ನಡಿಯಾಗಿ ಕೈದೀವಿಗೆಯಾಗಿ ಬೆಳಗುತ್ತಾ ಸಹೃದಯರೆಲ್ಲರ ಸಹಚಾರಿಯಾಗಿದೆ. ಆದ್ದರಿಂದಲೇ 'ಅಂದು ಕವಿರಾಜಮಾರ್ಗ ಇಂದು ಬಸವರಾಜಮಾರ್ಗ' ಎಂದು ನಿಜನಮನವನ್ನಿಲ್ಲಿ ಸಲ್ಲಿಸಲಾಗಿದೆ.



## IV. ಕನ್ನಡ ವಿಮರ್ಶೆಯ ಮುಂದಿನ ನೇಗಿಲು

ಎಲ್. ಬಸವರಾಜು ಅವರು ಭಗವಾನ್ ಬುದ್ಧನನ್ನು ಕುರಿತು ಸಂಸ್ಕೃತದಲ್ಲಿ ಅಶ್ವಘೋಷ ರಚಿಸಿದ ಎರಡು ಮಹಾಕಾವ್ಯಗಳಾದ 'ಬುದ್ಧ ಚರಿತ' ಮತ್ತು ಸೌಂದರನಂದ' ಕೃತಿಗಳನ್ನು ಹೊಸಲಯಾಕಾರ ವಿನ್ಯಾಸದ ಸರಳ ಗದ್ಯದ ಮಹಾಕಾವ್ಯಗಳಾಗಿ ಕನ್ನಡೀಕರಿಸಿ ಕೊಟ್ಟಿದ್ದಾರೆ. ಇವೆರಡರ ಅಧ್ಯಯನದಿಂದ ಬುದ್ಧಮಾರ್ಗದ ಕರುಣಾ ಮೈತ್ರಿಯನ್ನು ಕನ್ನಡದಲ್ಲೆ ಕಾವ್ಯಾತ್ಮಕವಾಗಿ ಅರಿತುಕೊಳ್ಳಲು ಸಾಧ್ಯವಾಗಿರುವುದಕ್ಕೆ ಬಸವರಾಜು ಅವರನ್ನು ಹೃದಯ ತುಂಬಿ ಧ್ಯಾನಿಸಬೇಕಾಗಿದೆ. ಎಲ್. ಬಸವರಾಜು ಅವರು ರೂಪಿಸಿರುವ ಎಲ್ಲ ಕೃತಿಗಳ ಮುನ್ನುಡಿಗಳನ್ನು ಸಮಗ್ರ ದೃಷ್ಟಿಯಿಂದ ಪರಿಭಾವಿಸಿದ್ದಾರೆ. 1950ರಿಂದ ಇಲ್ಲಿಯವರೆಗೆ ಕನ್ನಡ ವಿಮರ್ಶೆ; ಅರ್ಧಶತಮಾನದ ಗತಿಶೀಲತೆಯ ಅರಿವಾಗುತ್ತದೆ. ಪ್ರಾಚೀನತೆಯ ಕಾಂತಿಯನ್ನು ನವೀನತೆಯ ಸತ್ವಕ್ಕೆ ಸಂಯೋಜಿಸಿರುವ ಬಸವರಾಜು ಅವರು ಆಧುನಿಕತೆಯ ಕ್ರಾಂತಿಗೆ ಪುರಾತನದ ಸತ್ವವನ್ನು ಸಂಲಗ್ನಗೊಳಿಸಿದ್ದಾರೆ. ಬಸವರಾಜು ಅವರ ಪಾಲಿಗೆ ಹಳತು-ಹೊಸತು ಎಂಬ ವಿರುದ್ಧ ಧ್ರುವಗಳಿಲ್ಲ! ಕನ್ನಡ ವಿಮರ್ಶೆಯಲ್ಲಿ 'ಸಾಂಸ್ಕೃತಿಕ ವಸ್ತುವಾದ' ಎಂಬ ಸಂಶೋಧನೆಗೆ ಯಾರಾದರೂ ತಮ್ಮನ್ನು ತೊಡಗಿಸಿಕೊಂಡಲ್ಲಿ ಇದಕ್ಕೆ ಬಸವರಾಜು ಅವರೇ ಆದ್ಯ ವಿಮರ್ಶಕರಾಗಿರುವುದರಿಂದ ಅವರನ್ನು ಕನ್ನಡ ವಿಮರ್ಶೆಯ ಮುಂದಿನ ನೇಗಿಲು ಎಂದು ಇನ್ನಾದರೂ ಗುರುತಿಸಬೇಕಾಗಿದೆ.

ಎಲ್. ಬಸವರಾಜು ಅವರು ಸೃಜನಶೀಲ ಪಠ್ಯನಿರ್ಮಾಣಕಾರ ಮತ್ತು ಸಾಂಸ್ಕೃತಿಕ ವಸ್ತುವಾದಿ ವಿಮರ್ಶಕ ಆಗಿರುವಂತೆಯೇ ಸ್ವವಿರಚಿತ ಕವನಗಳ ಮಾಲಿಕೆಯನ್ನೇ ಪ್ರಕಟಿಸಿದ್ದು ಸೃಜನಶೀಲ ಕವಿಯಾಗಿಯೂ ಹೆಸರು ಮಾಡಿದ್ದಾರೆ. ಜಾಲಾರಿ ಠಾಣಾಂತರ, ಡೊಂಕು ಬಾಲದ ನಾಯಕರು, ಚಿತ್ರಗುಪ್ತ ಚಂಪೂ, ತುಳಿಯುವ ಕಾಲಿಗೆ ಬಿದ್ದೀರ! ಕವನ ಕೂಡಲಸಂಗಮ ಮುಂತಾದ ಕವನ ಸಂಕಲನಗಳು ಗಮನಾರ್ಹವಾಗಿವೆ. ಕತ್ತಲೆ ರಾಕ್ಷಸರಿಗೆ ಬೆಳಕು ಎಂಬ ಅಂಕಣ ಬರೆಹಗಳ ಸಂಕಲನ ಕೂಡ ಪ್ರಕಟವಾಗಿದೆ. ರಾಘವಾಂಕನ ಹರಿಶ್ಚಂದ್ರಕಾವ್ಯ ಮತ್ತು ಸಿದ್ಧರಾಮ ಚರಿತೆಗಳ ಪಠ್ಯನಿರ್ಮಾಣ, ಕಡಕೋಳ ಮಡಿವಾಳಪ್ಪನ ತತ್ವಪದಗಳು, ಶಿವದಾಸ ಗೀತಾಂಜಲಿ, ಹಂಪೆಯ ಹರಿಹರ ದೇವ, ನಿಜಗುಣಶಿವಯೋಗಿ, ಸಂಸ್ಕೃತ ನಾಟಕಗಳ ಅನುವಾದದ ನಾಟಕ ಸಂಪುಟ, ಹಳಗನ್ನಡ ನಿಘಂಟು ಮುಂತಾದುವು ಬಹು ಅಮೂಲ್ಯವಾದ ಆಕರ ಗ್ರಂಥಗಳಾಗಿವೆ.

ಎಲ್. ಬಸವರಾಜು ತಮ್ಮ ವೃತ್ತಿ ಮತ್ತು ಜೀವನದುದ್ದಕ್ಕೂ ಎದುರಾದ ಎಲ್ಲ ಬಗೆಯ ಪರೀಕ್ಷೆಗಳನ್ನು ಸಹಿಸಿಕೊಂಡು, ಗುರು ಗುಹೇಶ್ವರನ ಗುಹೆಯೊಳಗೆ ನಿಃಶಬ್ದವಾಗಿ ದುಡಿಯುತ್ತಾ, ಬೌದ್ಧ-ಜೈನ-ಶೈವ-ವೀರಶೈವ-ವೈದಿಕ ಮುಂತಾದ ಮತೀಯ ಭೇದಭಾವವಿಲ್ಲದಂತೆ ಸರ್ವಜನಾಂಗದ ಶಾಂತಿಯ ತೋಟದಲ್ಲಿ ಪಂಪನ ಮರಿದುಂಬಿಯಾಗಿ ವಿಹರಿಸುತ್ತಾ, ಹಳಗನ್ನಡ-ನಡುಗನ್ನಡ-ಹೊಸಗನ್ನಡ ಎಂಬ ಕೃತಕ ವಿಭಜನೆಗೊಳಗಾಗದೆ ಕನ್ನಡ ಸಂಸ್ಕೃತಿಯ ಪಠ್ಯ ನಿರ್ಮಾಣಗಳೆಂಬ ಜೇನುಗೂಡು ಕಟ್ಟುತ್ತಾ, ಸಹೃದಯರಿಗೆ ಜೇನಿಂಪಿನ ಸವಿಯನ್ನು ಉಣಬಡಿಸಿದ್ದಾರೆ. ಈ ಎಲ್ಲ ದೃಷ್ಟಿಯಿಂದ ಹೇಳಬಹುದಾದ ಒಂದು ಮಾತೆಂದರೆ ಎಲ್. ಬಸವರಾಜು ಇತರೆಲ್ಲರಿಗಿಂಥ ಹೆಚ್ಚು ನೀಡಿದವರು ಮತ್ತು ಹೆಚ್ಚು ನಿರ್ಲಕ್ಷ್ಯಕ್ಕೆ ಒಳಗಾದವರು. ■

# ಶಾಲೆಗಳನ್ನು ಮುಚ್ಚುವುದು ಬೌದ್ಧಿಕ ದಾರಿದ್ರ್ಯದ ಸಂಕೇತ

(8ನೇ ಪುಟದಿಂದ)

ಕೈಗೊಂಡಿಲ್ಲವೆಂದು ನಿಸ್ಸಂಶಯವಾಗಿ ಹೇಳಬಹುದು. ಹಾಗಾಗಿ ಗ್ರಾಮಗಳಲ್ಲಿನ ಶಾಲೆಗಳು ವಿದ್ಯಾರ್ಥಿಗಳಿಲ್ಲದೆ ಸೊರಗುತ್ತವೆ. ಈ ಸಮಸ್ಯೆಗಳಿ ಗಿಂತಲೂ ಗ್ರಾಮಸ್ಥರಲ್ಲಿ ಕಾಡುವ ಬಡತನ ಮತ್ತು ಗ್ರಾಮೀಣ ಕುಟುಂಬಗಳಲ್ಲಿ ಮಕ್ಕಳನ್ನೂ ತಮ್ಮ ಹೊಲಗದ್ದೆಗಳಲ್ಲಿ, ಜಾನುವಾರು ಸಾಕಣೆಗೆ ಬಳಸಿಕೊಳ್ಳುವ ಪ್ರವೃತ್ತಿ ಅನೇಕ ಮಕ್ಕಳನ್ನು ಶಿಕ್ಷಣ ವಂಚಿತರನ್ನಾಗಿ ಮಾಡುತ್ತವೆ.

**ವಿಲೀನಗೊಳಿಸುವ ಕುತಂತ್ರ**

ಈ ಸಮಸ್ಯೆಗಳ ಪರಿಹಾರ ಇರುವುದು ವಿಲೀನ ಗೊಳಿಸುವುದು ಅಥವಾ ಶಾಲೆಗಳನ್ನು ಮುಚ್ಚುವುದರಲ್ಲಿ ಅಲ್ಲ. ಮೂರು ಸಾವಿರ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಐದಕ್ಕಿಂತಲೂ ಕಡಿಮೆ ಇದೆ ಎಂದರೆ ಸರ್ಕಾರ ಈ ಶಾಲೆಗಳಲ್ಲಿ ದಾಖಲಾತಿ ಮತ್ತು ಹಾಜರಾತಿಗಳನ್ನು ಹೆಚ್ಚಿಸುವ ಪ್ರಯತ್ನವನ್ನೇ ಮಾಡಿಲ್ಲವೆಂದೇ ಅರ್ಥ. ಏಕೆಂದರೆ ಆದಿವಾಸಿಗಳ ತಾಂಡ ಅಥವಾ ಹಾಡಿಗಳನ್ನು ಹೊರತುಪಡಿಸಿದರೆ, ಶಾಲೆಗೆ ಹೋಗುವ ಐದು ಮಕ್ಕಳೂ ಇರದಂತಹ ಪುಟ್ಟ ಗ್ರಾಮಗಳು ಬಹಳ ವಿರಳ. ಮಲೆನಾಡಿನ ಪ್ರದೇಶಗಳಲ್ಲಿ ಒಂದು ಊರಿನಗ್ರಾಮಗಳಲ್ಲೇ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವ ಭರವಸೆಯನ್ನು ಸರ್ಕಾರ ಗ್ರಾಮಸ್ಥರಿಗೆ ನೀಡಲು ಸಿದ್ಧವಾಗಿಲ್ಲ.

ಪರಿಣಾಮ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕ್ಷೀಣಿಸುತ್ತಿದೆ. ಇದಕ್ಕೆ ಬಿಜೆಪಿ ಸರ್ಕಾರ ಕಂಡುಕೊಂಡಿರುವ ಪರಿಹಾರ ಎಂದರೆ ಶಾಲೆಗಳನ್ನೇ ಮುಚ್ಚಿ ಹಾಕುವುದು. ಕನ್ನಡಪರ ಸಂಘಟನೆಗಳ ಪ್ರತಿಭಟನೆಗೆ ಮಣಿದ ಸರ್ಕಾರ ತನ್ನ ನಿರ್ಧಾರವನ್ನೇನೋ ಬದಲಿಸಿತು. ಆದರೆ ಶಾಲೆಗಳನ್ನು ಮುಚ್ಚುವದರ ಬದಲು ಮತ್ತೊಂದು ಶಾಲೆಯೊಡನೆ ವಿಲೀನಗೊಳಿಸುವ ನಿರ್ಧಾರಕ್ಕೆ ಬರಲಾಯಿತು. ಈ ಎರಡೂ ಕ್ರಮಗಳ ನಡುವೆ ವ್ಯತ್ಯಾಸವೇನು ಎಂಬುದನ್ನು ಮಾನ್ಯ ಶಿಕ್ಷಣಸಚಿವರೇ ಹೇಳಬೇಕು. ಒಂದು ಕಾಲದಲ್ಲಿ ನಮ್ಮೂರಿನಲ್ಲಿದ್ದ ಶಾಲೆ ಈಗ ಇಲ್ಲವೆಂದ ಮೇಲೆ ಅದು ವಿಲೀನವಾದರೇನು, ಮುಚ್ಚಿಹೋದರೇನು? ಪತ್ನಿಯಿಂದ ಶಾಶ್ವತವಾಗಿ ದೂರ ಉಳಿಯುವ ಪತಿ ವಿಚ್ಛೇದನ ಪಡೆದರೂ ಒಂದೇ, ಮರುವಿವಾಹ ವಾದರೂ ಒಂದೇ, ಕೌಟುಂಬಿಕ ಜೀವನದಿಂದ ವಂಚಿತಳಾದ ಆ ಪತ್ನಿಯ ಪರಿಸ್ಥಿತಿಯೇನೂ ಬದಲಾಗುವುದಿಲ್ಲ. ಕರ್ನಾಟಕ ಸರ್ಕಾರದ ಕ್ರಮವೂ ಇದೇ ಆಗಿದೆ.

ಸರ್ಕಾರಿ ಶಾಲೆಗಳನ್ನು ಮುಚ್ಚುವುದು ಅಥವಾ ವಿಲೀನಗೊಳಿಸುವುದು ಖಾಸಗೀಕರಣದ ಒಂದು ವಿಶಿಷ್ಟ ಆಯಾಮವಷ್ಟೆ. ಉಚಿತ ಕಡ್ಡಾಯ ಸಾರ್ವತ್ರಿಕ ಶಿಕ್ಷಣ ಒದಗಿಸುವ ತಮ್ಮ ಸಾಂವಿಧಾನಿಕ ಕರ್ತವ್ಯವನ್ನೇ ಮರೆತ ಆಳುವ ವರ್ಗಗಳಿಗೆ ಶಿಕ್ಷಣ ಒಂದು ಹೊರೆಯಾಗಿಯೇ ಕಾಣುತ್ತಿರುವುದು ನವ ಉದಾರವಾದದ ಪರಿಣಾಮವಾಗಿಯೇ. ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೆ ಪಠ್ಯಕ್ರಮದಲ್ಲಿ ತಾರತಮ್ಯ ನೀತಿಯನ್ನು ಅನುಸರಿಸುತ್ತಲೇ ಸಮಾಜದಲ್ಲಿ ಈಗಾಗಲೇ ಬೇರೂರಿರುವ ಮೇಲು ಕೀಳುಗಳ ಭಾವನೆಯನ್ನು ಮತ್ತಷ್ಟು ಗಟ್ಟಿಗೊಳಿಸುವ ಆಳುವ ವರ್ಗಗಳ ಹುನ್ನಾರವನ್ನು ರಾಜ್ಯ ಸರ್ಕಾರದ ಈ ಕ್ರಮದಲ್ಲಿ ಕಾಣಬಹುದಾಗಿದೆ. ಇದನ್ನು ಬೌದ್ಧಿಕ ದಾರಿದ್ರ್ಯತೆ ಎನ್ನದೆ ಮತ್ತೇನನ್ನಲು ಸಾಧ್ಯ?. ■

# ನನ್ನ ಅಂಗಿಗೇಕೆ ಜೇಬಿಲ್ಲ?

ಅಣೇಕಟ್ಟೆ ವಿಶ್ವನಾಥ್



**ನದಿಗೆ ಅಜ್ಜ ಅಜ್ಜಿ ಕೊಟ್ಟಿದ್ದ ದುಡ್ಡನ್ನು ಎಲ್ಲಿ ಮಡಗಿಕೊಳ್ಳಬೇಕೆಂದು ತಿಳಿಯಲಿಲ್ಲ. ಅದಕ್ಕಾಗಿ ಪ್ರೀತಿಯ ಅಜ್ಜನ ಬಳಿ ಹೋಗಿ "ಅಜ್ಜ ಅಜ್ಜ, ನನ್ನ ಅಂಗಿಯಲ್ಲಿ ಜೇಬಿಲ್ಲ, ದುಡ್ಡನ್ನು ಎಲ್ಲಿ ಬಚ್ಚಿಡಲಿ? ನೋಡು, ಕಂಚಿ ಹೇಗೆ ತನ್ನ ಜೇಬಿನಲ್ಲಿ ದುಡ್ಡನ್ನು ಝಣಝಣಗುಟ್ಟಿಸುತ್ತಾ ಶೋಕಿ ಮಾಡುತ್ತಿದ್ದಾನೆ" ಎಂದಳು. ಅಜ್ಜನು ಹೇಳಿದನು "ನೀನು ದುಡ್ಡನ್ನು ಮಡಗಿಕೊಳ್ಳಬೇಡ. ಕಳೆದುಹೋಗುತ್ತದೆ. ನಿಮ್ಮ ಅಮ್ಮನ ಕೈಗೆ ಕೊಡು. ಅಮ್ಮ ಜೇರಿಗೆ ಡಬ್ಬದಲ್ಲಿ ಮಡಗುತ್ತಾಳೆ"ಇದಕ್ಕೆ ಒಪ್ಪದೆ ನಂತರ ನದಿ ಅಪ್ಪನ ಬಳಿ ನಡೆದಳು**

ನದಿ ಪುಟ್ಟ ಹುಡುಗಿ. ಅವರ ಅಣ್ಣ ಕಂಚಿ. ಅವರ ಊರಿನಲ್ಲಿ ಪ್ರತಿವರ್ಷವೂ ಕಂಚೀದೇವಿಯ ಜಾತ್ರೆ ಬಹಳ ವಿಜೃಂಭಣೆಯಿಂದ ನಡೆಯುತ್ತದೆ. ಇವರ ಅಮ್ಮ ಪ್ರತಿವರ್ಷವೂ ಜಾತ್ರೆಗೆ ಹೊಸ ಅಂಗಿ ತರುತ್ತಾರೆ. ಹಾಗೆ ಈ ವರ್ಷವೂ ಅವರಿಗೆ ಹೊಸ ಅಂಗಿಯನ್ನು ತಂದರು. ಮನೆಗೆ ಹೊಸ ಅಂಗಿಯನ್ನು ತಂದ ದಿನವಂತೂ ಮಕ್ಕಳಿಗೆ ಸಂಭ್ರಮವೋ ಸಂಭ್ರಮ. ಅವರ ಅಳತೆಗೆ ಅಂಗಿಗಳಿವೆಯೋ ಇಲ್ಲವೊ ಎಂದು ಇಬ್ಬರಿಗೂ ಧರಿಸಿ ಪರೀಕ್ಷಿಸುತ್ತಾರೆ. ಇಬ್ಬರಿಗೂ ಅಂಗಿಗಳನ್ನು ಹಾಕಿಕೊಳ್ಳಲು ಕೊಟ್ಟರು. ಇಬ್ಬರೂ ಅಂಗಿಗಳನ್ನು ಹಾಕಿಕೊಂಡರು. ಕಂಚಿ ತನ್ನ ಚಡ್ಡಿಯ ಎರಡೂ ಜೇಬುಗಳಿಗೆ ಎರಡೂ ಕೈ ಸೇರಿಸಿ ವಾಲ್ಡಾಡುತ್ತ ಶೋಕಿ ಮಾಡಲು ಪ್ರಾರಂಭಿಸಿದ. ಅಪ್ಪ ಸಂತೆಯಿಂದ ತಂದಿದ್ದ ಕಡ್ಲೆಪುರಿಯನ್ನು ಅಂಗಿಯ ಜೇಬಿಗೆ ತುಂಬಿಕೊಂಡು ತಿನ್ನಲಾರಂಭಿಸಿದ. ಮನೆಯ ಒಳಗೂ ಹೊರಗೂ ಸುತ್ತಾಡುತ್ತಾ ನದಿಯ ಮುಂದೆ ಹೋಗಿ ಕಿಚಾಯಿಸಿದ. ಜಾತ್ರೆ ಖರ್ಚಿಗೆ ಅಜ್ಜಿ-ಅಜ್ಜ ಕೊಟ್ಟಿದ್ದ ದುಡ್ಡನ್ನು ಚಡ್ಡಿಯ ಜೇಬಿಗೆ ಹಾಕಿಕೊಂಡು ನದಿಯ ಮುಂದೆ ಝಣಝಣಗುಟ್ಟಿಸಿದ.

**ಅಮ್ಮನ ಮಾತಿನಿಂದ ಉತ್ತರ ಸಿಗದೆ ಸುಮ್ಮನೆ ಮನಸ್ಸಿನೊಳಗೆ ಶಪಿಸುತ್ತಾ "ಹುಡುಗಿಯಾದರೇನಂತೆ ನಾನು ತಿನ್ನೋದೆ ಹುಡುಗ ತಿನ್ನೋದು. ಅವನಿಗ್ಯಾಕೆ ಬೇರೆ? ನನಗೇಕೆ ಬೇರೆ? ನನ್ನ ಅಂಗಿಗೂ ಜೇಬು ಬೇಕು" ಎಂದು ಅಜ್ಜಿಯ ಬಳಿ ಬಂದಳು.**

ನದಿಗೆ ಅಜ್ಜ-ಅಜ್ಜಿ ಕೊಟ್ಟಿದ್ದ ದುಡ್ಡನ್ನು ಎಲ್ಲಿ ಮಡಗಿಕೊಳ್ಳಬೇಕೆಂದು ತಿಳಿಯಲಿಲ್ಲ. ಅದಕ್ಕಾಗಿ ಪ್ರೀತಿಯ ಅಜ್ಜನ ಬಳಿ ಹೋಗಿ "ಅಜ್ಜ ಅಜ್ಜ, ನನ್ನ ಅಂಗಿಯಲ್ಲಿ ಜೇಬಿಲ್ಲ, ದುಡ್ಡನ್ನು ಎಲ್ಲಿ ಬಚ್ಚಿಡಲಿ? ನೋಡು, ಕಂಚಿ ಹೇಗೆ ತನ್ನ ಜೇಬಿನಲ್ಲಿ ದುಡ್ಡನ್ನು ಝುಣಝುಣಗುಟ್ಟಿಸುತ್ತಾ ಶೋಕಿ ಮಾಡುತ್ತಿದ್ದಾನೆ" ಎಂದಳು.

ಅಜ್ಜನು ಹೇಳಿದನು "ನೀನು ದುಡ್ಡನ್ನು ಮಡಗಿಕೊಳ್ಳಬೇಡ. ಕಳೆದುಹೋಗುತ್ತದೆ. ನಿಮ್ಮ ಅಮ್ಮನ ಕೈಗೆ ಕೊಡು. ಅಮ್ಮ ಜೇರಿಗೆ ಡಬ್ಬದಲ್ಲಿ ಮಡಗುತ್ತಾಳೆ"

ಇದಕ್ಕೆ ಒಪ್ಪದೇ ನಂತರ ನದಿ ಅಪ್ಪನ ಬಳಿ ನಡೆದಳು

"ಅಪ್ಪ ಅಪ್ಪ, ನನ್ನ ಅಂಗಿಗೇಕೆ ಜೇಬಿಲ್ಲ?" ಎಂದಳು

"ಹುಡುಗಿಯರ ಅಂಗಿಗೆ ಜೇಬು ಇರುವುದಿಲ್ಲ" ಎಂದನು ಅಪ್ಪ.

ನದಿ ಕುತೂಹಲದಿಂದ "ಯಾಕಪ್ಪ ಹುಡುಗಿಯರ ಅಂಗಿಗೆ ಜೇಬು ಇರಲ್ಲ?"

ಅಪ್ಪ ತಲೆಕೆರೆದುಕೊಳ್ಳುತ್ತಾ "ಯಾಕೆಂದರೆ, ಯಾಕೆಂದರೆ... ಅದು, ಅದು... ಟೈಲರ್ ಹೊಲೆದಿರುವುದಿಲ್ಲ" ಎಂದನು.

ನದಿ ಮರು ಪ್ರಶ್ನಿಸುತ್ತಾ "ಯಾಕಪ್ಪಾ ಟೈಲರ್ ಹುಡುಗಿಯರ ಅಂಗಿಗೆ ಜೇಬು ಇಡಲ್ಲ?" ಅಪ್ಪ ಸಿಟ್ಟಿನಿಂದ "ಇಷ್ಟುದ್ದ ಇದೀಯಾ ಎಷ್ಟೊಂದು ಪ್ರಶ್ನೆ ಕೇಳ್ತೀಯಾ. ಅದನ್ನ ಹೋಗಿ ಟೈಲರ್‌ನೇ ಕೇಳು"

ನದಿ ಸೀದಾ ಬೀದಿಯಲ್ಲೆ ಇದ್ದ ಟೈಲರಣ್ಣನ ಮನೆಗೆ ಹೋದಳು. "ಟೈಲರಣ್ಣ ಟೈಲರಣ್ಣ, ನೀನು ಹುಡುಗಿಯರ ಅಂಗಿಗೇಕೆ ಜೇಬು ಇಡುವುದಿಲ್ಲ?" ಎಂದು ಪ್ರಶ್ನಿಸಿದಳು.

"ನನಗೆ ಹೇಳಿಕೊಟ್ಟ ಮೇಷ್ಟ್ರು ಕಲಿಸಿರುವುದೇ ಹಾಗೆ, ನಾನು ಹಾಗೆಯೇ ಹೊಲೆಯುತ್ತೇನೆ. ನಾನು ಕಲಿತಿರುವುದೇ ಹಾಗೆ ಅದನ್ನು ಮಾಡುತ್ತೇನೆ. ನನಗೆ ಗೊತ್ತಿರುವುದೇ ಇಷ್ಟು" ಎಂದ ಟೈಲರಣ್ಣ.

ತನ್ನ ಪ್ರಶ್ನೆಗೆ ಉತ್ತರ ಸಿಗಲಿಲ್ಲ ಎಂದು ನಿರಾಶೆಯಿಂದ ಮನೆಗೆ ವಾಪಸ್ಸು ಬಂದಳು. ಮನೆಯಲ್ಲಿ ಒಬ್ಬಳೆ ಕುಳಿತಿದ್ದಳು. ಆಗ ಅವಳಿಗೆ ಮತ್ತೊಂದು ಪ್ರಶ್ನೆ ಶುರುವಾಯಿತು. ನನ್ನ ಅಂಗಿಗೂ ಜೇಬಿಲ್ಲ ಅಮ್ಮನ ಸೀರೆಗೂ ಜೇಬಿಲ್ಲ. ಅದು ಯಾಕಿರಬಹುದೆಂದು ಅಮ್ಮನಿಗೆ ತಿಳಿದಿರಬಹುದು. ಅಮ್ಮನ ಬಳಿ ಬಂದಳು. "ಅಮ್ಮ ಅಮ್ಮ. ನಿನ್ನ ಸೀರೆಗೆ ಯಾಕೆ ಜೇಬಿಲ್ಲ?" ಪ್ರಶ್ನಿಸಿದಳು.

"ಹೆಂಗಸರ ಬಳಿ ದುಡ್ಡೇನು ಇರುವುದಿಲ್ಲವಲ್ಲ ಅದಕ್ಕೆ ಜೇಬು ಇರುವುದಿಲ್ಲ. ಮನೆ ವ್ಯವಹಾರವೆಲ್ಲ ಅಪ್ಪ ತಾನೆ ಮಾಡೋದು. ಅಪ್ಪನ ಬಳಿ ಜೇಬಿದ್ರೆ ಸಾಕು" ಅಮ್ಮ ಹೇಳಿದಳು.

"ಇಲ್ಲಿ ನೋಡಮ್ಮಾ, ಅಜ್ಜ-ಅಜ್ಜಿ ನನಗೆ ಜಾತ್ರೆಗೆ ದುಡ್ಡು ಕೊಟ್ಟಿದ್ದಾರೆ. ನಾನು ಇದನ್ನು ಎಲ್ಲಿಡಲಿ? ಅಣ್ಣ ನೋಡು ಜೇಬಿನಲ್ಲಿ ದುಡ್ಡು ಇಟ್ಟುಕೊಂಡಿದ್ದಾನೆ. ನನ್ನ ಅಂಗಿಗೇಕೆ ಜೇಬಿಲ್ಲ?" ಎಂದು ಮರುಪ್ರಶ್ನಿಸಿದಳು.

ಅಮ್ಮ ಉತ್ತರಿಸುತ್ತಾ, "ನಿನ್ನ ಬಳಿ ಇರಬಹುದು. ಆದರೆ ಹೆಂಗಸರೇನು ದುಡ್ಡು ಸಂಪಾದನೆ ಮಾಡುವುದಿಲ್ಲವಲ್ಲ ಅವರು ದುಡ್ಡನ್ನು ಇಟ್ಟುಕೊಳ್ಳಲು" ಎಂದಳು.

ನದಿ "ನೀನೇ ಹೇಳಿದಂತೆ ನಾನು ದೊಡ್ಡ ಹಾಡುಗಾರ್ತಿ ಆಗ್ತೀನಿ ಅದರಿಂದ ದುಡ್ಡು ಸಂಪಾದಿಸ್ತೀನಿ, ಆಗ ದುಡ್ಡನ್ನು ಎಲ್ಲಿ ಇಟ್ಟುಕೊಳ್ಳುವುದು" ಅಮ್ಮನಿಗೆ ಪ್ರಶ್ನೆ ಹಾಕಿದಳು. ಅಮ್ಮಾ "ನೀನು ತುಂಬಾ ತಲೆಹರಟೆ ಆಗಿದೀಯಾ, ನೀನು ಹುಡುಗ ಆಗಿ ಹುಟ್ಟಬೇಕಿತ್ತು. ಹುಡುಗಿಯಾಗಿ ಯಾಕೆ ಹುಟ್ಟಿದೆ?" ಎಂದು ಮರುಪ್ರಶ್ನಿಸಿ ಮಾತು ಮುಗಿಸಿದಳು.

ಅಮ್ಮನ ಮಾತಿನಿಂದ ಉತ್ತರ ಸಿಗದೆ ಸುಮ್ಮನೆ ಮನಸ್ಸಿನೊಳಗೆ ಶಪಿಸುತ್ತಾ "ಹುಡುಗಿಯಾದರೇನಂತೆ ನಾನು ತಿನ್ನೋದೆ ಹುಡುಗ ತಿನ್ನೋದು. ಹುಡುಗ ತಿನ್ನೋದೆ ನಾನು ತಿನ್ನೋದು ಅವನಿಗ್ಯಾಕೆ ಬೇರೆ? ನನಗೇಕೆ ಬೇರೆ? ನನ್ನ ಅಂಗಿಗೂ ಜೇಬು ಬೇಕು" ಎಂದು ಅಜ್ಜಿಯ ಬಳಿ ಬಂದಳು.

"ಅಜ್ಜಿ ಅಜ್ಜಿ, ಹೆಂಗಸರ ಅಂಗಿಗಳಿಗೇಕೆ ಜೇಬಿಲ್ಲ?" ಉತ್ತರ ಸಿಗಬಹುದೆಂದು ಕೇಳಿದಳು.

"ಅದೊಂದು ದೊಡ್ಡಕಥೆ. ಒಂದಾನೊಂದು ಕಾಲದಲ್ಲಿ ಗಂಡಸರ ಬಟ್ಟೆಯನ್ನು ಹೆಂಗಸರೂ, ಹೆಂಗಸರ ಬಟ್ಟೆಯನ್ನು ಗಂಡಸರೂ ತೊಡುತ್ತಿದ್ದರಂತೆ. ಗಂಡಸರೆಲ್ಲಾ ಸೀರೆ ಉಟ್ಟು ಲಂಗ ಜಾಕೀಟು ಹಾಕಿಕೊಳ್ತಾ ಇದ್ದರಂತೆ. ಆಗ ಜೇಬು ನಮ್ಮ ಬಳಿ ಇತ್ತಂತೆ. ಗಂಡಸರು ಹೊರಗಡೆ ಸಂಪಾದಿಸಿದ್ದನ್ನೆಲ್ಲಾ ನಮ್ಮ ಬಳಿಗೆ ತಂದು ಕೊಡ್ತಾ ಇದ್ದರಂತೆ. ಖರ್ಚಿಗೆ ಬೇಕಾದಾಗ ಹೆಂಗಸರ ಬಳಿಯಿಂದ ದುಡ್ಡು ಪಡೆದು ಕೊಳ್ತಾ ಇದ್ದರಂತೆ. ಹಣ ಎಲ್ಲ ಹೆಂಗಸರ ಬಳಿನೇ ಇರೋದಂತೆ. ಆಗ ಗಂಡಸರೆಲ್ಲಾ ಸೇರಿ ದೇವರನ್ನು ಕುರಿತು ತಪಸ್ಸು ಮಾಡಿದರು. ದೇವರು ಪ್ರತ್ಯಕ್ಷನಾದ. ದೇವರು "ಏನು ವರಬೇಕು ಕೇಳಿ" ಎಂದನು.

ಗಂಡಸರು "ನಮ್ಮ ಬಟ್ಟೆಯನ್ನು ಹೆಂಗಸರಿಗೆ ಕೊಡಿ. ಹೆಂಗಸರ ಬಟ್ಟೆಯನ್ನು ನಮಗೆ ಕೊಡಿ" ಎಂದರಂತೆ. ಆ ದೇವರು ತಥಾಸ್ತು ಎಂದ. ಅಂದಿನಿಂದ ಇಂದಿನವರೆಗೂ ನಮ್ಮ ಬಟ್ಟೆ ಅವರು ತೊಡುತ್ತಿದ್ದಾರೆ. ಅವರ ಬಟ್ಟೆ ನಾವು ತೊಡುತ್ತಿದ್ದೇವೆ" ಎಂದಳು ಅಜ್ಜಿ.

ಕೇಳಿಸಿಕೊಂಡ ನದಿಗೆ ಕುತೂಹಲ ಉಂಟಾಯಿತು. ನದಿ "ಅಜ್ಜಿ, ನಾವು ಈಗ ಪುನಃ ದೇವರನ್ನು ಕುರಿತು ತಪಸ್ಸು ಮಾಡಿ ನಮ್ಮ ಬಟ್ಟೆಯನ್ನು ನಾವು ಪುನಃ ಪಡೆದುಕೊಳ್ಳೋಣ?" ಅಜ್ಜಿ "ಅಯ್ಯೋ ನೀನು ದಡ್ಡಿ, ತಪಸ್ಸು ಮಾಡಿ ದೇವರನ್ನೇನು ಕೇಳೋದು ನಾವು ನಮ್ಮ ಅಂಗಿಗೆ ಜೇಬು ಹಾಕಿಸಿಕೊಂಡರಾಯ್ತು ಅಷ್ಟೆ. ಈಗ ನಮ್ಮ ಬಟ್ಟೆ ನಿಮ್ಮ ಬಟ್ಟೆ ಯಾವುದೂ ಇಲ್ಲ. ನಿಂಗೆ ಬೇಕಾಂದತೆ ನೀನು ಹೊಲೆಸಿಕೊಳ್ಳಬಹುದು. ನೀನು ಅಣ್ಣನಂತೆ ಪ್ಯಾಂಟು ಶರ್ಟು ಧರಿಸಬಹುದು. ಇಲ್ಲ ನಿನ್ನ ಅಂಗಿಗೇ ಜೇಬು ಹಾಕಿಸಿಕೊಳ್ಳಬಹುದು.

ನದಿಗೆ ತನ್ನ ಅಂಗಿಗೂ ಜೇಬು ಹಾಕಿಸಬೇಕು ಎಂದೆನಿಸಿತು. ಅಮ್ಮನ ಬಳಿಗೆ ಹೋದಳು. "ಅಮ್ಮಾ ಅಮ್ಮಾ, ನನ್ನ ಅಂಗಿಗೂ ಜೇಬು ಹಾಕಿಸಮ್ಮ ನಾನೂ ದುಡಿಯುತ್ತೇನೆ. ಹಣ ಗಳಿಸುತ್ತೇನೆ. ನನಗೂ ಜೇಬು ಬೇಕು"

ಅಮ್ಮಾ "ತಲ್ಲೆ, ಹುಡುಗಿಯರ ಅಂಗಿಗೆ ಯಾರು ಜೇಬು ಹಾಕಿಸಲ್ಲ. ತಂದಿರೋ ಅಂಗಿನಾ ಸುಮ್ಮನೆ ಹಾಕಿಕೊ" ಅಂದಳು.

ನದಿ ಎರಡು ದಿನ ಹಟ ಹಿಡಿದು ಕುಳಿತಳು. ಅಂಗಿಗೆ ಜೇಬು ಹಾಕಿಸದಿದ್ದರೆ ಜಾತ್ರೆದಿನ ಹೊಸ ಬಟ್ಟೆ ತೊಡುವುದಿಲ್ಲ ಎಂದಳು. ಅಪ್ಪನು ಟೈಲರ್ ಬಳಿಗೆ ಹೋಗಿ ನದಿ ಅಂಗಿಗೂ ಹೊಸ ಜೇಬು ಹಾಕಿಸಿಕೊಂಡು ಬಂದನು. ನದಿಗೆ ಖುಷಿಯಾಯ್ತು. ಅಣ್ಣನಂತೆ ತಾನೂ ಜೇಬಿಗೆ ದುಡ್ಡು ಹಾಕಿಕೊಂಡು ಝುಣಝುಣಗುಟ್ಟಿಸಿದಳು. ■

# ಕನ್ನಡ ಮತ್ತು ಕನ್ನಡಿಗರ ಮುಂದಿನ ಸವಾಲುಗಳು

(19ನೇ ಪುಟದಿಂದ)

ಸಾಹಿತ್ಯ ಓದುವದಕ್ಕೆ ಸಮಯವಿಲ್ಲ. ನಮ್ಮ ಪರಂಪರೆ–ಸಂಸ್ಕೃತಿಯನ್ನು, ನಮ್ಮ ಹಳ್ಳಿಯ ಸೊಗಡು–ಸೊಬಗನ್ನು ಬಿಂಬಿಸುವಂತಹ ಸಾಹಿತ್ಯ ಇಂದು ರಚನೆಯಾಗುತ್ತಿಲ್ಲ. ಕನ್ನಡದ ಕಥೆ–ಕಾದಂಬರಿಗಳನ್ನು ಆಧರಿಸಿದ ಚಲನಚಿತ್ರಗಳ ರಚನೆ ನಿಂತುಹೋಗಿದೆ. ಈಗೇನಿದ್ದರೂ ಅಶ್ಲೀಲ ಮತ್ತು ವಿದೇಶಿ ಸಂಸ್ಕೃತಿಯ ವೈಭೋಗ. ಹಿಂದೆಂದಿಗಿಂತ ಇಂದು ಹೆಚ್ಚು ಹೆಚ್ಚು ಪುಸ್ತಕಗಳು ಪ್ರಕಟವಾಗುತ್ತಿವೆ. ಮೂವತ್ತು ದಿನಗಳಲ್ಲಿ ಇಂಗ್ಲಿಷ್ ಕಲಿಯಿರಿ, ದಿಢೀರ್ ದುಡ್ಡು, ಭಾಷಣ ಕಲೆ, ಸುಂದರ ಮುಖ, ಯಶಸ್ಸಿನ ಗುಟ್ಟು, ನೀವೂ ಗೆಲ್ಲಬಲ್ಲಿರಿ, ಹೀಗೆ ವ್ಯಕ್ತಿತ್ವ ವಿಕಸನದ ಹೆಸರಿನಲ್ಲಿ ಹಣಮಾಡಲೆಂದೇ ಹುಟ್ಟಿಕೊಂಡ ಪಸ್ತಕಗಳ ಸಂಖ್ಯೆ ಬೆಳೆಯುತ್ತಿದೆ. ನಿಜವಾಗಲೂ ನಮ್ಮ ವ್ಯಕ್ತಿತ್ವವನ್ನು ರೂಪಿಸಲಿಕ್ಕೆ ಬೇಕಾದವುಗಳು ನಮ್ಮ ಸಂಸ್ಕೃತಿಯನ್ನು ಬಿಂಬಿಸು ವಂತಹ ಕಥೆ, ಕವನ, ಕಾದಂಬರಿ ಹಾಗೂ ವೈಚಾರಿಕ ಸಾಹಿತ್ಯ.

ಗಳನಾಥರು ಪುಸ್ತಕ ಸಂಸ್ಕೃತಿ ಬೆಳೆಸುವ ಸಲುವಾಗಿ ಪುಸ್ತಕಗಳನ್ನು ತಲೆಯ ಮೇಲೆ ಹೊತ್ತು ಊರೂರು ತಿರುಗಿ ಮಾರಾಟ ಮಾಡುತ್ತಿದ್ದರಂತೆ. ಇಂದು ಪುಕ್ಕಟೆಯಾಗಿ ಕೊಟ್ಟರೂ ಓದುವವರಿಲ್ಲ. ಓದುವ ಸಂಸ್ಕೃತಿಯೇ ಮಾಯವಾಗಿದೆ. ಎಲ್ಲವೂ 'ಗಣಕ ಯಂತ್ರಾಯ ನಮಃ' ಆಗಿದೆ. ಇನ್ನು ಕನ್ನಡವನ್ನು ಯಾರು ಓದಬೇಕು? ಅದು ಹೇಗೆ ಉಳಿಯಬೇಕು? ಒಂದು ಬೀದಿಯಲ್ಲಿ ಒಂದು ಪುಸ್ತಕ ಮತ್ತು ಒಂದು ಜೊತೆ ಚಪ್ಪಲಿ ಇಟ್ಟು ಹೋದರೆ, ಚಪ್ಪಲಿ ತೆಗೆದು ಕೊಂಡು ಹೋಗಿರುತ್ತಾರೆ. ಆದರೆ ಪುಸ್ತಕವನ್ನು ಯಾರೂ ವಯ್ಯುವದಿಲ್ಲ. ಚಪ್ಪಲಿಗಿಂತ ಪುಸ್ತಕದ ಸ್ಥಿತಿ ಹೀನಾಯವಾಯಿತೆ?!

ಇನ್ನು ಶಿಕ್ಷಣ ಮಾಧ್ಯಮಕ್ಕೆ ಸಂಬಂಧಿಸಿದಂತೆ ತುಂಬ ಶೋಚನಿಯವಾದ ಸ್ಥಿತಿಯನ್ನು ಕನ್ನಡ ಅನುಭವಿಸುತ್ತಿದೆ. ಬಡತನ ರೇಖೆಗಿಂತ ಕೆಳಗಿರುವ ವ್ಯಕ್ತಿಯಿಂದ ಹಿಡಿದು ಅತ್ಯಂತ ಶ್ರೀಮಂತನವರೆಗೂ ಎಲ್ಲರೂ ತಮ್ಮ ಮಕ್ಕಳನ್ನು ಆಂಗ್ಲ ಮಾಧ್ಯಮ ಶಾಲೆಗೇ ಸೇರಿಸಲು ಪಾಳಿ ಹಚ್ಚಿ ನಿಂತಿದ್ದಾರೆ. ಶಿಕ್ಷಣ ವ್ಯಾಪಾರೀ ಕರಣವಾಗಿದೆ, ಇದೇ ಸ್ಥಿತಿ ಮುಂದುವರಿದರೆ ಭವಿಷ್ಯದಲ್ಲಿ ಕನ್ನಡ ಭಾಷೆ ಅಪಾಯದಲ್ಲಿ ಸಿಲುಕುತ್ತದೆ. ಇಂಥ ಪರಿಸ್ಥಿತಿಯಿಂದ ಕನ್ನಡ ಭಾಷೆಗೆ ಒದಗಿದ ಸಂದಿಗ್ಧತೆಯನ್ನು ನಿವಾರಿಸಿ ಆ ಭಾಷೆಯನ್ನು ಉಳಿಸಿ, ಬಳಸಿ, ಬೆಳೆಸಿಕೊಂಡು ಬರುವ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರ ಕನ್ನಡವನ್ನು ಕಡ್ಡಾಯವಾಗಿ ಆಡಳಿತ ಭಾಷೆಯನ್ನಾಗಿ ಮಾಡಿತು.

1994ರಲ್ಲಿ 1ನೇ ತರಗತಿಯಿಂದ 4ನೇ ತರಗತಿಯ ವರೆಗಿನ ಪ್ರಾಥಮಿಕ ಹಂತದಲ್ಲಿ ಶಿಕ್ಷಣ ಮಾಧ್ಯಮ ಕಡ್ಡಾಯವಾಗಿ ಕನ್ನಡದಲ್ಲಿರಬೇಕೆಂದು ಮಧ್ಯಂತರ ಭಾಷಾನೀತಿಯನ್ನು ಜಾರಿಗೆ ತಂದಿತು. ಇದನ್ನು ಪ್ರಶ್ನಿಸಿ ಆಂಗ್ಲ ಮಾಧ್ಯಮ ಶಿಕ್ಷಣ ಸಂಸ್ಥೆಗಳು ಕರ್ನಾಟಕ ಉಚ್ಚನ್ಯಾಯಾಲಯಕ್ಕೆ ಮನವಿ ಸಲ್ಲಿಸಿದವು. ಕನ್ನಡ ಮಾಧ್ಯಮ ಕಡ್ಡಾಯಗೊಳಿಸುವ ರಾಜ್ಯ ಸರ್ಕಾರದ ಆದೇಶವನ್ನು 2008 ಜುಲೈ 2ರಂದು ಕರ್ನಾಟಕ ಉಚ್ಚನ್ಯಾಯಾಲಯ ಅಸಿಂಧುಗೊಳಿಸಿತು. ಕರ್ನಾಟಕ ಸರಕಾರ, ವಿದ್ಯಾವರ್ಧಕ ಸಂಘ ಹಾಗೂ ಹಲವಾರು ಹಿತಾಸಕ್ತರ ಪರವಾಗಿ ಈ ಆದೇಶವನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿದೆ.

ಸಂವಿಧಾನದ ಕಲಂ 30(1)ರ ಪ್ರಕಾರ ಧಾರ್ಮಿಕ ಮತ್ತು ಭಾಷಿಕ ಅಲ್ಪ ಸಂಖ್ಯಾತರು ತಮ್ಮ ಇಚ್ಛೆಯಂತೆ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ಹಕ್ಕು ಹೊಂದಿದ್ದಾರೆ. ಕಲಂ 29ರ ಪ್ರಕಾರ ಭಾರತದ ಯಾವುದೇ ಮೂಲೆಯಲ್ಲಿ ವಾಸಿಸುವ ಯಾವುದೇ ವರ್ಗದ ಜನ ತಮ್ಮ ಭಾಷೆ, ಲಿಪಿ ಅಥವಾ ಸಂಸ್ಕೃತಿಯನ್ನು ಉಳಿಸಿಕೊಂಡು ಹೋಗುವ ಹಕ್ಕು ಹೊಂದಿದ್ದಾರೆ. ರಾಜ್ಯದಲ್ಲಿ ಸ್ಥಳೀಯ ಪ್ರಾಧಿಕಾರಗಳು ಮಾತೃ ಭಾಷೆಯಲ್ಲಿ ಶಿಕ್ಷಣ ನೀಡುವುದಕ್ಕೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಹಾಗೂ ಆ ಉದ್ದೇಶಕ್ಕೆ ಸಾಕಷ್ಟು ಸವಲತ್ತುಗಳನ್ನು ಒದಗಿಸಬೇಕು. ಎಂದು ಕಲಂ 350 ಹೇಳುತ್ತದೆ.





ಭಾಷೆಗಳನ್ನು ಸಂರಕ್ಷಿಸುವ ದೃಷ್ಟಿಯಿಂದ ಸಂವಿಧಾನದ ಎಂಟನೆಯ ಅನುಸೂಚಿಯಲ್ಲಿ ಅವುಗಳನ್ನು ಸೇರಿಸಲಾಗಿದೆ. ಕಲಂ 343 ರಿಂದ 351 ನೆಯ ಕಲಂಗಳಲ್ಲಿ ಭಾಷೆಗಳನ್ನು ಕುರಿತು ಹೇಳಲಾಗಿದೆ. ಈ ಕಲಂ ಗಳಿಗೆ ಕೇವಲ ಶಾಬ್ದಿಕ ಅರ್ಥವನ್ನು ಕಲ್ಪಿಸಿಕೊಳ್ಳದೆ ನಿಹಿತಾರ್ಥವನ್ನು ಅನುಲಕ್ಷಿಸಬೇಕಾಗಿದೆ. ಈ ಮೇಲಿನ ಅಂಶಗಳನ್ನು ಸಕಾರಾತ್ಮಕ ದೃಷ್ಟಿಯಿಂದ ನೋಡುವುದಾದರೆ ಸಂವಿಧಾವ ನಿರ್ಮಾಪಕರ ಉದ್ದೇಶ ಒಂದು ಜನಾಂಗದ ಭಾಷೆ, ಲಿಪಿ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಹೋಗಬೇಕು ಎಂಬುದಾಗಿದೆ. ಕನ್ನಡಕ್ಕೆ ಸಿಕ್ಕ ಶಾಸ್ತ್ರೀಯ ಸ್ಥಾನಮಾನ ಒಂದು ರೀತಿ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ. ಮದ್ರಾಸ್ ಉಚ್ಚನ್ಯಾಯಾಲಯದಲ್ಲಿ ತಮಿಳಿಗರೊಬ್ಬರು ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಕೊಡಬಾರದೆಂದು ದಾವೆ ಹೂಡಿದ್ದಾರೆ. ತಮಿಳುನಾಡು ಸರಕಾರದ ಮೇಲೆ ಒತ್ತಡ ತಂದು ಆ ಪ್ರಕರಣವನ್ನು ಹಿಂತೆಗೆದು ಕೊಳ್ಳುವಂತೆ ಮನವೊಲಿಸಬೇಕಾಗಿದೆ.

ಭಾಷೆಯ ಉಳಿವಿಗೆ ಶಾಸನದ ಚೌಕಟ್ಟೊಂದೇ ಸಾಲದು. ಶೈಕ್ಷಣಿಕ ಅಗತ್ಯಗಳಿಗೆ ತಕ್ಕಂತೆ ಸಾಹಿತ್ಯ ಸೃಷ್ಟಿಯಾಗಬೇಕು. ನಮ್ಮಲ್ಲಿ ಅಕಾಡೆಮಿಗಳಿಗೆ, ವಿಶ್ವ ವಿದ್ಯಾಲಯಗಳಿಗೆ ಕನ್ನಡದ ಹೆಸರಿನಲ್ಲಿ ಸಾಕಷ್ಟು ಹಣ ವೆಚ್ಚವಾಗುತ್ತದೆ. ಅಂಥ ಸಂಸ್ಥೆಗಳು ಕನ್ನಡ ಭಾಷೆ ಮತ್ತು ಉನ್ನತ ವ್ಯಾಸಂಗಕ್ಕೆ ಬೇಕಾದ ಸಾಹಿತ್ಯವನ್ನು ಹಾಗೂ ತಂತ್ರಾಂಶವನ್ನು ಬೆಳೆಸುವ ಹಾಗೂ ಒದಗಿಸುವ ಕೆಲಸಕ್ಕೆ ಅಣಿಯಾಗ ಬೇಕು. ಶಾಸ್ತ್ರೀಯ ಭಾಷಾ ಸ್ಥಾನಮಾನ ಸಿಕ್ಕ ಮಾತ್ರಕ್ಕೆ ಅತೀ ಹೆಚ್ಚು ಜ್ಞಾನಪೀಠ ಪ್ರಶಸ್ತಿಗಳು ಲಭಿಸಿದ ಮಾತ್ರಕ್ಕೆ, ಒಂದು ಭಾಷೆ ಸಶಕ್ತವಾಗಿ ಉಳಿದುಕೊಳ್ಳುತ್ತದೆ ಎಂದರೆ ಅದು ಬರಿ ಭ್ರಮೆ ಮಾತ್ರ. ಕನ್ನಡ ಉಳಿಯಬೇಕಾದರೆ : ಶಿಕ್ಷಣ ಮಾಧ್ಯಮ ಕನ್ನಡವಾಗಬೇಕು. ಎಲ್ಲಾ ಪಠ್ಯ ಪುಸ್ತಕಗಳು ಕನ್ನಡದಲ್ಲಿ ಲಭ್ಯವಾಗಬೇಕು. ಟಿ.ವಿ., ಕಂಪ್ಯೂಟರ್, ಇಂಟರ್‌ನೆಟ್, ಮೊಬೈಲ್, ಐಪಾಡ್ ಗಳಂತಹ ಆಧುನಿಕ ತಂತ್ರಜ್ಞಾನದ ಯುಗದಲ್ಲಿ ನಮ್ಮ ಕನ್ನಡ ಲಿಪಿ ಮತ್ತು ಮಾಧ್ಯಮ ಎದ್ದು ನಿಲ್ಲುವದು ಬಹು ದೊಡ್ಡ ಸವಾಲಾಗಿದೆ. ಈ ಎಲ್ಲ ವಿದ್ಯುನ್ಮಾನ ಮಾಧ್ಯಮಗಳಲ್ಲಿ ಕನ್ನಡವನ್ನು ಬಳಸುವಂತ ತಂತ್ರಾಂಶ ರಚನೆಯಾಗಬೇಕಾಗಿದೆ. ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣ ಕನ್ನಡ ಮಾಧ್ಯಮದಲ್ಲಿ ಲಭಿಸಬೇಕಾಗಿದೆ.

ಕನ್ನಡಿಗರಿಗೆ ಎಲ್ಲಾ ಕ್ಷೇತ್ರಗಳಲ್ಲೂ ಉದ್ಯೋಗ ಲಭಿಸಬೇಕು. ಸಾರ್ವಜನಿಕ ಸೇವೆಯಲ್ಲಿರುವವರು ಕಡ್ಡಾಯವಾಗಿ ತಮ್ಮ ಮಕ್ಕಳನ್ನು ಸರಕಾರಿ ಶಾಲೆಗಳಿಗೇ ಸೇರಿಸಬೇಕು. ಆಗಲಾದರೂ ಸರಕಾರಿ ಶಾಲೆಗಳ ಸ್ಥಿತಿ ಸುಧಾರಿಸಲು ಸಾಧ್ಯ. ಸರಕಾರಿ ಮತ್ತು ಖಾಸಗಿ ಕಚೇರಿಗಳಲ್ಲಿ ಕನ್ನಡದ ಬಳಕೆಯನ್ನು ಕಡ್ಡಾಯ ಗೊಳಿಸಬೇಕು. ಅನ್ಯದೇಶೀಯ ಪದಗಳ ಬಳಕೆಯನ್ನು ನಿಲ್ಲಿಸಬೇಕು. ಉದಾಹರಣೆಗೆ ಪೋಸ್ಟ್‌ಮನ್ ಬದಲಾಗಿ ಓಲೆಕಾರ, ಡಾಕ್ಟರ್ ಬದಲಾಗಿ ವೈದ್ಯ ಎಂದು ಇತ್ಯಾದಿಯಾಗಿ ಬಳಸಬೇಕು. ಸಾಹಿತ್ಯ ಸಮ್ಮೇಳನಗಳಲ್ಲಿ ಹಣದ ಬದಲಾಗಿ ಉಡುಗೊರೆಯಾಗಿ ಪುಸ್ತಕಗಳನ್ನು ನೀಡಬೇಕು.

ಗ್ರೀಕ್ ಜಾನಪದ ಕಥೆಯಲ್ಲಿ ಆ್ಯಂಟಿಸಸ್ ಎಂಬ ದೈತ್ಯನ ಕಥೆ ಬರುತ್ತದೆ. ಆತ ಪ್ರತಿಬಾರಿ ಯುದ್ಧದಲ್ಲಿ ಸೋತು ಕೆಳಕ್ಕೆ ಬಿದ್ದಾಗಲೂ ಹೊಸ ಚೈತನ್ಯದಿಂದ ಪುಟಿದೇಳುತ್ತಿದ್ದನಂತೆ. ಹೀಗಾಗಿ ಆತನೊಂದಿಗೆ ಯುದ್ಧಕ್ಕೆ ಹೋಗಲು ಎಲ್ಲರೂ ಅಂಜುತ್ತಿದ್ದರಂತೆ. ಹಾಗೆಯೇ ನಮ್ಮ ಕನ್ನಡದ ದೈತ್ಯ ನೆಲಕ್ಕೆ ಬಿದ್ದು ಸೋಲುತ್ತಿದೆ ಎನ್ನುವಾಗ ಮತ್ತೆ ನವಚೈತನ್ಯದಿಂದ ಪುಟಿದೇಳಬೇಕಾಗಿದೆ. ■

# 'ಸ್ಫೂರ್ತಿಧಾಮ' ಕೊಡಮಾಡುವ
# 'ಬೋಧಿ ವೃಕ್ಷ' ಮತ್ತು 'ಬೋಧಿ ವರ್ಧನ' ಪ್ರಶಸ್ತಿಗಳು

'ಸ್ಫೂರ್ತಿಧಾಮ'ವನ್ನು ನಿರ್ವಹಿಸುತ್ತಿರುವ 'ಅಂಬೇಡ್ಕರ್ ಶತಮಾನೋತ್ಸವ ಸಮಿತಿ ಟ್ರಸ್ಟ್', ಏಪ್ರಿಲ್ 14, 2012 ರಂದು ನಡೆಯಲಿರುವ 'ಅಂಬೇಡ್ಕರ್ ಹಬ್ಬ'ದಲ್ಲಿ ನೀಡಲಾಗುವ ಒಂದು ಲಕ್ಷ ರೂ. ಮೌಲ್ಯದ ಒಂದು 'ಬೋಧಿ ವೃಕ್ಷ' ಮತ್ತು ತಲಾ 20 ಸಾವಿರ ರೂ. ಮೌಲ್ಯದ ಐದು 'ಬೋಧಿ ವರ್ಧನ' ಪ್ರಶಸ್ತಿಗಳಿಗಾಗಿ ಅರ್ಹ ವ್ಯಕ್ತಿಗಳ ಆಯ್ಕೆಗೆ ಸೂಕ್ತ ಪ್ರಸ್ತಾವನೆ (Proposal)ಗಳನ್ನು ಆಹ್ವಾನಿಸುತ್ತಿದೆ.

ಈ ಪ್ರಶಸ್ತಿಗಳು ಹಲವು ಕಾರಣಗಳಿಗಾಗಿ ವಿಭಿನ್ನವಾದವೂ ಹೌದು, ವಿಶಿಷ್ಟವಾದವೂ ಹೌದು. ನಮ್ಮಲ್ಲಿ ರಾಷ್ಟ್ರ ಮತ್ತು ರಾಜ್ಯಮಟ್ಟದ ಸರ್ಕಾರಿ, ಅರೆಸರ್ಕಾರಿ, ಪ್ರತಿಷ್ಠಿತ ಅಕಾಡೆಮಿಗಳು, ಸಂಘ–ಸಂಸ್ಥೆಗಳು ಕೊಡುವ ಅನೇಕ ಪ್ರಶಸ್ತಿಗಳಿವೆ. ಆದರೆ, ಆರ್ಥಿಕ, ಸಾಮಾಜಿಕ, ರಾಜಕೀಯ ಅಥವ ಶೈಕ್ಷಣಿಕ ಬಂಡವಾಳವಿಲ್ಲದೆ ತಳಸ್ತರದವರ ಬದುಕನ್ನು ಗುಣಾತ್ಮಕವಾಗಿ ವಿಸ್ತರಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿರುವವರನ್ನು ಗೌರವಿಸುವ ಪ್ರಶಸ್ತಿಗಳು ನಮ್ಮಲಿಲ್ಲ. "A great man is different from an eminent one, in that he is ready to be a servant of soceity" ಎಂದು ಅಂಬೇಡ್ಕರ್ ಹೇಳಿದ ಈ ಮಾತುಗಳು ತಳಸ್ತರದವರ ಚಲನೆಗೆ ತಳಪಾಯವಾಗಬೇಕಾದ ಸೇವೆಯ ಮೌಲ್ಯವನ್ನು ಎತ್ತಿ ಹಿಡಿಯುತ್ತದೆ.

2009ರ 'ಅಂಬೇಡ್ಕರ್ ಹಬ್ಬ'ದಲ್ಲಿ ಬೆಂಗಳೂರಿನ 'ಮಹಾಬೋಧಿ ಸೊಸೈಟಿ' ಸ್ಥಾಪಕರಾದ ಬೌದ್ಧ ಬಿಕ್ಕು ಆಚರಿಯ ಬುದ್ಧರಖ್ಖಿತ ಹಾಗೂ 2010ರಲ್ಲಿ ಖ್ಯಾತ ಅಂಕಣಕಾರ ಚಂದ್ರಭಾನ್ ಪ್ರಸಾದ್, 2011ರಲ್ಲಿ ಅಂಬೇಡ್ಕರ್ ಬರಹ ಮತ್ತು ಭಾಷಣಗಳನ್ನು ಜಗತ್ತಿಗೆ ಪರಿಚಯಿಸಿದ ಭಗವಾನ್ ದಾಸ್(ಮರಣೋತ್ತರ)ಅವರು 'ಬೋಧಿವೃಕ್ಷ' ಪ್ರಶಸ್ತಿಯನ್ನು ಪಡೆದುಕೊಂಡರು. ಕಾಗೋಡು ಹೋರಾಟದ ರೂವಾರಿ ಸಾಗರದ ಗಣಪತಿಯಪ್ಪ, ಜಲ ತಜ್ಞ ಕೋಲಾರದ ಕೆ. ನಾರಾಯಣ ಸ್ವಾಮಿ, ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು, ತಳಸಮುದಾಯದ ಮಕ್ಕಳಿಗೆ ಉಚಿತ ಶಿಕ್ಷಣವನ್ನು ನೀಡಿದ ಕನಕಪುರದ ಶ್ರೀ ಶ್ರೀನಿವಾಸಯ್ಯನವರು, ಸ್ವತಃ ದೇವದಾಸಿಯಾಗಿದ್ದರೂ, ದೇವದಾಸಿ ಪದ್ಧತಿಯ ವಿರುದ್ಧ ಹೋರಾಡಿದ ಬಿಜಾಪುರದ ಶ್ರೀಮತಿ ಮಹಾದೇವಮ್ಮ, ಪೌರಕಾರ್ಮಿಕರ ಹಕ್ಕುಗಳಿಗಾಗಿ ನಿರಂತರ ಹೋರಾಟ ಮಾಡುತ್ತಿರುವ ಶ್ರೀ ಎಸ್.ಕೆ. ಕಾಂತ, ಬಿಳಿಗಿರಿರಂಗನ ಬೆಟ್ಟದ ದೇಶೀ ಪ್ರಸೂತಿ ತಜ್ಞೆ ಶ್ರೀಮತಿ ಕೇತಮ್ಮ, ಅಲೆಮಾರಿಗಳ ಸಂಘಟನೆಗಾಗಿ ಶ್ರಮಿಸುತ್ತಿರುವ ಡಾ॥ ಕೆ.ಎಂ. ಮೇತ್ರಿ, ಹಿರಿಯ ಹೋರಾಟಗಾರ ಶ್ರೀ ಎನ್. ವೆಂಕಟೇಶ್ ಹಾಗೂ ದಲಿತ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಲು ಶ್ರಮಿಸಿದ ಡಿ. ವೆಂಕಟಯ್ಯ (ಮರಣೋತ್ತರ) ಅವರು 'ಬೋಧಿವರ್ಧನ' ಪ್ರಶಸ್ತಿಯನ್ನು ಪಡೆದುಕೊಂಡ ಕೆಲವರು.

ಬುದ್ಧ, ಮೋಕ್ಷವನ್ನು ಹುಡುಕುತ್ತಾ ಸಮುದಾಯದ ಪ್ರೀತಿಯ ಬಂಧನದಲ್ಲಿ ಅದನ್ನು ಕಂಡುಕೊಂಡ. ನಮ್ಮ ಕಾಲಘಟ್ಟವೂ ಒಂದು ಆಧ್ಯಾತ್ಮಿಕ ಪಯಣಕ್ಕೆ ಹಾತೊರೆಯುತ್ತಿದೆ. ಈ ಆಧ್ಯಾತ್ಮಿಕ ಪಯಣ ಆರಂಭವಾಗುವುದೇ ಈ ನೆಲದ ಬದುಕಿನೊಟ್ಟಿಗಿನ ಸಾವಯವ ಸಂಬಂಧದೊಂದಿಗೆ.

ಈ ಸಾವಯವ ಸಂಬಂಧವನ್ನು ಸ್ಥಾಪಿಸಿಕೊಂಡವರನ್ನು ಸನ್ಮಾನಿಸುವ ಮೂಲಕ 'ಸ್ಫೂರ್ತಿಧಾಮ' ತನ್ನ ಘನತೆಯನ್ನು ಹೆಚ್ಚಿಸಿಕೊಳ್ಳಬಯಸುತ್ತದೆ. ಇಂಥವರು ನಿಮಗೆ ತಿಳಿದಿದ್ದರೆ, ದಯವಿಟ್ಟು ನಮಗೆ ಅವರ ಬಗ್ಗೆ ಪೂರ್ಣಮಾಹಿತಿಯನ್ನು ನೀಡಿ. ಅಥವಾ ನೀವೇ ಅಂಥವರಾಗಿದ್ದರೆ, ದಯವಿಟ್ಟು ನಮ್ಮನ್ನು ಸಂಪರ್ಕಿಸಿ.



ಬೋಧಿ ವೃಕ್ಷ

ಬೋಧಿ ವರ್ಧನ

ಪ್ರಸ್ತಾವನೆ ಸ್ವೀಕರಿಸಲು ಕಡೇ ದಿನಾಂಕ:
ಮಾರ್ಚ್ 31, 2012

ವಿಳಾಸ: 'ಸ್ಫೂರ್ತಿಧಾಮ', ಅಂಜನಾನಗರ,
ಮಾಗಡಿ ರಸ್ತೆ, ವಿಶ್ವನೀಡಂ ಅಂಚೆ, ಬೆಂಗಳೂರು– 560091
ದೂರವಾಣಿ: 080– 23480278

# ದಲಿತ ಸಂವೇದನೆ: ಕೆಲವು ಸಮಸ್ಯೆಗಳು ಸಾಧ್ಯತೆಗಳು

## ಒಂದು

ದಲಿತ ಹೋರಾಟ, ದಲಿತ ಚಳವಳಿ, ದಲಿತ ಸಾಹಿತಿ, ದಲಿತ ಮಹಿಳೆ, ದಲಿತ ನೌಕರ, ದಲಿತ ಅಧಿಕಾರಿ, ದಲಿತ ರಾಜಕಾರಣಿ, ದಲಿತ ಪರಂಪರೆ, ದಲಿತ ವಚನಕಾರರು, ದಲಿತ ಸಂಸ್ಕೃತಿ ಈ ಮುಂತಾದ ಪದಗಳು ಸಹಜವಾಗಿ ಚಾಲ್ತಿಯಲ್ಲಿವೆ. ಇವುಗಳ ಬಳಕೆ ಮತ್ತು ಪ್ರಯೋಗಗಳ ಬಗ್ಗೆ ಯಾವ ಪ್ರಶ್ನೆಗಳೂ, ಭಿನ್ನಮತಗಳೂ ಬರುತ್ತಿಲ್ಲ. ಇವುಗಳ ಬಳಕೆಯು ಒಪ್ಪಿಗೆಗೆ ಹಾಗೂ ನಂಬಿಕೆಗೆ ಅರ್ಹವಾಗಿದೆ. ಇವುಗಳ ಬಳಕೆಗೆ ನಾಡಿನಲ್ಲಿ ಕನಿಷ್ಠ ನಾಲ್ಕು ದಶಕಗಳ ಇತಿಹಾಸವಿದೆ. ಹಾಗಾಗಿ ಸಧ್ಯಕ್ಕೆ ಇವು ಪ್ರಶ್ನಾತೀತ ಪದಗಳಾಗಿ ಬಳಕೆಯಾಗುತ್ತಿವೆ. 'ದಲಿತ' ಎಂಬ ಪದವನ್ನು ಬಳಸಿದಾಗಲೆಲ್ಲ ಅದು ದಲಿತರಿಗೆ ಸಂಬಂಧಿಸಿದ್ದು ಎಂಬ ಸಾಮಾನ್ಯ ವಿಚಾರವನ್ನು ಸೂಚಿಸುತ್ತದೆ. ದಲಿತರಿಗೆ ಸಂಬಂಧಿಸಿರದಿದ್ದರೆ ಅದನ್ನು ಸೂಚಿಸಲು 'ದಲಿತೇತರ' ಎಂಬ ಪದವನ್ನು ಬಳಸಲಾಗುತ್ತಿದೆ. ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗಳ ಚರ್ಚೆ ಹಾಗೂ ಅಧ್ಯಯನಗಳಲ್ಲಿ 'ದಲಿತ ಸಂವೇದನೆ' ಎಂಬ ಪದವನ್ನು ಬಳಸಲಾಗುತ್ತಿದೆ. ಇದೂ ಕೂಡ ಬಹಳ ವರ್ಷಗಳಿಂದ ಬಳಕೆಯಾಗುತ್ತಿದೆ. ಮೇಲಿನ ಪದಗಳಂತೆ ಈ ಪದದ ಬಳಕೆಯ ಬಗೆಗೂ ಯಾವ ಪ್ರಶ್ನೆಗಳೂ, ಭಿನ್ನಮತಗಳೂ ಬರುತ್ತಿಲ್ಲ. ಹಾಗಾಗಿ ಇದೂ ಕೂಡ ಪ್ರಶ್ನಾತೀತ ಪದವಾಗಿ ಬಳಕೆಯಾಗುತ್ತಿದೆ.

'ದಲಿತ ಸಂವೇದನೆ' ಎಂಬುದನ್ನು ಸಾಮಾನ್ಯವಾಗಿ ದಲಿತರನ್ನು ಕುರಿತು ಬರೆದಿರುವುದು/ಬರೆಯುವುದು ಎಂದು ಗ್ರಹಿಸಲಾಗಿದೆ; ಒಪ್ಪಿಕೊಳ್ಳಲಾಗಿದೆ. ಪ್ರಶ್ನೆ ಇರುವುದು ದಲಿತರ ಯಾವ ವಿಷಯವನ್ನು ಕುರಿತು ಬರೆಯುವುದು, ಹೇಗೆ ಬರೆಯುವುದು, ಯಾರಿಗಾಗಿ ಬರೆಯುವುದು ಮತ್ತು ಯಾರು ಬರೆಯುವುದು ಎಂಬುದು. ಅಂದರೆ ಇದು ದಲಿತರನ್ನು ಕುರಿತು ಬರೆದಿರುವ ವಿಷಯದ ತಿರುಳಿಗೆ ಸಂಬಂಧಿಸಿದುದೊ ಅಥವಾ ವಿಷಯವನ್ನು ನಿರೂಪಿಸುವ ನಿರೂಪಣಾ ಕ್ರಮಕ್ಕೆ ಸಂಬಂಧಿಸಿದುದೊ ಎಂಬುದು ಬಹಳ ಮುಖ್ಯ. ಜೊತೆಗೆ ದಲಿತ ಸಂವೇದನೆ ಎಂಬುದರ ವೈಚಾರಿಕ ಹಾಗೂ ತಾತ್ವಿಕ ಸ್ವರೂಪ ಯಾವುದು ಎಂಬುದು ಚರ್ಚಿಸಬೇಕಾದ ಪ್ರಶ್ನೆ.

ದಲಿತ ಸಂವೇದನೆಯು ಬರವಣಿಗೆಯ ತಿರುಳಿಗೆ ಸಂಬಂಧಿಸಿದುದು ಎಂದಾಗ ಆ ವಿಷಯದ ವೈಚಾರಿಕತೆ ಮತ್ತು ರಾಜಕೀಯ ತಾತ್ವಿಕತೆ ಮುಖ್ಯವಾಗುತ್ತದೆ. ದಲಿತ ಲೋಕವನ್ನು ಶೋಷಕ ನೆಲೆಯಿಂದ, ಯಜಮಾನಿಕೆಯ ನೆಲೆಯಿಂದ ಮತ್ತು ಅರಾಜಕತೆಯ ನೆಲೆಯಿಂದ ಗ್ರಹಿಸಬಹುದು; ನಿರೂಪಿಸಬಹುದು. ಇದು ಒಂದು ಆಯಾಮ. ಅದೇ ರೀತಿಯಲ್ಲಿ ದಲಿತ ಲೋಕವನ್ನು ಶೋಷಿತ, ದಮನಿತ ಮತ್ತು ಅಪಮಾನಿತ ನೆಲೆಯಿಂದಲೂ ಗ್ರಹಿಸಬಹುದು; ನಿರೂಪಿಸಬಹುದು. ಇದು ಎರಡನೇ ಆಯಾಮ. ದಲಿತ ಲೋಕವನ್ನು ರಮ್ಯ ನೆಲೆಯಲ್ಲಿ, ರೋಮಾಂಚನದ ನೆಲೆಯಲ್ಲಿ ಗ್ರಹಿಸಬಹುದು; ನಿರೂಪಿಸಬಹುದು. ಇದು ಒಂದು ರೀತಿ. ಅದೇ ರೀತಿಯಲ್ಲಿ ದಲಿತ ಲೋಕವನ್ನು ಅಸಹಾಯಕತೆ ಹಾಗೂ ಪ್ರತಿರೋಧದ ನೆಲೆಯಲ್ಲಿ ಗ್ರಹಿಸಬಹುದು; ನಿರೂಪಿಸಬಹುದು. ಇದು ಮತ್ತೊಂದು ರೀತಿ.

ದಲಿತ ಲೋಕವನ್ನು ಏಕಾಕಾರದಲ್ಲಿ ಗ್ರಹಿಸುವುದು ಒಂದು ಬಗೆ. ಇದಲ್ಲದೆ ದಲಿತ ಲೋಕವನ್ನು ಅದರ ಆಂತರಿಕ ವೈರುಧ್ಯಗಳ ನೆಲೆಯಲ್ಲಿ ಗ್ರಹಿಸುವುದು ಇನ್ನೊಂದು ಬಗೆ. ಯಾಕೆಂದರೆ ಎಲ್ಲಾ ದಲಿತರೂ ಒಂದೇ ರೀತಿಯಲ್ಲಿ ಇಲ್ಲ. ನಗರ, ಪಟ್ಟಣ, ಗ್ರಾಮಾಂತರ ಎಂಬ ಭೌಗೋಳಿಕ ವಿಭಾಗಗಳಲ್ಲಿ; ಅಕ್ಷರಸ್ಥರು ಅನಕ್ಷರಸ್ಥರು ಎಂಬ ವಿಂಗಡಣೆಯಲ್ಲಿ; ರಾಜಕಾರಣಿ, ಉದ್ಯಮಿ, ಅಧಿಕಾರಿ, ಉದ್ಯೋಗಿ, ಅರೆ ಉದ್ಯೋಗಿ, ನಿರುದ್ಯೋಗಿ, ಕೂಲಿ ಕಾರ್ಮಿಕ, ಜೀತದಾಳು ಎಂಬ ಆರ್ಥಿಕ ತಾರತಮ್ಯಗಳಲ್ಲಿ ದಲಿತರು ಬದುಕುತ್ತಿದ್ದಾರೆ. ಹಾಗಾಗಿ ದಲಿತ ಸಂವೇದನೆಯ ಚರ್ಚೆ ಈ ಎಲ್ಲಾ ಒಳಸೂಕ್ಷ್ಮಗಳನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ.

## ಎರಡು

ವಾಸ್ತವವಾಗಿ ಸಾಹಿತ್ಯದಲ್ಲಿ ದಲಿತ ಸಂವೇದನೆಯ ಪ್ರಶ್ನೆ ಮತ್ತು ಆ ಕುರಿತ ಚರ್ಚೆಗಳು ಶುರುವಾಗಿದ್ದು ಕಳೆದ ಶತಮಾನದ 70ರ ದಶಕದಲ್ಲಿ. ವೈಚಾರಿಕ ಮತ್ತು ಸಾಹಿತ್ಯ ವಿಮರ್ಶೆಯ ಬರವಣಿಗೆಯಲ್ಲಿ ದಲಿತ ಸಂವೇದನೆ ಎಂಬ ಪರಿಕಲ್ಪನೆಯನ್ನು ಪ್ರಯೋಗಿಸಲಾಗಿದೆ. ಆದರೆ ಇದು ಹುಟ್ಟಿದ್ದು ಕೇವಲ ಸಾಹಿತ್ಯ ಮತ್ತು ವಿಮರ್ಶಾ ಲೋಕದಲ್ಲಿ ಅಲ್ಲ ಎಂಬುದನ್ನು ಗಮನಿಸಬೇಕು. ಕಳೆದ ಶತಮಾನದ 70ರ ದಶಕದ ಭಾರತದ ಮತ್ತು ಕರ್ನಾಟಕದ ಸಕಲ ಸಂಕಟಗಳು ಮತ್ತು ಅವುಗಳಿಂದ ಹೊರಬರಲು ಪ್ರಯತ್ನಿಸಿದ ಹೋರಾಟಗಳು ಹಾಗೂ ಆ ಕುರಿತ ಆಲೋಚನೆಗಳ ಭಾಗವಾಗಿ ದಲಿತ ಸಂವೇದನೆ ಎಂಬ ಪರಿಕಲ್ಪನೆ ಚಾರಿತ್ರಿಕವಾಗಿ ರೂಪುಗೊಂಡಿತು.

1947ರಲ್ಲಿ ಭಾರತಕ್ಕೆ ಅಧಿಕಾರ ಹಸ್ತಾಂತರವಾಯಿತು. ಅದಾಗಿ 2 ದಶಕಗಳು ಕಳೆದರೂ ಕೂಡ ಈ ನೆಲದ ಸಾಮಾನ್ಯರ ಬದುಕು ಹಸನಾಗಲಿಲ್ಲ. 'ಕತ್ತಿ ಪರಕೀಯರದಾದರೆ ಮಾತ್ರ ನೋವೆ, ನಮ್ಮವರೆ ಹದ ಹಾಕಿ ತಿವಿದರೆ ಅದು ಹೂವೆ?' ಎಂಬ ಕುವೆಂಪು ಅವರ ಮಾತು ನಿಜವಾಯಿತು. ಭಾರತದ ಆಳುವ ವರ್ಗ, ಭೂಮಾಲೀಕ ವರ್ಗಗಳು ಎಂದಿನ ತಮ್ಮ ಶೋಷಣೆ, ದಮನ, ದಬ್ಬಾಳಿಕೆಗಳನ್ನು ಮುಂದುವರಿಸಿದ್ದವು. ನಾಡಿನಲ್ಲಿ ಹಸಿವು, ಅಪಮಾನ, ಶೋಷಣೆಗಳು ಹಾಗೇ ಮುಂದುವರಿದಿದ್ದವು. ಇದು ಆಳುವ ವರ್ಗ ಮತ್ತು ಶೋಷಿತ ವರ್ಗಗಳನ್ನು

'ದಲಿತ ಸಂವೇದನೆ' ಎಂಬುದನ್ನು ಸಾಮಾನ್ಯವಾಗಿ ದಲಿತರನ್ನು ಕುರಿತು ಬರೆದಿರುವುದು/ಬರೆಯುವುದು ಎಂದು ಗ್ರಹಿಸಲಾಗಿದೆ; ಒಪ್ಪಿಕೊಳ್ಳಲಾಗಿದೆ. ಪ್ರಶ್ನೆ ಇರುವುದು ದಲಿತರ ಯಾವ ವಿಷಯವನ್ನು ಕುರಿತು ಬರೆಯುವುದು, ಹೇಗೆ ಬರೆಯುವುದು, ಯಾರಿಗಾಗಿ ಬರೆಯುವುದು ಮತ್ತು ಯಾರು ಬರೆಯುವುದು ಎಂಬುದು. ಅಂದರೆ ಇದು ದಲಿತರನ್ನು ಕುರಿತು ಬರೆದಿರುವ ವಿಷಯದ ತಿರುಳಿಗೆ ಸಂಬಂಧಿಸಿದುದೊ ಅಥವಾ ವಿಷಯವನ್ನು ನಿರೂಪಿಸುವ ನಿರೂಪಣ ಕ್ರಮಕ್ಕೆ ಸಂಬಂಧಿಸಿದುದೊ ಎಂಬುದು ಬಹಳ ಮುಖ್ಯ. ಜೊತೆಗೆ ದಲಿತ ಸಂವೇದನೆ ಎಂಬುದರ ವೈಚಾರಿಕ ಹಾಗೂ ತಾತ್ವಿಕ ಸ್ವರೂಪ ಯಾವುದು ಎಂಬುದು ಚರ್ಚಿಸಬೇಕಾದ ಪ್ರಶ್ನೆ.

ನಿಚ್ಚಳವಾಗಿ ಮುಖಾಮುಖಿಯಾಗಿಸಿತು. 70ರ ದಶಕದ ಆರಂಭವು ಈ ಬಗೆಯ ದಮನದ ವಿರುದ್ಧ ಹೋರಾಡುವಂತೆ ಶೋಷಿತ ಜನಸ್ತೋಮವನ್ನು ಎಚ್ಚರಿಸಿತು. ಅಕ್ಷರ ಕಲಿತವರು, ಅದರಲ್ಲೆ ನೌಕರಿ ಪಡೆದವರು ಇದರ ಮುಂಚೂಣಿಯಲ್ಲಿದ್ದರು. 'ಕನ್ನಡ ಸಾಹಿತ್ಯ ಬೂಸಾ' ಎಂದು ಬಸವಲಿಂಗಪ್ಪನವರು ಭಾಷಣವೊಂದರಲ್ಲಿ ಹೇಳಿದ್ದು, ನಂತರ ಅವರ ವಿರುದ್ಧ ಹೋರಾಟಗಳನ್ನು ನಡೆಸಿದ್ದು ಗೊತ್ತಿರುವ ವಿಷಯ. ಆದರೆ ಇಲ್ಲಿ ಒಂದು ಅಂಶವನ್ನು ಸ್ಪಷ್ಟ ಮಾಡಿಕೊಳ್ಳಬೇಕು. ಬಸವಲಿಂಗಪ್ಪನವರು 'ಕನ್ನಡ ಸಾಹಿತ್ಯ ಬೂಸಾ' ಎಂದು ಹೇಳಿದ್ದಕ್ಕಿಂತ ಅವರು ಮಾಡಿದ್ದ ಮತ್ತೊಂದು ಕೆಲಸ ಮೇಲ್ವರ್ಗ ಮತ್ತು ಮೇಲ್ಜಾತಿಗಳ ಹೊಟ್ಟೆಗೆ ಬೆಂಕಿ ಹಾಕಿತ್ತು. ಅವರು ಹಳ್ಳಿಗಳಿಗೆ ಹೋಗಿ, ದಲಿತರು ಮಲ ಹೊರುವುದನ್ನು, ಸತ್ತ ದನ ಹೊರುವುದನ್ನು, ಮೇಲ್ಜಾತಿಯವರ ಹೆಣ ಹೊರುವುದನ್ನು ಮತ್ತು ಮೇಲ್ಜಾತಿಯವರು ಸತ್ತ ಸುದ್ದಿ ಹೇಳುವುದನ್ನು ಬಿಡಬೇಕು ಎಂದು ಕರೆ ಕೊಟ್ಟಿದ್ದರು. ಇದು ಭೂಮಾಲಿಕ ವ್ಯವಸ್ಥೆಗೆ ನುಂಗಲಾರದ ತುತ್ತಾಗಿತ್ತು. ಅದೇ ಸಮಯದಲ್ಲಿ ಅವರು ಭಾಷಣವೊಂದರಲ್ಲಿ 'ಕನ್ನಡ ಸಾಹಿತ್ಯ ಬೂಸಾ' ಎಂದು ಹೇಳಿದ್ದು ಅವರ ವಿರುದ್ಧ ಸೇಡು ತೀರಿಸಲು ಒಂದು ನೆಪವಾಯಿತು. ಅಂದರೆ ಬಸವಲಿಂಗಪ್ಪನವರು ಏನು ಹೇಳಿದ್ದರು ಎಂಬುದಕ್ಕಿಂತಲೂ ಅವರು ಏನು ಮಾಡಿದ್ದರು ಎಂಬುದು ಅವರಿಂದ ರಾಜೀನಾಮೆ ಪಡೆಯಲು ಮುಖ್ಯ ಕಾರಣವಾಗಿತ್ತು.

ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿಯ ಹುಟ್ಟು ಮತ್ತು ಅದರ ಹೋರಾಟಗಳು ದಲಿತ ನೆಲೆಯ ಆಲೋಚನೆಯನ್ನು ಚಾರಿತ್ರಿಕವಾಗಿ ರೂಪಿಸಿದವು. ಪಂಚಮ ಪತ್ರಿಕೆಯ ಒಂದೊಂದು ಅಕ್ಷರಗಳು, ಹೋರಾಟಗಳಲ್ಲಿ ದಲಿತರು ಕೂಗಿದ ಘೋಷಣೆಗಳು, ಹೋರಾಟದ ಕರಪತ್ರಗಳು, ಗೋಡೆ ಬರಹಗಳು, ಹೋರಾಟದ ಹಾಡುಗಳು, ಸಿದ್ದಲಿಂಗಯ್ಯನವರ ಕವನಗಳು, ದೇವನೂರರ ಕಥೆಗಳು ಮತ್ತು ಬಿ. ಕೃಷ್ಣಪ್ಪ ಹಾಗೂ ದೇವಯ್ಯ ಹರವೆ ಅವರು ಕುವೆಂಪು ಕೃತಿಗಳ ಮೇಲೆ ಬರೆದಿರುವ ವಿಮರ್ಶೆಯ ಲೇಖನಗಳು ದಲಿತ ಸಂವೇದನೆಗೆ ಸರಿಯಾದ ತಾತ್ವಿಕ ಬುನಾದಿ ಹಾಕಿದವು. ದಲಿತರ ನಿಜವಾದ ಶತ್ರು ಭೂಮಾಲಿಕ ವ್ಯವಸ್ಥೆ, ಆಳುವ ವರ್ಗ ಮತ್ತು ಆಳುವ ವರ್ಗದ ಪರಿವಾರ ಎಂಬುದನ್ನು ಅವು ಸಾರಿ ಸಾರಿ ಹೇಳಿದವು. ದಲಿತರ ವಸ್ತುಸ್ಥಿತಿಗೆ ಕಾರಣಗಳನ್ನೂ, ಅವರ ವಿಮೋಚನೆಯ ಸಾಮಾನ್ಯ ಸಾಧ್ಯತೆಗಳನ್ನೂ ಅವು ಮಂಡಿಸಿದವು. ಕರ್ನಾಟಕದಲ್ಲಿ ಈ ಬಗೆಯಲ್ಲಿ ದಲಿತ ಸಂವೇದನೆ ಎಂಬುದು ತಾತ್ವಿಕವಾಗಿ ರೂಪುಗೊಂಡಿತು.

**ದಲಿತ ಸಂವೇದನೆಯ ತಾತ್ವಿಕ ನೆಲೆಗಳು**

ಕಳೆದ ಸುಮಾರು ಮೂರು ದಶಕಗಳಿಂದ ಕನ್ನಡ ಸಾಹಿತ್ಯ ವಿಮರ್ಶೆ, ವಿಚಾರ ಸಾಹಿತ್ಯ, ವಿಚಾರ ಸಂಕಿರಣಗಳು, ಸಂಶೋಧನೆ ಮತ್ತು ಔಪಚಾರಿಕ ಎಂ.ಫಿಲ್. ಹಾಗೂ ಪಿಎಚ್.ಡಿ. ಅಧ್ಯಯನಗಳಲ್ಲಿ ದಲಿತ ಸಂವೇದನೆ ಎಂಬ ಪದವನ್ನು ವ್ಯಾಪಕವಾಗಿ ಬಳಸಲಾಗುತ್ತಿದೆ. ಇಲ್ಲೆಲ್ಲ ದಲಿತ ಸಂವೇದನೆ ಎಂಬುದನ್ನು ಏಕಘಟಕ, ಏಕಮಾದರಿ, ವೈರುಧ್ಯ ರಹಿತ ಹಾಗೂ ಪ್ರಶ್ನಾತೀತ ಪರಿಕಲ್ಪನೆಯಾಗಿ ಬಳಸಲಾಗುತ್ತಿದೆ. ಇದರ ಬಳಕೆಯು ವ್ಯಾಪಕವೂ ಹಾಗೂ ಜನಪ್ರಿಯವೂ ಆಗಿ ನಡೆದಿದೆ. ದಲಿತ ಸಂವೇದನೆ ಎಂದು ಯಾವುದನ್ನು ಒಪ್ಪಿತ ನೆಲೆಯಲ್ಲಿ, ಪ್ರಶ್ನಾತೀತವಾಗಿ ಬಳಸಲಾಗುತ್ತಿದೆಯೊ ಅದರ ಒಳವಿನ್ಯಾಸವನ್ನು ಒಡೆದುನೋಡುವ ಅಗತ್ಯವಿದೆ. ದಲಿತ ಸಂವೇದನೆಯ ಹೆಸರಿನಲ್ಲಿ ನಿಜವಾಗಿಯೂ ದಲಿತ ಹಿತಾಸಕ್ತಿಯ ವೈಚಾರಿಕತೆ ಕ್ರಿಯಾಶೀಲವಾಗಿದೆಯೊ ಅಥವಾ ದಲಿತೇತರ ಎಂದು ಕರೆಯಬಹುದಾದ ಹಿತಾಸಕ್ತಿಯ ವೈಚಾರಿಕತೆ ಕ್ರಿಯಾಶೀಲವಾಗಿದೆಯೊ ಎಂಬುದನ್ನು ಚರ್ಚೆ ಮಾಡುವ ಅಗತ್ಯವಿದೆ. ಈ ದೃಷ್ಟಿಯಿಂದ ದಲಿತ ಸಂವೇದನೆಯನ್ನು 1. ಉದಾರವಾದಿ/ಸುಧಾರಣಾವಾದಿ ನೆಲೆ, 2. ಶೂದ್ರ ನೆಲೆ, 3. ಮೂಲಭೂತವಾದಿ ನೆಲೆ, 4. ಎನ್.ಜಿ.ಓ. ನೆಲೆ ಮತ್ತು 5. ಪ್ರಜಾತಾಂತ್ರಿಕ ನೆಲೆ ಎಂಬುದಾಗಿ ವಿಂಗಡಿಸಿಕೊಂಡು ಅವುಗಳನ್ನು ಚರ್ಚಿಸುವ ಅಗತ್ಯವಿದೆ. ಹೀಗೆ ಬಿಡಿಯಾಗಿ ಚರ್ಚೆ ಮಾಡುವುದರ ಮೂಲಕ ಅವುಗಳ ವೈಚಾರಿಕ ಹಿತಾಸಕ್ತಿಯ ಸ್ವರೂಪ ಯಾವುದು ಎಂಬುದನ್ನು ಅರಿಯಬಹುದಾಗಿದೆ.

ಇದರ ಚರ್ಚೆಯನ್ನು ಎರಡು ನೆಲೆಗಳಲ್ಲಿ ಮಾಡಲು ಸಾಧ್ಯವಿದೆ. ಒಂದು: ರಚನೆಯಾಗಿರುವ ಸಾಹಿತ್ಯದಲ್ಲಿ ದಲಿತ ಸಂವೇದನೆಯ ಸ್ವರೂಪ ಹೇಗಿದೆ ಎಂಬುದನ್ನು ಕುರಿತ ಚರ್ಚೆ. ಎರಡು: ರಚನೆಯಾಗಿರುವ ಸಾಹಿತ್ಯವನ್ನು ಕುರಿತು ರಚನೆಯಾಗಿರುವ ವಿಮರ್ಶೆ ಸಾಹಿತ್ಯದಲ್ಲಿ ದಲಿತ ಸಂವೇದನೆಯ ಸ್ವರೂಪ ಹೇಗಿದೆ ಎಂಬುದನ್ನು ಕುರಿತ ಚರ್ಚೆ.

**1. ಉದಾರವಾದಿ/ ಸುಧಾರಣಾವಾದಿ ನೆಲೆಯ ದಲಿತ ಸಂವೇದನೆ**

ದಲಿತ ಲೋಕವನ್ನು ಕುರಿತು ಆಧುನಿಕ ಲಿಖಿತ ಸಾಹಿತ್ಯದಲ್ಲಿ ಮೊದಲು ಬರೆದವರು ದಲಿತೇತರ ಬರಹಗಾರರು. ಶಿವರಾಮ ಕಾರಂತ, ಕುವೆಂಪು, ಮಾಸ್ತಿ, ಶ್ರೀರಂಗ, ರಾವ್ ಬಹದ್ದೂರ್, ಕೊರಡ್ಕಲ್ ಶ್ರೀನಿವಾಸರಾವ್, ಗೊರೂರು, ಪು.ತಿ.ನ. ಶಂಬಾ, ಬೇಂದ್ರೆ ಮುಂತಾದವರು. ಇವರ ಬರಹಗಳಲ್ಲಿ ದಲಿತ ಕಾಳಜಿ ಎಂಬುದು ಕೇಂದ್ರ ವಿಷಯವಾಗಿರಲಿಲ್ಲ. ಅದು ಅವರು ಆಯ್ಕೆ ಮಾಡಿಕೊಂಡಿದ್ದ ಸಾಹಿತ್ಯಕ ವಿಷಯದ ಪರಿಧಿಯ ಮತ್ತು ಅನಿವಾರ್ಯ ಭಾಗವಾಗಿತ್ತು. ಆದರೆ ಅಗತ್ಯದ ಭಾಗವಾಗಿರಲಿಲ್ಲ. ದಲಿತೇತರ ಲೋಕವನ್ನೂ ಮತ್ತು ದಲಿತ ಲೋಕವನ್ನೂ ಅವರು ತಮ್ಮ ಸಾಹಿತ್ಯದಲ್ಲಿ ಗ್ರಹಿಸುವ ಹಾಗೂ ಮಂಡಿಸುವ ಕ್ರಮಗಳು ಏಕಮಾದರಿಯವಲ್ಲ. ಪಠ್ಯದಿಂದ ಪಠ್ಯಕ್ಕೆ ಹಾಗೂ ಪ್ರಕಾರದಿಂದ ಪ್ರಕಾರಕ್ಕೆ ಅವು ಸೂಕ್ಷ್ಮವಾಗಿ ಬದಲಾಗುತ್ತಾ ಹೋಗುತ್ತವೆ. ಕೆಲವು ಪಠ್ಯಗಳಲ್ಲಿ ದಲಿತೇತರ ಲೋಕದೊಂದಿಗೆ ದಲಿತ ಲೋಕವನ್ನು ಅನುಬಂಧದ ರೀತಿಯಲ್ಲಿ ಅವರು ಗ್ರಹಿಸಿ ನಿರೂಪಿಸಿರುವುದೂ ಇದೆ. ಆಗ ದಲಿತ ವಿಷಯ ವೆಂಬುದು ದಲಿತೇತರ ವಿಷಯದ ಒಂದು ಭಾಗವಾಗುತ್ತದೆ. ಈ ಬಗೆಯ ಸಂಯೋಜನೆಯಲ್ಲಿ ದಲಿತೇತರ ಲೋಕವೆಂಬುದು ಕೇಂದ್ರವಾಗಿದ್ದು, ಇಲ್ಲವೆ ಪ್ರಧಾನವಾಗಿದ್ದು, ದಲಿತ ಲೋಕವೆಂಬುದು ಪರಿಧಿಯ ಇಲ್ಲವೆ ಅಧೀನ ನೆಲೆಯಲ್ಲಿರುತ್ತದೆ. ಸಾಧ್ಯವಾದಷ್ಟೂ ಕೇಂದ್ರಕ್ಕೆ ಮತ್ತು ಪ್ರಧಾನಕ್ಕೆ ಇದು ಹೊಂದಿಕೊಂಡಿರಬೇಕು ಎಂಬುದು ಆ ನಿರೂಪಣೆಯ ಸಾಮಾನ್ಯ ಕ್ರಮವಾಗಿರುತ್ತದೆ. ಈ ಗ್ರಹಿಕೆಯ ವಿಧಾನವು ಕೇಂದ್ರದಲ್ಲಿ ನಿಂತು ಪರಿಧಿಯನ್ನು ನೋಡುವ ಕ್ರಮವಾಗಿರುತ್ತದೆ. ಹಾಗಾಗಿ ದಲಿತ ಬದುಕಿನ ಸಕಲ ಸಂಕಟಗಳನ್ನು ಒಳಗಿನಿಂದ ನೋಡಲು ಆಗುವುದಿಲ್ಲ. ಬೇರೆ ಮಾತುಗಳಲ್ಲಿ ಹೇಳುವುದಾದರೆ ಆ ನಿರೂಪಣೆಯು ಹೃದಯದಿಂದ ಬರುವುದಿಲ್ಲ. ಬದಲಿಗೆ ಬುದ್ಧಿಯಿಂದ ಬಂದವಾಗಿರುತ್ತವೆ.

ಕನ್ನಡ ಗದ್ಯ ಸಾಹಿತ್ಯದಲ್ಲಿ ಕೊರಡ್ಕಲ್ ಶ್ರೀನಿವಾಸರಾಯರು ಮತ್ತು ಶಿವರಾಮ ಕಾರಂತರು ಮೊಟ್ಟಮೊದಲ ಬಾರಿಗೆ ದಲಿತರಿಗೂ ಮತ್ತು ಭೂಮಿಗೂ ಇರುವ ಹಾಗೂ ಆಗುತ್ತಿರುವ ಸಂಬಂಧವನ್ನು ಕುರಿತು ತಮ್ಮ ಗದ್ಯದಲ್ಲಿ ನಿರೂಪಿಸಿದರು. ಕೊರಡ್ಕಲ್ ಶ್ರೀನಿವಾಸರಾಯರು ಭಾವನಾತ್ಮಕ ನೆಲೆಯಲ್ಲಿ ಮತ್ತು ಕಾರಂತರು ವ್ಯಕ್ತಿಕೇಂದ್ರಿತ ವೈಚಾರಿಕ ನೆಲೆಗಳಲ್ಲಿ ಆ ವಿಷಯಗಳನ್ನು ನಿರೂಪಿಸಿದ್ದಾರೆ. ಕೃಷಿ ಭೂಮಿಯನ್ನು ನಿರ್ಮಾಣ ಮಾಡಿದವರು ಯಾರು ಎಂಬ ಗ್ರಹಿಕೆಯಲ್ಲಿ ಇಬ್ಬರಿಗೂ

ಸಾಮ್ಯತೆ ಇದೆ. ಆದರೆ ಆ ಕೃಷಿ ಭೂಮಿಯ ವಾರಸುದಾರಿಕೆಯನ್ನು ಬದಲಾಯಿಸಬೇಕು ಮತ್ತು ಅದನ್ನು ಹೇಗೆ ಬದಲಾಯಿಸಬೇಕು ಎನ್ನುವುದರಲ್ಲಿ ಇಬ್ಬರಿಗೂ ವ್ಯತ್ಯಾಸವಿದೆ. ಕೃಷಿ ಭೂಮಿಯ ನಿರ್ಮಾಣಕಾರರಾದ ದಲಿತರ ಬಗ್ಗೆ ಎರಡೂ ಕಡೆ ಮೇಲುಸ್ತರದ ಉದಾರವಾದಿ ಕಾಳಜಿ ವ್ಯಕ್ತವಾಗಿದೆ. ಜೊತೆಗೆ ದಲಿತರಿಗೆ ಈ ಕೃಷಿ ಭೂಮಿ ಸಿಗಬೇಕು ಎಂಬ ಆಯಾಮವೂ ನಿರೂಪಿತವಾಗಿದೆ. ಆದರೆ ಪ್ರಶ್ನೆ ಬರುವುದು ದಲಿತರಿಗೆ ಭೂಮಿ ಸಿಗದಿರುವುದಕ್ಕೆ ಕಾರಣಗಳನ್ನು ಅವರು ನಿರೂಪಿಸುವ ಕ್ರಮದಲ್ಲಿ. ಕೊರಡ್ಕಲ್ ಶ್ರೀನಿವಾಸರಾಯರ 'ಧನಿಯರ ಸತ್ಯನಾರಾಯಣ' ಕಥೆಯಲ್ಲಿ ದೈವದ ಮೇಲೂ, ಕಾರಂತರ 'ಚೋಮನ ದುಡಿ'ಯಲ್ಲಿ ಸಂಗಪ್ಪನ ತಾಯಿಯ ಮೇಲೂ ದಲಿತರಿಗೆ ಭೂಮಿ ಸಿಗದಿರುವ ಹೊಣೆಯನ್ನು ಹೊರಿಸಲಾಗುತ್ತದೆ. ಇದು ಆ ಕಾಲದ ಚಾರಿತ್ರಿಕ ಅನಿವಾರ್ಯತೆಯ ಫಲ ಎಂತಲೊ, ಅಥವಾ ಇನ್ಯಾವುದೆ ಕಾರಣವನ್ನು ಕೊಡಬಹುದು. ಆ ಚರ್ಚೆ ಬೇರೆ.

ದಲಿತ ಬದುಕಿನ ಸ್ಥಿತಿಗೆ ಕಾರಣಗಳನ್ನು ಶೋಧಿಸುವುದಾಗಲಿ ಮತ್ತು ಅದನ್ನು ಬದಲಾಯಿಸುವ ಆಸಕ್ತಿಯಾಗಲಿ ಆ ಸಾಹಿತ್ಯಕ್ಕಿಲ್ಲ. ದಲಿತ ಲೋಕದ ಬಗ್ಗೆ ಅನುಕಂಪ, ಸಹಾನುಭೂತಿ ಅದರ ಸಾಮಾನ್ಯ ಕಾಳಜಿ. ಹಾಗಾಗಿ ನಿರೂಪಣೆಯಲ್ಲಿ ರಮ್ಯತೆ, ರೋಮಾಂಚನ, ವೈಭವೀಕರಣಗಳು ಅಲ್ಲಿ ಮುಖ್ಯವಾಗಿವೆ. ದಲಿತರಿಗೆ ಸ್ವತಂತ್ರ ಅಸ್ತಿತ್ವ ಇದೆ ಎಂಬುದಾಗಲಿ ಇಲ್ಲವೆ ದಲಿತರಿಗೆ ವಿಮೋಚನೆ ಬೇಕು ಎಂಬುದಾಗಲಿ ಅಲ್ಲಿ ಮುಖ್ಯವಾಗುವುದಿಲ್ಲ. ಆರ್ಥಿಕ ಮತ್ತು ಸಾಮಾಜಿಕ ತಾರತಮ್ಯಗಳನ್ನು ವಿವರಿಸುತ್ತಲೆ ಅವು ಇರುವುದು ಅನಿವಾರ್ಯ ಮತ್ತು ಅಗತ್ಯ ಎಂಬಂತೆ ಅವು ವಿವರಿಸುತ್ತವೆ. ಎಂ.ಕೆ. ಗಾಂಧಿ ಹೇಳಿದ್ದು ಇದೇ ರೀತಿಯಲ್ಲಿ. 'ವರ್ಣಾಶ್ರಮ ವ್ಯವಸ್ಥೆ ಹೋಗಬೇಕು; ಆದರೆ ಜಾತಿ ವ್ಯವಸ್ಥೆ ಇರಬೇಕು.'

ಉದಾರವಾದಿ ಮತ್ತು ಸುಧಾರಣಾವಾದಿ ನೆಲೆಯ ದಲಿತ ಸಂವೇದನೆಯು ದಲಿತೇತರ ಬರಹಗಾರರ ಬರಹಗಳಲ್ಲಿ ಮಾತ್ರ ಇದೆ ಎಂದು ಸರಳೀಕರಿಸ ಬಾರದು. ಜೊತೆಗೆ ಅದು ನವೋದಯ ಎಂದು ಕರೆಯಲಾಗುವ ಸಾಹಿತ್ಯದಲ್ಲಿ ಮಾತ್ರ ಇದೆ ಎಂತಲೂ ಸರಳೀಕರಿಸಬಾರದು. ದಲಿತ ಲೋಕವನ್ನು ಬೆರಗಿನಿಂದ ಮತ್ತು ಮುಗ್ಧತೆಯಿಂದ ವಿವರಿಸಿ, ಅದನ್ನು ವೈಭವೀಕರಿಸುವ ಸಾಕಷ್ಟು ಬರವಣಿಗೆಗಳನ್ನು ದಲಿತ ಸಮೂಹದ ಅನೇಕ ಲೇಖಕರು ಬರೆದಿದ್ದಾರೆ. ಮುಖ್ಯವಾಗಿ ಇದು ಸಾಹಿತ್ಯ ರಚನೆಯ ಧೋರಣೆಗೆ ಸಂಬಂಧಿಸಿದ್ದು. ಹಾಗಾಗಿ ಇದರಲ್ಲಿ ದಲಿತ ಬರಹಗಾರರ ಪಾಲೂ ಕೂಡ ಇದೆ.

ಉದಾರವಾದಿ ನೆಲೆಯ ದಲಿತ ಸಂವೇದನೆ ಎಂಬುದನ್ನು ಒಂದು ಚಾರಿತ್ರಿಕ ಕಾಲಘಟ್ಟಕ್ಕೆ ಮಾತ್ರ ಸೀಮಿತ ಮಾಡಿಯೊ ಇಲ್ಲವೆ ಅದು ಕೇವಲ ದಲಿತೇತರ ಬರವಣಿಗೆ ಎಂತಲೊ ಗಣಿಸಬಾರದು.

**2. ಶೂದ್ರ ನೆಲೆಯ ದಲಿತ ಸಂವೇದನೆ**

ಭಾರತೀಯ ಸಮಾಜವನ್ನು ಬ್ರಾಹ್ಮಣ ಶೂದ್ರ ಎಂದು ವಿಂಗಡಿಸುವುದು ಒಂದು ಜನಪ್ರಿಯ ಮಾದರಿ. ಇದರ ಪ್ರಕಾರ 'ಬ್ರಾಹ್ಮಣರು ಕೆಟ್ಟವರು, ಅಪಾಯ ಕಾರಿಗಳು, ಬುದ್ಧಿಯಿಂದಲೆ ಬದುಕುವವರು. ಪೂಜೆ, ಮಂತ್ರ ಮುಂತಾದುವುಗಳಿಂದ ಬದುಕುವವರು. ಈಗಿನ ರಾಜಕಾರಣದಲ್ಲಿ, ಅಧಿಕಾರದಲ್ಲಿ ಮತ್ತು ನೌಕರಿಯಲ್ಲಿ ಅವರೇ ಹೆಚ್ಚಿದ್ದಾರೆ. ಶೂದ್ರರು ಕಡಿಮೆ ಇದ್ದಾರೆ' ಎಂಬ ಅಭಿಪ್ರಾಯವಿದೆ. ಇದು ಶೂದ್ರ ನೆಲೆಯ ಅತ್ಯಂತ ಸ್ಥೂಲವಾದ ತಾತ್ವಿಕ ಚಿಂತನೆ. ಇದನ್ನು ನೂರು ಬಾರಿ ಹೇಳಿ ನಂಬಿಸಲಾಗಿದೆ ಮತ್ತು ಒಪ್ಪಿಸಲಾಗಿದೆ. ಒಂದು ಸುಳ್ಳನ್ನು ನೂರು ಬಾರಿ ಹೇಳಿದರೆ ಅದನ್ನು ಸತ್ಯವೆಂದು ಒಪ್ಪುತ್ತಾರೆ ಎಂಬುದಕ್ಕೆ ಭಾರತದಲ್ಲಿ ಇದು ದೊಡ್ಡ ಉದಾಹರಣೆ. ಯಾಕೆಂದರೆ ಇದು ಭೂಮಾಲೀಕರನ್ನು ಮುಚ್ಚಿಡುತ್ತದೆ; ಗಣಿ ಧಣಿಗಳನ್ನು ಮುಚ್ಚಿಡುತ್ತದೆ. ಉಳಿದೆಲ್ಲ ಶೋಷಕರನ್ನು ಮುಚ್ಚಿಡುತ್ತದೆ. ಅವರ ಜಾಗದಲ್ಲಿ ಹುಸಿ ಶತ್ರುವನ್ನು ಅಥವಾ ಕಾಲ್ಪನಿಕ ಶತ್ರುವನ್ನು ಕಲ್ಪಿಸಿಬಿಡುತ್ತದೆ. ಕರ್ನಾಟಕದ ಭೂಮಾಲೀಕರು ಯಾವ ಜಾತಿ, ಅಧಿಕಾರ ಹಿಡಿದಿರುವವರು ಯಾವ ಜಾತಿ, ಗಣಿ ಧಣಿಗಳು ಯಾವ ಜಾತಿ ಈ ಪ್ರಶ್ನೆಗಳನ್ನು ಕೇಳಬೇಕು.

ಕರ್ನಾಟಕದಲ್ಲಿ ಲೋಕ ಸೇವಾ ಆಯೋಗದ ನೇಮಕಾತಿಗಳಲ್ಲಿ ಕೇವಲ ಭೂಮಾಲೀಕ ವರ್ಗದ ಒಂದು ಜಾತಿಯವರು ಮಾತ್ರ ಹೆಚ್ಚು ನೇಮಕ ಗೊಂಡಿದ್ದಾರೆ. ಇಂತಹ ಹಲವಾರು ಸಂಗತಿಗಳನ್ನು ಬ್ರಾಹ್ಮಣ ಶೂದ್ರ ಎಂಬ ಭ್ರಮೆ ಮುಚ್ಚಿ ಹಾಕಿದೆ. ವಸಾಹತು ಕಾಲದಲ್ಲಿ ಭಾರತದಲ್ಲಿ ಲಭ್ಯವಿದ್ದ ಲಿಖಿತ ಆಕರಗಳನ್ನು ಮಾತ್ರವೇ ಆಧರಿಸಿ ಭಾರತದ ಚರಿತ್ರೆ ಮತ್ತು ಪರಂಪರೆಯನ್ನು ಕುರಿತು ಬರೆಯಲಾಯಿತು. ಆ ಲಿಖಿತ ಆಕರಗಳಲ್ಲಿ ಬಹುತೇಕ ಇದ್ದುದು ಚಾತುರ್ ವರ್ಣದ ವರ್ಗಗಳು. ಹಾಗಾಗಿ ಅಲ್ಲಿ ಕೇರಿಗಳು, ಪಂಚಮರು, ಆದಿವಾಸಿಗಳು, ಅಲೆಮಾರಿಗಳು ಮುಖ್ಯವಾಗಲಿಲ್ಲ. ಜೊತೆಗೆ ಚೌಡಿ, ಹುಲಿಗೆಮ್ಮ, ಯಲ್ಲಮ್ಮ, ಚಿಂಚಲಿಯ ಮಾಯಕ್ಕ ಮುಂತಾದವರು ಮುಖ್ಯವಾಗಲಿಲ್ಲ. ಭಾರತದ ಲಿಖಿತ ಪರಂಪರೆ ಮತ್ತು ಚರಿತ್ರೆಯಲ್ಲಿ ನಿಜವಾದ ಅಸ್ಪೃಶ್ಯ ಭಾರತ ಅದೃಶ್ಯವಾಯಿತು. ಅಸ್ಪೃಶ್ಯರ ಪ್ರಶ್ನೆ ಬಂದಾಗಲೆಲ್ಲ ಬ್ರಾಹ್ಮಣರ ವಿರುದ್ಧದ ಶೂದ್ರ ನೆಲೆಯಲ್ಲೆ ಗ್ರಹಿಸಲಾಯಿತು. ಇದಕ್ಕೆ ಸಸ್ಯಹಾರಿಗಳು ಮತ್ತು ಮಾಂಸಹಾರಿಗಳು ಎಂದು ಆಹಾರವನ್ನು ಪ್ರಧಾನ ಪ್ರಮಾಣವನ್ನಾಗಿ ಇಟ್ಟುಕೊಳ್ಳಲಾಯಿತು. ಇದನ್ನು ದಲಿತರಿಗೆ ನಂಬಿಸಲಾಯಿತು ಮತ್ತು ಒಪ್ಪಿಸಲಾಯಿತು.

ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿಯ ಆರಂಭದ ದಿನಗಳಲ್ಲಿ ಅಧ್ಯಯನ ಶಿಬಿರಗಳನ್ನು ನಡೆಸಲಾಗುತ್ತಿತ್ತು. ಅಂತಹ ಶಿಬಿರಗಳಲ್ಲಿ ಕಡ್ಡಾಯವಾಗಿ ಎರಡು ವಿಷಯಗಳು ಇರುತ್ತಿದ್ದವು. ಒಂದು ಧರ್ಮ ಇನ್ನೊಂದು ಪುರೋಹಿತಶಾಹಿ. ಶಿಬಿರಾರ್ಥಿಗಳಿಗೆ ಭಾಷಣ ಮಾಡಲು ಬರುತ್ತಿದ್ದವರೆಲ್ಲರೂ ಬ್ರಾಹ್ಮಣರನ್ನು ವಿರೋಧಿಸಿ ಮಾತಾಡುತ್ತಿದ್ದರು. ಅವರಿಂದಲೇ ಶೋಷಣೆ, ಅಸಮಾನತೆ, ಅನ್ಯಾಯಗಳು ನಡೆಯುತ್ತಿರುವುದು ಎಂದು ಬೊಗಳೆ ಬಿಡುತ್ತಿದ್ದರು. ರಾಮಾಯಣ, ಮಹಾಭಾರತ, ಮನುಧರ್ಮಶಾಸ್ತ್ರಗಳನ್ನು ಉದಾಹರಣೆ ಕೊಡುತ್ತಿದ್ದರು. ಅದನ್ನು ಕೇಳಿಸಿ ಕೊಳ್ಳುತ್ತಿದ್ದ ಶಿಬಿರಾರ್ಥಿಗಳಿಗೆ ತಮ್ಮೂರಿನ ಬ್ರಾಹ್ಮಣೇತರ ಭೂಮಾಲೀಕ ಗೌಡ ಮನಸ್ಸಿನಲ್ಲಿ ಸುಳಿಯುತ್ತಿದ್ದ. ಇವರು ಹೇಳುತ್ತಿರುವುದೆಲ್ಲ ಶುದ್ಧ ಸುಳ್ಳು ಎಂದು ಗೊತ್ತಿದ್ದರೂ ಗಟ್ಟಿಯಾಗಿ ಪ್ರಶ್ನೆ ಮಾಡಲು ಆಗುತ್ತಿರಲಿಲ್ಲ. ಈ ಬಗೆಯಲ್ಲಿ ದಲಿತ ಸಂಘರ್ಷ ಸಮಿತಿಯ ಶಿಬಿರಗಳಲ್ಲಿ ದಲಿತ ಹೋರಾಟದ ಕಾರ್ಯಕರ್ತರಿಗೆ ಸರಿಯಾದ ತಿಳುವಳಿಕೆ

ಕೊಡುವ ಜಾಗದಲ್ಲಿ ತಪ್ಪಾದ ತಿಳುವಳಿಕೆ ಕೊಟ್ಟರು. 'ದಲಿತರೇ ನಿಮ್ಮ ಶತ್ರುಗಳು ಭೂಮಾಲೀಕರಲ್ಲ; ಬ್ರಾಹ್ಮಣರು' ಎಂದು ಸುಳ್ಳು ಹೇಳಿದರು. ಪರಿಣಾಮವಾಗಿ ಬ್ರಾಹ್ಮಣ ವಿರೋಧದ ಭ್ರಮೆಯನ್ನು ದಲಿತ ಚಿಂತಕರು, ಹೋರಾಟಗಾರರು ಗಟ್ಟಿಯಾಗಿ ಕಂಠಪಾಠ ಮಾಡಿ ಕೊಂಡರು. ಇದು ಈಗಲೂ ಮುಂದುವರಿದಿದೆ.

ಆಧುನಿಕ ಕನ್ನಡ ಗದ್ಯ ಸಾಹಿತ್ಯದಲ್ಲಿ ಬ್ರಾಹ್ಮಣ ಶೂದ್ರ ವಿಂಗಡಣೆಯ ಗ್ರಹಿಕೆ ಪ್ರಧಾನವಾಗಿದೆ. ಕುವೆಂಪು ಅವರ 'ಮದುಮಗಳು' ಕಾದಂಬರಿಯ ಪ್ರಸಿದ್ಧ ಸನ್ನಿವೇಶ 'ಹೊನ್ನಾಳಿ ಹೊಡ್ತ'ದ ಪ್ರಸಂಗದಲ್ಲಿ ದಲಿತರಿಗೆ ಹೊಡೆಯುವವರು ಮುಸ್ಲಿಮರು. ಹೊಡೆದಾದ ಮೇಲೆ ಗೌಡತಿಯ ಹೃದಯ ವೈಶಾಲ್ಯವನ್ನು ಕಾದಂಬರಿ ವೈಭವೀಕರಿಸಿದೆ. ಲಂಕೇಶರ 'ಸಂಕ್ರಾಂತಿ' ನಾಟಕ ಹಾಗೂ ಭೈರಪ್ಪನವರ 'ದಾಟು' ಕಾದಂಬರಿಗಳು ಅಸ್ಪೃಶ್ಯ ಯುವಕ ಮತ್ತು ಬ್ರಾಹ್ಮಣ ಯುವತಿಯನ್ನು ಮುಖಾಮುಖಿ ಮಾಡಿವೆ. ಅಲ್ಲಿಂದ ಮೊದಲುಗೊಂಡು ಇಂದಿನ ಗದ್ಯ ಸಾಹಿತ್ಯದವರೆಗೂ ದಲಿತ ಸಂವೇದನೆ ಎಂಬುದು ಶೂದ್ರ ಸಮರ್ಥನೆಯ ದಾಟಿಯಲ್ಲಿ ಸಾಗಿದೆ.

ಆಧುನಿಕ ಗದ್ಯದಲ್ಲಿ ವಿಚಾರ, ವಿಮರ್ಶೆ ಮುಂತಾದ ಪ್ರಕಾರಗಳು ದೊಡ್ಡ ಪ್ರಮಾಣದಲ್ಲಿವೆ. ಅದರಲ್ಲೂ ಇತ್ತೀಚಿನ 'ಸಹಜ ಕೃಷಿ'ಯಂತಹ ಕೃಷಿ ಸಾಹಿತ್ಯವನ್ನೂ ಗಮನಿಸಬೇಕು. ಇಲ್ಲೆಲ್ಲ ದಲಿತ ಸಂವೇದನೆ ಎಂಬುದಕ್ಕೆ ಯಾವ ಜಾಗವಿದೆ ಎಂಬುದನ್ನು ನೋಡಬೇಕು. 'ಹಿಂದೂ ಸಾಮ್ರಾಜ್ಯ ಶಾಹಿಯ ಇತಿಹಾಸ', 'ಶಂಕರಾಚಾರ್ಯ ಮತ್ತು ಪ್ರತಿಗಾಮಿತನ', 'ವೇದಾಂತ ರೆಜಿಮೆಂಟ್' ಮುಂತಾದ ಹತ್ತು ಹಲವು ಕೃತಿಗಳು ಬ್ರಾಹ್ಮಣ ಶೂದ್ರ ನೆಲೆಯ ಗ್ರಹಿಕೆಯವು. ದುರಂತವೆಂದರೆ

ದಲಿತರು ಅವುಗಳನ್ನು ತಮ್ಮ ಅಳಿವು ಉಳಿವಿನ ಕೃತಿಗಳು ಎಂದು ಭ್ರಮಿಸಿದ್ದಾರೆ. ಇಂತಹ ಗದ್ಯ ಸಾಹಿತ್ಯದಲ್ಲಿ ಶೂದ್ರ ನೆಲೆಯ ದಲಿತ ಸಂವೇದನೆ ಇದೆ.

ದಲಿತರು ಬರೆದಿರುವ ವಿಚಾರ, ವಿಮರ್ಶೆ ಪ್ರಕಾರಗಳಲ್ಲಿ ಶೂದ್ರ ನೆಲೆಯ ಆಲೋಚನೆಗಳಿವೆ. ಅವು ಬ್ರಾಹ್ಮಣ ವಿರೋಧದ ಶೂದ್ರ ನೆಲೆಯಿಂದ ತಮ್ಮನ್ನು ತಾವು ಬಿಡಿಸಿಕೊಂಡಿಲ್ಲ. ದೇವನೂರರ ಪ್ರಸಿದ್ಧ ಲೇಖನ 'ಮಾನವೀಯತೆ ಅಂತಾರಲ್ಲ: ಅದರ ಬಗ್ಗೆ' ಎಂಬ ಲೇಖನ ಇದಕ್ಕೊಂದು ದೊಡ್ಡ ಉದಾಹರಣೆ. ಅಲ್ಲಿಂದ ಮೊದಲುಗೊಂಡು ಇಂದಿನ ವಿಚಾರ ವಿಮರ್ಶೆಯಂತಹ ಗದ್ಯ ಸಾಹಿತ್ಯದವರೆಗೂ ಶೂದ್ರ ಹಿತಾಸಕ್ತಿಯ ದಲಿತ ಸಂವೇದನೆ ಮುಂಚೂಣಿಯ ಶಕ್ತಿಯಾಗಿದೆ. 'ಅಹಿಂದ' ಇದರ ಮತ್ತೊಂದು ರೂಪ.

### 3. ಮೂಲಭೂತವಾದಿ ದಲಿತ ಸಂವೇದನೆ

ದಲಿತರು ಮತ್ತು ದಲಿತೇತರರು ಬರೆದಿರುವ ಕೆಲವು ಬರವಣಿಗೆಗಳಲ್ಲಿ ಈ ಸಂವೇದನೆಯನ್ನು ಕಾಣಬಹುದು. ದಲಿತ ಸಂಸ್ಕೃತಿಯ ವೈಭವೀಕರಣ, ಆದರ ಪುರಾತನ ಚರಿತ್ರೆ, ಅದರ ವಿಶಿಷ್ಟತೆ, ಅದರ ಅನನ್ಯತೆ ಮುಂತಾದುವುಗಳನ್ನು ಒಮ್ಮುಖವಾಗಿ ನಿರೂಪಿಸುವ ಮತ್ತು ಮಂಡಿಸುವ ಕೆಲವು ಬರವಣಿಗೆಗಳು ಬಂದಿವೆ. ಇಂತಹ ಬರವಣಿಗೆಗಳು ದಲಿತ ಸಂಸ್ಕೃತಿಯನ್ನು, ದಲಿತ ಸಮುದಾಯವನ್ನು ಅತ್ಯಂತ ಶಕ್ತಿಶಾಲಿಯದು ಎಂದು, ಅದು ಅನುಕರಣೀಯವೆಂದು, ಆದರ್ಶವೆಂದು

**ದಲಿತರ ಶಕ್ತಿ ಮತ್ತು ದೌರ್ಬಲ್ಯಗಳು ಪಕ್ಷಪಾತವಿಲ್ಲದೆ ಅಥವಾ ಕಪ್ಪು-ಬಿಳುಪು ಎಂಬ ವಿಂಗಡಣೆ ಇಲ್ಲದೆ ನಿರೂಪಣೆಯಾಗಿವೆ. ದಲಿತ ಲೋಕದ ಅಂತರಂಗ ಮತ್ತು ಬಹಿರಂಗಗಳನ್ನು ಶೋಧಿಸುತ್ತಾ ಅದು ಅನಾವರಣವಾಗಿದೆ. ಜಾನಪದ ಸಾಹಿತ್ಯದ ಹಲವು ಗದ್ಯ ಪ್ರಕಾರಗಳು ಇದಕ್ಕೆ ಬಹುದೊಡ್ಡ ಸಾಕ್ಷಿ. ದಲಿತರಲ್ಲಿ ಶತಮಾನಗಳಿಂದ ಅದುಮಿಟ್ಟ ಮತ್ತು ಹತ್ತಿಕ್ಕಲ್ಪಟ್ಟ ಹಲವು ಸಾಮರ್ಥ್ಯಗಳನ್ನು ಇದು ಅನಾವರಣ ಮಾಡಿದೆ**

ಬಣ್ಣಿಸುತ್ತವೆ. ಹಾಗೆ ಬಣ್ಣಿಸುವ ಮೂಲಕ ವರ್ತಮಾನದಲ್ಲಿ ದಲಿತರು ಎದುರಿಸುತ್ತಿರುವ ಗಂಭೀರ ಸಮಸ್ಯೆಗಳನ್ನು ಮುಚ್ಚಿಡುತ್ತವೆ. ಇಡೀ ದಲಿತ ಲೋಕವನ್ನು ಕೇವಲ ಭಾವನಾತ್ಮಕವಾಗಿ ಮತ್ತು ರೊಮ್ಯಾಂಟಿಕ್ ಆಗಿ ನೋಡುತ್ತವೆ. ದಲಿತ ಸಂಸ್ಕೃತಿ ಉಳಿದೆಲ್ಲ ಸಂಸ್ಕೃತಿಗಳಿಗಿಂತ ಶ್ರೇಷ್ಠ ಎಂದು ವರ್ಣಿಸುತ್ತವೆ. ಇಂತಹ ಆಲೋಚನೆಗಳು ದಲಿತ ಸಮೂಹದ ಸಮಸ್ಯೆಗಳಿಗೆ ಮುಖ ಮಾಡುವುದಿಲ್ಲ. ಹಾಗಾಗಿ ಇಂತಹ ಆಲೋಚನೆ ಮತ್ತು ಬರವಣಿಗೆಗಳನ್ನು ಮೂಲಭೂತವಾದಿ ದಲಿತ ಸಂವೇದನೆ ಎಂದು ಕರೆಯಬಹುದು.

### 4. ಎನ್.ಜಿ.ಓ. ಪ್ರಣೀತ ದಲಿತ ಸಂವೇದನೆ

ಕಳೆದ ಶತಮಾನದ 90ರ ದಶಕದ ನಂತರ ಜಾಗತೀಕರಣದ ದಾಳಿ ವ್ಯಾಪಕವಾಗಿ ನಡೆದಿದೆ. ಈ ವಸ್ತುಸ್ಥಿತಿಯನ್ನು ವಿವರಿಸುವ ಗದ್ಯ ಸಾಹಿತ್ಯ ಪ್ರಕಟವಾಗಿದೆ. ಅದರಲ್ಲಿ ಬಹುಪಾಲು ಬರವಣಿಗೆಗಳು ಜಾಗತೀಕರಣದಿಂದಲೇ ದಲಿತರ ಬಿಡುಗಡೆ ಎಂಬ ಭ್ರಮೆಯನ್ನು ಮತ್ತು ಹುಂಬತನವನ್ನು ಬಹಿರಂಗವಾಗಿ ಸಾರುತ್ತಿವೆ. ಅದರಲ್ಲೂ ಕೆಲವು ದಲಿತ ಬರಹಗಾರರ ಬರಹಗಳೂ ಕೂಡ ಜಾಗತೀಕರಣ, ಖಾಸಗೀಕರಣ ಮತ್ತು ಆಧುನೀಕರಣಗಳನ್ನು ವೈಭವೀಕರಿಸಿವೆ. ಇವುಗಳಿಂದಲೇ ದಲಿತರ ಬಿಡುಗಡೆ ಎಂದು ಸಾರುತ್ತಿವೆ. ಸಾಮ್ರಾಜ್ಯಶಾಹಿಯ ಬಗೆಗಿನ ತಿಳುವಳಿಕೆಯ ಕೊರತೆಯಿಂದ ಇದು ನಡೆದಿದೆ. ಜೊತೆಗೆ ದಲಿತರದಲ್ಲದ ಎನ್.ಜಿ.ಓ. ಆಲೋಚನೆಗಳನ್ನು ತಮ್ಮವೆಂದೇ ಭ್ರಮಿಸಿರುವುದರಿಂದ ಇದು ನಡೆದಿದೆ. ಜಾಗತೀಕರಣದ ಚಾರಿತ್ರಿಕ ಬೆಳವಣಿಗೆ ಮತ್ತು ವರ್ತಮಾನದ ಅದರ ಉದ್ದೇಶಗಳನ್ನು ತಪ್ಪಾಗಿ ತಿಳಿಯಲಾಗಿದೆ. ಅಥವಾ ಅದನ್ನು ಎನ್.ಜಿ.ಓ. ಆಲೋಚನೆಗಳ ಮೂಲಕ ತಿಳಿಯಲಾಗಿದೆ. ಇದರ ಪರಿಣಾಮವಾಗಿ ದಲಿತರ ಸಂಸ್ಕೃತಿ ಎಂಬುದನ್ನು ಕೊಂಡಾಡಲಾಗುತ್ತಿದೆ. ದಲಿತರು ತಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕು ಎಂಬ ಕರೆಯನ್ನು ಕೊಡಲಾಗುತ್ತಿದೆ. ಹಾಗಿದ್ದರೆ ದಲಿತರು ತಮ್ಮ ಯಾವ ಸಂಸ್ಕೃತಿಯನ್ನು ಯಾವ ಕಾರಣಕ್ಕೆ ಉಳಿಸಿಕೊಳ್ಳಬೇಕು? ಮೆಟ್ಟು ಹೊಲಿಯುವುದು, ಮಲ ಹೊರುವುದು, ಬಸವಿ ಪದ್ಧತಿ, ದೇವದಾಸಿ ಪದ್ಧತಿ ಮುಂತಾದುವುಗಳನ್ನು ದಲಿತರು ಉಳಿಸಿಕೊಳ್ಳಬೇಕೇ? ಹೌದು. ಎನ್.ಜಿ.ಓ.ಗಳು ಇವುಗಳನ್ನು ಉಳಿಸಿಕೊಳ್ಳಬೇಕು ಎನ್ನುತ್ತಿವೆ. ಮಾತ್ರವಲ್ಲ; ಅದನ್ನು ಆ ದಲಿತ ಸಮೂಹ ಮತ್ತು ದುಡಿಯುವ ವರ್ಗದ ಯುವತಿಯರ ಪ್ರಜ್ಞೆಯಲ್ಲಿ ಬಲವಾಗಿ ತುಂಬುವ ಕೆಲಸವನ್ನೂ ಮಾಡುತ್ತಿವೆ. ಇದಕ್ಕೆ ಸಂಬಂಧಿಸಿದ ಗದ್ಯ ಸಾಹಿತ್ಯವೂ ಬಂದಿದೆ. ಇದು ಬಹಳ ಅಪಾಯಕಾರಿ ಬೆಳವಣಿಗೆ. ಮತ್ತೊಂದು ಕಡೆ 'ದಲಿತರ ಸಂಸ್ಕೃತಿಗೆ ಮಹಾನ್ ಶಕ್ತಿ ಇದೆ, ಅದು ಜಾಗತೀಕರಣಕ್ಕೆ ಸೆಡ್ಡು ಹೊಡೆದು ನಿಲ್ಲುತ್ತದೆ' ಎಂಬ ಭ್ರಮೆಯನ್ನು ಗದ್ಯ ಬರವಣಿಗೆಯಲ್ಲಿ ವ್ಯಾಪಕವಾಗಿ ಮಾಡಲಾಗಿದೆ. ಇದು ಬಹುತೇಕ ದಲಿತರನ್ನು ದಾರಿ ತಪ್ಪಿಸಿದೆ.

### 5. ಪ್ರಜಾತಾಂತ್ರಿಕ ನೆಲೆಯ ದಲಿತ ಸಂವೇದನೆ

ದಲಿತ ಬರಹಗಾರರು ಬರೆದಿರುವ ಕಥೆ, ಕಾದಂಬರಿ ಮತ್ತು ಆತ್ಮಕಥೆ ಪ್ರಕಾರಗಳಲ್ಲಿ ಪ್ರಜಾತಾಂತ್ರಿಕ ನೆಲೆಯ ದಲಿತ ಸಂವೇದನೆಯು ಕ್ರಿಯಾಶೀಲವಾಗಿದೆ. ದಲಿತರ ವಸ್ತುಸ್ಥಿತಿಯ ಚಲನಶೀಲತೆಯನ್ನು ಹಾಗೂ ಅವುಗಳ ಬಾಹ್ಯ ಮತ್ತು ಆಂತರಿಕ ವೈರುಧ್ಯಗಳನ್ನು ಈ ಪ್ರಕಾರಗಳು ಗ್ರಹಿಸಿರುವ ಕ್ರಮ ಮತ್ತು ಮಂಡಿಸಿರುವ ರೀತಿ ಭಿನ್ನವಾಗಿದೆ. ಈ ಪಠ್ಯಗಳಲ್ಲಿ ಬ್ರಾಹ್ಮಣ ಮತ್ತು ಅಸ್ಪೃಶ್ಯರು ಎದುರು ಬದುರು ಆಗುವುದಿಲ್ಲ. ಬದಲಿಗೆ ಅಸ್ಪೃಶ್ಯರು ಮತ್ತು ಭೂಮಾಲೀಕರು ಎದುರುಬದುರು ಆಗುತ್ತಾರೆ. ದಲಿತ ಲೋಕದ ಸಾವಿರಾರು ಸಂಕಟಗಳು, ನೋವುಗಳು, ಹತಾಶೆಗಳು, ಅಸಹಾಯಕತೆಗಳು ಮತ್ತು ಅವುಗಳಿಂದ ಬಿಡಿಸಿಕೊಳ್ಳುವ ಒಳಸೂಕ್ಷ್ಮಗಳು ನಿರೂಪಿತವಾಗಿವೆ.

ದಲಿತರ ಶಕ್ತಿ ಮತ್ತು ದೌರ್ಬಲ್ಯಗಳು ಪಕ್ಷಪಾತವಿಲ್ಲದೆ ಅಥವಾ ಕಪ್ಪು-ಬಿಳುಪು ಎಂಬ ವಿಂಗಡಣೆ ಇಲ್ಲದೆ ನಿರೂಪಣೆಯಾಗಿವೆ. ದಲಿತ ಲೋಕದ ಅಂತರಂಗ ಮತ್ತು ಬಹಿರಂಗಗಳನ್ನು ಶೋಧಿಸುತ್ತಾ ಅದು ಅನಾವರಣವಾಗಿದೆ. ಜಾನಪದ ಸಾಹಿತ್ಯದ ಹಲವು ಗದ್ಯ ಪ್ರಕಾರಗಳು ಇದಕ್ಕೆ ಬಹುದೊಡ್ಡ ಸಾಕ್ಷಿ.

ದಲಿತರಲ್ಲಿ ಶತಮಾನಗಳಿಂದ ಅದುಮಿಟ್ಟ ಮತ್ತು ಹತ್ತಿಕ್ಕಲ್ಪಟ್ಟ ಹಲವು ಸಾಮರ್ಥ್ಯಗಳನ್ನು ಇದು ಅನಾವರಣ ಮಾಡಿದೆ. ಇದಕ್ಕಿಂತಲೂ ಮುಖ್ಯವಾಗಿ ದಲಿತರ ಸ್ವಾಭಿಮಾನವನ್ನು ಇದು ಎತ್ತಿ ಹಿಡಿದಿದೆ. ಈ ಸಾಹಿತ್ಯದ ಕೆಲವು ಪಠ್ಯಗಳಲ್ಲಿ ನಾಯಕ ಮತ್ತು ನಾಯಕಿಯರು ಬರುವುದಿಲ್ಲ; ಅಥವಾ ಆ ವಿನ್ಯಾಸ ಮುಖ್ಯವಾಗುವುದಿಲ್ಲ. ಇಲ್ಲಿ ಎಲ್ಲಾ ಪಾತ್ರಗಳೂ ಮುಖ್ಯವಾದವೇ. ಪ್ರಜಾಪ್ರಭುತ್ವದ ಸಾಮಾನ್ಯ ನಂಬಿಕೆ ಇದೆ ತಾನೆ? 'ಸಂಬಂಜ ಅನ್ನೋದು ದೊಡ್ಡದು ಕನ' ಎಂಬ 'ಕುಸುಮಬಾಲೆ'ಯ ಮಾತನ್ನು ಇಲ್ಲಿ ನೆನಪಿಸಬಹುದು.

ದಲಿತ ಮತ್ತು ದಲಿತೇತರ ಸಮೂಹದ ಬರಹಗಾರರು ದಲಿತ ಲೋಕವನ್ನು ಹಾಗೂ ದಲಿತ ವಿಷಯವನ್ನು ಕುರಿತು ಬರೆದಿರುವ ಕೆಲವು ಬರವಣಿಗೆಗಳಲ್ಲಿ ಪ್ರಜಾತಾಂತ್ರಿಕ ನೆಲೆಯ ದಲಿತ ಸಂವೇದನೆಯನ್ನು ಕಾಣಬಹುದು. ಇದು ದಲಿತ ವಿಷಯವನ್ನು ಕುರಿತ ಬರವಣಿಗೆ ಎನ್ನುವುದು ಒಂದು ಆಯಾಮವಾದರೆ; ವಿಷಯ ಗ್ರಹಿಕೆ ಮತ್ತು ವಿಷಯ ಮಂಡನೆಯಲ್ಲಿ ದಲಿತ ದೃಷ್ಟಿಕೋನವಿದೆ. ಇದರಲ್ಲಿ ದಲಿತ ಹಿತಾಸಕ್ತಿ ಇದೆ. ಬದಲಾಗುತ್ತಿರುವ ದಲಿತ ಲೋಕವನ್ನು ಬದಲಾಗುತ್ತಿರುವ ಕ್ರಮದಲ್ಲೆ ಗ್ರಹಿಸುವುದು ಮತ್ತು ಮುಂದೆ ದಲಿತ ಲೋಕ ಏನಾಗಬೇಕು; ಅದಕ್ಕೆ ಯಾವ ದಾರಿಯನ್ನು ತುಳಿಯಬೇಕು ಎಂಬುದರ ಸೂಕ್ಷ್ಮಗಳು ಈ ಬರವಣಿಗೆಯಲ್ಲಿರುತ್ತವೆ. ಇದು ಈ ಬರವಣಿಗೆಯ ವಿಶಿಷ್ಟತೆ.

ದಲಿತ ಸಂವೇದನೆ ಎಂಬುದನ್ನು ಇಡಿಯಾಗಿ ಗ್ರಹಿಸದೆ, ಅದರ ವಸ್ತುವಿಷಯ, ಅಭಿವ್ಯಕ್ತಿ ಕ್ರಮ, ನಿರೂಪಣೆಯ ವಿಧಾನ ಮುಂತಾದುವುಗಳನ್ನು ಆಧರಿಸಿ ಮೇಲಿನಂತೆ ವಿಂಗಡಿಸಿ ಗುರುತಿಸುವ ಕೆಲಸ ನಡೆಯಬೇಕಾಗಿದೆ. ಇಲ್ಲದಿದ್ದರೆ ದಲಿತ ವಿರೋಧಿಯಾಗಿರುವುದನ್ನೆ ದಲಿತ ಸಂವೇದನೆ ಎಂದು ತಪ್ಪಾಗಿ ಗುರುತಿಸುವ, ಮಂಡಿಸುವ ಹಾಗೂ ಒಪ್ಪಿಸುವ ಕೆಲಸ ಮುಂದುವರಿಯುತ್ತದೆ. ದಲಿತ ಸಂವೇದನೆಯ ಹೆಸರಿನಲ್ಲಿ ದಲಿತ ವಿರೋಧಿ ವೈಚಾರಿಕತೆ ನಿರ್ಮಾಣವಾಗಿದೆ. ಅದಕ್ಕೆ ದೊಡ್ಡ ಮಟ್ಟದ ಮಾರುಕಟ್ಟೆಯನ್ನೂ ನಿರ್ಮಾಣ ಮಾಡಲಾಗಿದೆ. ಈ ಬಗ್ಗೆ ಎಚ್ಚರಿಕೆ ವಹಿಸುವ ಅಗತ್ಯವಿದೆ. ■

**ಯುದ್ಧದ ನೆಲದಲ್ಲೇ ಹುಟ್ಟಿ ಬೆಳೆದ ತರುಣ ನಿರ್ದೇಶಕ ಬೋಮನ್ ಘೊಬಾಡಿ ತೆಗೆದ 'ಟರ್ಟಲ್ಸ್ ಕೆನ್ ಫ್ಲೈ' ಚಿತ್ರ ತನ್ನ ತಾಜಾತನ, ದುರಂತದ ತೀವ್ರತೆ ಮತ್ತು ಸಾಂಕೇತಿಕತೆಯಿಂದ ಮನ ತಟ್ಟುತ್ತದೆ. ಇರಾನ್-ಇರಾಕ್ ಜಂಟಿ ತಯಾರಿಕೆಯ ಈ ಚಿತ್ರವನ್ನು ಸದ್ದಾಂ ಹುಸೇನ್ ಪತನಾ ನಂತರ ಇರಾಕ್‌ನಲ್ಲಿ ಚಿತ್ರಿಸಲಾಗಿದೆ. ಈ ಚಿತ್ರ ಯುದ್ಧದ ಹುಸಿ ನೆಪಗಳನ್ನೂ, ನೆಲಬಾಂಬಿನ ದುರಂತ ಪರಿಣಾಮಗಳನ್ನೂ ಮನ ಮಿಡಿಯುವಂತೆ ತೋರಿಸಿದೆ.**

ಡಾ॥ ಎಚ್. ಎಸ್. ಅನುಪಮಾ

೪

# ದ ವಾರ್ ಯು ಡೋಂಟ್ ಸೀ...

**ಮಾ**ನವನಿಗೆ ಅಮರಿಕೊಂಡಿರುವ ಘನರೋಗಗಳಲ್ಲಿ ಯುದ್ಧಕ್ಕೆ ಮೊದಲ ಸ್ಥಾನ. ರಾಷ್ಟ್ರೀಯತೆ, ಸಮಗ್ರತೆ, ಭದ್ರತೆ ಇತ್ಯಾದಿ ಅಮೂರ್ತ ಕಾರಣಗಳನ್ನು ಮುಂದೊಡ್ಡಿ; ಸುಳ್ಳನ್ನೇ ಸತ್ಯವೆಂದು ಬಿಂಬಿಸಿ; ದಿನನಿತ್ಯ ಸಾಯಲು ಸಧೃಢ ಮಾನವರನ್ನು ಸೃಷ್ಟಿಸುವ ಅತಿ ಅಪಾಯಕರ ಹಾಗೂ ನಿರುಪಯೋಗಿ ಚಟುವಟಿಕೆಯೆಂದರೆ ಯುದ್ಧವೇ. ಸಾವಿರಾರು ವರ್ಷಗಳಿಂದ ಯುದ್ಧದ ದುರಂತವನ್ನು ಮಾನವ ಕುಲ ಅನುಭವಿಸುತ್ತ ಬಂದಿದ್ದರೂ, ದಾರುಣ ಸಂಕಟದ ಕತೆಗಳು ಪುರಾಣ-ಮಹಾಕಾವ್ಯಗಳಾಗಿ ಪರಂಪರೆಯಲ್ಲಿ ಸೇರಿಹೋಗಿದ್ದರೂ, ಮನುಷ್ಯನ ಯುದ್ಧದಾಹ ಇಂಗಿಲ್ಲ. ಇಷ್ಟೆಲ್ಲ ಸಂತರು, ಜ್ಞಾನಿಗಳು, ಪ್ರವಾದಿಗಳು, ದೇವಪುತ್ರರು, ಅವತಾರ ಪುರುಷರು ಭೂಮಿ ಮೇಲೆ ಹುಟ್ಟಿ ಬಂದರೂ ಮಾನವನ ರಣೋತ್ಸಾಹ ತಗ್ಗಲಿಲ್ಲ. ಬುದ್ಧ, ಅಶೋಕನ ಮಾತುಗಳು, ರಣರಂಗದ ಆಕ್ರಂದನಗಳು ಗಾಳಿಯಲ್ಲೆಂಬಂತೆ ತೇಲಿಹೋದವು. ಒಬ್ಬ ಹಿಟ್ಲರ್ ಹೋದರೆ ಮತ್ತೊಬ್ಬ ಸದ್ದಾಂ ಜನ್ಮ ತಳೆಯುತ್ತಾನೆ.



ತನ್ನ ನೀಚತನಕ್ಕೆ ಮನುಷ್ಯ ಕೊಟ್ಟುಕೊಂಡಿರುವ ನೆಪಗಳು ಹೀಗೇ.. ರಕ್ಷಣೆ, ಯುದ್ಧ, ಸಾಮ್ರಾಜ್ಯ ನಿಷ್ಠೆ ಇತ್ಯಾದಿ ಭಾರವಾದ ಹೆಸರು ಹೊತ್ತಿವೆ! ರಕ್ಷಣೆಯ ಮುಖವಾಡ ತೊಟ್ಟು ಅಂಗೀಕೃತಗೊಂಡ ಕೊಲೆ ಪಾತಕತನ ಯುದ್ಧ. ಆರ್ಥಿಕ ಹಿಂಜರಿತ, ಬರ, ಪ್ರಕೃತಿ ವಿಕೋಪ ಏನಾದರಾಗಲಿ, ರಕ್ಷಣಾ ವೆಚ್ಚ ಮಾತ್ರ ವರ್ಷದಿಂದ ವರ್ಷಕ್ಕೆ ಏರುತ್ತಿದೆ. ಜಗತ್ತಿನ ಬಡದೇಶಗಳದ್ದೂ ಸೇರಿ ಬಹುಪಾಲು ಸಂಪತ್ತು ರಕ್ಷಣಾ ಕಾರಣಗಳಿಗೆ ವ್ಯಯವಾಗುತ್ತಿದೆ. ಬಹುಶಃ ಯುದ್ಧ-ರಕ್ಷಣೆಗಳೆಂಬ ಭೀಭತ್ಸ ಅಣಕು ನಾಟಕಗಳಿಲ್ಲದಿದ್ದರೆ ಯಾರೂ ಹಸಿವಿನಿಂದ ಕಂಗೆಡುವ ಪರಿಸ್ಥಿತಿ ಬರುತ್ತಿರಲಿಲ್ಲ. ತನ್ನ ಸಂಪತ್ತನ್ನೆಲ್ಲ ರಕ್ಷಣೆಗಾಗಿ ವ್ಯಯಿಸಿ, ಶಸ್ತ್ರಾಸ್ತ್ರ ಖರೀದಿಸಲೆಂದು ಕೋಟ್ಯಂತರ ಡಾಲರ್ ಸಾಲ ಮಾಡಿ ದೈನೇಸಿಯಾಗಲು ಬಡದೇಶಗಳಿಗಿರುವ ತಾತ್ವಿಕತೆಗೆ 'ರಕ್ಷಣೆ'ಯೆಂಬ ಹೆಸರಿಡಲಾಗಿದೆ. ಯುದ್ಧ ವಿಜಯಕ್ಕಾಗಿ ಮನುಕುಲವನ್ನೇ ನಾಶ ಮಾಡಬಲ್ಲ ಅಣುಬಾಂಬಿನಿಂದ ಹಿಡಿದು, ಕಾಲಿಟ್ಟವರ ಜೀವ/ಬದುಕು ನುಂಗಲು 50 ವರ್ಷ ಕಾದು ಕೂರಬಲ್ಲ ನೆಲಬಾಂಬ್ ಸೃಷ್ಟಿಸುವ ತನಕ ಮನುಷ್ಯನ ಮಿದುಳು ಕ್ರಿಮಿನಲ್ ಉದ್ದೇಶಗಳಿಗೆ ಭಯಂಕರ ಕ್ರಿಯಾಶೀಲತೆ ಮೆರೆದಿದೆ.

ಇತ್ತೀಚೆಗೆ ಸ್ನೇಹಿತನ ಹಕ್ಕೊತ್ತಾಯದಿಂದ ನೋಡಿದ 'ಟರ್ಟಲ್ಸ್ ಕೆನ್ ಫ್ಲೈ' ಸಿನಿಮಾ ಮತ್ತು ಡಾಕ್ಯುಮೆಂಟರಿ ನಿರ್ಮಾಪಕ ಜಾನ್ ಪಿಲ್ಗರ್ ಸಂದರ್ಶನ, ಯುದ್ಧ ಕುರಿತ ಆಲೋಚನೆಗಳನ್ನು ಮತ್ತೆ ಒರೆಗೆ ಹಚ್ಚಿದವು. ಯುದ್ಧ, ನೆಲಬಾಂಬು, ಶಸ್ತ್ರಾಸ್ತ್ರಗಳ ವಿವೇಕರಹಿತ ಬಳಕೆಯಿಂದ ನರಕವಾದ ಬದುಕಿನ ಕುರಿತು ಹಲವು ಚಿತ್ರಗಳು ಬಂದಿವೆ. ಯುದ್ಧದ ನೆಲದಲ್ಲೇ ಹುಟ್ಟಿ ಬೆಳೆದ ತರುಣ ನಿರ್ದೇಶಕ ಬೋಮನ್ ಘೊಬಾಡಿ ತೆಗೆದ 'ಟರ್ಟಲ್ಸ್ ಕೆನ್ ಫ್ಲೈ' ಚಿತ್ರ ತನ್ನ ತಾಜಾತನ, ದುರಂತದ ತೀವ್ರತೆ ಮತ್ತು ಸಾಂಕೇತಿಕತೆಯಿಂದ ಮನ ತಟ್ಟುತ್ತದೆ. ಇರಾನ್-ಇರಾಕ್ ಜಂಟಿ ತಯಾರಿಕೆಯ ಈ ಚಿತ್ರವನ್ನು ಸದ್ದಾಂ ಹುಸೇನ್ ಪತನಾ ನಂತರ ಇರಾಕ್‌ನಲ್ಲಿ ಚಿತ್ರಿಸಲಾಗಿದೆ. ಈ ಚಿತ್ರ ಯುದ್ಧದ ಹುಸಿ ನೆಪಗಳನ್ನೂ, ನೆಲಬಾಂಬಿನ ದುರಂತ ಪರಿಣಾಮಗಳನ್ನೂ ಮನ ಮಿಡಿಯುವಂತೆ ತೋರಿಸಿದೆ.

ಕೊನೆ ಮೊದಲು ಬೇರೆಬೇರೆಯಲ್ಲದ ವೃತ್ತದ ಎರಡು ತುದಿಗಳಂತೆ ಸಾಗುತ್ತದೆ ಈ ಚಿತ್ರದ ಕತೆ. 'ಒಂದಾನೊಂದು ಊರಿನಲ್ಲಿ..' ಎಂದು ಶುರುವಾಗಿ 'ಕೊನೆಗೆ ಎಲ್ಲರೂ ಸುಖವಾಗಿ ಬಾಳಿದರು..' ಎಂಬಲ್ಲಿಗೆ ಅದು ಮುಗಿಯುವುದಿಲ್ಲ. ಟರ್ಕಿ-ಇರಾಕ್ ಗಡಿ ಪ್ರದೇಶದಲ್ಲಿ ನೆಲಬಾಂಬಿಗೆ (ಲ್ಯಾಂಡ್ ಮೈನ್) ಅಂಗಹೀನರಾಗಿರುವ ಮಕ್ಕಳು ಚಿತ್ರದ ಕಲಾವಿದರು. ಯುದ್ಧಕ್ಕೆ ಅಂಗಾಂಗಗಳನ್ನೂ, ಕುಟುಂಬದವರನ್ನೂ ಕಳೆದುಕೊಂಡ ನಿರಾಶ್ರಿತ ಮಕ್ಕಳು ತಮ್ಮ ಜೀವಂತಿಕೆ, ಸಹಾಯ ಪ್ರಜ್ಞೆ,

ಅಸಹಾಯಕತೆ, ಆಶಾಭಾವನೆ ಎಲ್ಲದರಿಂದ ಈ ಚಿತ್ರದ ಪ್ರತಿ ಫ್ರೇಮನ್ನು ತುಂಬಿದ್ದಾರೆ. ಯುದ್ಧ, ಅಂಗವೈಕಲ್ಯ, ಅನಾಥಪ್ರಜ್ಞೆ, ಹತಾಶೆ ಎಲ್ಲವೂ ಅವರ ದಿನನಿತ್ಯದ ಬದುಕಾಗಿರುವುದರಿಂದ ಮಕ್ಕಳು ಚಿತ್ರದಲ್ಲಿ ಅಭಿನಯಿಸಿಲ್ಲ, ಬದುಕಿದ್ದಾರೆ.

ಯುದ್ಧದಲ್ಲಿ ತಾಯ್ತಂದೆಯರನ್ನು ಕಳೆದುಕೊಂಡ ಅಣ್ಣತಂಗಿಯರ ಬವಣೆಯ ಸುತ್ತ ಈ ಚಿತ್ರವಿದೆ. ಸೈನಿಕರಿಂದ ಅತ್ಯಾಚಾರಕ್ಕೊಳಗಾದ ಎಳೆಯ ತಂಗಿ ಕುರುಡು ಮಗು ಹೆತ್ತರೆ, ಅವಳಣ್ಣ ನೆಲಬಾಂಬಿಗೆ ಎರಡು ಕೈ ಕಳೆದುಕೊಂಡರೂ ತಂಗಿ–ಮಗುವಿನ ಜವಾಬ್ದಾರಿ ಹೊರಬೇಕಾಗಿದೆ. ವಯಸ್ಸಿಗೆ ಮೀರಿದ ಜವಾಬ್ದಾರಿಯ ಭಾರ ಹೊತ್ತು ನಿರಾಶ್ರಿತರ ಕ್ಯಾಂಪಿಗೆ ಬರುವ ಇಂಥವೇ ಮಕ್ಕಳು ದುಡಿಮೆಗಾಗಿ ನೆಲಬಾಂಬು ಹುಡುಕಿ ತೆಗೆದು ವಿಶ್ವಸಂಸ್ಥೆಯ ಪ್ರತಿನಿಧಿಗೆ ಮಾರುವ ದುರಂತ ವಿಪರ್ಯಾಸ ಚಿತ್ರಿತವಾಗಿದೆ. ಯುದ್ಧದ ತಾಜಾ ಸುದ್ದಿಗಾಗಿ ರೇಡಿಯೋ ಮಾರಿ ಸ್ಯಾಟಿಲೈಟ್ ಡಿಷ್ ಮಾರುವ, ಹತಭಾಗ್ಯ ಹುಡುಗನೊಬ್ಬನ ಅನುಭವಜನ್ಯ ಬಡಬಡಿಕೆಗಳನ್ನೇ ಭವಿಷ್ಯವಾಣಿಯೆಂದು ನಂಬುವ ಹಿರಿಯ ಹಳ್ಳಿಗರು; ಬರಿ ಗಣಿತ ಕಲಿತರೆ ಜೀವ ಉಳಿಸಿಕೊಳ್ಳಲಾಗದೆಂದು ಶಾಲಾವರಣದಲ್ಲೇ ಬಂಕರ್ ಹಾಕಿ ಬಂದೂಕು ಚಲಾಯಿಸಲು ಹೇಳಿಕೊಡುವ 'ಸ್ಯಾಟಿಲೈಟ್'; ಅತ್ಯಾಚಾರಕ್ಕೆ ಹುಟ್ಟಿ ಎಳೆತಾಯಿಗೂ ಬೇಡವಾಗಿ ಸಾವನ್ನಪ್ಪುವ ಕುರುಡು ಮಗು ಈ ಎಲ್ಲ ಚಿತ್ರಣಗಳು ಯುದ್ಧದ ಬಗೆಗೆ ಹೇವರಿಕೆಯನ್ನೂ, ದೊಡ್ಡ ಬೂಟುಗಾಲು–ಭಾರೀ ಬಂದೂಕದ ಶೌರ್ಯವಂತರ ಬಗ್ಗೆ ಮರುಕವನ್ನೂ, ಮನುಷ್ಯನಲ್ಲಿ ಆಳವಾಗಿ ಬೇರುಬಿಟ್ಟ ಆತ್ಮಹತ್ಯಾತ್ಮಕ ಕ್ರೌರ್ಯಕ್ಕೆ ದಿಗ್ಭ್ರಮೆಯನ್ನೂ ಹುಟ್ಟಿಸುತ್ತವೆ. ಜಾತ್ರೆಯಲ್ಲಿ ಮಿಠಾಯಿ ಮಾರುವಂತೆ ಮಾರುಕಟ್ಟೆಯಲ್ಲಿ ಕೇಳಿದವರಿಗೆಲ್ಲ ರೈಫಲ್, ರಾಕೆಟ್ ಲಾಂಚರ್, ಪಿಸ್ತೂಲು ಮಾರುವ ವ್ಯಾಪಾರಿಗಳನ್ನು ನೋಡುವಾಗ ಯುದ್ಧವೆಂದರೆ ಶಸ್ತ್ರಾಸ್ತ್ರ ತಯಾರಕರ ಕರಾಮತ್ತೇ ಎಂದು ಮನದಟ್ಟಾಗುತ್ತದೆ.

ಈ ನೆಲಬಾಂಬುಗಳಾದರೂ ಅದೆಂಥ ನರಭಕ್ಷಕ ಅಸ್ತ್ರಗಳು! ವಿಶ್ವಾದ್ಯಂತ ಪ್ರತಿವರ್ಷ 20,000 ಜನರನ್ನು ಕೊಲ್ಲುವ, ಅದರ ಮೂರ್ನಾಲ್ಕು ಪಟ್ಟು ಜನರನ್ನು ಅಂಗವಿಕಲರನ್ನಾಗಿ ಮಾಡುವ ನೆಲಬಾಂಬು ಸೈನ್ಯದ ಮಿತ್ರ, ಸಾಮಾನ್ಯ ಜನರ ಶತ್ರು. ಕಾಂಬೋಡಿಯಾದ ಖ್ಮೇರ್‌ರೂಜ್ ರೆಜೀಮಿನ ಒಬ್ಬ ಜನರಲ್ ಅಭಿಪ್ರಾಯದಂತೆ ನೆಲಬಾಂಬು ಗುರಿ ತಪ್ಪದ, 24 ಗಂಟೆಯೂ ಎಚ್ಚರವಿರುವ, ಅತಿ ಧೈರ್ಯಶಾಲಿ ಸೈನಿಕ. ಶತ್ರು ಬರಬಹುದಾದ, ಬರಬಾರದ ದಾರಿ ಗುರುತಿಸಿ ಮೊದಲೇ ಅಲ್ಲಿ ಹುಗಿದಿಡುವ ನೆಲಬಾಂಬ್ ಸಮೂಹ ನಾಶಕ ಅಣ್ವಸ್ತ್ರವಲ್ಲದಿದ್ದರೂ ಕ್ಷಣಾರ್ಧದಲ್ಲಿ ಕಾಲಿಟ್ಟವನನ್ನು ಸಿಡಿಸಿಬಿಡಬಲ್ಲದು. ಸೈನ್ಯ ಇಟ್ಟು ಕಾಯಲಾಗದ ಪ್ರದೇಶ, ಗಡಿಗಳಲ್ಲಿ ನೆಲಬಾಂಬ್ ಹುಗಿಯುವುದು ಅನಾದಿ ಕಾಲದಿಂದ ನಡೆದು ಬಂದ ಯುದ್ಧ ತಂತ್ರ. ನೆಲಬಾಂಬಿನ ಮೂಲಪುರುಷರು ಚೀನೀಯರು. ಅವರದನ್ನು ಸಾವಿರಾರು ವರ್ಷಗಳಿಂದ ಬಳಸಿದ್ದಾರೆ. ಆಫ್ರಿಕಾ ದೇಶಗಳು, ಆಫ್ಘನಿಸ್ತಾನ, ಕೊರಿಯಾಗಳಲ್ಲಿ ಈಗ ವ್ಯಾಪಕವಾಗಿ ಬಳಕೆ ಯಾಗುತ್ತಿದೆ. ಮಹಾಯುದ್ಧದ ಸಮಯದಲ್ಲಿ ನೆಲಬಾಂಬ್ ತಂತ್ರಜ್ಞಾನ ಉತ್ತಮಗೊಂಡಿತು. 'ಮಿತ್ರ' ಟ್ಯಾಂಕ್‌ಗಳನ್ನು ಗುರುತಿಸಿ ಉಳಿಸುವ, ಭಾರ ಬೀಳದೆಯೂ ಕಾಂತೀಯ ಆಕರ್ಷಣೆಗೆ ಸಿಡಿಯುವ, ನಿಷ್ಕ್ರಿಯಗೊಳಿಸಲು ಸಾಧ್ಯವೇ ಆಗದಂತಹ ನೆಲಬಾಂಬುಗಳನ್ನು ಅಭಿವೃದ್ಧಿಪಡಿಸಲಾಯಿತು. 1980ರ ಹೊತ್ತಿಗೆ ವಿಷಾನಿಲ ತುಂಬಿದ ನೆಲಬಾಂಬುಗಳು ಬಂದವು!

ಒಂದು ನೆಲಬಾಂಬ್ ಬೆಲೆ 3 ಡಾಲರ್. ಅದನ್ನು ಹುಡುಕಿ ನಿಷ್ಕ್ರಿಯಗೊಳಿಸಲು 1000 ಡಾಲರ್ ಬೇಕಾಗುತ್ತದೆ. ವಿಮಾನ/ಹೆಲಿಕಾಪ್ಟರ್‌ಗಳಿಂದ ನೆಲದೊಳಗೆ ತೂರುವಂತೆ ಒಂದು ನಿಮಿಷಕ್ಕೆ 1000 ನೆಲಬಾಂಬುಗಳನ್ನು ಚೆಲ್ಲಬಹುದು. ಆದರೆ ಒಬ್ಬ ತಜ್ಞ ವ್ಯಕ್ತಿ ದಿನವಿಡೀ ಕೆಲಸ ಮಾಡಿದರೂ 20–50 ಚ.ಮೀ ಪ್ರದೇಶದ ನೆಲಬಾಂಬು ನಿಷ್ಕ್ರಿಯಗೊಳಿಸಲಾರ. ಈಗಲೂ 110 ಮಿಲಿಯನ್ ನೆಲಬಾಂಬುಗಳು ಭೂಮಿಯ ಒಡಲಲ್ಲಿ ಸಿಡಿಯದೇ ಕಾಲಿಟ್ಟವರ ಪ್ರಾಣ ತೆಗೆಯಲು ಕಾದು ಕೂತಿವೆ! ಗಡಿಭಾಗದ ಕೃಷಿಕರ ಹೊಲಗದ್ದೆಗಳಲ್ಲಿ ಸಾಮಾನ್ಯವಾಗಿ ನೆಲಬಾಂಬ್ ಹುಗಿಯುತ್ತಾರೆ. ಈ ಕಾರಣಕ್ಕೆ ರೈತರಿಗೆ ಯುದ್ಧದ ಸಮಯವೆಂದರೆ ಅನಿವಾರ್ಯ ಕೃತಕ ಬರ. ಯುದ್ಧ ಮುಗಿದ ಮೇಲೂ ನಿಷ್ಕ್ರಿಯಗೊಳ್ಳದ ನೆಲಬಾಂಬ್ ದೆಸೆಯಿಂದ ವರ್ಷಗಟ್ಟಲೆ ಭೂಮಿಯಲ್ಲಿ ಬೆಳೆ ಬೆಳೆಯದೇ ಬದುಕಬೇಕು. ಸರ್ಕಾರದ ಸೈನ್ಯ ನೆಲಬಾಂಬ್ ಹುಗಿದಿಟ್ಟ ಜಾಗವನ್ನಾದರೂ ಗುರುತಿಸುತ್ತದೆ. ಆದರೆ ಗೆರಿಲ್ಲಾ ಯುದ್ಧ ಮಾಡುವವರು ನೆಲಬಾಂಬ್ ಗುರುತು ಉಳಿಸದೇ ಚದುರಿ ಹರಡುವುದರಿಂದ ಅವಿನ್ನೂ ಅಪಾಯಕಾರಿಯಾಗಿವೆ.

ಬದುಕಿದಷ್ಟು ಕಾಲ ಕಾಡುವ ಅಂಗವಿಕಲತೆಯ ಜೊತೆಗೆ ಯುದ್ಧದ ಇನ್ನಿತರ ವಿನಾಶಕಾರಿ ಪರಿಣಾಮ ಎದುರಿಸುವ ಮಕ್ಕಳು ನೆಲಬಾಂಬಿಗೆ ಬಲಿಯಾಗುವ ಅಮೂಲ್ಯ ಜೀವಗಳು. ಕುತೂಹಲದಿಂದ ಮುಟ್ಟಿ ಎಳೆದು ನೋಡಿ ಅಪಾರ ಸಂಖ್ಯೆಯ ಮಕ್ಕಳು ನೆಲಬಾಂಬಿಗೆ ಬಲಿಯಾಗಿದ್ದಾರೆ. ಆದರಲ್ಲೂ ಅಪಾಯ ಎಂಬ ಚಿಹ್ನೆಯನ್ನು ಓದಲೂ ಬಾರದ ಎಳೆ ಮಕ್ಕಳಿದ್ದಾರೆ. ವಿಯೆಟ್ನಾಮಿನ ಒಂದೇ ಜಿಲ್ಲೆಯಲ್ಲಿ 300 ಮಕ್ಕಳು ಸತ್ತು 42 ಜನ ಅಂಗವಿಕಲರಾಗಿದ್ದಾರೆ. ಉತ್ತರ ಇರಾಕ್‌ನ ಕುರ್ದಿಶ್ ಮಕ್ಕಳು, ಸಾವಿರಾರು ಆಫ್ಘನ್ ಮಕ್ಕಳು ನೆಲಬಾಂಬಿಗೆ ಜೀವಕಳೆದುಕೊಂಡಿದ್ದಾರೆ. ರುವಾಂಡಾದ ಒಂದು ಮಿಲಿಯನ್ ನೆಲಬಾಂಬು ಗಳಿಂದಾದ ಅರ್ಧಕ್ಕರ್ಧ ಸಾವುಗಳು ಮಕ್ಕಳವೇ. ಅಂಗೋಲಾದಲ್ಲಿ ಇದುವರೆಗೆ 70,000 ಜನ ಅಂಗಹೀನರಾಗಿದ್ದರೆ ಅವರಲ್ಲಿ 8000 ಜನ ಮಕ್ಕಳು. ನೆಲಬಾಂಬಿನಿಂದ ಕೈ ಅಥವಾ ಕಾಲು ಸಿಡಿದು ಹೋದಾಗ ಕತ್ತರಿಸಿ ಟ್ರಿಮ್ ಮಾಡಿ ಹೊಲಿಗೆ ಹಾಕಲಾಗಿರುತ್ತದೆ. ಆದರೆ ಮಕ್ಕಳ ಚರ್ಮ ಮತ್ತು ಮಾಂಸಖಂಡಗಳಿಗಿಂತ ಎಲುಬು ವೇಗವಾಗಿ ಬೆಳೆದು ಎಷ್ಟೋ ಸಲ ಮತ್ತೆಮತ್ತೆ ಆಂಪ್ಯುಟೇಷನ್ ಮಾಡಬೇಕಾಗುತ್ತದೆ. ಮೊದಲೇ ಕೃತಕ ಕಾಲು ಸಿಗುವುದು ದುರ್ಲಭವಾದ ಕಾಲದಲ್ಲಿ ಆರಾರು ತಿಂಗಳಿಗೊಮ್ಮೆ ಹೊಸ ಸೈಜಿಗೆ ತಕ್ಕ ಕಾಲು ಬದಲಿಸುವುದು ಸಾಧ್ಯವೆ? ಆಡುವ ಎಳೆಯ ವಯಸ್ಸಿನಲ್ಲಿ ಏನೆಲ್ಲ ನೋವು!

ನೆಲಬಾಂಬ್ ಅನ್ನು ನಿಷ್ಕ್ರಿಯಗೊಳಿಸುವುದು ಅತಿ ಕಷ್ಟ. ಈ ಉದ್ದೇಶಕ್ಕೆ ಯಂತ್ರಗಳನ್ನು ಅಭಿವೃದ್ಧಿ ಪಡಿಸಿದ್ದರೂ ಮಾನವನೇ ನಂಬಲರ್ಹ ಸಾಧನ! ಕೆಲವು ಟೆರೇನ್‌ಗಳು, ಗಡಿಗಳು ಹೇಗಿವೆಯೆಂದರೆ ಅಲ್ಲಿ ತಜ್ಞರು ಹೋಗಿ ನಿಷ್ಕ್ರಿಯಗೊಳಿಸಿಬರುವುದು ಅಸಾಧ್ಯ. ಹೀಗಾಗಿ ಸಿರಿಯಾದ ಕೆಲ ಪ್ರದೇಶಗಳಲ್ಲಿ, ಫಾಕ್‌ಲ್ಯಾಂಡ್ ದ್ವೀಪದಲ್ಲಿ ಸಾವಿರಾರು ನೆಲಬಾಂಬುಗಳನ್ನು ದಶಕಗಳಾದರೂ ಹಾಗೇ ಬಿಡಲಾಗಿದೆ. ಸಾವಿರಾರು ಭಾರೀ ಗಾತ್ರದ ಪ್ರಾಣಿಗಳು ಇದಕ್ಕೆ ಬಲಿಯಾಗಿವೆ. ಸತ್ತ ಮನುಷ್ಯರ ಲೆಕ್ಕ ಇಡುವವರೇ ಇಲ್ಲದಿರುವಾಗ ಪ್ರಾಣಿಗಳ ಕಡೆ ಗಮನ ಕೊಡುವವರಾರು?

ಇಷ್ಟೆಲ್ಲ ಅನಿಷ್ಟಗಳಿರುವ ನೆಲಬಾಂಬ್ ಬಳಕೆ ನಿಲ್ಲಿಸುವಂತೆ ವಿಶ್ವಾದ್ಯಂತ ಒತ್ತಾಯ ಕೇಳಿಬರುತ್ತಿದೆ. ಇದರಲ್ಲಿ ಕೆನಡಾ ಮುಂಚೂಣಿಯಲ್ಲಿದೆ. 1997ರಲ್ಲಿ ಕೆನಡಾದ ಒಟ್ಟಾವಾದಲ್ಲಿ ನೆಲಬಾಂಬ್ ಬಳಕೆ ನಿಲ್ಲಿಸುವುದರ ಕುರಿತು ಒಪ್ಪಂದ ಮಾಡಿಕೊಳ್ಳಲಾಯಿತು. ಅದಕ್ಕೆ ಇದುವರೆಗೆ 158 ದೇಶಗಳು ಸಹಿ ಮಾಡಿವೆ. ಅಮೆರಿಕಾ, ಚೀನಾ, ರಷಿಯಾಗಳು ಇನ್ನೂ ಸಹಿ ಮಾಡಿಲ್ಲ! ತಾವು ಬಲಾಢ್ಯರೆಂದುಕೊಂಡವರ ಲೆಕ್ಕಾಚಾರ ಬೇರೆಯೇ ಆಗಿರುತ್ತದೆ.

*****

ವಿಶ್ವದ ಒಟ್ಟು ರಕ್ಷಣಾ ವೆಚ್ಚದ 43% ಅಮೆರಿಕವೊಂದೇ ಖರ್ಚು ಮಾಡುತ್ತಿದೆ! ವಿಶ್ವಸಂಸ್ಥೆಗೆ ಸದಸ್ಯ ರಾಷ್ಟ್ರಗಳಿಂದ ಬರಬೇಕಿರುವ 348 ಮಿಲಿಯನ್ ದೇಣಿಗೆ ಬಾಕಿಯಲ್ಲಿ 80% ಬಾಕಿ ಅಮೆರಿಕದ್ದೇ ಆಗಿದೆ. ಶತ್ರುಗಳೇ ಇಲ್ಲದ ದೊಡ್ಡಣ್ಣ ಅಮೆರಿಕಾ ವಾರ್ಷಿಕ ಬಜೆಟಿನ ಹಣದಲ್ಲಿ ರಕ್ಷಣೆಗೆ 54%, ಶಿಕ್ಷಣಕ್ಕೆ 6% ಹಾಗೂ ಆರೋಗ್ಯ ಕ್ಷೇತ್ರಕ್ಕೆ 5% ಮೀಸಲಿಟ್ಟಿದೆ. ವಿಶ್ವದ ಶಸ್ತ್ರಾಸ್ತ್ರ ರಫ್ತಿನ 88% ಪಾಲನ್ನು ವಿಶ್ವಸಂಸ್ಥೆ ಭದ್ರತಾ ಸಮಿತಿಯ ಐದು ಖಾಯಂ ಸದಸ್ಯ ರಾಷ್ಟ್ರಗಳು ಹೊಂದಿವೆ. ಈ ವಾಸ್ತವಗಳು ಯುದ್ಧದ ಕಾರಣಗಳನ್ನೂ, ಪರಿಣಾಮಗಳನ್ನೂ, ವರದಿಗಳ ಸತ್ಯಾಸತ್ಯತೆಯನ್ನೂ

ಜಾನ್ ಪಿಲ್ಗರ್ ದೆಹಲಿಯಲ್ಲಿ 97 ನಿಮಿಷ ಅವಧಿಯ ತಮ್ಮ ಇತ್ತೀಚಿನ ಡಾಕ್ಯುಮೆಂಟರಿ 'ದ ವಾರ್ ಯು ಡೋಂಟ್ ಸೀ'ಯ ಪ್ರೀಮಿಯರ್ ಶೋ ನಡೆಸಿದರು. ಆಗ ನೀಡಿದ ಸಂದರ್ಶನದಲ್ಲಿ ವರ್ತಮಾನದ ಮಾಧ್ಯಮಗಳು ಹಿಡಿದಿರುವ ಹಾದಿಯನ್ನು, ಯುದ್ಧ ವರದಿಯ ಹುಸಿಗಳನ್ನು ಎಳೆಎಳೆಯಾಗಿ ಬಿಡಿಸಿಟ್ಟಿದ್ದಾರೆ. ಯುದ್ಧ ವರದಿಗಾರರು ಜನ ಏನನ್ನು ನಂಬಬೇಕೆಂದು ತಾವು ಬಯಸುವರೋ ಅದನ್ನಷ್ಟೇ ವರದಿ ಮಾಡುತ್ತಾ, ಉಳಿದ ವಸ್ತು-ವಿಷಯಗಳನ್ನು ನಿರ್ಲಕ್ಷಿಸುವುದರ ಬಗೆಗೆ, ಮಾಧ್ಯಮ ಗಳ ಕಣ್ಣಿಗೆ ಬೀಳದ ಅಥವಾ ಬಿದ್ದರೂ ಜಾಣ ಕುರುಡಿನಿಂದ ವರದಿಯಾಗದ ವಿಷಯಗಳ ಬಗೆಗೆ ಅವರ ಸಾಕ್ಷ್ಯಚಿತ್ರ ಬೆಳಕು ಚೆಲ್ಲುತ್ತದೆ.

ಬೇರೆಯೇ ಆಗಿ ನೋಡಬೇಕಾದ ಅನಿವಾರ್ಯತೆ ಸೃಷ್ಟಿಸಿವೆ. ಅಂಥ ಒಂದು ಪ್ರಯತ್ನ ಜಾನ್ ಪಿಲ್ಗರ್ ಅವರ 'ವಾರ್ ಯು ಡೋಂಟ್ ಸೀ' ಡಾಕ್ಯುಮೆಂಟರಿ.

ಡೈಲಿ ಟೆಲಿಗ್ರಾಫ್, ರಾಯಿಟರ್, ಡೈಲಿ ಮಿರರ್‌ಗಳಲ್ಲಿ ಕೆಲಸ ಮಾಡಿದ 72 ವರ್ಷ ವಯಸ್ಸಿನ ಪಿಲ್ಗರ್ ಡೈಲಿ ಮಿರರ್‌ನ ಸ್ಟಾರ್ ರಿಪೋರ್ಟರ್ ಆಗಿದ್ದವರು. ವಿಯೆಟ್ನಾಮ್, ಕಾಂಬೋಡಿಯಾ, ಈಜಿಪ್ಟ್, ಭಾರತ, ಬಾಂಗ್ಲಾದೇಶ, ಬಯಾಫ್ರಾದಲ್ಲಿ ಯುದ್ಧ ವರದಿಗಾರರಾಗಿದ್ದವರು. ನಂತರ ಸಾಕ್ಷ್ಯಚಿತ್ರ ಹಾಗೂ ಬರವಣಿಗೆಗೆ ಹೊರಳಿಕೊಂಡರು. 60ಕ್ಕಿಂತ ಹೆಚ್ಚು ಸಾಕ್ಷ್ಯಚಿತ್ರ ತೆಗೆದಿರುವ ಅವರ ಮೊದಲ ಚಿತ್ರ 'ದಿ ಕ್ವೈಟ್ ಮ್ಯುಟಿನಿ'. ವಿಯೆಟ್ನಾಮ್ ಯುದ್ಧ ಸಮಯದಲ್ಲಿ ಅಮೆರಿಕನ್ ಸೈನ್ಯದೊಳಗೇ ಉಂಟಾದ ಬಂಡಾಯದ ಕುರಿತಾದ ಚಿತ್ರ ಅದು. ತಮ್ಮ ಡಾಕ್ಯುಮೆಂಟರಿಗಳಿಗೆ ಹಲವು ಪ್ರಶಸ್ತಿಗಳನ್ನು ಪಡೆದ ಸೂಕ್ಷ್ಮ ಮನಸ್ಸಿನ ಪಿಲ್ಗರ್, ಯುದ್ಧವೆಂಬ ನೈಜ, ಭೀಭತ್ಸ ನಾಟಕದಲ್ಲಿ ಮಾಧ್ಯಮದವರು ಪಾತ್ರಧಾರಿಗಳೆಂದೂ, ಪಾತ್ರ ನಿರ್ವಹಣೆಯನ್ನು ಎಲ್ಲಿ ಹೇಗೆ ಮರೆಯಲಾಗಿದೆ ಎಂದೂ ಬಿಡಿಸಿ ತೋರಿಸುತ್ತಾರೆ. ಗಡಿಮೀರಿ ನಿಂತು ಯೋಚಿಸಬಲ್ಲ, ಬರೆಯಬಲ್ಲ ಅವರು ತಮ್ಮ ದಶಕಗಳ ಯುದ್ಧ ವರದಿಯ ಅನುಭವದಿಂದ ವರದಿಗಾರ ವಿಧೇಯನಾಗಿ ರಬೇಕಾದ್ದು ಸತ್ಯಕ್ಕೇ ಹೊರತು ಬಾಸ್‌ಗಲ್ಲ ಎಂದು ಮತ್ತೆಮತ್ತೆ ಸ್ಪಷ್ಟಪಡಿಸುತ್ತಾರೆ.

ಜಾನ್ ಪಿಲ್ಗರ್ ದೆಹಲಿಯಲ್ಲಿ 97 ನಿಮಿಷ ಅವಧಿಯ ತಮ್ಮ ಇತ್ತೀಚಿನ ಡಾಕ್ಯುಮೆಂಟರಿ 'ದ ವಾರ್ ಯು ಡೋಂಟ್ ಸೀ'ಯ ಪ್ರೀಮಿಯರ್ ಶೋ ನಡೆಸಿದರು. ಆಗ ನೀಡಿದ ಸಂದರ್ಶನದಲ್ಲಿ ವರ್ತಮಾನದ ಮಾಧ್ಯಮಗಳು ಹಿಡಿದಿರುವ ಹಾದಿಯನ್ನು, ಯುದ್ಧ ವರದಿಯ ಹುಸಿಗಳನ್ನು ಎಳೆಎಳೆಯಾಗಿ ಬಿಡಿಸಿಟ್ಟಿದ್ದಾರೆ. ಯುದ್ಧ ವರದಿಗಾರರು ಜನ ಏನನ್ನು ನಂಬಬೇಕೆಂದು ತಾವು ಬಯಸುವರೋ ಅದನ್ನಷ್ಟೇ ವರದಿ ಮಾಡುತ್ತಾ, ಉಳಿದ ವಸ್ತು-ವಿಷಯಗಳನ್ನು ನಿರ್ಲಕ್ಷಿಸುವುದರ ಬಗೆಗೆ, ಮಾಧ್ಯಮಗಳ ಕಣ್ಣಿಗೆ ಬೀಳದ ಅಥವಾ ಬಿದ್ದರೂ ಜಾಣ ಕುರುಡಿನಿಂದ ವರದಿಯಾಗದ ವಿಷಯಗಳ ಬಗೆಗೆ ಅವರ ಸಾಕ್ಷ್ಯಚಿತ್ರ ಬೆಳಕು ಚೆಲ್ಲುತ್ತದೆ. ಜೂಲಿಯನ್ ಅಸಾಂಜ್, ಮಾರ್ಕ ಕರ್ಟಿಸ್, ಡ್ಯಾನ್ ರಾದರ್ ಜೊತೆ ಪಿಲ್ಗರ್ ಕೂಡಾ ಅದರಲ್ಲಿ ಅಭಿನಯಿಸಿದ್ದಾರೆ.

ಮೊದಲ ಮಹಾಯುದ್ಧದ ವೇಳೆ ಬ್ರಿಟಿಷ್ ಪ್ರಧಾನಿ ಡೇವಿಡ್ ಲಾಯ್ಡ್ ಜಾರ್ಜ್ ಹೇಳಿದ, 'ಜನರಿಗೆ ನಿಜ ಏನೆಂದು ಗೊತ್ತಾದರೆ ನಾಳೆಯೇ ಯುದ್ಧ ನಿಂತುಹೋಗುತ್ತದೆ' ಎಂಬ ಮಾತಿನೊಂದಿಗೆ ಅವರ ಸಾಕ್ಷ್ಯಚಿತ್ರ ಶುರುವಾಗುತ್ತದೆ. ಇರಾಕ್, ಅಫ್ಘನಿಸ್ತಾನ್ ಮತ್ತು ಇಸ್ರೇಲ್/ಪ್ಯಾಲೆಸ್ತೈನ್‌ಗಳಲ್ಲಿ ಅಮೆರಿಕನ್ ಕಾರ್ಯಾಚರಣೆ ಕುರಿತ ಈ ಚಿತ್ರ, ವರ್ಷಕ್ಕೆ ಒಂದು ಬಿಲಿಯನ್ ಡಾಲರ್ ಹಣವನ್ನು ಪೆಂಟಗನ್ ಸುದ್ದಿ ವಿರೂಪಗೊಳಿಸಲು ಬಳಸುವ ಬಗ್ಗೆ, 700 ಜನ ಎಂಬೆಡೆಡ್ ರಿಪೋರ್ಟರ್‌ಗಳಿಂದಲೇ ಬಹಳಷ್ಟು ವರದಿಗಳು ಬಂದಿರುವ ಬಗ್ಗೆ, ನಾಗರಿಕರ ಹಾಗೂ ಮಕ್ಕಳ ಮೇಲೆ ನಿಷ್ಕಾರಣ ಗುಂಡಿನ ಮಳೆ ಸುರಿಸಿ ನಂತರ 'ಕೊಲ್ಲಾಟರಲ್ ಡ್ಯಾಮೇಜ್' ಎಂದು ಬಿಂಬಿಸುವುದರ ಬಗೆಗೆ ಹೇಳುತ್ತದೆ. ಇರಾಕಿನ ನಾಗರಿಕರು ಅನುಭವಿಸಿದ ಹಿಂಸೆ ವರದಿಯಾಗದ ಬಗ್ಗೆ ಸಾಕ್ಷಿಗಳ ಹೇಳಿಕೆಯನ್ನೂ ದಾಖಲಿಸಿದೆ.

ಮಾಧ್ಯಮದ ಸಾಕ್ಷಿಪ್ರಜ್ಞೆಯಂತೆ ಮಾತನಾಡುವ ಪಿಲ್ಗರ್ ಮಾತುಗಳು ಈ ಹೊತ್ತು ನಮ್ಮ ಮಾಧ್ಯಮ ಜಗತ್ತಿಗೂ ಅನ್ವಯಿಸುತ್ತದೆ. ತೆಹಲ್ಕಾ ಪತ್ರಿಕೆಯ ಡಿ.3ರ ಸಂಚಿಕೆಯಲ್ಲಿ ಪ್ರಕಟವಾದ ಅವರ ಸಂದರ್ಶನದ ಆಯ್ದಭಾಗ ಇಲ್ಲಿದೆ:

**1. ನೀವು ವರದಿಗಾರರಾಗಿ ಕೆಲಸ ಶುರುಮಾಡಿದಾಗಿಗಿಂತ ಈಗ ಮಾಧ್ಯಮ ಹೇಗೆ ಬದಲಾಗಿದೆ?**

ಮಾಧ್ಯಮ ತಂತ್ರಜ್ಞಾನ ಸಂಪೂರ್ಣವಾಗಿ ಬದಲಾಗಿದೆ. ಮೊದಲು ವಿದೇಶೀ ಬಾತ್ಮೀದಾರನಾಗಿ ಪೋರ್ಟಬಲ್ ಟೈಪ್ ರೈಟರ್, ಶಾರ್ಟ್‌ವೇವ್ ರೇಡಿಯೋ ಮತ್ತು ದಪ್ಪ ನೋಟ್‌ಬುಕ್ ಒಯ್ಯುತ್ತಿದ್ದೆ. ಲಂಡನ್ನಿಗೆ ವರದಿ ಕಳಿಸುವುದೆಂದರೆ ಗಂಟೆಗಳ ಕಾಲ ಅದನ್ನು ಕಳಿಸುವಂತೆ ಅಂಚೆ ಅಧಿಕಾರಿಗಳಲ್ಲಿ ವಾದ ಹೂಡುವುದೇ ಆಗಿತ್ತು. ಬಾಂಗ್ಲಾ ಯುದ್ಧದ ಸಮಯದಲ್ಲಿ ಕಲಕತ್ತಾದ ಗ್ರಾಂಡ್ ಹೋಟೆಲಿನ ಸ್ವಿಚ್ ಆಪರೇಟರ್ ಆಗಿದ್ದ ಶ್ರೀಮತಿ ಬ್ಯಾನರ್ಜಿ ನೆನಪಾಗುತ್ತಾರೆ. ಹೇಗಾದರೂ ನನಗೊಂದು ಲೈನ್ ಸಿಕ್ಕಿದರೆ ಲಂಡನ್ನಿಗೆ ಕರೆ ಮಾಡಿ ನನ್ನ ಪೂರ್ಣ ವರದಿಯನ್ನು 'ಕಾಪಿ ಟೇಕರ್'ಗೆ ಓದಿಹೇಳುತ್ತಿದ್ದೆ. ಈಗ ಮಿಸೆಸ್ ಬ್ಯಾನರ್ಜಿಗಳ ಅವಶ್ಯಕತೆಯೇ ಇಲ್ಲ. ತತ್‌ಕ್ಷಣದ ಸಂಪರ್ಕ ಸಾಧ್ಯವಾಗಿದೆ. ಹೌದು. ತಂತ್ರಜ್ಞಾನ ಈಗ ಉತ್ತಮವಾಗಿದೆ. ವಾರ್ತೆಗಳೆಲ್ಲ ಬ್ರೇಕಿಂಗ್ ನ್ಯೂಸ್‌ಗಳು. ವರದಿಗಾರ ಘಟನೆ ನಡೆಯುತ್ತಿರುವ ಸ್ಥಳದಲ್ಲೇ ಸಾಕ್ಷಿಯಾಗಿ ನಿಂತು ತಕ್ಷಣವೇ ಸೆರೆಹಿಡಿದು ಎಲ್ಲವನ್ನೂ ವರದಿಮಾಡಬಲ್ಲ. ಆದರೆ ವರದಿಗಳು ಉತ್ತಮವಾಗಿವೆಯೆ? ಹೇಳಲಾಗದು. ಏನು ನಡೆಯುತ್ತಿದೆ ಎಂದು ತನಗೇ ಅರಿವಾಗುವ ಮೊದಲು ವರದಿಗಾರ 24×7 ವರದಿ ಮಾಡುತ್ತಿರಬೇಕು. ಘಟನೆ ಅವನ ಆಳಕ್ಕೆ ಇಳಿದು ವಿಶ್ಲೇಷಿಸುವ ಅಮೂಲ್ಯ ಸಮಯವನ್ನೇ ಕಿತ್ತುಕೊಳ್ಳಲಾಗಿದೆ. ತಂತ್ರಜ್ಞಾನ ಪೈಪೋಟಿಯನ್ನು ಎಷ್ಟು ಬಾಲಿಶ, ಹಾಸ್ಯಾಸ್ಪದ ಮಟ್ಟಕ್ಕಿಳಿಸಿದೆಯೆಂದರೆ ಎಷ್ಟೋ ಸಲ

ವರದಿಗಾರರು ತಮ್ಮತಮ್ಮಲ್ಲೇ ಒಬ್ಬನನ್ನು ಸಂದರ್ಶನ ಮಾಡಿ ವರದಿ ಕಳಿಸುವುದೂ ಇದೆ.

**2. 'ದ ವಾರ್ ಯು ಡೋಂಟ್ ಸೀ' ಸಾಕ್ಷ್ಯಚಿತ್ರ ನಿಮ್ಮ ಮಾಧ್ಯಮ ಮಿತ್ರರನ್ನು ಗುರಿಯಾಗಿಟ್ಟುಕೊಂಡಿದೆಯೆ? ಅಥವಾ ಯಾವುದಾದರೂ ಘಟನೆ ಇದನ್ನು ತೆಗೆಯಲು ಪ್ರೇರೇಪಣೆ ನೀಡಿತೆ?**



ಜನಸಾಮಾನ್ಯರು ಮತ್ತು ಮಾಧ್ಯಮದ ಮಿತ್ರರನ್ನು ಗಮನದಲ್ಲಿಟ್ಟುಕೊಂಡೇ ಈ ಚಿತ್ರ ತಯಾರಾಗಿದ್ದು. ನೆನಪಿಡಿ. ವಾರ್ತೆಯಲ್ಲಿ ತೋರಿಸುವಂತೆ ವಸ್ತುಸ್ಥಿತಿ ಇಲ್ಲ ಎಂದು ಜನಸಾಮಾನ್ಯರು ವರದಿಗಾರರಿಗಿಂತ ಮೊದಲೇ ಅರ್ಥಮಾಡಿಕೊಂಡಿದ್ದಾರೆ. ವರದಿಗಾರರು ತಾವು ಕೆಲಸ ಮಾಡುವ ರೀತಿ, ವರದಿ-ವಿಷಯಗಳ ಆಯ್ಕೆಯ ಮಾನದಂಡಗಳ ಬಗೆಗೆ ಮುಕ್ತವಾಗಿ ಚರ್ಚಿಸದೇ ಇರುವುದರಿಂದ ಹಿಂದೆ ಬಿದ್ದಿದ್ದಾರೆ. ಇರಾಕ್ ಆಕ್ರಮಣ ಸಮಯದ ಬರ್ಬರ ಮಾನವ ಹತ್ಯೆ ಈ ಚಿತ್ರವನ್ನು ತೆಗೆಯಲು ಪ್ರೋತ್ಸಾಹಿಸಿತು. ಹೆಂಗಸರು-ಮಕ್ಕಳೆನ್ನದೆ ಹತ್ತು ಲಕ್ಷ ಇರಾಕಿಗಳು ಅಮೆರಿಕದ ಆಕ್ರಮಣದಲ್ಲಿ ಪ್ರಾಣ ತೆತ್ತರು. ಜಾನ್ ಹಾಪ್ಕಿನ್ಸ್ ವಿಶ್ವವಿದ್ಯಾಲಯದ ಸರ್ವೇ ಬಹಿರಂಗ ಪಡಿಸಿರುವಂತೆ ರುವಾಂಡಾದ ಜನಾಂಗೀಯ ಹತ್ಯೆಗಿಂತ ಹೆಚ್ಚು ಸಾವು ಇಲ್ಲಿ ಸಂಭವಿಸಿದೆ. ಪಾಶ್ಚಿಮಾತ್ಯ ಮಾಧ್ಯಮಗಳು ಈ ವರದಿಯನ್ನು ನಿರ್ಲಕ್ಷಿಸಿ ಟೀಕೆ ಮಾಡಿದವು. ಪಶ್ಚಿಮದ ರಾಷ್ಟ್ರಗಳು ತಮ್ಮ ಜನರಿಗೆ ದೌರ್ಜನ್ಯದ ಸುಳಿವು ಸಿಗದಂತೆ ನೋಡಿಕೊಂಡವು. ಸಿಬಿಎಸ್ ವಾರ್ತಾಸಂಸ್ಥೆಯ ಆಂಕರ್ ಆಗಿದ್ದ ಡ್ಯಾನ್ ರಾದರ್ ಹೇಳುವಂತೆ ಜರ್ನಲಿಸ್ಟ್ ಸಮೂಹವು ಸರ್ಕಾರದ ಸುಳ್ಳು ಮಾಹಿತಿ ನಂಬದೆ, 'ಸಮೂಹ ನಾಶ ಶಸ್ತ್ರಾಸ್ತ್ರ'ಗಳ ಬಗೆಗೇನಾದರೂ ತನಿಖಾ ವರದಿ ಮಾಡಿದ್ದಲ್ಲಿ ಇರಾಕ್ ಆಕ್ರಮಣ ಸಾಧ್ಯವಾಗುತ್ತಿರಲಿಲ್ಲ. ಅದನ್ನು ತಡೆಗಟ್ಟ ಬಹುದಿತ್ತು. ಆದ್ದರಿಂದ ಜೀವತೆತ್ತ ಆ ಜನರ ರಕ್ತ ಜರ್ನಲಿಸ್ಟರ ಕೈಗಳಲ್ಲಿ ತುಂಬಿಕೊಂಡಿದೆ.

**3. ಮಾಧ್ಯಮದವರು ಆತ್ಮವಿಮರ್ಶೆಯ ಕುರಿತು ಅಷ್ಟೇಕೆ ಪೂರ್ವಗ್ರಹ ಹೊಂದಿದ್ದಾರೆ? ಪತ್ರಿಕೋದ್ಯಮ ತನ್ನ ನೀತಿಸಂಹಿತೆಯನ್ನು ಆತ್ಮಸಾಕ್ಷಿ ಮರೆತ ಮಾರುಕಟ್ಟೆಗೆ ಮಾರಿಕೊಂಡಿದೆಯೆ?**

ಹೌದು. ಮಾರುಕಟ್ಟೆ ಪತ್ರಿಕೋದ್ಯಮದ ಬಹುಭಾಗವನ್ನು ಕಬಳಿಸಿದೆ. ಸಂಪಾದಕರು ಬಿಸಿನೆಸ್ ಮ್ಯಾನೇಜರ್‌ಗಳಾಗಿದ್ದಾರೆ. ಎಲ್ಲಕ್ಕೂ 'ನವ ಉದಾರವಾದ'ದ ಘೋಷವಾಕ್ಯ ಬೆನ್ನ ಹಿಂದಿದೆ. ಇದು ಸರ್ಕಾರವೇ ನಡೆಸುವ ಬಿಬಿಸಿಯಂತಹ ಸಂಸ್ಥೆಗಳ ಮಟ್ಟಿಗೂ ನಿಜ. ಬಿಬಿಸಿ ವರ್ಲ್ಡ್ ನೋಡಿ. ಅದರ ಬಹುಭಾಗ ಮಾರುಕಟ್ಟೆಗೆ ಸಂಬಂಧಿಸಿದ್ದೇ ಆಗಿದೆ.

**4. ಪತ್ರಿಕೋದ್ಯಮ ಯುದ್ಧದ ಅನಾಹುತಕ್ಕೆ ಬಲಿಯಾಗಿದೆಯೆ?**

ಯುದ್ಧವೆಂಬ ಅನಾಹುತದ ಮೊದಲ ಬಲಿ ಸತ್ಯ ಅಲ್ಲ, ಪತ್ರಿಕೋದ್ಯಮ. ನೆನಪಿಡಿ, ಇರಾಕ್ ಆಕ್ರಮಿಸಿದ ನಂತರ ಅಲ್ಲಿ ಯಾವ ಸಮೂಹ ನಾಶ ಶಸ್ತ್ರಾಸ್ತ್ರವೂ ಸಿಕ್ಕಲಿಲ್ಲ.

**5. 'ಎಂಬೆಡೆಡ್ ಜರ್ನಲಿಸಂ' ( ಮಾಧ್ಯಮ ಕಣ್ಣಾಮುಚ್ಚಾಲೆ ) ಯುದ್ಧದ ವಿಷಯದಲ್ಲಿ ಮಾತ್ರ ಸಂಭವಿಸುತ್ತಿದೆಯೆ?**

ಮಾಧ್ಯಮದ ಉದ್ದಗಲ ಪೂರಾ 'ಎಂಬೆಡೆಡ್ ರಿಪೋರ್ಟಿಂಗ್'ನಲ್ಲೇ ತೊಡಗಿದೆ. ಸ್ಟುಡಿಯೋದಲ್ಲಿರುವ ಹೋಸ್ಟ್, ಸುದ್ದಿ ಆಯ್ಕೆ, ವಿಷಯದ ಆಯ್ಕೆ, ಭಾಷೆ-ಶೈಲಿ ಎಲ್ಲವೂ ಎಂಬೆಡೆಡ್ ಜರ್ನಲಿಸಂನ ಮುಖಗಳನ್ನು ಬಯಲು ಮಾಡುತ್ತವೆ.

**6. ಯಾವ ಮಾಧ್ಯಮ ಸಮೂಹ ಹೆಚ್ಚು ಅಪರಾಧಿ? ಈಗಲೂ ಮಾಧ್ಯಮ ನೀತಿ ಸಂಹಿತೆಗೆ ಬದ್ಧವಾಗಿರುವ ಸಮೂಹ ಯಾವುದು?**

ಫಾಕ್ಸ್ ನ್ಯೂಸ್‌ನಿಂದ ಬಿಬಿಸಿ ತನಕ ಎಲ್ಲರೂ ಅಪರಾಧಿ ಸ್ಥಾನದ ಪ್ರತಿಸ್ಪರ್ಧಿಗಳೇ. ಬಹಳಷ್ಟು ವರದಿಗಾರರು ಮಾಧ್ಯಮ ಸಂಸ್ಥೆಯೆಂದರೆ ಉದ್ಯೋಗದಾತರ ಒಂದು ಏಜೆನ್ಸಿ ಎಂಬ ನಿಲುವು ತಳೆದಿದ್ದಾರೆಯೇ ಹೊರತು ಅಧಿಕಾರಯುತ ಶಕ್ತಿಕೇಂದ್ರವೆಂದು ಅದನ್ನು ಪರಿಗಣಿಸಿಲ್ಲ. ಮೆಕ್ಸಿಕೋದ 'ಲಾ ಜೋರ್ನಾಡಾ' ಎಂಬ ಪತ್ರಿಕೆ ಎರಡನೇ ಅತಿ ಜನಪ್ರಿಯ ಪತ್ರಿಕೆ. ಬರೀ ಚಂದಾಹಣದಿಂದ ನಡೆಯುವಂಥದು. ತನ್ನ ಓದುಗರ ಪರವಾಗಿ ತನಿಖೆ ನಡೆಸಿ, ವಾದಿಸಿದ ಪಾಶ್ಚಿಮಾತ್ಯ ಪತ್ರಿಕೆಗಳ ಪಳೆಯುಳಿಕೆಯಂತೆ ಅದು ಉಳಿದಿದೆ. ರಿಯಲ್‌ನ್ಯೂಸ್.ಕಾಮ್ ದೊಡ್ಡ ಬಜೆಟ್ಟಿನ ಮೀಡಿಯಾ ಹೌಸ್‌ಗಳಿಗಿಂತ ಉತ್ತಮ ಸೇವೆ ನೀಡುತ್ತಿದೆ. ದಿನನಿತ್ಯದ ಸುದ್ದಿಗಾಗಿ ಇನ್‌ಫಾರ್ಮೇಷನ್ ಕ್ಲಿಯರಿಂಗ್ ಹೌಸ್, ಜೀನೆಟ್‌ಗಳು ಉತ್ತಮ ಕಾರ್ಯ ನಿರ್ವಹಿಸುತ್ತಿವೆ.

**7. ಮಾಧ್ಯಮದಲ್ಲಿರುವ ತರುಣ ಮಿತ್ರರಿಗೆ ಆಶಾಕಿರಣ ಯಾವುದು? ಶಕ್ತಿವಂತರ ಆಮಿಷದಿಂದ ಅವರು ಪಾರಾಗುವುದು ಹೇಗೆ?**

ನಿಜವಾದ ಮಾಧ್ಯಮ ವರದಿ ಮೇಲಿನಿಂದ ತಯಾರಾಗಿ ಉದುರುವುದಲ್ಲ. ಅದು ಕಠಿಣ ಕ್ಷೇತ್ರಕಾರ್ಯದಿಂದ ಬರುವಂಥದು ಎಂದು ನೆನಪಿನಲ್ಲಿಟ್ಟುಕೊಂಡು ತಮ್ಮ ಮಟ್ಟಿಗೆ ತಾವು ಸತ್ಯವಾಗಿ, ಪ್ರಾಮಾಣಿಕವಾಗಿದ್ದರೆ ನೀವು ಹೇಳುವ 'ಆಮಿಷ'ದಿಂದ ಅವರು ಪಾರಾಗಬಹುದು. ಯಾವಾಗಲೂ ನಿಮ್ಮನ್ನು ನೀವು ಸ್ವತಂತ್ರ ವ್ಯಕ್ತಿ ಎಂದು ಭಾವಿಸಿಕೊಳ್ಳಿ, ಸರ್ಕಾರ ಅಥವಾ ಮತ್ಯಾವುದೇ ಹಿತಾಸಕ್ತಿಯ ಭಾಗ ಎಂದು ಗುರುತಿಸಿಕೊಳ್ಳಬೇಡಿ. ಈ ಸ್ವಾತಂತ್ರ್ಯ ಸಿಗುವುದು ಕಷ್ಟ. ಆದರೆ ಬಹಳ ಜನ 'ಪಡೆ'ದಿದ್ದಾರೆನ್ನುವುದು ನಿಜ. ಇದನ್ನು ಮನೋಬಲದಿಂದ ದೊರಕಿಸಿಕೊಳ್ಳಬಹುದೇ ಹೊರತು ಮಾಧ್ಯಮ ಕುರಿತ ಅತಿಮೋಹದಿಂದಲ್ಲ.

*****

ಯುದ್ಧ ತಂತ್ರಜ್ಞಾನಕ್ಕಾಗಿ ಹೇರಳವಾಗಿ ದುಡ್ಡು, ಸಮಯ, ಮಾನವ ಸಂಪನ್ಮೂಲವನ್ನು ಸಂಶೋಧನೆಯ ಹೆಸರಲ್ಲಿ ಮೀಸಲಿಡುವ ಮನುಷ್ಯನಿಗೆ ತನ್ನ ಮನೆಯ ಮಲದ ಗುಂಡಿ ತಾನು ಸ್ವಚ್ಛ ಮಾಡಿಕೊಳ್ಳಬಲ್ಲ ಯಂತ್ರದ ಅವಶ್ಯಕತೆ ಹುಟ್ಟದಿರುವುದು ಆಧುನಿಕತೆ, ವಿಜ್ಞಾನ ತಂತ್ರಜ್ಞಾನದ ಅಣಕವೇ ಸರಿ!! ■


**STATEMENT ABOUT OWNERSHIP AND OTHER PARTICULARS ABOUT NEWSPAPER**

**FORM IV**

| | | | |
|---|---|---|---|
| 1. | Place of Publication | : | Bangalore |
| 2. | Periodicity of its publication | : | Monthly |
| 3. | Printer's Name | : | **S.R. Govindu** |
| | Nationality | | Indian |
| | Address | | 63,Anjananagar, Vishwaneedam Post, Bangalore - 560 091 |
| 4. | Publisher's Name | : | **S.R. Govindu** |
| | Nationality | | Indian |
| | Address | | 63,Anjananagar, Vishwaneedam Post, Bangalore - 560 091 |
| 5. | Editor's Name | : | **Indudhara Honnapura** |
| | Nationality | | Indian |
| | Address | | 402, 1st Main, 2nd Block, HBR Layout, Bangalore -560 043 |
| 6. | Name and address of individuals who own the newspaper and partners and share holders holding more than one percent of the total capital | : | Spoorthidhama, 63, Anjananagar, Vishwaneedam Post, Bangalore-560 091 (Sole proprietors) |

I, **S.R. Govindu**, hereby declare that the particulars given above are true to the best of my knowledge and belief.

Sd/-

Date: 28-02-2012 **S.R. Govindu**, Publisher

ಚಂದ್ರಭಾನ್ ಪ್ರಸಾದ್

## ದಲಿತ್ ಡೈರಿ

ಅನು: ಎಸ್. ಮರಿಸ್ವಾಮಿ

**ಸುಮಾರು ನಾಲ್ಕು ದಶಕಗಳ ಹಿಂದೆ ದಲಿತ ಐ.ಎ.ಎಸ್ ಅಧಿಕಾರಿಯೊಬ್ಬ ಜಿಲ್ಲಾಧಿಕಾರಿಯಾದ. ಅವನು ತುಂಬಾ ಖುಷಿ ಮತ್ತು ಹೆಮ್ಮೆಯಿಂದ ಕಾರಿನಲ್ಲಿ ತನ್ನ ಹಳ್ಳಿಗೆ ಹೋದ. ಹಳ್ಳಿಯ ಈ ಹುಡುಗ ಜೀವನದಲ್ಲಿ ಮಾಡಿರುವ ಸಾಧನೆಯನ್ನು ಗುರುತಿಸಿ ಸಂತೋಷ ಪಡುವ ಬದಲು ಹಳ್ಳಿಯ ಮೇಲ್ಜಾತಿಯವರು ಅವನನ್ನು ಕಾರಿನಿಂದಿಳಿಸಿ ತನ್ನ ಮನೆಗೆ ನಡೆದು ಹೋಗುವಂತೆ ಮಾಡಿದರು. ದಲಿತ ಮಹಿಳೆಯರ ಮೇಲೆ ಅತ್ಯಾಚಾರ ನಡೆಸುವುದು ಮೇಲ್ಜಾತಿಗಳ ಒಂದು ಮನರಂಜನೆಯೆ ಆಗಿತ್ತು.**

# ಮೇಲ್ಜಾತಿಗಳ ಗಣರಾಜ್ಯ!

ಅನೇಕ ಶತಮಾನಗಳ ಕಾಲ ಮೇಲ್ಜಾತಿಗಳು ನಮ್ಮ ಸಮಾಜವನ್ನು ಆಳಿದ್ದಾರೆ. ನಮ್ಮಲ್ಲಿ ಹೆಚ್ಚು ಜನರಿಗೆ ಅದಕ್ಕೆ ಕಾರಣಗಳು ತಿಳಿದಿರುವುದಿಲ್ಲ. ಯುವ ಓದುಗರು ಅದರಲ್ಲೂ 1990ರ ನಂತರ ಜನಿಸಿದ ನಗರ ಪ್ರದೇಶದ ಯುವಕರಿಗಾಗಿ ನಾನಿಲ್ಲಿ ಜಾತಿಪದ್ಧತಿಯ ತಿರುಳನ್ನು ವಿವರಿಸುತ್ತಿದ್ದೇನೆ.

ಸಂಕ್ಷಿಪ್ತವಾಗಿ ಹೇಳುವುದಾದರೆ ಪಾರಂಪರಿಕ ಜಾತಿಪದ್ಧತಿ ಎಂದರೆ ನಾಲ್ಕು ಭಾಗಗಳಾಗಿ ಸಮಾಜದ ವಿಭಜನೆ–ನಾಲ್ಕು ವರ್ಣಗಳು ಅಥವಾ ನಾಲ್ಕು ವರ್ಗದ ಜನರು–ತುದಿಯಲ್ಲಿ ಬ್ರಾಹ್ಮಣರು ನಂತರ ಕ್ಷತ್ರಿಯರು, ಅವರ ಹಿಂದೆ ವೈಶ್ಯರು ಮತ್ತು ಕೊನೆಯದಾಗಿ ಶೂದ್ರರು. ಇದರಲ್ಲಿ ಮೊದಲನೆಯ ಮೂವರನ್ನು ದ್ವಿಜರು ಎಂದರೆ ಎರಡು ಬಾರಿ ಹುಟ್ಟಿದವರು ಎಂದು ಕರೆಯಲಾಗಿದೆ. ಅವರಿಗೆ ಪವಿತ್ರ ಜನಿವಾರ ಧರಿಸುವ ಹಕ್ಕಿದೆ.

ಪಾರಂಪರಿಕವಾಗಿ, ಬ್ರಾಹ್ಮಣನು, ಕ್ಷತ್ರಿಯರು ಮತ್ತು ಇತರರನ್ನೊಳಗೊಂಡಂತೆ ದೇವರು ಮತ್ತು ಇತರರ ಮಧ್ಯೆ ಮಧ್ಯಸ್ತಿಕೆವಹಿಸುವವನು. ಯಾವುದೇ ಕ್ಷತ್ರಿಯ ರಾಜನಾಗಬೇಕಾಗಿದ್ದಲ್ಲಿ ಅವನ ಹಕ್ಕನ್ನು ಕಾನೂನು ಬದ್ಧಗೊಳಿಸಿ ಅವನನ್ನು ಆ ಸ್ಥಾನಕ್ಕೆ ಅರ್ಹನನ್ನಾಗಿ ಮಾಡಬೇಕಾದರೆ ಬ್ರಾಹ್ಮಣನು ಸಮ್ಮತಿಸಲೇಬೇಕು. ಇದನ್ನು ಅವನು ಕಿರೀಟಧಾರಣಾ ಸಂದರ್ಭದಲ್ಲಿ ಪೌರೋಹಿತ್ಯ ವಹಿಸುವ ಮೂಲಕ ಮಾಡುತ್ತಾನೆ. ಬ್ರಾಹ್ಮಣ ಎಲ್ಲ ಸಾಂಪ್ರದಾಯಿಕ ಆಚರಣೆಗಳು ಅಂದರೆ ಹುಟ್ಟು, ಮದುವೆ, ಸಾವು ಮುಂತಾದವುಗಳ ಸಂಬಂಧದ ಆಚರಣೆಗಳನ್ನು ನಿರ್ವಹಿಸುತ್ತಾನೆ.

ಕ್ಷತ್ರಿಯ ಆಡಳಿತದ ಮುಖ್ಯಸ್ಥ. ಸಮಾಜದ ಆಡಳಿತ ನಿರ್ವಹಣೆ, ಹೊರಗಿನ ಆಕ್ರಮಣಗಳಿಂದ ಮತ್ತು ಒಳಗೇ ಉಂಟಾಗಬಹುದಾದ ಕಲಹಗಳಿಂದ ಪ್ರಜೆಗಳನ್ನು ರಕ್ಷಿಸುವುದು ಅವನ ಹೊಣೆ. ಹಿಂಸೆ ಮತ್ತು ಅತ್ಯಂತ ಕ್ರೂರ ದಬ್ಬಾಳಿಕೆ ಕ್ಷತ್ರಿಯರ ಜೊತೆ ಗಂಟು ಹಾಕಿಕೊಂಡುಬಿಟ್ಟಿದೆ.

ವೈಶ್ಯರು ವ್ಯಾಪಾರಿಗಳು ಮತ್ತು ವಾಣಿಜ್ಯೋದ್ಯಮಿಗಳಾಗಿ ಕಾಣಿಸಿಕೊಳ್ಳುತ್ತಾರೆ. ಅವರು ವಾಣಿಜ್ಯ, ವ್ಯಾಪಾರ ಮತ್ತು ಉತ್ಪಾದನೆ ಮೇಲೆ ಸಂಪೂರ್ಣ ಒಡೆತನ ಹೊಂದಿರುವುದರಿಂದ ರಾಜ್ಯಕ್ಕೆ ಬೇಕಾದ ಹಣಕಾಸನ್ನು ಒದಗಿಸುವ ಜವಾಬ್ದಾರಿಯನ್ನು ಹೊತ್ತಿರುತ್ತಾರೆ.

ಸಾಂಪ್ರದಾಯಿಕವಾಗಿ ಬ್ರಾಹ್ಮಣರು, ಕ್ಷತ್ರಿಯರು ಮತ್ತು ವೈಶ್ಯರು ಸಮಾಜದ ಎಲ್ಲದರ ಅಂದರೆ ಅರ್ಥವ್ಯವಸ್ಥೆ, ರಾಜಕೀಯ ಮತ್ತು ಸಂಸ್ಕೃತಿ ಮುಂತಾದುವೆಲ್ಲದರ ಮೇಲೂ ಹಿಡಿತ ಹೊಂದಿದ್ದರು. ಕೈಯಿಂದ ಕೆಲಸ ಮಾಡುವುದು ಅವರಿಗೆ ನಿಶಿದ್ಧವಾಗಿತ್ತು.

ಶೂದ್ರರು ನಾಲ್ಕನೆಯ ವರ್ಣವಾಗಿ ನಂತರ ಬರುತ್ತಾರೆ. ಇಂದು ಇತರೆ ಹಿಂದುಳಿದ ಜನಾಂಗಗಳೆಂದು ಹೇಳುವ ಗುಂಪಿನೊಳಗೆ ಹೆಚ್ಚು ಕಡಿಮೆ ಸೇರುವ ಅವರು ಅನೇಕ ಕೆಲಸಗಳನ್ನು ನಿರ್ವಹಿಸಬೇಕಿತ್ತು. ಇಡೀ ಸಮಾಜಕ್ಕೆ ಬೇಕಾದ ದವಸ ಧಾನ್ಯ ಬೆಳೆಯುವುದು ಮತ್ತು ಕುಶಲಕರ್ಮಿಗಳಾಗಿ ಎಲ್ಲರಿಗೂ ಬೇಕಾದ ಸಾಮಾನು ಸರಂಜಾಮುನ್ನು ಒದಗಿಸುವುದು ಅವರ ಮುಖ್ಯ ಕೆಲಸವಾಗಿತ್ತು.

ಶೂದ್ರರನ್ನು ಮೂರು ಪಂಗಡಗಳಾಗಿ ವಿಭಾಗಿಸಬಹುದು. ಉತ್ತರ ಭಾರತದ ಜಾತರು, ಪಶ್ಚಿಮ ಭಾರತದ ಪಟೇಲರು ಮತ್ತು ಮರಾಠರು, ಆಂಧ್ರದ ಕಮ್ಮ ಮತ್ತು ರೆಡ್ಡಿಗಳು ಮತ್ತು ಕೇರಳದ ನಾಯರ್‌ಗಳನ್ನು ಈ ಸಂಬಂಧದಲ್ಲಿ ಹೆಸರಿಸಬಹುದು. ಇವರು ಶೂದ್ರರಾದರೂ ಇತರೆ ಹಿಂದುಳಿದ ವರ್ಗಗಳ (ಓಬಿಸಿ) ಗುಂಪಿಗೆ ಸೇರಿದವರಲ್ಲ.

ನಿಜವಾದ ಓಬಿಸಿಗಳಾದ ಉತ್ತರದ ಯಾದವರು, ಕುರ್ಮಿಗಳು, ಮತ್ತು ಸೈನಿಗಳು ನಂತರ ಬರುತ್ತಾರೆ. ಕುಶಲಕರ್ಮಿ ಓಬಿಸಿಗಳಾದ ಕಮ್ಮಾರರು, ಚಿನ್ನದ ಕೆಲಸ ಮಾಡುವವರು, ಬಡಗಿಗಳು ಮುಂತಾದವರು ಕೊನೆಯವರು.

ಈ ನಾಲ್ಕು ವರ್ಣಗಳ ಹೊರಗೆ ಇರುವವರು ದಲಿತರು (ಅಸ್ಪೃಶ್ಯರು) ಮತ್ತು ಆದಿವಾಸಿಗಳು. ಹಲವು ವೇಳೆ ದಲಿತರನ್ನು ಅತಿ ಶೂದ್ರರು ಅಥವಾ ಪಂಚಮರು (ಐದನೆ ವರ್ಣದವರು) ಎಂದೂ ಕರೆಯುತ್ತಾರೆ.

ಜನಾಂಗೀಯವಾಗಿ ಬುಡಕಟ್ಟು ಪಂಗಡಗಳು ಪ್ರತ್ಯೇಕವಾಗಿವೆ. ಆದರೆ ದಲಿತರು ಭಾರತದ ಎಲ್ಲ ಹಳ್ಳಿಗಳ ಭಾಗ. ದಲಿತರಿಲ್ಲದ ಹಳ್ಳಿ ಅಪರೂಪವೇ. ದಲಿತರಿಗೆ ವಹಿಸಿರುವ ಕಸುಬುಗಳನ್ನು ಕೊಳಕಾದುವು ಮತ್ತು ಮೈಲಿಗೆ ಉಂಟುಮಾಡುವಂತವು ಎಂದು ಪರಿಗಣಿಸಲಾಗಿದೆ.

ಜಾತಿಪದ್ಧತಿಯ ಪ್ರಕಾರ ಮನುಷ್ಯನ ಸಾಮಾಜಿಕ ಸ್ಥಾನ ಅವನ ಹುಟ್ಟಿನಿಂದಲೇ ನಿರ್ಧರಿಸಲ್ಪಟ್ಟಿರುತ್ತದೆ. ಎಲ್ಲಾ ಜಾತಿಗಳೂ ಮೊದಲೆ ನಿರ್ಧಾರಿತ ಮತ್ತು ಬದಲಾವಣೆ ಸಾಧ್ಯವಾಗದ ಕಸುಬುಗಳನ್ನು ಹೊಂದಿರುತ್ತವೆ. ಇಂತದ್ದೇ ಜಾತಿ ನಿರ್ವಹಿಸಬೇಕೆಂದು ನಿರ್ಧರಿಸದ ಯಾವುದೇ ಕಸುಬಿಲ್ಲ.

ಜಾತಿ ಪದ್ಧತಿ ಬಹಳ ಕಾಲದಿಂದ ಬದಲಾವಣೆ ಹೊಂದುತ್ತಲೇ ಇದೆ. ಬ್ರಿಟಿಷರು ಭಾರತಕ್ಕೆ ಬಂದಂದಿನಿಂದ ಅದು ನಿಶ್ಚಿತವಾಗಿ ಬದಲಾಗುತ್ತಿದೆ. ಮೇಲ್ಜಾತಿಗಳ ಅಮಾನವೀಯತೆಯನ್ನೊಮ್ಮೆ ದಯಮಾಡಿ ಗಮನಿಸಿ.

1854ರಲ್ಲಿ ಲಾರ್ಡ್ ಮೆಕಾಲೆಯ ಶಿಕ್ಷಣ ಯೋಜನೆ ಜಾರಿಗೆ ಬಂದಂದಿನಿಂದ ಸಾರ್ವಜನಿಕ (ಸರ್ಕಾರಿ) ಭೂಮಿಯ ಮೇಲೆ ಸ್ಕೂಲ್‌ಗಳನ್ನು ಕಟ್ಟಿಸಲು

ಮೊದಲಾಯಿತು. ಮತ್ತು ಸರ್ಕಾರವೆ ಇವುಗಳನ್ನು ನಡೆಸಲು ಪ್ರಾರಂಭಿಸಿತು. ಇದಕ್ಕೆ ಮೊದಲು ಸ್ಕೂಲುಗಳು, ದೇವಸ್ಥಾನಗಳು, ಮಸೀದಿಗಳು ಅಥವಾ ಪಂಡಿತರು ಮತ್ತು ಮೌಲಾನಾಗಳ ಮನೆಗಳಲ್ಲಿ ನಡೆಸಲಾಗುತ್ತಿತ್ತು. ದಲಿತರು ಅವುಗಳಿಗೆ ಪ್ರವೇಶಿಸುವುದು ಸಾಧ್ಯವೆ ಇರಲಿಲ್ಲ. ಲಾರ್ಡ್ ಮೆಕಾಲೆಯವರ ಯೋಜನೆ ತಂದ ಬದಲಾವಣೆಯ ವಾಸನೆ ಹಿಡಿದ ದಲಿತರಲ್ಲಿ ಕೆಲವರು ಆ ಸ್ಕೂಲುಗಳ ಒಳಗೆ ಪ್ರವೇಶಿಸಲು ಪ್ರಯತ್ನಿಸಿದರು.

19ನೇ ಶತಮಾನದ ಮೇಲ್ಜಾತಿಗಳ ಪ್ರತಿಕ್ರಿಯೆ ಇಂದಿನ ಟಿ.ವಿ ಮಾಧ್ಯಮವರಂತೆಯೇ ಇತ್ತು. ಶಾಲೆಗೆ ತಮ್ಮ ಮಕ್ಕಳನ್ನು ಕಳುಹಿಸಿದ ದಲಿತ ತಂದೆ–ತಾಯಿಗಳ ಮೇಲೆ ಹಲ್ಲೆ ಮಾಡಲಾಯಿತು. ದಲಿತ ಮಕ್ಕಳು ಮತ್ತು ತಂದೆ–ತಾಯಿಗಳನ್ನು ರಕ್ಷಿಸಲು ಬ್ರಿಟಿಷ್ ಸರ್ಕಾರ ಪೊಲೀಸ್ ಪಡೆಯನ್ನು ನೇಮಿಸಿದಾಗ ಮೇಲ್ಜಾತಿಗಳು ಶಾಲಾ ಕಟ್ಟಡಗಳ ಮೇಲೆಯೇ ಆಕ್ರಮಣ ನಡೆಸಿದರು. ಒಮ್ಮೊಮ್ಮೆ ಮೇಲ್ಜಾತಿಗಳು ಶಾಲೆಯನ್ನು ಮುಚ್ಚುವಂತೆ ಒತ್ತಡವನ್ನೂ ಹೇರಿದರು. ಪರಿಣಾಮವಾಗಿ ಅವರು ತಮ್ಮ ಸ್ವಂತ ಮಕ್ಕಳನ್ನೂ ಶಿಕ್ಷಣದಿಂದ ವಂಚಿತರಾಗಿಸಲೂ ಹಿಂಜರಿಯಲಿಲ್ಲ. ಹೀಗೆ ಅಸಮಾನತೆಯನ್ನು ಉಳಿಸಲು ಒಂದು ಜನವರ್ಗ ತಮ್ಮ ಸ್ವಂತ ಮಕ್ಕಳನ್ನೂ ಮೌಢ್ಯದಲ್ಲಿರಿಸಬಯಸುತ್ತದೆ. ಎಂಬುದು ಒಂದು ಅತ್ಯಪರೂಪದ ಅಮಾನವೀಯತೆ.

ಗ್ರಾಮ ಪ್ರದೇಶಗಳಲ್ಲಿ ಕೊಡೆ ಹಿಡಿದು ನಡೆದು ಹೋಗುವಂತ ದಲಿತ ಮೇಲ್ಜಾತಿಯವರ ಬೀದಿಗಳನ್ನು ದಾಟುವಾಗ ಕೊಡೆಯನ್ನು ಮುಚ್ಚಿ ಮುನ್ನಡೆಯಬೇಕಿತ್ತು. ಸೈಕಲ್ ಸವಾರಿ ಮಾಡುವ ದಲಿತ ಮೇಲ್ಜಾತಿ ಬೀದಿಗಳಲ್ಲಿ ಸೈಕಲ್‌ನಿಂದ ಇಳಿದು ಸೈಕಲ್ ತಳ್ಳುತ್ತಾ ನಡೆದು ಹೋಗಬೇಕಿತ್ತು. ಅಚ್ಚುಕಟ್ಟಾಗಿ ಬಟ್ಟೆ ಧರಿಸಿದ ದಲಿತನನ್ನು ಹಿಡಿದು ಚಚ್ಚಿದುದೂ ಇದೆ. ಇದು ಮೇಲ್ಜಾತಿಗಳ ಸಾಂಪ್ರದಾಯಿಕ ನಡೆ. ರಾಜಸ್ಥಾನದ ಜೈಪುರ್ ಜಿಲ್ಲೆಯಲ್ಲಿ ತುಪ್ಪ ತಿಂದದ್ದಕ್ಕಾಗಿ ದಲಿತರ ಮೇಲೆ ಹಲ್ಲೆ ನಡೆಸಲಾಗಿತ್ತು.

ಸುಮಾರು ನಾಲ್ಕು ದಶಕಗಳ ಹಿಂದೆ ದಲಿತ ಐ.ಎ.ಎಸ್ ಅಧಿಕಾರಿಯೊಬ್ಬ ಜಿಲ್ಲಾಧಿಕಾರಿಯಾದ. ಅವನು ತುಂಬಾ ಖುಷಿ ಮತ್ತು ಹೆಮ್ಮೆಯಿಂದ ಕಾರಿನಲ್ಲಿ ತನ್ನ ಹಳ್ಳಿಗೆ ಹೋದ. ಹಳ್ಳಿಯ ಈ ಹುಡುಗ ಜೀವನದಲ್ಲಿ ಮಾಡಿರುವ ಸಾಧನೆಯನ್ನು ಗುರುತಿಸಿ ಸಂತೋಷ ಪಡುವ ಬದಲು ಹಳ್ಳಿಯ ಮೇಲ್ಜಾತಿಯವರು ಅವನನ್ನು ಕಾರಿನಿಂದಿಳಿಸಿ ತನ್ನ ಮನೆಗೆ ನಡೆದು ಹೋಗುವಂತೆ ಮಾಡಿದರು. ದಲಿತ ಮಹಿಳೆಯರ ಮೇಲೆ ಅತ್ಯಾಚಾರ ನಡೆಸುವುದು ಮೇಲ್ಜಾತಿಗಳ ಒಂದು ಮನರಂಜನೆಯೆ ಆಗಿತ್ತು.

ಇಂತಹ ಅಪರಾಧಿ ಚರಿತ್ರೆಯುಳ್ಳ ಮೇಲ್ಜಾತಿಗಳು ಇದ್ದಕ್ಕಿದಂತೆಯೇ ಅಥವಾ ಕೇವಲ ದಶಕಗಳಲ್ಲಿ ಸಭ್ಯ ನಾಗರೀಕರಾಗಿ ಬಿಡುತ್ತಾರೆ ಎಂದು ಬಯಸುವುದು ಸಹಜವಲ್ಲ. ಆದರೆ ಬದಲಾವಣೆಯ ಸೂಚನೆ ನೀಡಲು ಮೇಲ್ಜಾತಿಗಳು ಎಷ್ಟು ಸಮಯ ತೆಗೆದುಕೊಳ್ಳುತ್ತಾರೆ?

ಹೌದು, ಮೇಲ್ಜಾತಿಗಳು ಪ್ರಜಾತಂತ್ರದಿಂದ ನಷ್ಟಕ್ಕೊಳಗಾದವರು. ಮೊದಲು ಅವರು ಆರ್ಥಿಕ ವ್ಯವಸ್ಥೆ, ರಾಜಕೀಯ, ಎಲ್ಲಾ ಸಂಸ್ಥೆಗಳು ಮತ್ತು ಜನರ ಮೇಲೆ ಹಿಡಿತ ಸಾಧಿಸಿದ್ದಲ್ಲದೆ, ಜನ ಸಮೂಹದ ಘನತೆಯ ಮೇಲೂ ಹಿಡಿತ ಹೊಂದಿದ್ದರು.

ಇಂದು ರಾಜಕೀಯ, ಅರ್ಥ ವ್ಯವಸ್ಥೆ, ಸರ್ಕಾರಿ ಕೆಲಸಗಳು, ವ್ಯಾಪಾರ ವಹಿವಾಟು, ಶಿಕ್ಷಣ, ಸಾಹಿತ್ಯ ಮುಂತಾದವು ಮೊದಲಿಗಿಂತಲೂ ಹೆಚ್ಚು ವೈವಿಧ್ಯವಾಗಿದೆ. ರಾಷ್ಟ್ರ ಜೀವನದ ಈ ಎಲ್ಲಾ ವಿಭಾಗಗಳೂ ಅದೆಷ್ಟೇ ಕಡಿಮೆ ಆದರೂ ದಲಿತರು ಮತ್ತು ಆದಿವಾಸಿಗಳನ್ನೊಳಗೊಂಡಂತೆ ಅನೇಕ ವರ್ಣ ಮತ್ತು ಜಾತಿಗಳ ಪ್ರತಿನಿಧಿಗಳನ್ನು ಹೊಂದಿವೆ.

ಮೇಲ್ಜಾತಿಗಳು ಹತ್ತನೇ ಶತಮಾನದಲ್ಲಿದ್ದಂತಹ ಗಟ್ಟಿ ಹಿಡಿತವನ್ನೊಂದಿರುವ ಒಂದೇ ವಿಭಾಗ ಎಂದರೆ ಮಾಧ್ಯಮ–ಅದರಲ್ಲೂ ಟಿ.ವಿ ಮಾಧ್ಯಮ. ಈ ಮೇಲ್ಜಾತಿ, ಮೇಲ್ವರ್ಗ ಯಾವುದೇ ಹಳ್ಳಿಯ ಮುಖ್ಯಸ್ಥರಲ್ಲ.

ಮಾಧ್ಯಮದ ಗಣ್ಯವರ್ಗ ಅಥವಾ ಮೇಲ್ವರ್ಗ ಹೇಗೆ ಮಾಧ್ಯಮವನ್ನು ನಡೆಸಿಕೊಳ್ಳುತ್ತದೆ ಎಂಬುದನ್ನು ನೋಡಿ. ಈ ಮೇಲ್ಜಾತಿಗಳ ಸ್ವಂತ ಗಣರಾಜ್ಯ–ಮೇಲ್ಜಾತಿ ಪ್ರಶ್ನಾತೀತ ಗಣರಾಜ್ಯ ರಾಷ್ಟ್ರ ಜೀವನದ ಹೆಚ್ಚು ಸಾಮಾಜಿಕವಾಗಿಯೂ, ವೈವಿಧ್ಯಮಯವಾಗಿಯೂ ಮತ್ತು ಪ್ರಜಾತಾಂತ್ರಿಕವಾಗಿಯೂ ಇರುವ ಎಲ್ಲಾ ಭಾಗಗಳನ್ನೂ ಬೇಕೆಂದ ಹಾಗೆ ತೆಗಳಬಹುದು. ಟಿ.ವಿ ಮಾಧ್ಯಮ ನಮ್ಮ ಸಂಸತ್ತಿಗೆ ಪ್ರತಿ ಸಂಸತ್ತಾಗಿ ತನ್ನ ಸ್ಥಾನವನ್ನು ಗುರುತಿಸಿಕೊಂಡುಬಿಟ್ಟಿದೆ.

ಭಾರತವನ್ನು ಮತ್ತೊಮ್ಮೆ ಅವರ ಕೈಗಳಿಗೆ ನೀಡುವುದಾದರೆ ಮೇಲ್ಜಾತಿಗಳು ಎಂತಹ ರಾಷ್ಟ್ರವನ್ನು ಕಟ್ಟಬಲ್ಲರು? ಅವರೆಷ್ಟು ದುರಹಂಕಾರಿಗಳು, ಪಕ್ಷಪಾತಿಗಳು ಮತ್ತು ಜಾತಿವಾದಿಗಳು ಎಂಬುದಕ್ಕೆ ನಾನು ಹೆಚ್ಚು ಸಾಕ್ಷ್ಯವನ್ನು ನೀಡಬೇಕೆ? ಪ್ರಜಾತಂತ್ರದ ವಿರುದ್ಧವಾಗಿ ಮಾಜಿ ಟ್ರಕ್ ಡ್ರೈವರ್‌ಗಳು ನಡೆಸಿದ ಚಳವಳಿಯಲ್ಲಿ ಈ ಬಗ್ಗೆ ಎರಡನೆ ಅಭಿಪ್ರಾಯ ಇರಲಿಲ್ಲವೆ? ಮೇಲ್ಜಾತಿಗಳು ಯಾವಾಗ ಪ್ರಜಾಸತ್ತಾತ್ಮಕ ಆಡಳಿತಕ್ಕೆ ಹೊಂದಿಕೊಳ್ಳುತ್ತಾರೆ!

* * *

**ಸರ್ಕಾರದ ದಲಿತಪರ ನಿಲುವುಗಳಿಗೆ ವಯಸ್ಸಾಗಿದೆ. ಅವು ತೆವಳುತ್ತಿವೆ. ಸರ್ಕಾರದ ಅಭಿಪ್ರಾಯದಲ್ಲಿ ದಲಿತರು ಹಸಿವಿನೊಡನೆಯ ಹೋರಾಟದಲ್ಲಿ ಮುಳುಗಿ ಹೋಗಿದ್ದಾರೆ. ಸರ್ಕಾರದ ದೃಷ್ಟಿಯಲ್ಲಿ ದಲಿತರಿಗೆ ಅನ್ನ ಬಟ್ಟೆ ನೀಡಿ ಅವರನ್ನು ಬಡತನದಿಂದ ಹೊರತರುವುದು ಆದ್ಯತೆ. ನಿಜವಾಗಿಯೂ ಬೆಂಬಲವಿಲ್ಲದೆ ಅವರು ನಡೆಯ ಲಾರರು.**

DICCI
Developing Business Leadership

ನಿಜವಾಗಿ ದಲಿತರ ಹಕ್ಕುಗಳ ಪರವಾಗಿರುವ ಅನೇಕ ಸಂಸ್ಥೆಗಳು ಮತ್ತು ವ್ಯಕ್ತಿಗಳು ನಮ್ಮ ಮಧ್ಯೆ ಇದ್ದಾರೆ. ಸಹಜವಾಗಿಯೆ ಅದರರ್ಥ ದಲಿತಪರ ವಾಗಿರುವವರಾಗಲಿ ಅವರ ಸಂಸ್ಥೆಗಳಾಗಲಿ ದಲಿತರಲ್ಲ ಎಂದಾಯಿತು.

ಭಾರತ ಸರ್ಕಾರ ದಲಿತರ ಪರವಾಗಿದೆ. ದಲಿತರು ತಮ್ಮ ರಕ್ಷಣೆಗೆ ಮೊರೆಹೋಗಬಹುದಾದ ಸಂಸ್ಥೆ ಸರ್ಕಾರ ಒಂದೇ. ಹೀಗೆ ರಕ್ಷಣೆ ನೀಡಲು ಅದರ ಮೇಲೆ ಸದಾ ನಾಗರೀಕ ಸಮಾಜದ ಒತ್ತಡವಿರುತ್ತದೆ. ಅನೇಕ ವೇಳೆ ದಲಿತರಿಗೆ ರಕ್ಷಣೆ ನೀಡಿ ಅವರ ಶ್ರೇಯೋಭಿವೃದ್ಧಿಗೆ ಶ್ರಮಿಸುವುದರಲ್ಲಿ ಇತರ ದಲಿತರಿಗಿಂತ ಸರ್ಕಾರಿ ಸಂಸ್ಥೆಗಳೆ ಹೆಚ್ಚು ಪರಿಣಾಮಕಾರಿಯಾಗಿರುತ್ತವೆ.

ರಾಷ್ಟ್ರದ ರಾಜಧಾನಿಯಲ್ಲಿ ತನ್ನ ಮದುವೆಯ ವೇಳೆ ಕುದುರೆ ಮೇಲೆ ಹೋಗಬೇಕೆಂದಿರುವ ದಲಿತ ವರ ರಕ್ಷಣೆಗಾಗಿ ಪೊಲೀಸ್ ಠಾಣೆಗೆ ಹೋಗುತ್ತಾನೆ. ನನ್ನ ಶಾಲಾ ದಿನಗಳಲ್ಲಿ ನನಗೆ ನೆನಪಿರುವಂತೆ ಡಾ॥ ಅಂಬೇಡ್ಕರ್‌ರವರ ಜಯಂತಿಯ ಆಚರಣೆಗೆ ತಯಾರಿ ಪೊಲೀಸರನ್ನು ರಕ್ಷಣೆ ಕೇಳುವುದರಿಂದಲೇ ಪ್ರಾರಂಭವಾಗುತ್ತದೆ.

ದಲಿತರ ಕಲ್ಪನೆಯಲ್ಲಿ ಭಾರತ ಸರ್ಕಾರ ದೇವರಿಗಿಂತೇನು ಕಡಿಮೆಯಿಲ್ಲ. ಎಷ್ಟೇ ಆದರೂ ಶಿಕ್ಷಣದಲ್ಲಿ, ಸರ್ಕಾರಿ ಕೆಲಸಗಳಲ್ಲಿ, ವಿಧಾನ ಮಂಡಲದ ಸ್ಥಾನಗಳಲ್ಲಿ ತನ್ನ ಕಾರ್ಯಯೋಜನೆಯ ಮೂಲಕ ದಲಿತ ಸಮುದಾಯದ ಪ್ರತಿಷ್ಠೆಯನ್ನು ಹೆಚ್ಚು ಮಾಡಿ ದಲಿತ ಮಧ್ಯಮ ವರ್ಗದ ಹುಟ್ಟಿಗೆ ಬೀಜ ಹಾಕಿದ್ದು ಸರ್ಕಾರ ತಾನೇ?

# ದಲಿತರು ದಲಿತಪರರರಿಗಿಂತ ಹೇಗೆ ಭಿನ್ನವಾಗಿದ್ದಾರೆ

ಅಂಬೇಡ್ಕರ್‌ರ ಸೃಷ್ಟಿಯಾದ ದೇಶದ ಕಾನೂನು ಪುಸ್ತಕ ದಲಿತರನ್ನು ಬಿಡುಗಡೆಗೊಳಿಸಿ ಭಾರತದಲ್ಲಿ ಸಭ್ಯತೆಯನ್ನು ಪರಿಚಯಿಸುತ್ತದೆ.

ಆದರೂ ದೇಶ ಸಮಯದ ವೇಗಕ್ಕೆ ಸರಿಯಾಗಿ ನಡೆಯಲಿಲ್ಲ. ಸರ್ಕಾರದ ದಲಿತಪರ ನಿಲುವುಗಳಿಗೆ ವಯಸ್ಸಾಗಿದೆ. ಅವು ತೆವಳುತ್ತಿವೆ. ಸರ್ಕಾರದ ಅಭಿಪ್ರಾಯದಲ್ಲಿ ದಲಿತರು ಹಸಿವಿನೊಡನೆಯ ಹೋರಾಟದಲ್ಲಿ ಮುಳುಗಿ ಹೋಗಿದ್ದಾರೆ. ಸರ್ಕಾರದ ದೃಷ್ಟಿಯಲ್ಲಿ ದಲಿತರಿಗೆ ಅನ್ನ ಬಟ್ಟೆ ನೀಡಿ ಅವರನ್ನು ಬಡತನದಿಂದ ಹೊರತರುವುದು ಆದ್ಯತೆ. ನಿಜವಾಗಿಯೂ ಬೆಂಬಲವಿಲ್ಲದೆ ಅವರು ನಡೆಯಲಾರರು. ತಮ್ಮ ಬದುಕಿಗೆ ಇತರರನ್ನೆ ಅವಲಂಭಿಸಿರುವ ಈ ಸಮೂಹಕ್ಕೆ ವಿಶೇಷ ಗಮನ ನೀಡುವ ಅವಶ್ಯಕತೆಯಿದೆ.

ಸರ್ಕಾರ ಬಿ.ಪಿ.ಎಲ್ ಕಾರ್ಡುಗಳು, ಮಧ್ಯಾಹ್ನದ ಊಟದ ಯೋಜನೆ ಮತ್ತು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಮುಂತಾದವುಗಳ ಮೂಲಕ ತನ್ನ ದಲಿತಪರ ಕಾಳಜಿಗಳಿಗೆ ಜೀವ ನೀಡುತ್ತದೆ.

ಕುಂಟುತ್ತಾ ಸರ್ಕಾರ ಮತ್ತೊಂದು ಹೆಜ್ಜೆ ಮುಂದೆ ಹಾಕುತ್ತದೆ. ಅದು ದಲಿತರಲ್ಲಿ ಉದ್ಯಮಶೀಲತೆಯನ್ನು ಹುಟ್ಟುಹಾಕಿ ಆ ಮೂಲಕ ಅವರನ್ನು ಸಶಕ್ತರಾಗಿ ಮಾಡುವ ಮಾತನ್ನಾಡುತ್ತದೆ. ಆ ದಿಸೆಯಲ್ಲಿ ಅದು ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮ (ಎನ್.ಎಸ್.ಎಫ್.ಡಿ.ಸಿ)ವನ್ನು ಸ್ಥಾಪಿಸುತ್ತದೆ.

ಪ್ರಪಂಚದೆಲ್ಲಾ ಕಡೆ ಉದ್ಯಮಶೀಲತೆಯ ಅಭಿವೃದ್ಧಿ ಎಂದರೆ ಮುಂದಿನ ಉದ್ಯಮಿಗಳನ್ನು ಬಡತನದಿಂದ ಹೊರತರುವುದು ಎಂಬ ಅರ್ಥವಲ್ಲ. ಉದ್ಯಮ ಶೀಲತೆಯ ಅಭಿವೃದ್ಧಿ ಕಾರ್ಯಕ್ರಮಗಳು ಉದ್ಯಮಿಗಳಾಗ ಬಯಸುವ ವ್ಯಕ್ತಿಗಳಿಗೆ ಹಣ ಮಾಡುವವರು ಮತ್ತು ಕೆಲಸ ನೀಡುವವರು ಆಗುವ ದಿಸೆಯಲ್ಲಿ ತಮ್ಮ ಪ್ರತಿಭೆಯನ್ನು ಹುಡುಕಿಕೊಳ್ಳುವುದಕ್ಕೆ ಅವಕಾಶ ನೀಡುವ ಗುರಿಯನ್ನು ಹೊಂದಿರುತ್ತವೆ.

ಆದರೆ ಭಾರತದ ಉದ್ಯಮಶೀಲತೆಯ ಅಭಿವೃದ್ಧಿ ಕಾರ್ಯಕ್ರಮಗಳು ಮುಂದಿನ ದಲಿತ ಉದ್ಯಮಿಗಳಲ್ಲಿ ಬಡತನವನ್ನು ಹೋಗಲಾಡಿಸುವ ಗುರಿಯನ್ನು ಹೊಂದಿವೆ. ದಲಿತರು ಮತ್ತು ಉದ್ಯಮಶೀಲತೆಯ ಬಗ್ಗೆ ಕೇಂದ್ರ ಸರ್ಕಾರಿ ಸಾಮ್ಯದ ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಮತ್ತು ಅಭಿವೃದ್ಧಿ ನಿಗಮದ (ಎನ್.ಎಸ್.ಎಫ್.ಡಿ.ಸಿ) ಚಿಂತನೆಯೇನು ಎಂಬುದನ್ನು ಸ್ವಲ್ಪ ನೋಡಿ.

ದಲಿತರ ಬಗ್ಗೆ ಎನ್.ಎಸ್.ಎಫ್.ಡಿ.ಸಿಯ ದೃಷ್ಟಿಕೋನ – ಉದ್ಯಮಶೀಲತೆಯ ಮೂಲಕ ಬಡತನ ನಿವಾರಣೆ ದಲಿತರ ಬಗ್ಗೆ ಎನ್.ಎಸ್.ಎಫ್.ಡಿ.ಸಿಯ ಆದೇಶ – ಬಡತನ ರೇಖೆಯ ಕೆಳಗೆ ವಾಸಿಸುವಂತ ನಿರುದ್ಯೋಗಿ ಪರಿಶಿಷ್ಟ ಜಾತಿ ವ್ಯಕ್ತಿಗಳಿಗೆ ಸ್ವ–ಉದ್ಯೋಗ ಯೋಜನೆಗಳನ್ನು ಸ್ಥಾಪಿಸಲು ರಿಯಾಯಿತಿ ದರದಲ್ಲಿ ಹಣಕಾಸಿನ ಸಹಾಯ ನೀಡುವುದು ಮತ್ತು ಕಸುಬು ಸಂಬಂಧಿಸಿದ ತರಬೇತಿ ಹೊಂದಲು ಅನುದಾನವನ್ನು ನೀಡುವುದು.

ಇಂತಹ ದಲಿತ ಫಲಾನುಭವಿಗಳಿಗೆ ಎನ್.ಎಸ್.ಎಫ್.ಡಿ.ಸಿ ರೂಪಿಸಿರುವ ಅರ್ಹತೆ–ಫಲಾನುಭವಿಗಳ ವಾರ್ಷಿಕ ಕೌಟುಂಬಿಕ ಆದಾಯ ಬಡತನ ರೇಖೆಯ ಆದಾಯದ ಎರಡರಷ್ಟು ಅಂದರೆ ಗ್ರಾಮೀಣ ಪ್ರದೇಶದವರಿಗೆ ವಾರ್ಷಿಕ 40,000 ರೂಪಾಯಿ ಮತ್ತು ನಗರ ಪ್ರದೇಶದವರಿಗೆ ವಾರ್ಷಿಕ 55,000 ರೂಪಾಯಿಗಳನ್ನು ಮೀರಿರಬಾರದು.

ಹಾಗೆಂದರೆ ಏನು? ಇದು ಸರ್ಕಾರ ದಲಿತರನ್ನು ಅರ್ಥಮಾಡಿಕೊಂಡಿರುವ ರೀತಿಯನ್ನು ಎತ್ತಿ ತೋರಿಸುತ್ತದೆ. ಗ್ರಾಮೀಣ ಪ್ರದೇಶದ ಮಾಸಿಕ ಆದಾಯ 3,333 ರೂಪಾಯಿಗಳು ಮತ್ತು ನಗರ ಪ್ರದೇಶದ ವಾಸಿಗಳ ಮಾಸಿಕ ಆದಾಯ 4,583 ರೂಪಾಯಿಗಳನ್ನು ಮೀರದೆ ಇರುವ ದಲಿತರು ಮಾತ್ರ ಎನ್.ಎಸ್.ಎಫ್.ಡಿ.ಸಿಯಿಂದ ಹಣಕಾಸಿನ ಸಹಾಯಕ್ಕೆ ಅರ್ಹರು ಮತ್ತು ತಾವು ಉದ್ಯಮಿಗಳಾಗಲು ಸರ್ಕಾರದ ಸಹಾಯ ಪಡೆಯಲು ಅರ್ಹರು!

ದಲಿತನೊಬ್ಬ ಒಂದು ಲಕ್ಷ ರೂಪಾಯಿ ಆದಾಯ ಹೊಂದಿದ್ದು ಕೋಟ್ಯಧಿಪತಿಯಾಗಲು ಆಶಿಸಿ ತನ್ನ ಉದ್ಯಮವನ್ನು ದೊಡ್ಡದು ಮಾಡಲು ಒಂದು ಕೋಟಿ ಸಾಲ ಬೇಕೆನ್ನುತ್ತಾನೆ ಎಂದುಕೊಳ್ಳೋಣ. ಹಾಗೇನಾಗಬಹುದು? ಸರ್ಕಾರ ಅವನಿಗೆ ಹಣ ನೀಡುವುದಿಲ್ಲ.

ಎನ್.ಎಸ್.ಎಫ್.ಡಿ.ಸಿಯ ವೆಬ್‌ಸೈಟ್: www.nsfdc.nic.in ಅನೇಕ ದಲಿತ ಉದ್ದಿಮೆದಾರರನ್ನು ತಾನು ಬೆಳೆಸಿರುವುದಾಗಿ ಹೆಮ್ಮೆ ಪಡುತ್ತದೆ. ಅವರ ವೆಬ್‌ಸೈಟ್‌ನಲ್ಲಿ ಆ ಯಶಸ್ಸಿನ ಕಥೆಗಳ ಪಟ್ಟಿಯೂ ಇದೆ. ಎನ್.ಎಸ್.ಎಫ್.ಡಿ.ಸಿ ಹೆಮ್ಮೆ ಪಡುತ್ತಿರುವ ಮೊದಲ ಯಶಸ್ಸಿನ ಈ ಕಥೆಯನ್ನು ನೋಡಿ.

ಆಂಧ್ರ ಪ್ರದೇಶದ ಶ್ರೀಮತಿ ಕೊಮ್ಮುಕುಮಾರಿ ಎಂಬ ಮಹಿಳೆಗೆ 2004–2005ರಲ್ಲಿ ಎನ್.ಎಸ್.ಎಫ್.ಡಿ.ಸಿ 32,000 ರೂಪಾಯಿಗಳ ಸಾಲ ಮಂಜೂರು ಮಾಡಿತ್ತು. ಆ ಮಹಿಳೆ ಒಬ್ಬ ಯಶಸ್ವಿ ಉದ್ಯಮಿದಾರಳಾಗಿ ಮಾರ್ಪಾಡುಹೊಂದಿ ಈಗ ಪ್ರತಿ ತಿಂಗಳು 1,666 ರೂಪಾಯಿಗಳ ಲಾಭ ಪಡೆಯುತ್ತಿದ್ದಾಳೆ. ಎನ್.ಎಸ್.ಎಫ್.ಡಿ.ಸಿಯ ಪ್ರಕಾರ ಕೊಮ್ಮುಕುಮಾರಿ ಇತರ ದಲಿತ ಉದ್ಯಮಿಗಳು ಅನುಕರಿಸಬಹುದಾದ ಒಂದು ಮಾದರಿ.

ಇದು ದಲಿತ ಆಕಾಂಕ್ಷೆಗಳ ಸರಿಯಾದ ಬೆಲೆಕಟ್ಟುವಿಕೆಯೆ? ದಲಿತ ಉದ್ಯಮಶೀಲತೆ ಎಂದರೆ ಕೆಲ ಸಾವಿರ ರೂಪಾಯಿಗಳ ಜೊತೆ ಆಟ ಆಡುವುದೆ? ಎನ್.ಎಸ್.ಎಫ್.ಡಿ.ಸಿ ಏಕೆ ತಾನು ದಲಿತ ಉದ್ಯಮಿ ಯೊಬ್ಬರಿಗೆ 32 ಕೋಟಿ ರೂಪಾಯಿ ಸಾಲ ನೀಡಿದ್ದುದಾಗಿಯೂ ಮತ್ತು ಅವನು ಈಗ ಪ್ರತಿ ವರ್ಷ 10 ಕೋಟಿ ರೂಪಾಯಿಗಳನ್ನು ಸಂಪಾದಿಸುತ್ತಿರುವುದಾಗಿಯೂ ಹೆಮ್ಮೆಪಟ್ಟುಕೊಳ್ಳುತ್ತಿಲ್ಲ! ಕೋಟಿ ರೂಪಾಯಿಗಳಷ್ಟು ಸಾಲದ ಹಣವನ್ನು ಸರಿಯಾಗಿ ಉಪಯೋಗಿಸಿಕೊಳ್ಳಬಲ್ಲ ದಲಿತರಿದ್ದಾರೆಯೆ? ಎಂದು ಸರ್ಕಾರ ವಾದಿಸಬಹುದು. ನಾವು ಹಲವು ಬಾರಿ ಯೋಚಿಸುವಂತೆ ಸರ್ಕಾರ ಎನ್ನುವುದು ಒಂದು ಅಮೂರ್ತ ಕಲ್ಪನೆಯಲ್ಲ. ಸರ್ಕಾರ ಅನೇಕ ಸಂಸ್ಥೆಗಳ ಮೂಲಕ ತನ್ನ ಕಾರ್ಯಸಾಧಿಸುತ್ತದೆ. ಈ ಸರ್ಕಾರಿ ಸಂಸ್ಥೆಗಳನ್ನು ಬಲಿಷ್ಠರಾದ ಪುರುಷರು ಮತ್ತು ಮಹಿಳೆಯರು ನಡೆಸುತ್ತಿದ್ದಾರೆ. ಅವರು ದಲಿತರ ಬಗ್ಗೆ ಏನು ಯೋಚಿಸುತ್ತಾರೊ ಅದು ದಲಿತರ ಬಗೆಗಿನ ಸರ್ಕಾರದ ಚಿಂತನೆಯಾಗಿ ಬಿಡುತ್ತದೆ.

ಬೇರೆ ಮಾತುಗಳಲ್ಲಿ ಹೇಳುವುದಾದರೆ ಸರ್ಕಾರದ ದೃಷ್ಟಿಯಲ್ಲಿ ದಲಿತರು ಬುಟ್ಟಿ ಎಣೆಯುವುದು, ಉಪ್ಪಿನ ಕಾಯಿ ಮತ್ತು ಹಪ್ಪಳ ಮಾಡುವುದು, ಶೂ ರಿಪೇರಿ ಮಾಡುವುದು ಮುಂತಾದವುಗಳಿಗಷ್ಟೆ ಶಕ್ತರು. ಅನೇಕ ದಲಿತಪರ ಬುದ್ಧಿಜೀವಿಗಳೂ ಸಹ ದಲಿತರ ಬಗ್ಗೆ ಚಿಂತಿಸುವಾಗ ಸರ್ಕಾರದ ಹಾಗೆ ಚಿಂತಿಸುತ್ತಾರೆ. ಅವರು ದಲಿತರ ಶಕ್ತಿ ಸಾಮರ್ಥ್ಯಗಳಿಗೆ ಕಟ್ಟುವ ಬೆಲೆ ಸರಿಯೆ?

* * *

ಹಿಂದಿನ ನವೆಂಬರ್‌ನಲ್ಲಿ ನಾನು ಲೂದಿಯಾನದಲ್ಲಿದ್ದೆ. ಅಲ್ಲಿ ಒಬ್ಬ ದಲಿತ ಕೈಗಾರಿಕೋದ್ಯಮಿಯನ್ನು ಬೇಟಿಯಾದೆ. ಈ ದಲಿತ ಕೈಗಾರಿಕೋದ್ಯಮಿ ಪಂಜಾಬಿನಲ್ಲೆ ಅತಿ ದೊಡ್ಡ ಟಿ-ಶರ್ಟ್ ಉತ್ಪಾದಕನಾಗಿದ್ದು ಅವನ ದೃಢೀಕರಿಸಿದ ವಾರ್ಷಿಕ ವಹಿವಾಟು 70 ಕೋಟಿ ರೂಪಾಯಿಗಳು. ಅವನ ಒಂದು ಸಂಪೂರ್ಣವಾಗಿ ಸ್ವಯಂ–ಚಾಲಿತ ಯಂತ್ರ ಕೆಲಸ ಮಾಡುವುದನ್ನು ನಾನು ನೋಡಿದೆ. ಅದು ದಿನಕ್ಕೆ 14 ಸಾವಿರ ಟಿ-ಶರ್ಟ್‌ಗಳನ್ನು ಉತ್ಪಾದಿಸುತ್ತದೆ. ಅವನಲ್ಲಿ ಇಂತಹ ಇನ್ನೂ 3 ಯಂತ್ರಗಳಿವೆ. ಅವನ ಉತ್ಪಾದನೆಯ ಹೆಚ್ಚು ಅಂಶ ಯೂರೋಪ್ ದೇಶಗಳಿಗೆ ರಫ್ತಾಗುತ್ತದೆ. ಅವನ ಅವಶ್ಯಕತೆಯ ಶೇ.40ರಷ್ಟು ಹೊರ ಗುತ್ತಿಗೆಯಿಂದ ಬರುತ್ತದೆ. ಅವನ ಆಫೀಸ್‌ನಲ್ಲಿ ಯಾವುದೇ ಘಳಿಗೆಯಲ್ಲಿ ಸುಮಾರು ಅರ್ಧ ಡಜನ್ ಟಿ–ಶರ್ಟ್ ಉತ್ಪಾದಕರು ಈ ದಲಿತ ಟೀ–ಶರ್ಟ್ ಶ್ರೀಮಂತನನ್ನು ಬೇಟಿಯಾಗಲು ಕಾದಿರುತ್ತಾರೆ. ಅವನು ಲಂಡನ್ ಮತ್ತು ದುಬಾಯ್‌ಗಳಲ್ಲಿಯು ತನ್ನ ಶೋ–ರೂಂಗಳನ್ನು ಹೊಂದಿದ್ದಾನೆ.

ನಾನು ಹೇಳುತ್ತಿರುವ ಈ ದಲಿತ ಕೈಗಾರಿಕೋದ್ಯಮಿ ಯುವಕನಾಗಿದ್ದಾಗ ಒಂದು ಬಟ್ಟೆ ಹೆಣೆಯುವ ಘಟಕದಲ್ಲಿ ಮುಖ್ಯ ಕಟ್ಟರ್ ಆಗಿದ್ದ. ಹೊಸೈರಿ ಫ್ಯಾಕ್ಟರಿಯೊಂದರಲ್ಲಿ ಕೂಲಿಕಾರನಾಗಿ ಅವನು ತನ್ನ ಜೀವನ ಪ್ರಾರಂಭಿಸಿದ. ತನ್ನ ವಿನ್ಯಾಸಗಳಿಗೆ ಹೆಸರುಗಳಿಸಿದ ಮೇಲೆ ಅವನು ತನ್ನದೇ ಬ್ರಾಂಡ್ ಆದ 'ದಿ ಲಿಟಲ್ ಮಾಸ್ಟರ್'ನ್ನು ಮಾರುಕಟ್ಟೆಗೆ ತಂದ.

ಅವನು ನನಗೆ ತನ್ನ ಯಶಸ್ಸಿನ ಗುಟ್ಟನ್ನು ಬಿಟ್ಟುಕೊಟ್ಟ. ಇದೇ ಟಿ–ಶರ್ಟ್‌ನ್ನು ಸಗಟು ವ್ಯಾಪಾರಿಗಳಿಗೆ 80 ಅಥವಾ 100 ರೂಪಾಯಿಗಳಿಗೆ ಮಾರಬಹುದು. ನಾನು ಲೂದಿಯಾನಕ್ಕೆ ಭೇಟಿ ನೀಡುವ ಸಗಟು ಮಾರಾಟಗಾರರಿಗೆ ಶರ್ಟಿಗೆ 70

# ದಲಿತ ಪ್ರತಿಭೆಯ ಪ್ರದರ್ಶನ

ರೂಪಾಯಿಯಂತೆ ಮಾರಬಹುದು ಎಂದು ನಿರ್ಧರಿಸಿದೆ. ಒಂದು ಟೀ-ಶರ್ಟ್‌ಗೆ 5 ರೂಪಾಯಿ ನನಗೆ ಸಿಗುತ್ತಿತ್ತು. ಅಂದರೆ ಯು.ಎಸ್‌ನಲ್ಲಿಯ ವ್ಯವಹಾರವನ್ನು ತಿಳಿಯದೆ ಇದ್ದುದರಿಂದ ಅವನು ತನ್ನ ಘಟಕ ಉತ್ಪಾದಿಸುವ ಪ್ರತಿ ಶರ್ಟ್‌ನಿಂದ ಅತೀ ಕಡಿಮೆ ಲಾಭ ಸಂಪಾದಿಸಲು ನಿರ್ಧರಿಸಿದ್ದ ಮತ್ತು ಹೆಚ್ಚು ಉತ್ಪಾದನೆ ಬಿಕರಿಯಾದಂತೆ ಅವನ ಲಾಭ ಸಹ ದೊಡ್ಡದಾಯಿತು. ಯುವಕನಾಗಿದ್ದಾಗ ಅವನಿಗೆ ಒಂದು ಬೈಸಿಕಲ್ ಕೊಳ್ಳಲು ಸಹ ಕಷ್ಟವಾಗಿತ್ತು. ಈಗ ಅವನು ರೋಲ್ಸ್‌ರಾಯ್ಸ್ ಕಾರನ್ನು ಓಡಿಸುತ್ತಾನೆ.

ಮೂರು ದಿನಗಳ ನಂತರ ಅಂದರೆ ಡಿಸೆಂಬರ್ 2ರಂದು ನಾನು ಬೆಂಗಳೂರಿನಲ್ಲಿದ್ದೆ. ಮಿಲಿಂದ್ ಕಾಂಬ್ಳೆ ನೇತೃತ್ವದ ಡಿ.ಐ.ಸಿ.ಸಿ.ಐ ಟೀಮನ್ನು ನಾನು ಸೇರಿಕೊಂಡಿದ್ದೆ. ಅದು ಕರ್ನಾಟಕದಲ್ಲಿ ತಮ್ಮ ಶಾಖೆಯನ್ನು ತೆರೆಯುವುದಿತ್ತು. ಶಾಖೆಯ ಉದ್ಘಾಟನೆಯ ನಂತರ ನನ್ನನ್ನು ಯುವಕ ದಲಿತ ಸಿವಿಲ್ ಇಂಜಿನಿಯರ್ ಒಬ್ಬನಿಗೆ ಪರಿಚಯಿಸಲಾಯಿತು. ಅವನು ಒಂದು ಕಟ್ಟಡ ನಿರ್ಮಾಣ ಕಂಪನಿಯನ್ನು ನಡೆಸುತ್ತಿದ್ದಾನೆ. ಒಂದು ಡಜನ್ ಸಿವಿಲ್ ಇಂಜಿನಿಯರ್‌ಗಳನ್ನು ಒಳಗೊಂಡಂತೆ ಅವನಲ್ಲಿ ಸುಮಾರು 200 ಸಹಾಯಕರು ಕೆಲಸ ಮಾಡುತ್ತಿದ್ದಾರೆ. 6 ವರ್ಷಗಳಷ್ಟರಲ್ಲಿ ಅವನು ಅನೇಕ ಕೋಟಿಯ ಮೌಲ್ಯದ ಒಂದು ಕಟ್ಟಡ ನಿರ್ಮಾಣ ಕಂಪನಿಯನ್ನು ಕಟ್ಟಿದ್ದಾನೆ. ಅವನ ಯಶಸ್ಸಿನ ಗಾಥೆಯನ್ನು ಕೇಳಿ ನನಗೆ ಆಶ್ಚರ್ಯವಾಯಿತು. ಅವನು ತನ್ನ ಯಶಸ್ಸಿನ ಗುಟ್ಟನ್ನು ನನಗೆ ತಿಳಿಸಿದ.

ಸುಮಾರು 6 ವರ್ಷಗಳ ಹಿಂದೆ ಅವನು ಬೆಂಗಳೂರಿನಲ್ಲಿ ಒಂದು ಸಣ್ಣ ಫ್ಲಾಟ್ ಕಟ್ಟಲು ಗುತ್ತಿಗೆ ಪಡೆದ. ಇದು ಅವನ ಮೊದಲನೆಯ ಯೋಜನೆ. ಅವನು ಈ ಫ್ಲಾಟನ್ನು ಮಾಲೀಕನಿಗೆ ಹಸ್ತಾಂತರಿಸುವ ದಿನ ಅವರ ನಡುವೆ ಸಣ್ಣ ಗಲಾಟೆಯಾಯಿತು. ಫ್ಲಾಟ್‌ನ ಒಂದು ಬೆಡ್‌ರೂಂನಲ್ಲಿ ಹೆಂಚುಗಳನ್ನು ಸರಿಯಾಗಿ ಜೋಡಿಸಿರಲಿಲ್ಲ. ಅವನು ಹೆಂಚುಗಳನ್ನು ತೆಗೆದು ಸರಿಯಾಗಿ ಜೋಡಿಸಲು ಇಚ್ಛಿಸಿದ್ದ. ಅದಕ್ಕಾಗಿ ಅವನು ಫ್ಲಾಟ್ ಮಾಲೀಕನನ್ನು ಕೆಲವು ದಿನಗಳ ಸಮಯ ಕೇಳಿದ. ಹೆಚ್ಚು ಹಣವನ್ನೇನೂ ಕೇಳದೆ ಆ ಹೆಂಚುಗಳನ್ನು ಹೊಸದಾಗಿ ಹಾಕಿಸಿದ. ಫ್ಲಾಟ್‌ನ ಮಾಲೀಕ ಆದರೂ ಅಸಂತೋಷಗೊಂಡಿದ್ದ ಏಕೆಂದರೆ ಅವನ ಕಾರ್ಯಕ್ರಮ ನಾಲ್ಕು ದಿನಗಳ ಕಾಲ ವಿಳಂಬವಾಯಿತು.

ಸುಮಾರು ಒಂದು ತಿಂಗಳ ನಂತರ ಫ್ಲಾಟ್ ಮಾಲೀಕ ಈ ದಲಿತ ನಿರ್ಮಾಣಕಾರನನ್ನು ಅದೇ ಫ್ಲಾಟ್‌ನಲ್ಲಿ ಊಟಕ್ಕೆ ಆಹ್ವಾನಿಸಿದ. ಫ್ಲಾಟ್‌ನ ಮಾಲೀಕ ಇವನ ಕ್ಷಮೆ ಕೋರಿ ಇವನನ್ನು ಆಕಾಶದೆತ್ತರಕ್ಕೆ ಹೊಗಳಿದಾಗ ಇವನಿಗೆ ಆಶ್ಚರ್ಯವಾಯಿತು. ಫ್ಲಾಟ್ ಮಾಲೀಕ ಏರ್ಪಡಿಸಿದ್ದ ಗೃಹ ಪ್ರವೇಶಕ್ಕೆ ಆಗಮಿಸಿದ್ದ ಎಲ್ಲಾ ಅತಿಥಿಗಳೂ ನಿರ್ಮಾಣದ ಗುಣಮಟ್ಟವನ್ನು ಬಾಯ್ತುಂಬಾ ಹೊಗಳಿದ್ದುದು ಇದಕ್ಕೆ ಕಾರಣವಾಗಿತ್ತು. ಅವನು ನನಗೆ ಹೇಳಿದ, 'ನಾನು ಈ ಫ್ಲಾಟನ್ನು ನನಗಾಗಿ ಕಟ್ಟಿಸುತ್ತಿದ್ದಂತೆಯೆ ಕಟ್ಟಿಸಿದ್ದೆ' ಒಂದೆರಡು ವಾರಗಳ ನಂತರ ಆ ಫ್ಲಾಟಿನ ಮಾಲೀಕ ಮತ್ತೊಮ್ಮೆ ಅವನನ್ನು ಬರಮಾಡಿಕೊಂಡು ತನ್ನ ಇತರ ಸ್ನೇಹಿತರಿಗೂ ಪರಿಚಯಿಸಿದ. ಅವರು ಅವನಿಗೆ ಒಂದು ನಾಲ್ಕು ಮಹಡಿ ಅಪಾರ್ಟ್‌ಮೆಂಟನ್ನು ಬೆಂಗಳೂರಿನಲ್ಲಿ ಕಟ್ಟಿಕೊಡುವಂತೆ ಕೋರಿದರು. ಅವನು ಈ ಅಪಾರ್ಟ್‌ಮೆಂಟ್ ಕಟ್ಟಡವನ್ನು ಅತಿ ಕಡಿಮೆ ಸಮಯದಲ್ಲಿ ಕಟ್ಟಿಕೊಟ್ಟ, ಈ ಅಪಾರ್ಟ್‌ಮೆಂಟ್ ಅವನ ಜಾಹೀರಾತಿನಂತೆ ಕೆಲಸ ಮಾಡಿತು. ಅವನು ಈಗ ಯಾವ ಹೊಸ ಯೋಜನೆಗಳನ್ನೂ ಕೈಗೆತ್ತಿಕೊಳ್ಳುತ್ತಿಲ್ಲ. ಏಕೆಂದರೆ ಇನ್ನೂ ಮೂರು ವರ್ಷ ಕಾಲ ಕೆಲಸ ಮಾಡಬಹುದಾದಷ್ಟು ಕೆಲಸ ಈಗಾಗಲೇ ಅವನ ಕಂಪನಿಯ ಕೈಯಲ್ಲಿದೆ.

ಡಿಸೆಂಬರ್ 4ರಂದು ಡಿ.ಐ.ಸಿ.ಸಿ.ಐನ ಆಂಧ್ರ ಪ್ರದೇಶ ಶಾಖೆಯ ಉದ್ಘಾಟನೆಗಾಗಿ ನಾನು ಹೈದರಾಬಾದ್‌ನಲ್ಲಿ ಬಂದಿಳಿದೆ. ಕಾಂಬ್ಳೆಯವರು ಹೋಟೆಲ್ ಮಾರಿಯಾಟ್ ನಲ್ಲಿ ಒಬ್ಬ ಸುಮಾರು 300 ಕೋಟಿ ವಹಿವಾಟುಳ್ಳ ದಲಿತ ನಿರ್ಮಾಣಕಾರನನ್ನು ನನಗೆ ಪರಿಚಯಿಸಿದರು. ಕೇವಲ 15 ವರ್ಷಗಳ ಅವಧಿಯಲ್ಲಿ ನಿರುದ್ಯೋಗಿ ದಲಿತ ಯುವಕನೊಬ್ಬ ಅಷ್ಟು ದೊಡ್ಡ ಕಟ್ಟಡ ನಿರ್ಮಾಣ ಕಂಪನಿಯನ್ನು ಕಟ್ಟಿದ್ದಾನೆ ಎಂದು ತಿಳಿದು ನಾನು ಆಶ್ಚರ್ಯ ಚಕಿತನಾದೆ. ಅವನು ತನ್ನ ಯಶಸ್ಸಿನ ಗುಟ್ಟನ್ನು ನನಗೆ ಹೇಳಿದ. 'ನಾನು ಕಟ್ಟಿದ ಪ್ರತಿ ಕಟ್ಟಡವೂ ನನ್ನ ಮಕ್ಕಳ ಬೊಂಬೆಯಿದ್ದಂತೆ' ಅವನು ಹೇಳಿದ. ಅವನ ಕನಸು, 'ಯಾವುದೇ ತಿರಸ್ಕಾರ ಮೊದಲು ತನ್ನದಾಗಿರಬೇಕು'.

ಅಂದರೆ ಈ ದಲಿತ ನಿರ್ಮಾಣಕಾರ ಕೈಗೆತ್ತಿಕೊಳ್ಳಲು ನಿರಾಕರಿಸಿದ ನಂತರವಷ್ಟೆ ಗಿರಾಕಿಗಳು ಬೇರೆ ನಿರ್ಮಾಣಕಾರರತ್ತ ಹೋಗಬೇಕು.

ನಾನು ಇನ್ನೂ ಹೈದರಾಬಾದ್‌ನಲ್ಲಿದ್ದಾಗಲೆ ಉತ್ತರ ಪ್ರದೇಶದ ಬುಲಂದ್‌ಶಹರ್‌ನ ದಲಿತ ಉದ್ಯಮಿಯೊಬ್ಬ ನನಗೆ ಕರೆಮಾಡಿದ. ಡಿಸೆಂಬರ್ 16–18ರಲ್ಲಿ ಮುಂಬಯಿಯಲ್ಲಿ ನಡೆಯುವ ಡಿ.ಐ.ಸಿ.ಸಿ.ಐನ ದಲಿತ್ ಟ್ರೇಡ್ ಫೇರ್‌ನ ಬಗ್ಗೆ ಅವನು ತಿಳಿದುಕೊಂಡಿದ್ದ ಮತ್ತು ಅದರಲ್ಲಿ ಭಾಗಿಯಾಗುವುದು ಹೇಗೆ ಎಂದು ತಿಳಿದುಕೊಳ್ಳಬಯಸಿದ್ದ. 'ನಾನು ಟ್ರಾನ್ಸ್‌ಫಾರ್ಮರ್ ಗಳನ್ನು ಉತ್ಪಾದಿಸುತ್ತೇನೆ' ಅವನು ನನಗೆ ಹೇಳಿದ. 'ನೀನು ನಿನ್ನ ಟ್ರಾನ್ಸ್‌ಫಾರ್ಮರ್‌ಗಳನ್ನು ಮುಂಬಯಿಗೆ ತೆಗೆದುಕೊಂಡು ಬಾ' ನಾನು ಅವನಿಗೆ ಸಲಹೆ ನೀಡಿದೆ. 'ನಾನು ಟ್ರಾನ್ಸ್‌ಫಾರ್ಮರ್‌ಗಳನ್ನು ಮುಂಬಯಿಗೆ ಹೇಗೆ ತರಲಿ?' ಅವನು ಕೇಳಿದ. 'ವಲ್ಲಬ್‌ಘರ್‌ನ ಪ್ರಿಂಟಿಂಗ್ ಪ್ರೆಸ್ ಉತ್ಪಾದಕ ದಲಿತನೊಬ್ಬ ತನ್ನ 20 ಟನ್ ತೂಕದ ಮೆಷಿನ್‌ಗಳನ್ನು ಮುಂಬಯಿಗೆ ತರುತ್ತಿದ್ದಾನೆ, ನೀನು ನಿನ್ನ ಟ್ರಾನ್ಸ್‌ಫಾರ್ಮರ್‌ಗಳನ್ನು ಆ ಟ್ರಕ್‌ನ ಒಂದು ಮೂಲೆಯಲ್ಲಿ ಇಡಬಹುದು' ನಾನು ಸಲಹೆ ನೀಡಿದೆ. 'ಇಲ್ಲ ಸಾಹೇಬ್ರೆ ನನ್ನ ಟ್ರಾನ್ಸ್‌ಫಾರ್ಮರ್‌ಗಳು ಎಷ್ಟು ದೊಡ್ಡವೆಂದರೆ ಅವುಗಳನ್ನು ತರಲು ಸೂಪರ್ ಟ್ರಕ್‌ಗಳೇ ಬೇಕು' ಅವನು ನನ್ನನ್ನು ತಿದ್ದಿದ. 'ನಾನು ಮತ್ತೆ ನಿನಗೆ ಫೋನ್ ಮಾಡುತ್ತೇನೆ' ಎಂದು ಹೇಳಿ ಸಂಭಾಷಣೆಯನ್ನು ಮುಕ್ತಾಯಗೊಳಿಸಿದೆ. ಡಿಸೆಂಬರ್ 5ರ ಮಧ್ಯಾಹ್ನ, ದೆಹಲಿ ವಿಮಾನ ನಿಲ್ದಾಣದಲ್ಲಿ ಇಳಿದಿದ್ದೇನೆ ಎಂದು ನಾನು

# 2050ರಲ್ಲಿ ದಲಿತರು

ಕರೆಮಾಡಿದ್ದು ನನ್ನ ಕುಟುಂಬಕ್ಕಲ್ಲ. ಆ ಬುಲಂದರ್‌ಶಾಹರ್‌ನ ದಲಿತ ಕೈಗಾರಿಕೋದ್ಯಮಿಗೆ. ನಾವು ಡಿಸೆಂಬರ್ 6ರಂದು ಅಲ್ಲಿಗೆ ಭೇಟಿ ನೀಡಬಹುದೆಂದು ನಾನು ಅವನಿಗೆ ಕರೆ ಮಾಡಿದ್ದೆ.

ಡಿ.ಐ.ಸಿ.ಸಿ.ಐನ ದೆಹಲಿ ಶಾಖೆಯ ಮುಖ್ಯಸ್ಥ ಎನ್.ಹೆಚ್. ಚಂದನ್ ನೇತೃತ್ವದಲ್ಲಿ ನಾವು ಮರುದಿನ ಬುಲಂದ್‌ಶಾಹರ್‌ನ ಅವನ ಕಾರ್ಖಾನೆಗೆ ಭೇಟಿ ನೀಡಿದೆವು. ಅವನ ಟ್ರಾನ್ಸ್‌ಫಾರ್ಮರ್‌ಗಳು ಎಲ್ಲ ದಲಿತರೂ ಕೂಡಲೆ ಭೇಟಿ ನೀಡಬೇಕಾದ ಒಂದು ಯಾತ್ರಾ ಸ್ಥಳ ಎಂದು ನಾನು ಕೂಡಲೆ ಘೋಷಿಸಬಯಸುತ್ತೇನೆ.

ಡಿ.ಐ.ಸಿ.ಸಿ.ಐನ ಡಿಸೆಂಬರ್ 16-18, 2011ರ ಮುಂಬಯಿನ ಬಾಂದ್ರಾ – ಕುರ್ಲ ಕಾಂಪ್ಲೆಕ್ಸ್‌ನಲ್ಲಿ ನಡೆದ ದಲಿತ್ ಟ್ರೇಡ್ ಫೇರ್ ದಲಿತ ಮೇಧಾಶಕ್ತಿಯ ಪ್ರದರ್ಶನವಲ್ಲದೆ ಮತ್ತೇನೂ ಅಲ್ಲ. ಬನ್ನಿ ಈ ವೈಭವವನ್ನು ನೋಡಿ.

* * *

**ಭಾ**ರತದಷ್ಟು ಸಂಕೀರ್ಣವಾದ ಮತ್ತೊಂದು ಸಮಾಜ ಇರಲಾರದು. ಜಾತಿ ಮತ್ತು ಉಪಜಾತಿಗಳ ನ್ನೊಳಗೊಂಡ ಅನೇಕ ಪದರಗಳ ಭಾರತ ಸಾಮಾಜಿಕವಾಗಿ ವಿಚಿಧ್ರಗೊಂಡಿದೆ. ಅನೇಕ ಧಾರ್ಮಿಕ ಅಸ್ಮಿತೆಗಳಿರುವ ಭಾರತದ ಜ್ಯಾತಾತೀತ ಪಯಣ ನಿಲ್ಲುವಂತದ್ದೇನಲ್ಲ. 22 ಅಧಿಕೃತ ಭಾಷೆಗಳು, ಮತ್ತು ನೂರಾರು ಉಪ ಭಾಷೆಗಳನ್ನು ಮಾತನಾಡುವ ಮತ್ತೊಂದು ದೇಶವನ್ನು ನಾನು ಯೋಚಿಸಲಾರೆ. ಜನಾಂಗೀಯ ವಿಭಜನೆಗಳಲ್ಲದೆ ಭಾರತ ಬಹಳ ಅಪರೂಪದ ಹವಮಾನ ವಲಯಗಳಿಗೂ ನೆಲೆಯಾಗಿದೆ. ಚೆನ್ನೈ ಹತ್ತಿ ಉರಿಯುತ್ತಿರುವಾಗ ಲಡಾಕ್‌ನಲ್ಲಿ ಹೆಪ್ಪುಗಟ್ಟುವ ಚಳಿಯಿರುತ್ತದೆ.

ಇಷ್ಟು ಸಂಕೀರ್ಣ ಸಮಾಜವನ್ನು ಒಟ್ಟಿಗೆ ಕೊಂಡೊಯ್ಯತ್ತಾ, ಬದಲಾವಣೆಯನ್ನು ತರಬಲ್ಲ ಕಾನೂನು ಪುಸ್ತಕವನ್ನು ಬರೆಯಲು ಭಾರತಕ್ಕೆ ಡಾ॥ ಅಂಬೇಡ್ಕರ್‌ರಂತ ದೊಡ್ಡ ಮೆದುಳೆ ಬೇಕಾಯಿತು. ಪ್ರಜಾಪ್ರಭುತ್ವವಾಗಿ ಭಾರತ ಬದುಕಿರುವುದು ಮಾತ್ರವಲ್ಲ ವಿಜ್ರಂಭಿಸಿದೆ. ನಿಧಾನವಾಗಿ ಅಂದರೆ ನಾವು ಬಯಸುವುದಕ್ಕಿಂತ ಕಡಿಮೆ ವೇಗವಾಗಿಯಾದರು ಭಾರತ ಬದಲಾವಣೆಯಾಗುತ್ತಿದೆ. ಭಾರತ ಇಂದು 1950ರಂತಿಲ್ಲ.

ಬದಲಾವಣೆ ದಲಿತರನ್ನೂ ಬಿಟ್ಟಿಲ್ಲ. ದಲಿತರು ಇಂದು 1950ರಲ್ಲಿ ಇದ್ದ ಹಾಗೆ ಇಲ್ಲ. ದಲಿತ ಪುರುಷರನ್ನು ದಲಿತರಲ್ಲದ ಮಹಿಳೆಯರು ತಮ್ಮ ಗಂಡಂದಿರಾಗಿ ಪಡೆಯಲು ಇಚ್ಛಿಸುವ ಅನೇಕ ಉದಾಹರಣೆಗಳುಂಟು. ಇದು ದಲಿತರಲ್ಲಿ ಉಂಟಾಗಿರುವ ಬದಲಾವಣೆಯ ಅತಿ ಮುಖ್ಯ ಸೂಚಕ. 1950ಕ್ಕಿಂತ ಇಂದು ಹೆಚ್ಚು ದಲಿತರು ಕೊಲೆಯಾಗುತ್ತಿದ್ದಾರೆ. ಇದೂ ಸಹ ದಲಿತರು ಮೇಲೇರುತ್ತಿರುವುದರ ಸೂಚಕ. 1950ರಲ್ಲಿ ದಲಿತರು ಜಾತಿಪದ್ಧತಿಯ ಒಂದು ಮುಖ್ಯ ಸ್ತಂಭವಾಗಿದ್ದರು. ಇಂದು ದಲಿತರು ಜಾತಿಪದ್ಧತಿಯ ಸವಾಲಾಗಿದ್ದಾರೆ. ಮೊದಲು ದಲಿತರು ಜಾತಿ ಪದ್ಧತಿಯೊಡನೆ ಹೋರಾಡುತ್ತಿದ್ದರು. ಇಂದು ಜಾತಿಪದ್ಧತಿ ತನ್ನನ್ನು ಉಳಿಸಿಕೊಳ್ಳುವುದಕ್ಕೋಸ್ಕರ ದಲಿತರೊಡನೆ ಹೋರಾಡುತ್ತಿದೆ. ಜಾತಿ ದಲಿತರ ಮೇಲಿನ ತನ್ನ ಹಿಡಿತವನ್ನು ಕಳೆದುಕೊಳ್ಳುತ್ತಿದೆ ಎಂಬುದು ಖಂಡಿತ.

ಪ್ರಜಾಪ್ರಭುತ್ವ ಮತ್ತು ಸಂವಿಧಾನಾತ್ಮಕತೆಯ ಮುಖ್ಯ ಪ್ರಯೋಜನ ಪಡೆದವರಾಗಿ ದಲಿತ ಚಿಂತಕರು ಸರ್ಕಾರ ಮಾರುಕಟ್ಟೆ, ಮತ್ತು ಸಮುದಾಯ ಇವುಗಳ ಪಾತ್ರದ ಬಗ್ಗೆ ಚಿಂತಿಸಬೇಕು. ಅಭಿವೃದ್ಧಿ ತನಗೆತಾನಾಗಿ ಬರುತ್ತದೆ.

ಸಂವಿಧಾನ ಆಚರಣೆಗೆ ಬಂದು ಆರು ದಶಕಗಳಾಗಿವೆ. ಆದರೆ ಮೊದಲ ನಾಲ್ಕು ದಶಕಗಳು ಅಂದರೆ 1950-90ಕ್ಕಿಂತ ಕಳೆದ ಎರಡು ದಶಕಗಳಲ್ಲಿ (1990-2011) ಭಾರತ ಬಹಳ ವೇಗವಾಗಿ ಬದಲಾಗುತ್ತಿದೆ. ಈ ಬದಲಾವಣೆಯಲ್ಲಿ ಮಾರುಕಟ್ಟೆಗಳ ಪಾತ್ರವೂ ಇದೆ. ಭಾರತದಲ್ಲಿ ಬದಲಾವಣೆ ತಂದು ದಲಿತರಿಗೆ ಶಕ್ತಿ ಸಾಮರ್ಥ್ಯ ನೀಡುವ ದಿಸೆಯಲ್ಲಿ ಸರ್ಕಾರ ಏನನ್ನು ಮಾಡಬೇಕೊ ಅದನ್ನು ಮಾಡಿದೆ. ದಲಿತರು ಜೀವನದಲ್ಲಿ ಮೇಲೇರಲು ಏನನ್ನು ಮಾಡಬೇಕೊ ಅದನ್ನು ಸರ್ಕಾರ ಮುಂದೆಯೂ ಮಾಡುತ್ತಿರುತ್ತದೆ. ಸರ್ಕಾರದ ಈ ಆರು ದಶಕಗಳ ಯಶಸ್ಸನ್ನು ಮನಸ್ಸಿನಲ್ಲಿಟ್ಟುಕೊಳ್ಳಿ. ಸರ್ಕಾರ ಭಾರತವನ್ನು ಜಾತಿ ವಿಚಾರದಲ್ಲಿ ತಟಸ್ಥವಾಗಿ ಮಾಡಲು ಸಾಧ್ಯವಾಗಿಲ್ಲ. ಸರ್ಕಾರ ದಲಿತೇತರರನ್ನು ದಲಿತರ ಜೊತೆ ಸಹ ಭೋಜನ ಮಾಡಲು ಒತ್ತಾಯ ಮಾಡಲಾಗುವುದಿಲ್ಲ. ಮಾರುಕಟ್ಟೆ ತನ್ನ ಪಾತ್ರವನ್ನು ವಹಿಸಲು ಪ್ರಾರಂಭಿಸಿದೆ. ಸಮಾಜದ ಅಂಕುಡೊಂಕುಗಳನ್ನು ಸಮ ಮಾಡುವ ದೊಡ್ಡ ಶಕ್ತಿಯಾಗಿ ಮಾರುಕಟ್ಟೆ ದಲಿತರನ್ನು ಮತ್ತು ದಲಿತೇತರರನ್ನು ಒಂದೇ ಊಟದ ಟೇಬಲ್‌ಗೆ ತರುವಂತಹ ಶಕ್ತಿಯನ್ನು ಹೊಂದಿದೆ. ಆದರೆ ಮಾರುಕಟ್ಟೆಯಷ್ಟೆ ದಲಿತರನ್ನು ಸಂಪೂರ್ಣವಾಗಿ ಬಿಡುಗಡೆಮಾಡಲು ಸಾಧ್ಯವಿಲ್ಲ.

ದಲಿತರು ಸಹ ಸಂವಿಧಾನ, ಸರ್ಕಾರ, ಪ್ರಜಾಸತ್ತೆ ಮತ್ತು ಮಾರುಕಟ್ಟೆ ಇವುಗಳು ಜಾತಿಯನ್ನು ತಟಸ್ಥವಾಗಿ ಮಾಡುವಲ್ಲಿ ವಹಿಸುತ್ತಿರುವ ಕ್ರಿಯಾತ್ಮಕ ಪಾತ್ರವನ್ನು ಮುಂದುವರಿಸಲು ವಿಶೇಷವಾದ ಕೆಲಸವನ್ನು ಮಾಡಬೇಕಾಗುತ್ತದೆ.

ಬೇರೆಯಾರಾದರೂ 2050ರಲ್ಲಿ ದಲಿತರು ಎಲ್ಲಿರುತ್ತಾರೆ ಎಂಬ ಪ್ರಶ್ನೆಯನ್ನು ಕೇಳುವ ಮೊದಲು ದಲಿತ ಚಿಂತಕರೆ ಆ ಪ್ರಶ್ನೆಯನ್ನು ಕೇಳಿಕೊಳ್ಳ ಬೇಕಾಗುತ್ತದೆ. ಬೇರೆಯವರು ಪ್ರಶ್ನೆಯನ್ನು ಮಾತ್ರ ಕೇಳುತ್ತಾರೆಯೆ ಹೊರತು ಅದರ ಉತ್ತರದ ಬಗ್ಗೆ ಚಿಂತಿಸುವುದಿಲ್ಲ. ದಲಿತರೆ ಆ ಉತ್ತರಗಳನ್ನು ಪಡೆದುಕೊಳ್ಳಬೇಕು.

2049ರಲ್ಲಿ ಭಾರತ ತನ್ನ ಸಂವಿಧಾನಾತ್ಮಕತೆಯ ನೂರನೆ ವರ್ಷವನ್ನು ಆಚರಿಸುತ್ತದೆ. ಆಗಲೂ ಸಹ ದಲಿತರಿಗೆ ಮೀಸಲಾತಿ ಬೇಕಾಗಿದ್ದಲ್ಲಿ ಇನ್ನೂ ಅನೇಕ ಹಜಾರೆಗಳು ಮೇಲೆ ಬಂದು ಪ್ರಶ್ನೆಗಳನ್ನು ಕೇಳತೊಡಗುತ್ತಾರೆ.

ಈ ಹೊಸ ಹಜಾರೆಗಳು ದಲಿತರಿಗೆ ಇನ್ನು ಮೀಸಲಾತಿ ಬೇಕಾಗಿದೆ. ಏಕೆಂದರೆ ಮೀಸಲಾತಿ ಅವರನ್ನು ಸಶಕ್ತರನ್ನಾಗಿ ಮಾಡುವುದರಲ್ಲಿ ಸೋತಿದೆ ಎಂದು ಅವರು ವಾದಿಸುತ್ತಾರೆ. ಅವರು ದಲಿತರಿಗೆ ಸ್ಕಾಲರ್‌ಶಿಪ್ ಮತ್ತು ರೇಷನ್ ಕಾರ್ಡ್ ಮುಂತಾದುವುಬೇಕು ಏಕೆಂದರೆ ಡಾ॥ ಅಂಬೇಡ್ಕರ್‌ರವರು ಬರೆದ ಸಂವಿಧಾನ ಅವರನ್ನು ಮೇಲೆತ್ತುವುದರಲ್ಲಿ ಸೋತಿದೆ ಎಂದು ಕೂಡ ಅವರು ವಾದಿಸುತ್ತಾರೆ. ಅವರು ಸಂಸತ್ತು ಮತ್ತು ಪ್ರಜಾತಂತ್ರವನ್ನು ಕೂಡ ಈ ಸೋಲಿಗೆ ಜವಬ್ದಾರರನ್ನಾಗಿ ಮಾಡುತ್ತಾರೆ.

ಅವರು ನಮ್ಮನ್ನು ನೋಡಿ ನಗುವ ಮೊದಲೆ ದಲಿತರು ಸಂವಿಧಾನ, ಪ್ರಜಾಸತ್ತೆ ಮತ್ತು ಮಾರುಕಟ್ಟೆ ಇವು ತಮ್ಮ ಸಮುದಾಯಕ್ಕೆ ಆಶ್ಚರ್ಯಕರವಾದ ಅಭಿವೃದ್ಧಿಯನ್ನು ತಂದಿವೆ ಎಂಬುದನ್ನು ಸಾಬೀತುಪಡಿಸಬೇಕು. ಆ ದಿಸೆಯಲ್ಲಿ ದಲಿತರು ಮೀಸಲಾತಿ, ಸ್ಕಾಲರ್‌ಶಿಪ್, ಮತ್ತು ರೇಷನ್‌ಕಾರ್ಡುಗಳಿಂದ ಹೊರಬರಬೇಕು.

ಭಾರತ ಸಂವಿಧಾನದ ನೂರನೆ ವಾರ್ಷಿಕೋತ್ಸವವನ್ನು ಆಚರಿಸುವುದಕ್ಕೆ ಇನ್ನು 39 ವರ್ಷಗಳು ಮಾತ್ರ ಉಳಿದಿವೆ. ದಲಿತ ಮಧ್ಯಮವರ್ಗ ಸ್ವಾತಂತ್ರ್ಯದ ಹೊಸ ಕ್ರಾಂತಿಯನ್ನು ಮುನ್ನಡೆಸಬೇಕು. ಎಲ್ಲಾ ದಲಿತ ಒಂದು ಮತ್ತು ಎರಡನೆ ದರ್ಜೆಯ ಅಧಿಕಾರಿಗಳೂ, ಡಾಕ್ಟರ್‌ಗಳೂ, ಇಂಜಿನಿಯರ್‌ಗಳೂ, ಬ್ಯಾಂಕರ್‌ಗಳೂ, ಸಂಸತ್ ಸದಸ್ಯರು ಮತ್ತು ವಿಧಾನ ಮಂಡಳ ಸದಸ್ಯರೂ ತಮ್ಮ ಮಕ್ಕಳು ಮೀಸಲಾತಿಯನ್ನು ಉಪಯೋಗಿಸದಂತೆ ನೋಡಿಕೊಳ್ಳಬೇಕು. ಇದರಿಂದ ಬಹುಮುಖ ಪರಿಣಾಮ ಉಂಟಾಗುತ್ತದೆ. ಇದು ಮೀಸಲಾತಿ ಸ್ವತಂತ್ರಗೊಳಿಸುತ್ತದೆ ಎಂಬುದನ್ನು ಸಾಬೀತು ಮಾಡುತ್ತದೆ. ಇದು ಮೀಸಲಾತಿಯ ವಿರೋಧಿಗಳನ್ನು ಬಾಯಿಮುಚ್ಚಿಸುತ್ತದೆ. ದಲಿತ ಮಧ್ಯಮ ವರ್ಗ ತಿರಸ್ಕರಿಸಿದ ಹುದ್ದೆಗಳನ್ನು ದಲಿತ ಕೆಳವರ್ಗ ಪಡೆಯುತ್ತದೆ ಮತ್ತು ಇದು ದಲಿತ ಮಧ್ಯಮ ವರ್ಗದ ಗಾತ್ರವನ್ನು ಹೆಚ್ಚಿಸುತ್ತದೆ. ಸುಮಾರು 20 ವರ್ಷಗಳ ಕಾಲದಲ್ಲಿ ಹೀಗೆ ಹೊಸದಾಗಿ ಪ್ರಯೋಜನ ಪಡೆದವರೂ ಸಹ ದಲಿತ ಮಧ್ಯಮ ವರ್ಗವನ್ನು ಅನುಸರಿಸುತ್ತಾರೆ. ಕೊನೆಗೆ 2050ರ ಮೊದಲೆ ಮೀಸಲಾತಿಗೆ ನಾವು ಅಂತ್ಯ ಹಾಡಬಹುದು.

ಹಾಗೆಯೇ ಸ್ಕಾಲರ್‌ಶಿಪ್‌ಗಳು ದಲಿತ ಕೆಳವರ್ಗಗಳಿಗೆ ತುಂಬಾ ಸಹಾಯಕಾರಿಯಾಗಿವೆ. ಆದರೆ ದಲಿತ ಮಧ್ಯಮ ವರ್ಗ ಮತ್ತು ಕೆಳಮಧ್ಯಮ ವರ್ಗಗಳ ಘನತೆಗೆ ಅವು ಒಳ್ಳೆಯದಲ್ಲ. ಸರ್ಕಾರದ 4ನೇ ದರ್ಜೆ ನೌಕರ ಸಹ ತಿಂಗಳಿಗೆ ಹತ್ತು ಸಾವಿ2ರ ರೂಪಾಯಿ ಸಂಬಳ ಪಡೆಯುತ್ತಾನೆ. ಮಕ್ಕಳಿಗೆ ಶಿಕ್ಷಣ ನೀಡಲು ಅದಷ್ಟು ಸಾಲದಾದರೆ ತಿಂಗಳಿಗೆ 230 ರೂಪಾಯಿ ಹೇಗೆ ಸಮಸ್ಯೆಯನ್ನು ನಿವಾರಿಸುತ್ತದೆ. ಆದುದರಿಂದ ಎಲ್ಲಾ ದಲಿತ ಸರ್ಕಾರಿ ನೌಕರರು ತಮ್ಮ ಮಕ್ಕಳಿಗೆ ನೀಡುವ ಸ್ಕಾಲರ್‌ಶಿಪ್‌ನ್ನು ತಿರಸ್ಕರಿಸಬೇಕು.

ದಲಿತ ಕೆಳವರ್ಗಗಳೂ ಕೂಡ ತಮ್ಮ ಪಾತ್ರವನ್ನು ವಹಿಸಬೇಕು. ತಾವು ನಗರಗಳಿಗೆ ವಲಸೆ ಬಂದು ಹೆಚ್ಚು ಸಂಪಾದಿಸಿ ಸ್ವತಂತ್ರ ಜೀವನ ನಡೆಸುತ್ತೇವೊ ಅಥವಾ ಕೃಷಿ ಕ್ಷೇತ್ರದಲ್ಲಿ ಕೂಲಿ ಸಂಪಾದಿಸಿ ಹಳ್ಳಿಗಳಲ್ಲಿ ಬದುಕುತ್ತಾ ತಮ್ಮ ತಿಂಗಳ ಧಾನ್ಯಕ್ಕಾಗಿ ಕ್ಯೂನಲ್ಲಿ ನಿಲ್ಲುತ್ತೇವೊ ಎಂಬುದನ್ನು ಅವರು ಯೋಚಿಸಬೇಕು. ರೇಷನ್‌ಕಾರ್ಡ್‌ಗಳ ಮೇಲೆ ಬದುಕುವ ಜನರು ಎಂದೆಂದಿಗೂ ತಮ್ಮ ತಲೆ ಎತ್ತಿ, ಎದೆಯುಬ್ಬಿಸಿ ನಡೆಯಲಾರರು. ■

## ಹೊಸ ಪುಸ್ತಕ

**ಈ ಲೋಕದ ಇನ್ನೊಂದು ಗಿಡ**
**ಲೇ: ಶಿವರಾಜ ಬೆಟ್ಟದೂರು**
**ಬೆಲೆ: ರೂ. ೮೦/-**

ತಮ್ಮದೇ ರೀತಿಯಲ್ಲಿ ಲೋಕವನ್ನು ಕಾಣುವ, ಕಂಡದ್ದನ್ನು ಹಾಗೇ ಹೇಳಲು ಪ್ರಯತ್ನಿಸುವ ಆಶಯದ ಇಲ್ಲಿನ ಕವಿತೆಗಳು ಭರವಸೆಯನ್ನು ಮೂಡಿಸುತ್ತವೆ. ತನ್ನ ವೈಶಿಷ್ಟ್ಯವನ್ನು ಕಂಡುಕೊಳ್ಳಲು, ಉಳಿಸಿಕೊಳ್ಳಲು ಬಯಸುವ ಮತ್ತು ಇನ್ನೊಂದು ಲೋಕದ ವಾಸ್ತವವನ್ನು ಗ್ರಹಿಸುವ ಅಪೇಕ್ಷೆ ಹಾಗೂ ಆದರ್ಶ ಲೋಕವೊಂದನ್ನು ಸೃಷ್ಟಿಸಿಕೊಳ್ಳುವ ಬಯಕೆ-ಈ ಮೂರು ಮನೋಧರ್ಮಗಳು ಎದ್ದು ಕಾಣುತ್ತವೆ. ಚಕ್ರಗತಿಯ ರೂಪಕಗಳ ಮೂಲಕ ಕವಿತೆಯನ್ನು ಕಟ್ಟುವ ಪ್ರಯತ್ನ ಗಮನ ಸೆಳೆಯುತ್ತದೆ.

**ಪ್ರ: ಪಲ್ಲವ ಪ್ರಕಾಶನ, ಚನ್ನಪಟ್ಟಣ**







**ಅಸಮಾನತೆಯ ಜಾಗತೀಕರಣ**
**ಲೇ: ಪಿ. ಸಾಯಿನಾಥ್**
**ಅನು: ಸಿಂಚನ ತಂಡ**
**ಬೆಲೆ: ರೂ. ೧೫/-**

ಉದಾರೀಕರಣ-ಖಾಸಗೀಕರಣದಿಂದಾಗಿ ಸಣ್ಣ ಹಿಡುವಳಿಗಳು, ಸಣ್ಣ ಉತ್ಪಾದಕರ ಕುಟುಂಬಗಳು ಇಡಿ ಜಗತ್ತಿನಲ್ಲಿ ಕಗ್ಗೊಲೆಗೀಡಾಗುತ್ತಿರುವ ಘೋರ ಪರಿಣಾಮ, ಭಾರತದಲ್ಲಿ ನಡೆಯುತ್ತಿರುವ ಕೋಟ್ಯಂತರ ರೂಗಳ ಖರ್ಚಿನ 'ಥೀಮ್ ವೆಡ್ಡಿಂಗ್', ಸುನಾಮಿಯಿಂದ ವಿನಾಶಕ್ಕೀಡಾದ ಜನರ ದುಃಖ ಸಂಕಟಗಳಿಂದಲೂ ಹಣ ಮಾಡಿಕೊಳ್ಳುವ ಶೇರು ಮಾರುಕಟ್ಟೆಗಳ ಕ್ಷುಲ್ಲಕತನ, ಮಾಧ್ಯಮಗಳ ಸೋಗಲಾಡಿತನಗಳನ್ನು ಬಯಲಿಗೆಳೆದಿದೆ. ಜಾಗತೀಕರಣಕ್ಕೆ ಪ್ರತಿರೋಧ ಒಡ್ಡುವ ರೀತಿಯಲ್ಲಿ ಜಾಗೃತಿ ಹೊಂದಬೇಕೆಂಬ ಆಶಯವನ್ನು ಈ ಕೃತಿ ಹೊಂದಿದೆ.

**ಪ್ರ: ಲಡಾಯಿ ಪ್ರಕಾಶನ, ಗದಗ**




**ಭಾರತದ ಮೊದಲ ದೊರೆಗಳು**
**ಲೇ: ಎಂ.ನಂಜುಂಡಸ್ವಾಮಿ ಐಪಿಎಸ್**
**ಬೆಲೆ: ರೂ. ೨೫೦/-**

ಕಾಲನ ಹೊಡೆತಕ್ಕೆ ಸಿಲುಕಿ ಇಂದು ಗುಲಾಮರಂತೆ ಬದುಕುತ್ತಿರುವ ಭಾರತದ ಕೋಟ್ಯಂತರ ಅಸ್ಪೃಶ್ಯಸಮುದಾಯ ಹಿಂದೆ ಆಳುವ ವರ್ಗವಾಗಿತ್ತು ಎಂಬ ಅಂಶವನ್ನು ಇಲ್ಲಿ ತುಂಬಾ ಶಾಸ್ತ್ರೀಯವಾಗಿ ಹಾಗೂ ತಾರ್ಕಿಕವಾಗಿ ಸಂಶೋಧಿಸಲಾಗಿದೆ. ಕನ್ನಡ ಭಾಷೆಯೂ ಒಳಗೊಂಡು ದ್ರಾವಿಡ ಭಾಷೆಗಳ ಪ್ರಾಚೀನತೆ ಮತ್ತು ಅನನ್ಯತೆಗಳ ಬಗ್ಗೆ ಹಾಗೂ ದೇಶವಾಸಿಗಳ ಮೂಲವನ್ನು ಹುಡುಕುವಲ್ಲಿ ಲೇಖಕರ ಅಪಾರ ಶ್ರಮ ಎದ್ದುಕಾಣುತ್ತದೆ.ಈವರೆಗಿನ ಸಂಶೋಧನೆಯ ಪೊಳ್ಳುತನವನ್ನು ಪ್ರಶ್ನಿಸಿರುವ ಈ ಕೃತಿ ಭಾರತೀಯ ಜನಾಂಗಗಳ ಬಗ್ಗೆ ಅಧ್ಯಯನ ಮಾಡುವವರಿಗೆ ಹೊಸದಾರಿಯನ್ನು ತೋರಿಸಲು ಸಹಕಾರಿಯಾಗಬಲ್ಲ ಹೊಸ ಹೊಳಹನ್ನು ನೀಡಬಲ್ಲದು.

**ಪ್ರ: ಮಾಳವ ಫಿಲೊಲಾಜಿಕಲ್ ಅಕಾಡೆಮಿ, ಬೆಂಗಳೂರು**

**ಭಗವದ್ಗೀತೆ V/S ಬೌದ್ಧ ತತ್ವ**
**ಲೇ: ಡಾ. ಬಿ. ಆರ್ ಅಂಬೇಡ್ಕರ್**
**ಬೆಲೆ: ರೂ. ೧೫/-**

ಬ್ರಾಹ್ಮಣವಾದದ ಭಗವದ್ಗೀತೆಯಲ್ಲಿ ಬೌದ್ಧ ತಾತ್ವಿಕತೆಯನ್ನು ಸೇರಿಸಲು ಪ್ರಯತ್ನಿಸಿದ್ದರೂ ಅದು ಆಳದಲ್ಲಿ ಸಾಮಾಜಿಕ ಅಸಮಾನತೆಯನ್ನು ಪೋಷಿಸಿಕೊಂಡೇ ಬಂದಿರುವುದನ್ನು ಈ ಕೃತಿ ವಿವರಿಸುತ್ತದೆ. ಗುಲಾಮಿ ಸಿದ್ಧಾಂತವನ್ನು ಬೆಳೆಸಲು, ಮತ್ತು ಉತ್ತೇಜಿಸಲು ಜಾತಿ ಪದ್ಧತಿಯ ಸಮರ್ಥನೆ; ವ್ಯಕ್ತಿ ಸ್ವಾತಂತ್ರ್ಯದ ಅಪಹರಣ, ದಮನಿತ ಹಾಗೂ ದುಡಿಯುವ ವರ್ಗಗಳ ಶೋಷಣೆಗೆ ಇಂಬು ನೀಡುವ ಗೀತೆಯ ಸಾರವನ್ನು ತೀವ್ರವಾಗಿ ಖಂಡಿಸಲಾಗಿದೆ. ಇದರ ಧೋರಣೆಯ ಬಗೆಗೆ ಜಾಗತಿಕ ಮಟ್ಟದ ವಿದ್ವಾಂಸರ ಅಭಿಪ್ರಾಯಗಳನ್ನು ಸಂಕ್ಷಿಪ್ತವಾಗಿ ಇಲ್ಲಿ ದಾಖಲಿಸಲಾಗಿದೆ.

**ಪ್ರ: ಲಡಾಯಿ ಪ್ರಕಾಶನ, ಗದಗ**

**ಹರದೇಶಿ-ನಾಗೇಶಿ ಕಲೆ ಮತ್ತು ಕಲಾವಿದರು**
**ಲೇ: ಡಾ. ಶೈಲಜ ಹಿರೇಮಠ**
**ಬೆಲೆ: ರೂ. ೨೦೦/-**

ಮಹಿಳಾ ಅಧ್ಯಯನಕ್ಕೆ ಹೊಸ ವಿಧಾನವೊಂದನ್ನು ನಿರ್ಮಾಣ ಮಾಡಿರುವ ಈ ಕೃತಿಯು ಹರದೇಶಿ-ನಾಗೇಶಿ ಕಲಾವಿದರ ದುಡಿಮೆಯ ಹಿಂದಿನ ಒತ್ತಡಗಳು, ಜಾತಿ ಶ್ರೇಣೀಕರಣದ ಸಮಸ್ಯೆಗಳು, ಅವುಗಳ ಮೂಲಕ ನಿರ್ಮಾಣವಾಗಿರುವ ಸಾಮಾಜಿಕ ವಸ್ತುಸ್ಥಿತಿಯ ವಿಷಮತೆಗಳ ಹಲವು ಮುಖಗಳನ್ನು ತೆರೆದಿಟ್ಟಿದೆ. ಲಿಂಗ ಸಂಬಂಧಿ ಆಯಾಮದಿಂದ ಶುರುವಾಗುವ ತೊಳಲಾಟಗಳ ಸಂಕೀರ್ಣ ಹಾಗೂ ಅತಿ ಸೂಕ್ಷ್ಮ ಮಗ್ಗುಲುಗಳನ್ನು ಶೋಧಿಸುವಲ್ಲಿ ಹಾಗೂ ವಿಶ್ಲೇಷಿಸುವಲ್ಲಿ ಇಲ್ಲಿನ ಬರಹ ಸಫಲತೆ ಪಡೆದಿದೆ.

**ಪ್ರಕಾಶನ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ**







**ದಿಶಾಂತರ**
**ಲೇ: ಡಿ. ಎಸ್. ಚೌಗಲೆ**
**ಬೆಲೆ: ರೂ. ೭೦/-**

ದುಡಿವ ವರ್ಗದ ಬವಣೆಯನ್ನು ಯಥಾವತ್ತಾಗಿ ವಾಸ್ತವ ನೆಲೆಯಲ್ಲಿ ಕಟ್ಟಿಕೊಟ್ಟಿರುವ ಈ ನಾಟಕ ಕೃತಿಯಲ್ಲಿ ಬಡವರ ಬದುಕಿಗೆ ಬಂಡವಾಳಿಗರ ರಾಜಕಾರಣದಿಂದ ಉಂಟಾಗುವ ಅಸ್ಥಿರತೆ, ಶ್ರಮ ಸಂಸ್ಕೃತಿಯ ಶ್ರಮಿಕರ ಬಾಳು ಛಿದ್ರಗೊಳ್ಳುವ ಬಗ್ಗೆ ಆಳ ಚಿಂತನೆಯಿದೆ. ಬಡವರು ಶ್ರೀಮಂತರ ನಡುವಿನ ಸಂಘರ್ಷದಲ್ಲಿ ದುಡಿಯುವವನಿಗೇ ಸೋಲಾಗುವಂತೆ ವ್ಯವಸ್ಥೆ ವಹಿಸುವ ಎಚ್ಚರ. ಆಮಿಷವೊಡ್ಡುವ ಮೂಲಕ ಸಂಘಟನಾತ್ಮಕ ಶಕ್ತಿಯನ್ನು ಕುಂದಿಸುವ ಹುನ್ನಾರಗಳನ್ನು ತೆರೆದಿಡುವ ಸಮರ್ಥ ಚಿತ್ರಣವಿದೆ.

ಪ್ರ: ದಾಮಿನಿ ಸಾಹಿತ್ಯ ಪ್ರಕಾಶನ, ಬೆಂಗಳೂರು

ಡಾ. ಜೆ. ಬಾಲಕೃಷ್ಣ

ನಸ್ರುದ್ದೀನ್‌ನ ಪತ್ನಿ ತರಕಾರಿ ತರಲು ಮಾರುಕಟ್ಟೆಗೆ ಹೋದಾಗ ಅಲ್ಲಿ ಹಿಂದಿನ ದಿನ ನಸ್ರುದ್ದೀನನ ಭಾಷಣ ಕೇಳಿದ್ದ ಹಲವಾರು ಹೆಂಗಸರು ಸಿಕ್ಕಿ, 'ಹೋ, ನಿನ್ನೆ ನಿನ್ನ ಗಂಡ ನೀಡಿದ ಭಾಷಣ ಅತ್ಯದ್ಭುತವಾಗಿತ್ತು. ಆತ ಆ ವಿಷಯದಲ್ಲಿ ಬಹಳ ನುರಿತವನೂ ಇರಬಹುದಲ್ಲವೆ?' ಎಂದು ಕೇಳಿ ಆ ಹೆಂಗಸರು ಪರಸ್ಪರ ಮುಸಿಮುಸಿ ನಕ್ಕರು.

## ಅದೃಷ್ಟವಂತ

ನಸ್ರುದ್ದೀನ್ ಮತ್ತು ಆತನ ಪತ್ನಿ ಮನೆಯಲ್ಲಿ ಕೂತು ಊಟ ಮಾಡುತ್ತಿದ್ದರು. ಹಿತ್ತಲಲ್ಲಿ ಏನೋ ಸರಸರ ಸದ್ದಾಯಿತು. ಯಾರೋ ಕಳ್ಳ ಬಂದಿರಬಹುದೆಂದು ನಸ್ರುದ್ದೀನ್ ತನ್ನ ಬಂದೂಕು ತೆಗೆದುಕೊಂಡು ಕಿಟಕಿಯಿಂದ ನೋಡಿದ. ಹಿತ್ತಲ ತೋಟದಲ್ಲಿ ಬಿಳಿಯದೊಂದು ವಸ್ತು ಚಲಿಸಿದಂತಾಯಿತು. ತಕ್ಷಣ ತನ್ನ ಬಂದೂಕು ಗುರಿಯಿಟ್ಟು ಗುಂಡು ಹಾರಿಸಿದ. ನಂತರ ಅದೇನದು ನೋಡೋಣವೆಂದು ಹತ್ತಿರ ಹೋಗಿ ನೋಡಿದರೆ ಅದು ಆ ದಿನ ಬೆಳಿಗ್ಗೆ ಆತನ ಪತ್ನಿ ಒಗೆದು ಹಾಕಿದ್ದ ಆತನದೇ ಹಾಗೂ ಆತನಿಗೆ ಅತ್ಯಂತ ಪ್ರಿಯವಾಗಿದ್ದ ಬಿಳಿಯ ಅಂಗಿಯಾಗಿತ್ತು. ಅದು ಗಾಳಿಗೆ ಅಲುಗಾಡುತ್ತಿತ್ತು ಹಾಗೂ ಬಂದೂಕಿನ ಗುಂಡೇಟಿನಿಂದ ಛಿದ್ರವಾಗಿತ್ತು. ಆತನ ಹಿಂದೆಯೇ ಓಡಿಬಂದ ಆತನ ಪತ್ನಿ ಬಂದೂಕಿನ ಗುಂಡೇಟಿನಿಂದ ಆತನ ಅಂಗಿಗಾಗಿದ್ದ ಗತಿ ನೋಡಿ, 'ಅಯ್ಯೋ ದುರಾದೃಷ್ಟವಂತನೇ! ನಿನ್ನ ಪ್ರಿಯವಾದ ಅಂಗಿಯನ್ನು ನೀನೇ ಹಾಳುಮಾಡಿಕೊಂಡೆಯಾ!' ಎಂದಳು. 'ಇಲ್ಲ, ನಾನು ದುರಾದೃಷ್ಟವಂತನಲ್ಲ. ನಾನು ಈ ಭೂಮಿಯ ಮೇಲಿನ ಅತ್ಯಂತ ಅದೃಷ್ಟವಂತನೆಂದೇ ಹೇಳಬೇಕು. ಈ ದಿನ ಬೆಳಿಗ್ಗೆ ನಾನು ಈ ಬಿಳಿಯ ಅಂಗಿಯನ್ನೇ ಹಾಕಿಕೊಳ್ಳೋಣವೆಂದುಕೊಂಡಿದ್ದೆ. ಅದೃಷ್ಟವಶಾತ್ ಹಾಕಿಕೊಳ್ಳಲಿಲ್ಲ. ಹಾಕಿಕೊಂಡಿದ್ದಿದ್ದರೆ ಇಷ್ಟೊತ್ತಿಗೆ ಬಂದೂಕಿನ ಗುಂಡೇಟಿಗೆ ಬಲಿಯಾಗಿ ಇಲ್ಲಿ ಸತ್ತುಬಿದ್ದಿರಬೇಕಾಗಿತ್ತು' ಎಂದ.

## ತಜ್ಞ

ಮುಲ್ಲಾ ನಸ್ರುದ್ದೀನ್ ಒಬ್ಬ ಪ್ರಖ್ಯಾತ ವಿದ್ವಾಂಸನಾಗಿದ್ದ. ಆತ ಆ ಊರಿನ ಸಾರ್ವಜನಿಕರು ಭಾಗವಹಿಸುವ ವಿಚಾರ ಸಂಕಿರಣವೊಂದರಲ್ಲಿ ಭಾಗವಹಿಸಿದ್ದ. ಆ ಊರಿನ ಗಣ್ಯರು ತಮ್ಮ ಪತಿ-ಪತ್ನಿಯರೊಂದಿಗೆ ಅದರಲ್ಲಿ ಭಾಗವಹಿಸಿದ್ದರು. ಬಹಳ ಸಮಯವಾದರೂ ಕಾರ್ಯಕ್ರಮ ಪ್ರಾರಂಭವಾಗಲಿಲ್ಲ. ವಿಚಾರಸಂಕಿರಣದ ಆಯೋಜಕರು ನಸ್ರುದ್ದೀನ್ ಬಂದಿದ್ದುದನ್ನು ಕಂಡು ಆತನ ಬಳಿ ಬಂದರು. ಆ ದಿನದ ಪ್ರಮುಖ ಭಾಷಣಕಾರರು ಅನಿವಾರ್ಯ ಕಾರಣಗಳಿಂದಾಗಿ ಬರಲು ಸಾಧ್ಯವಾಗುತ್ತಿಲ್ಲವೆಂದೂ, ಅವರ ಬದಲಿಗೆ ನಸ್ರುದ್ದೀನ್‌ರವರನ್ನೇ ಭಾಷಣ ಮಾಡಬೇಕೆಂದು ಅವರು ಕೇಳಿಕೊಂಡರು. ಕೊಂಚ ಗಲಿಬಿಲಿಗೊಂಡ ನಸ್ರುದ್ದೀನ್, 'ನಾನು ಭಾಷಣಕ್ಕೆ ಸಿದ್ಧವಾಗಿ ಬಂದಿಲ್ಲ. ಯಾವ ವಿಷಯದ ಬಗ್ಗೆ ಮಾತನಾಡಬೇಕು?' ಎಂದು ಕೇಳಿದ.

'ಇಂದಿನ ವಿಷಯ ಕಾಮ. ನೀವೇ ಅದರ ಬಗ್ಗೆ ಮಾತನಾಡಬೇಕು, ಏಕೆಂದರೆ ಇಲ್ಲಿಗೆ ಬಂದಿರುವ ಇತರರೆಲ್ಲರೂ ಗಂಡ-ಹೆಂಡಿರು ಜೊತೆಯಲ್ಲಿ ಬಂದಿದ್ದಾರೆ. ಒಂಟಿಯಾಗಿ ಬಂದಿರುವವರು ನೀವೊಬ್ಬರೆ' ಎಂದರು ಆಯೋಜಕರು. ಅವರು ಆ ರೀತಿ ಹೇಳಿದ್ದಷ್ಟೇ ಅಲ್ಲ ನಸ್ರುದ್ದೀನ್ ಸಮ್ಮತಿ ನೀಡುವ ಮೊದಲೇ ವೇದಿಕೆಯ ಮೇಲೆ ಹೋಗಿ ಬದುಕಿನಲ್ಲಿ ಬಹಳ ಮುಖ್ಯವಾದ ಕಾಮದ ಬಗ್ಗೆ ವಿದ್ವಾಂಸ ನಸ್ರುದ್ದೀನ್ ಮಾತನಾಡುತ್ತಾರೆ ಎಂದು ಘೋಷಿಸಿಯೂಬಿಟ್ಟರು. ಬೇರೆ ದಾರಿಯಿಲ್ಲದೆ ನಸ್ರುದ್ದೀನ್ ವೇದಿಕೆಗೆ ಹೋಗಿ ತಮ್ಮ ಭಾಷಣ ಆರಂಭಿಸಿದ. ಆತನಿಗೂ ಅದು ಆಸಕ್ತಿಯ ವಿಷಯವಾಗಿದ್ದುದರಿಂದ ಆತ ಬಹಳ ಚೆನ್ನಾಗಿ ಕಾಮದ ಬಗ್ಗೆ ಒಂದು ಗಂಟೆ ಮಾತನಾಡಿದ. ಅಲ್ಲಿ ನೆರೆದಿದ್ದ ಜನರೆಲ್ಲಾ ಮೆಚ್ಚುಗೆಯಿಂದ ಚಪ್ಪಾಳೆ ತಟ್ಟಿದರು.



ಆ ದಿನ ರಾತ್ರಿ ಮನೆಗೆ ಹೋದಾಗ ನಸ್ರುದ್ದೀನ್ ಹೆಂಡತಿ ಕಾರ್ಯಕ್ರಮ ಹೇಗಾಯಿತೆಂದು ಕೇಳಿದಳು. ಅದಕ್ಕೆ ಆತ ಪ್ರಮುಖ ಭಾಷಣಕಾರ ಬಂದಿಲ್ಲದಿದ್ದ ಕಾರಣ ತಾನೇ ಭಾಷಣ ಮಾಡಬೇಕಾಯಿತೆಂದು ತಿಳಿಸಿದ. ಆತನ ಪತ್ನಿಯೂ ಕುತೂಹಲದಿಂದ, 'ಹೌದೆ? ಯಾವ ವಿಷಯದ ಬಗ್ಗೆ ಮಾತನಾಡಿದಿರಿ?' ಎಂದು ಕೇಳಿದಳು. ಕಾಮದ ಬಗ್ಗೆ ಎಂದು ಹೇಳಲು ನಸ್ರುದ್ದೀನನಿಗೆ ಸಂಕೋಚವಾಯಿತು. ತಕ್ಷಣ ಯೋಚಿಸಿ 'ಕುದುರೆ ಸವಾರಿಯ ಬಗ್ಗೆ' ಎಂದ. 'ಕುದುರೆ ಸವಾರಿಯ ಬಗ್ಗೆ!' ಎಂದು ಆಶ್ಚರ್ಯ ವ್ಯಕ್ತಪಡಿಸಿದ ಆಕೆ, 'ಅದರ ಬಗ್ಗೆ ನಿಮಗೆ ಏನೂ ತಿಳಿದಿಲ್ಲ ಹಾಗೂ ಅನುಭವವೂ ಇಲ್ಲವಲ್ಲ' ಎಂದು ಕೇಳಿದಳು. 'ಆದರೇನು. ನನಗೆ ತಿಳಿದಿಲ್ಲ ಎಂಬುದು ನನಗೂ ನಿನಗೂ ಗೊತ್ತು. ಆದರೆ ಅವರಿಗೆ ತಿಳಿದಿರಲಿಲ್ಲವಲ್ಲಾ' ಎಂದು ಹೇಳಿ ಮಾತು ಮರೆಸಿದ.

ಮರುದಿನ ನಸ್ರುದ್ದೀನ್‌ನ ಪತ್ನಿ ತರಕಾರಿ ತರಲು ಮಾರುಕಟ್ಟೆಗೆ ಹೋದಾಗ ಅಲ್ಲಿ ಹಿಂದಿನ ದಿನ ನಸ್ರುದ್ದೀನನ ಭಾಷಣ ಕೇಳಿದ್ದ ಹಲವಾರು ಹೆಂಗಸರು ಸಿಕ್ಕಿ, 'ಹೋ, ನಿನ್ನೆ ನಿನ್ನ ಗಂಡ ನೀಡಿದ ಭಾಷಣ ಅತ್ಯದ್ಭುತವಾಗಿತ್ತು. ಆತ ಆ

ವಿಷಯದಲ್ಲಿ ಬಹಳ ನುರಿತವನೂ ಇರಬಹುದಲ್ಲವೆ?' ಎಂದು ಕೇಳಿ ಆ ಹೆಂಗಸರು ಪರಸ್ಪರ ಮುಸಿಮುಸಿ ನಕ್ಕರು. ಅದಕ್ಕೆ ನಸ್ರುದ್ದೀನನ ಪತ್ನಿ, 'ಅದರಲ್ಲಿ ಆತ ಅಂಥ ನುರಿತವನೇನಲ್ಲ. ಇದುವರೆಗೆ ಒಂದೆರಡು ಸಾರಿ ಹತ್ತಿರಬಹುದಷ್ಟೆ. ಮೊದಲನೆಯ ಸಲ ಆತನಿಗೆ ಹತ್ತಲಾಗಲೇ ಇಲ್ಲ. ಎರಡನೆಯ ಸಲ ಹತ್ತಿದ್ದವನು ಜಾರಿ ಕೆಳಕ್ಕೆ ಬಿದ್ದುಬಿಟ್ಟಿದ್ದ' ಎಂದಳು. ಆ ಹೆಂಗಸರ ಮುಸಿನಗು ಮತ್ತಷ್ಟು ಹೆಚ್ಚಿತು.

## ಮಾನವಂತರು

ಮುಲ್ಲಾ ನಸ್ರುದ್ದೀನ್ ತನ್ನ ಗೆಳೆಯರಾದ ಒಬ್ಬ ಧರ್ಮಗುರು ಹಾಗೂ ಒಬ್ಬ ರಾಜಕಾರಣಿಯೊಂದಿಗೆ ಸಂಜೆ ತಮ್ಮೂರ ಕೆರೆಯ ಬಳಿ ವಾಯುವಿಹಾರಕ್ಕೆಂದು ಹೊರಟಿದ್ದರು. ಅವರಿಗೆ ತಮ್ಮ ಬಾಲ್ಯದ ದಿನಗಳ ನೆನಪಾಗಿ ಅವರಿಗೆ ಆ ಕೆರೆಯಲ್ಲಿ ಈಜೋಣವೆಂಬ ಮನಸ್ಸಾಯಿತು. ಮೂವರೂ ತಮ್ಮ ಬಟ್ಟೆಗಳನ್ನು ಕಳಚಿ ಕೆರೆಯ ನೀರಿನಲ್ಲಿ ಈಜತೊಡಗಿದರು. ಈಜಿನಲ್ಲಿ ಅದೆಷ್ಟು ಮೈಮರೆತರೆಂದರೆ ಹೊರಗೆ ಇವರನ್ನು ಗಮನಿಸುತ್ತಿದ್ದ ಕಿಡಿಗೇಡಿ ಹುಡುಗರ ಗುಂಪೊಂದು ಇವರ ಬಟ್ಟೆಗಳನ್ನು ಕದ್ದೊಯ್ದಿದ್ದು ಗಮನಕ್ಕೇ ಬರಲಿಲ್ಲ. ಸಂಜೆ ವಾಯು ವಿಹಾರಕ್ಕೆ ಬಂದಿದ್ದ ಹಲವಾರು ಜನ ಆ ಊರಿನ ಹೆಂಗಸರು, ಗಂಡಸರು ಇವರ ಸ್ನಾನವನ್ನೇ ಗಮನಿಸುತ್ತಿದ್ದರು. ಈಜು ಮುಗಿಸಿ ಮೇಲೆ ಬಂದ ಇವರಿಗೆ ತಮ್ಮ ಬಟ್ಟೆಗಳು ಇಲ್ಲದ್ದು ಗಮನಿಸಿ ತಕ್ಷಣ ಧರ್ಮಗುರು ಮತ್ತು ರಾಜಕಾರಣಿ ತಮ್ಮ ಕೈಗಳಿಂದ ತಮ್ಮ ಜನನಾಂಗಗಳನ್ನು ಮುಚ್ಚಿಕೊಂಡು ಮರೆಗೆ ಓಡಿದರು. ಆದರೆ ನಸ್ರುದ್ದೀನ್ ತನ್ನ ಜನನಾಂಗ ಮುಚ್ಚಿಕೊಳ್ಳುವ ಬದಲು ಕೈಗಳಿಂದ ತನ್ನ ಮುಖ ಮುಚ್ಚಿಕೊಂಡು ಓಡಿದ. ಅದನ್ನು ಗಮನಿಸಿದ ಆ ಊರಿನ ಒಬ್ಬಾತ, 'ಛೀ! ನಾಚಿಕೆಯಾಗುವುದಿಲ್ಲವೆ. ಮುಖ ಮುಚ್ಚಿಕೊಂಡು ಬೆತ್ತಲೆಯಾಗಿ ಓಡುತ್ತಿರುವೆಯೆಲ್ಲಾ?' ಎಂದು ಕೇಳಿದ.

ಅದಕ್ಕೆ ನಸ್ರುದ್ದೀನ್, 'ಹೌದು ಮುಖ ಮುಚ್ಚಿಕೊಂಡು ಓಡುತ್ತಿದ್ದೇನೆ ಏಕೆಂದರೆ ನನ್ನ ಊರಿನ ಜನ ನನ್ನ ಮುಖವನ್ನು ಮಾತ್ರ ನೋಡಿದ್ದಾರೆ, ಹಾಗಾಗಿ ಅವರು ನನ್ನನ್ನು ಗುರುತುಹಿಡಿದುಬಿಡಬಹುದು' ಎಂದ.

## ಜಗತ್ತಿನ ಕೊನೆ

ಒಂದಷ್ಟು ಜನ ತತ್ವಜ್ಞಾನಿಗಳು ಹಾಗೂ ಜ್ಯೋತಿಷಿಗಳು ಜಗತ್ತು ಹೇಗೆ ಮತ್ತು ಎಂದು ಕೊನೆಗೊಳ್ಳುತ್ತದೆ ಎನ್ನುವುದರ ಬಗ್ಗೆ ಬಹಳಷ್ಟು ಚರ್ಚೆ, ವಾದ-ವಿವಾದ ನಡೆಸಿದರೂ ಯಾವುದೊಂದೂ ತೀರ್ಮಾನಕ್ಕೆ ಬರದಾದರು. ಕೊನೆಗೆ ವಿಷಯದ ಇತ್ಯರ್ಥಕ್ಕೆ ವಿದ್ವಾಂಸ ಮುಲ್ಲಾ ನಸ್ರುದ್ದಿನ್ ಬಳಿಗೆ ಹೋಗೋಣವೆಂದು ಅವರಲ್ಲೊಬ್ಬರು ಸೂಚಿಸಿದರು. ಎಲ್ಲರೂ ಸಮ್ಮತಿಸಿ ನಸ್ರುದ್ದಿನ್ ಬಳಿಗೆ ಹೋಗಿ, 'ಜಗತ್ತು ಯಾವಾಗ ಕೊನೆಗೊಳ್ಳುತ್ತದೆ? ಅದರ ಬಗ್ಗೆ ನಿಮಗೆ ಏನಾದರೂ ತಿಳಿದಿದೆಯೆ?' ಎಂದು ಕೇಳಿದರು.

'ಹೋ ಹೌದು. ನನಗೆ ತಿಳಿದಿದೆ' ಎಂದು ಹೇಳಿ ತನ್ನ ಗಡ್ಡ ನೀವಿಕೊಂಡ. ಎಲ್ಲರೂ ಕುತೂಹಲದಿಂದ ಆತನ ಸುತ್ತ ನಿಂತು, 'ಹೇಳಿ, ಯಾವಾಗ ಕೊನೆಗೊಳ್ಳುತ್ತದೆ. ಅದನ್ನು ತಿಳಿಯಲು ನಾವೆಲ್ಲಾ ಕಾತುರದಿಂದ ಕಾಯುತ್ತಿದ್ದೇವೆ' ಎಂದರು.

ನಸ್ರುದ್ದಿನ್ ಅವರೆಡೆಗೆ ನೋಡುತ್ತಾ, 'ಜಗತ್ತು ಕೊನೆಗೊಳ್ಳುವುದು ನಾನು ಸತ್ತಾಗ' ಎಂದ.



'ನೀವು ಸತ್ತಾಗ? ಅದ್ಹೇಗೆ ಸಾಧ್ಯ? ನಿಮ್ಮ ಸಾವಿಗೂ ಜಗತ್ತು ಕೊನೆಗೊಳ್ಳುವುದಕ್ಕೂ ಏನು ಸಂಬಂಧ?' ಎಂದು ಕೇಳಿದರು ಆತನ ಮಾತಿನ ಅರ್ಥ ತಿಳಿಯಲಾಗದೆ. ಅದಕ್ಕೆ ಮುಲ್ಲಾ, 'ನಾನು ಸತ್ತಾಗ ಜಗತ್ತು ನನ್ನ ಪಾಲಿಗಂತೂ ಕೊನೆಗೊಳ್ಳುತ್ತದೆ. ನಿಮ್ಮ ಬಗೆಗೆ ನನಗೆ ಗೊತ್ತಿಲ್ಲ' ಎಂದ.

## ಪಂದ್ಯ

ಒಂದು ದಿನ ಸಂಜೆ ಕೊರೆಯುವ ಚಳಿಯಲ್ಲಿ ನಸ್ರುದ್ದೀನ್ ಮತ್ತು ಆತನ ಗೆಳೆಯರು ಚಹಾ ಸೇವಿಸುತ್ತಾ ಹರಟೆ ಹೊಡೆಯುತ್ತಿದ್ದರು. ಅವರಲ್ಲಿ ಎಲ್ಲರೂ ಚಳಿಯನ್ನು ತಡೆಯಲಾಗದೆ ನಡುಗುತ್ತಿದ್ದರು. ನಸ್ರುದ್ದೀನ್ ಮಾತ್ರ ತಾನು ಎಂತಹ ಚಳಿಯನ್ನು ಬೇಕಾದರೂ ತಡೆಯಬಲ್ಲೆ ಎನ್ನುತ್ತಿದ್ದ. ಅವರಲ್ಲೊಬ್ಬ, 'ನಸ್ರುದ್ದೀನ್, ನೀನು ಇಡೀ ರಾತ್ರಿ ಇದೇ ತೊಟ್ಟ ಬಟ್ಟೆಯಲ್ಲಿ ಬೆಂಕಿ ಏನೂ ಕಾಯಿಸಿಕೊಳ್ಳದೆ ಊರ ಚೌಕದಲ್ಲಿ ಬೆಳಗಿನವರೆಗೂ ಇದ್ದರೆ ನಿನಗೆ ನಾಳೆ ಔತಣಕೂಟ ಏರ್ಪಡಿಸುತ್ತೇವೆ. ನೀನು ಸೋತಲ್ಲಿ ನಮಗೆ ಔತಣ ಏರ್ಪಡಿಸಬೇಕು. ಪಂದ್ಯ ಕಟ್ಟುವೆಯಾ?' ಎಂದ. ನಸ್ರುದ್ದೀನ್ ಒಪ್ಪಿಕೊಂಡ. ಆ ದಿನ ಇಡೀ ರಾತ್ರಿ ನಸ್ರುದ್ದೀನ್ ಊರ ಮಧ್ಯದ ಚೌಕದಲ್ಲಿ ಚಳಿ ಸಹಿಸಿಕೊಂಡು ಬೆಳಗಿನವರೆಗೂ ಇದ್ದ. ಬೆಳಗಾದ ಕೂಡಲೇ ಪಂದ್ಯ ಕಟ್ಟಿದವನ ಮನೆಗೆ ಹೋಗಿ ತಾನು ಪಂದ್ಯದಲ್ಲಿ ಗೆದ್ದಿರುವುದಾಗಿಯೂ, ಆ ದಿನ ತನಗೆ ಔತಣ ಏರ್ಪಡಿಸಲು ಸಿದ್ಧತೆ ಮಾಡಿಕೊಳ್ಳಿ ಎಂದ. ಆದರೆ ಸೋಲನ್ನು ಒಪ್ಪಿಕೊಳ್ಳಲಾಗದ ಆ ಗೆಳೆಯ ಇತರರನ್ನೂ ಸೇರಿಸಿ, 'ನೀನು ಪಂದ್ಯದಲ್ಲಿ ಗೆದ್ದೇ ಇಲ್ಲ. ನಾನು ಮಧ್ಯರಾತ್ರಿ ಬಂದು ನೋಡಿದೆ. ರಸ್ತೆಯ ಕೊನೆಯಲ್ಲಿನ ಮನೆಯ ಕಿಟಕಿಯಲ್ಲಿ ಒಂದು ಮೋಂಬತ್ತಿ ಉರಿಯುತ್ತಿರುವುದನ್ನು ನೋಡಿದೆ. ಅದರ ಶಾಖ ನಿನ್ನನ್ನು ಬೆಚ್ಚಗಿಟ್ಟಿದೆ. ಹಾಗಾಗಿ ನೀನು ಪಂದ್ಯದಲ್ಲಿ ಸೋತಿದ್ದೀಯ' ಎಂದ.

ರಸ್ತೆಯ ಕೊನೆಯ ಮನೆಯ ಕಿಟಕಿಯ ಹಿಂದೆ ಇದ್ದ ಮೋಂಬತ್ತಿ ತನ್ನನ್ನು ಬೆಚ್ಚಗಾಗಿಸುವಷ್ಟು ಶಾಖ ಕೊಡಲು ಸಾಧ್ಯವೇ ಇಲ್ಲ ಎಂದು ನಸ್ರುದ್ದೀನ್ ಎಷ್ಟು ವಾದಿಸಿದರೂ ಒಪ್ಪಲಿಲ್ಲ. ಆಯಿತೆಂದು ಸೋಲನ್ನು ಒಪ್ಪಿಕೊಂಡ ಆತ ಪಂದ್ಯದ ನಿಯಮದಂತೆ ಎಲ್ಲರನ್ನೂ ಆ ದಿನ ರಾತ್ರಿ ತನ್ನ ಮನೆಗೆ ಔತಣಕ್ಕೆ ಆಹ್ವಾನಿಸಿದ.

ರಾತ್ರಿ ಎಲ್ಲ ಗೆಳೆಯರೂ ಊಟಕ್ಕೆ ಬಂದರು. ಎಲ್ಲರನ್ನೂ ಆಹ್ವಾನಿಸಿ, ಅಡುಗೆ ಸಿದ್ಧವಾಗುತ್ತಿದೆಯೆಂದು ಹೇಳಿ ಎಲ್ಲರಿಗೂ ಕೂಡ್ರಲು ತಿಳಿಸಿದ. ಗೆಳೆಯರು ಅದೂ ಇದೂ ಮಾತನಾಡುತ್ತಾ ಕೂತರು. ಒಂದು ಗಂಟೆಯಾಯಿತು, ಎರಡು ಗಂಟೆಯಾಯಿತು.

ನಸ್ರುದ್ದೀನ್ ಊಟದ ವಿಷಯವನ್ನೇ ಮಾತನಾಡುತ್ತಿರಲಿಲ್ಲ. ಅವರು ಕೇಳಿದರೆ, 'ಅಡುಗೆ ಬೇಯುತ್ತಿದೆ. ಇನ್ನೇನು ಸಿದ್ಧವಾಗಿಬಿಡುತ್ತದೆ' ಎನ್ನುತ್ತಿದ್ದ. ಕೊನೆಗೆ ಹಸಿವನ್ನು ತಾಳಲಾಗದೆ ಅವರು ಒತ್ತಾಯಿಸಿದಾಗ, 'ನೀವೇ ಬೇಕಾದರೆ ಅಡುಗೆ ಮನೆಗೆ ಹೋಗಿ ನೋಡಿ. ಅಡುಗೆ ಬೇಯುತ್ತಿದೆ' ಎಂದ. ಅವರು ಅಡುಗೆ ಮನೆಗೆ ಹೋಗಿ ನೋಡಿದಾಗ ಪಾತ್ರೆಯನ್ನು ಹಗ್ಗದಿಂದ ಮೇಲೆ ಕಟ್ಟಲಾಗಿತ್ತು ಹಾಗೂ ಅದರ ಕೆಳಗೆ ಆರಡಿ ಅಂತರದಲ್ಲಿ ಒಂದು ಉರಿಗಾಗಿ ಒಂದು ಮೋಂಬತ್ತಿ ಉರಿಸಲಾಗಿತ್ತು. ಆ ಗೆಳೆಯರು ಸಿಟ್ಟಾಗಿ, ಆ ಮೋಂಬತ್ತಿಯ ಉರಿಯಲ್ಲಿ ಅಡುಗೆ ಹೇಗೆ ಬೇಯಲು ಸಾಧ್ಯ?' ಎಂದು ಕೇಳಿದರು. ಅದಕ್ಕೆ ನಸ್ರುದ್ದೀನ್, 'ರಸ್ತೆಯ ಕೊನೆಯ ಮನೆಯ ಕಿಟಕಿಯ ಹಿಂದಿನ ಮೋಂಬತ್ತಿ ಊರ ಚೌಕದ ಮಧ್ಯದಲ್ಲಿದ್ದ ನನ್ನನ್ನು ಬೆಚ್ಚಗಿಡಬಹುದಾದಲ್ಲಿ, ಆರಡಿ ಕೆಳಗಿನ ಮೋಂಬತ್ತಿ ಅಡುಗೆಯನ್ನು ಬೇಯಿಸಬಾರದೇಕೆ?' ಎಂದ. ಭಾರೀ ಔತಣದ ಆಸೆ ಹೊತ್ತು ಬಂದಿದ್ದ ಗೆಳೆಯರ ಬಾಯಿಂದ ಮಾತೇ ಹೊರಡಲಿಲ್ಲ. ■

# ಆರೋಗ್ಯಕರ ಸಮಾಜದತ್ತ ಯೋಜನೆಗಳ ಮಹಾಪೂರ

## ಕರ್ನಾಟಕ ಮುನ್ನಡೆಯುತ್ತಿದೆ



ಶ್ರೀ ಡಿ.ವಿ. ಸದಾನಂದಗೌಡ
ಸನ್ಮಾನ್ಯ ಮುಖ್ಯಮಂತ್ರಿಗಳು

ಸಮಗ್ರ ಕರ್ನಾಟಕದ ಸಮೃದ್ಧ ಅಭಿವೃದ್ಧಿಗಾಗಿ ಸಾಮಾಜಿಕ ಆರೋಗ್ಯ ಸೇವೆಯಲ್ಲಿ ಉತ್ತಮ ಗುಣಮಟ್ಟವು ಎಲ್ಲರಿಗೂ ದೊರೆಯುವಂತೆ ಮಾಡಲು ಸರಕಾರವು ಆದ್ಯತೆ ನೀಡಿ ಕಾರ್ಯಪ್ರವೃತ್ತವಾಗಿದೆ. ಸಾರ್ವತ್ರಿಕ ಆರೋಗ್ಯ ನಿಟ್ಟಿನಲ್ಲಿ ಜನಪ್ರಿಯವಾಗಿರುವ "ವಾಜಪೇಯಿ ಆರೋಗ್ಯಶ್ರೀ" ಮತ್ತು "ಆರೋಗ್ಯ ಕವಚ" ಯೋಜನೆಗಳ ಯಶಸ್ಸಿನ ಮಾಹಿತಿ ಹೀಗಿವೆ.

## ವಾಜಪೇಯಿ ಆರೋಗ್ಯ ಶ್ರೀ



ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಜನರು ದುರಂತ ಮಾಡುವ ಆರೋಗ್ಯ ಅಪಘಾತಗಳಿಗೆ ಒಳಗಾದಾಗ ಉಂಟಾಗುವ ತೊಂದರೆಯನ್ನು ನಿವಾರಿಸಲು ಉಚಿತ ಆರೋಗ್ಯ ಚಿಕಿತ್ಸಾ ಯೋಜನೆ "ವಾಜಪೇಯಿ ಆರೋಗ್ಯಶ್ರೀ" ಇದನ್ನು ಪ್ರಾರಂಭ ಹಂತದಲ್ಲಿ ಬೀದರ್, ಗುಲ್ಬರ್ಗಾ, ಯಾದಗಿರ್, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಪ್ರಾರಂಭಿಸಿದ್ದು, ಯೋಜನೆಯ ಯಶಸ್ಸಿನ ಹಿನ್ನೆಲೆಯಲ್ಲಿ ರಾಜ್ಯದಾದ್ಯಂತ ಎಲ್ಲೆಡೆಗೂ ವಿಸ್ತರಿಸಲಾಗುತ್ತಿದೆ.

- 'ವಾಜಪೇಯಿ ಆರೋಗ್ಯಶ್ರೀ' ಯೋಜನೆಯು ಫೆಬ್ರವರಿ 2010 ರಿಂದ ಜಾರಿಯಲ್ಲಿದೆ.
- ಪ್ರಾರಂಭಿಕ ಹಂತದಲ್ಲಿ 6 ಜಿಲ್ಲೆಗಳಲ್ಲಿ ಯೋಜನೆ ಅನುಷ್ಠಾನಗೊಂಡಿದ್ದು, ಅನಂತರ 7 ಜಿಲ್ಲೆಗಳಿಗೆ ಮುಂದುವರಿಸಲಾಗಿದೆ ಹಾಗೂ ಮುಂದಿನ ದಿನಗಳಲ್ಲಿ ರಾಜ್ಯದಾದ್ಯಂತ ಎಲ್ಲಾ ಜಿಲ್ಲೆಗಳಿಗೂ ಯೋಜನೆಯು ಹಂತ ಹಂತವಾಗಿ ಅನುಷ್ಠಾನಗೊಳ್ಳಲಿದೆ.
- ಹೃದ್ರೋಗ, ಕ್ಯಾನ್ಸರ್, ನರರೋಗ, ಮೂತ್ರಪಿಂಡ ವೈಫಲ್ಯ, ಸುಟ್ಟಗಾಯಗಳು, ಪಾಲಿಟ್ರೋಮ ಹಾಗೂ ಇತರ ಚಿಕಿತ್ಸೆ/ಶಸ್ತ್ರ ಚಿಕಿತ್ಸೆಗಳಿಗೆ ರೂ. 2.00 ಲಕ್ಷದವರೆಗೆ "ಫ್ಯಾಮಿಲಿ ಫ್ಲೋಟರ್" ಆಧಾರದ ಮೇಲೆ, ಗುರುತಿಸಲ್ಪಟ್ಟ ಆಸ್ಪತ್ರೆಗಳಲ್ಲಿ ಉಚಿತವಾಗಿ ಚಿಕಿತ್ಸೆ ನೀಡಲಾಗುವುದು.
- ಉತ್ತರ ಕರ್ನಾಟಕದ ಗುಲ್ಬರ್ಗಾ ಮತ್ತು ಬೆಳಗಾವಿಯ 13 ಜಿಲ್ಲೆಗಳ 32.50 ಲಕ್ಷ ಬಿಪಿಎಲ್ ಕುಟುಂಬಗಳಿಗೆ 'ವಾಜಪೇಯಿ ಆರೋಗ್ಯಶ್ರೀ' ಯೋಜನೆಯ ಶ್ರೀರಕ್ಷೆ.
- 8740 ಫಲಾನುಭವಿಗಳು, ರೂ. 2 ಲಕ್ಷವರೆಗಿನ ಉಚಿತ ಚಿಕಿತ್ಸೆ/ ಶಸ್ತ್ರಚಿಕಿತ್ಸೆ ಪಡೆದಿದ್ದಾರೆ.
- 2011-12ರ ಆಯವ್ಯಯದಲ್ಲಿ "ವಾಜಪೇಯಿ ಆರೋಗ್ಯಶ್ರೀ" ಯೋಜನೆಗಾಗಿ ರೂ. 40 ಕೋಟಿ ಹಂಚಿಕೆ.

## ಆರೋಗ್ಯ ಕವಚ

ಉಚಿತವಾಗಿ ವೈದ್ಯಕೀಯ, ಪೊಲೀಸು ಮತ್ತು ಅಗ್ನಿಶಾಮಕ ಸಂಬಂಧಿಸಿದಂತೆ ಯಾವುದೇ ತುರ್ತುಸ್ಥಿತಿಯಲ್ಲಿ ಮೊಬೈಲ್ ಅಥವಾ ನೇರ ದೂರವಾಣಿ ಮೂಲಕ '108' ಸಂಖ್ಯೆಗೆ ಕರೆ ಮಾಡಿದಲ್ಲಿ, ಅರೆ ವೈದ್ಯಕೀಯ ಸಿಬ್ಬಂದಿ ಹಾಗೂ ಆಧುನಿಕ ಉಪಕರಣಗಳನ್ನು ಒಳಗೊಂಡ ಅಂಬ್ಯುಲೆನ್ಸ್ ಘಟನೆಯ ಸ್ಥಳಕ್ಕೆ ತೆರಳಿ, ತುರ್ತು ಪ್ರಾಥಮಿಕ ಚಿಕಿತ್ಸೆ ನೀಡುವ ಮೂಲಕ ರೋಗಿಯ ಆರೋಗ್ಯವನ್ನು ಸುಧಾರಿಸಿ, ತದನಂತರ ಆಸ್ಪತ್ರೆ ಸೇರಿಸುವ ವ್ಯವಸ್ಥೆ ಮಾಡಲಾಗುತ್ತಿದೆ. ಈ ಸೇವೆ ಸಂಪೂರ್ಣ ಉಚಿತವಾಗಿದೆ. ಇದನ್ನು "ಆರೋಗ್ಯ ಕವಚ 108" ಯೋಜನೆ ಎಂದು ಕರೆಯಲಾಗುತ್ತಿದೆ.

- ಆರೋಗ್ಯ ಕವಚ 18 ಯೋಜನೆಯಡಿ 2.18 ಕೋಟಿ ಕರೆಗಳನ್ನು ಸ್ವೀಕರಿಸಿದೆ.
- 10.77 ಲಕ್ಷ ಅಮೂಲ್ಯ ಜೀವಗಳ ರಕ್ಷಣೆಯಾಗಿದೆ.
- ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ, ಒಟ್ಟು 517 ಅಂಬ್ಯುಲೆನ್ಸ್‌ಗಳು ಕಾರ್ಯ ನಿರ್ವಹಿಸುತ್ತಿವೆ.
- ಆರೋಗ್ಯ ಕವಚ 108 ಯೋಜನೆಯಡಿ ಕಾರ್ಯ ಕೈಗೊಂಡ ಪ್ರಕರಣಗಳಲ್ಲಿ ಶೇಕಡ 42ರಷ್ಟು ಹೆರಿಗೆಗೆ ಸಂಬಂಧಿಸಿದವುಗಳು.

ಕಳೆದ 3 ವರ್ಷಗಳ ಹಿನ್ನೋಟ ಇಲ್ಲಿದೆ.

<u>ಆರೋಗ್ಯ ಕವಚ ವೈಶಿಷ್ಟ್ಯತೆಗಳು</u>

•24×7 ತುರ್ತು ಸೇವೆಗಳು ಲಭ್ಯ • ಉಚಿತ ಕರೆಗಳು, ನೇರವಾಗಿ ಯಾವುದೇ ದೂರವಾಣಿ ಇಲ್ಲವೆ ಮೊಬೈಲ್‌ನಿಂದ ಸಾಧ್ಯ •ಸರಾಸರಿ 18 ನಿಮಿಷಗಳಲ್ಲಿ ತುರ್ತುಸೇವಾ ಸಹಾಯ ನಿಮಗೆ ಲಭ್ಯ •"108" ಕರೆಗಳನ್ನು ಇವುಗಳಿಗಾಗಿ ಮಾಡಿರಿ • ಜೀವ ರಕ್ಷಣೆಗಾಗಿ •ಅಪರಾಧಗಳು ನಡೆಯುತ್ತಿರುವಾಗ • ಬೆಂಕಿ ಅವಘಡಗಳಿಗಾಗಿ

ಸಂಪೂರ್ಣ ಆರೋಗ್ಯ - ಸದೃಢ ಕರ್ನಾಟಕ

ಅಭಿವೃದ್ಧಿಯೇ ಆಡಳಿತ ಮಂತ್ರ

ಕರ್ನಾಟಕ ವಾರ್ತೆ

# DR. AMBEDKAR INSTITUTE OF TECHNOLOGY

Aided By Govt. of Karnataka

An Autonomous Institution affiliated to Visvesvaraya Technological University, Belgaum and Aided by Govt. of Karnataka

The 23 acre flourishing campus is situated on the outer ring road, adjacent to Jnana Bharathi Campus of Bangalore University and just 10 Kms from the heart of the city. Its other illustrious neighboring institutions are Indian Institute of Plantation Management (IIPM), National Law School of India University (NLS(U), Institute for Social and Economic Change (ISEC), Atomic Energy Department (AED) and National Assessment and Accreditation Council (NAAC). The conveyance to the college is very cosy with the help of better transport connectivity from all the locations.

As a Grant in-Aid Institution of Government of Karnataka, 95% of the seats are filled up purely on the basis of merit through Common Entrance Test (CET) Cell. Thus The academic environment is assiduous and intellectual on the campus. The Institution is accredited by National Board of Accreditation (NBA), New Delhi.

It has a total built-up area of 39691sq.mtrs with a large number of spacious, well ventilated class rooms with e-learning facilities, laboratories, Data Center, Virtual Instrumentation laboratory, English language laboratory, Workshops, Drawing halls, Seminar halls, Library & Information centre, Sports complex and Auditorium. Besides the campus also provide hostel facilities separately to the boys and girls students of the institute.

The entire campus is a Wi-Fi campus with 1:1 sysmetric dedicated leased line internet connectivity with optical fiber back bone.

## ADMISSION OPEN FOR 2011-2012

Computer Lab

Mechanical Lab

Digital Library

Data Centre

Gym

Auditorium

### Under - Graduate Courses Offered

| Sl. No | B.E. Degree Course in | Sanctioned Student Intake |
|---|---|---|
| 1 | Civil Engineering | 60 |
| 2 | Mechanical Engineering | 120 |
| 3 | Electrical & Electronics Engineering | 60 |
| 4 | Electronics & Communication Engineering | 120 |
| 5 | Industrial Engineering & Management | 30 |
| 6 | Instrumentation & Technology | 60 |
| 7 | Computer Science & Engineering | 120 |
| 8 | Telecommunication Engineering | 60 |
| 9 | Information Science & Engineering | 60 |
| 10 | Medical Electronics | 30 |

### Post - Graduate Courses Offered

| Sl. No | Master Degree Course in | Sanctioned Student Intake |
|---|---|---|
| 1 | M.Tech. in Computer Science & Engg. | 25 |
| 2 | M.Tech. in VLSI Design & Embedded Systems | 18 |
| 3 | M.Tech. in Digital Communication & Networking | 18 |
| 4 | M.Tech. in Power Electronics | 18 |
| 5 | M.Tech. in Structrural Engineering | 18 |
| 6 | Master of Computer Application (MCA) | 60 |
| 7 | Master of Business Administration (MBA) | 60 |

| Sl. No | Ph.D. Degree through research |
|---|---|
| 1 | Civil Engineering |
| 2 | Mechanical Engineering |
| 3 | Electrical & Electronics Engineering |
| 4 | Electronics & Communication Engineering |
| 5 | Instrumentation Technology |
| 6 | Telecommunication Engineering |
| 7 | Master of Computer Application |
| 8 | Physics |
| 9 | Chemistry |
| 10 | Mathematics |

Girls Hostel

Boys Hostel

## VISION

True to the characteristics of the Panchajanya, the trust envisions eradication of illiteracy, ignorance and poverty using quality education as the means. The aim is to transform our large population in to a national asset where each individual contributes to the overall development of India.

## MISSION

To create an environment for the moral, social, cultural and educational progress of the underprivileged population in the realization of an egalitarian society.

**556 STUDENTS**

Students Selection through campus interview

**PLACED IN 2010-11**

TCS | HCL TECHNOLOGIES | MINDTREE
TITAN | SOMA CONSTRUCTION CO.
ACT TV | SYNTEL | MPHASIS (HP Company)
RAMKY INFRASTRUCTURE | ROBERT BOSCH
ORACLE | SASKEN | YOKOGAWA | L&T ECC
TECH MAHINDRA | INFOTECH | EUREKA FORBES LTD

*For Admission contact* : Managing Trustee
Panchajanya Vidya Peetha Welfare Trust (R)
**Tel : 080-23211351 / 23215070**

Near Jnana Bharathi Campus, Bangalore - 560 056
**Tel +91 80 23211505 / 06 / 07, 23218534**
Fax +91 80 23217789, E-mail : principal@dr-ait.org
www.dr-ait.org

'SAMVADA' Kannada Monthly, March 2012 KA/BGW-706/2012-2014 RNI No. KARKAN/ 2002/ 9246
Posted at Bengaluru G.P.O on 1st & 7th of Every Month. (No of pages- 52)